# ಗಟ್ಟಿ ದನಿ, ದಿಟ್ಟ ನಡೆ

(ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ೨೦೨೦ – ಮಂಡ್ಯ,
ನೆನಪಿನ ಹೊತ್ತಗೆ)


**ಸಂಪಾದಕ ಮಂಡಳಿ**

ಮೀರಾ ಶಿವಲಿಂಗಯ್ಯ, ಸುನಂದಾ ಜಯರಾಂ, ಸಿ. ಕುಮಾರಿ
ಮಲ್ಲಿಗೆ ಸಿರಿಮನೆ, ಆರ್. ಪ್ರತಿಭಾ, ರೇಣುಕಾ ಎಸ್. ಮಂದ್ರೂಪ



**ಪ್ರಕಟಣೆ**

ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಮಂಡ್ಯ

**ಗಟ್ಟಿ ದನಿ, ದಿಟ್ಟ ನಡೆ**
(ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ 2020 – ಮಂಡ್ಯ, ನೆನಪಿನ ಹೊತ್ತಗೆ)

**ಸಂಪಾದಕ ಮಂಡಳಿ**
ಮೀರಾ ಶಿವಲಿಂಗಯ್ಯ, ಸುನಂದಾ ಜಯರಾಂ, ಸಿ. ಕುಮಾರಿ
ಮಲ್ಲಿಗೆ ಸಿರಿಮನೆ, ಆರ್. ಪ್ರತಿಭಾ, ರೇಣುಕಾ ಎಸ್. ಮಂದ್ರೂಪ

**ವಿಳಾಸ:**
ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಮಂಡ್ಯ
ಕೇ/ಆ ಎಸ್. ಬಿ. ಎಜುಕೇಷನ್ ಟ್ರಸ್ಟ್(ರಿ), 3ನೆಯ ತಿರುವು, ತಾವರೆಗೆರೆ,
ಮಂಡ್ಯ – 571403

ಪುಟಗಳು: vi+200 = 206
ಬೆಂಬಲ ಬೆಲೆ: 100 ರೂಪಾಯಿ
ಪ್ರಕಟಣೆ ವರ್ಷ: 2021
ಹಕ್ಕುಗಳು: ಒಕ್ಕೂಟ

ಪ್ರಕಟಣೆ: ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಮಂಡ್ಯ
ಮುಖಪುಟ ವಿನ್ಯಾಸ: ಅರುಣ್‌ಕುಮಾರ್ ಜಿ
ಪುಟ ವಿನ್ಯಾಸ: ಎಚ್. ಕೆ. ಶರತ್
ಮುದ್ರಣ: ಇಳಾ ಪ್ರೆಸ್

**Gatti Dani, Ditta Nade**
(Memoirs of international women`s day 2020, Mandya)

**Editorial Team:**
Meera Shivalingaiah, Sunanda Jayaram, C. Kumari, Mallige Sirimane, R. Pratibha, Renuka S. Mandrup

**Address:**
All Karnataka Federation of Women Against Atrocities, Mandya
C/o S B Education Trust ®, 3rd Cross, Thavaregere,
Mandya-571403

Pages: vi+200 = 206
Support Price: 100 Rs.
First published: 2021
Copy right: Publisher

Published by: All Karnataka Federation of Women Against Atrocities, Mandya

Cover page design: Arunkumar G
Inner layout: H K Sharath

Printed at: Ila Press

ರೈತ ಹೋರಾಟದಲ್ಲಿ ಹುತಾತ್ಮರಾದ
ರೈತರು ಮತ್ತು ರೈತ ಮಹಿಳೆಯರ ಚೇತನಕ್ಕೆ..

## ಪರಿವಿಡಿ

**ಸಕ್ಕರೆಯ ನಗರದಲ್ಲಿ ಅರಿವಿನ ಸಿಹಿ ಪಯಣ – ಸಂಪಾದಕ ಮಂಡಳಿ / 01**
**ಕ.ರಾ.ಮ.ದೌ.ವಿ.ಒಕ್ಕೂಟ: ನಮ್ಮ ಸಂವಿಧಾನ / 05**
**ಸಮಾವೇಶದ ಹಿಂದಿನ ನಡಿಗೆ: ವಾಣಿ ಪೆರಿಯೋಡಿ / 08**
**ಅರಿವಿನ ಪಯಣ ಲೇಖನಗಳು / 16**

ಪೂರ್ಣಿಮಾ. ಜಿ, ಮಹಿಳಾ ಮುನ್ನಡೆ
ಕಲಾವಿದೆ ಮಂಜುಳಾ
ದೇವಿ, ಅಧ್ಯಕ್ಷರು, ಜನವಾದಿ ಮಹಿಳಾ ಸಂಘಟನೆ
ಪುಷ್ಪಲತಾ, ಮಹಿಳಾ ಮುನ್ನಡೆ
ಕಮಲ, ಮಹಿಳಾ ಮುನ್ನಡೆ
ರಾಧಾಮಣಿ, ವಿಕಸನ
ಅಂಜಲಿ, ಮಹಿಳಾ ಮುನ್ನಡೆ
ಈಶ್ವರಿ, ಮಹಿಳಾ ಮುನ್ನಡೆ
ಕೆ.ಎಸ್.ಮಂಜುಳಾ, ದೊಡ್ಡಬಾಣಸವಾಡಿ
ಕೆ.ಎಸ್. ನಂದಿನಿ ಜಯರಾಂ, ರೈತಸಂಘ
ರಾಣಿ ಚಂದ್ರಶೇಖರ್, ವಿ ಹೆಲ್ಪ್ ಗ್ರಾಮೀಣ ಮತ್ತು ನಗರಾಭಿವೃದ್ಧಿ ಸಂಸ್ಥೆ

**ಅಧ್ಯಯನ ಶಿಬಿರ**

ಕುಮಾರನ ಪ್ರಶ್ನೆ: ಮೂಡ್ನಾಕೂಡು ಚಿನ್ನಸ್ವಾಮಿ / 26
ರೈತ ಚಳುವಳಿ ಮತ್ತು ನಾನು: ಸುನಂದಾ ಜಯರಾಮ್ / 34
ಲಿಂಗಾಧಾರಿತ ತಾರತಮ್ಯದ ಇತಿಹಾಸ: ಮಲ್ಲಿಗೆ ಸಿರಿಮನೆ / 38
ಮಹಿಳಾ ಕಾವ್ಯ: ಸಬಿತಾ ಬನ್ನಾಡಿ / 43
ಶ್ರಮಜೀವಿ ವರ್ಗದ ಅಸ್ತ್ರ ಮಾರ್ಕ್ಸ್‌ವಾದ: ಸಿದ್ಧನಗೌಡ ಪಾಟೀಲ / 57
ಅಭಿವೃದ್ಧಿ– ಸ್ವರಾಜ್ಯದ ಪರಿಕಲ್ಪನೆ: ಸುಮನಸ ಕೌಲಗಿ / 61
ಉಪನಿಷತ್ತುಗಳು ಮತ್ತು ಅದ್ವೈತ ತತ್ತ್ವ: ರಾಜೇಶ್ವರಿ ಜೋಶಿ / 65
ಸೂಫಿ ತಾತ್ತ್ವಿಕತೆ: ಎಚ್. ಎಸ್. ಅನುಪಮಾ / 68

**ವಿಚಾರ ಸಂಕಿರಣ: ಮಹಿಳಾ ಬದುಕಿನ ಪಲ್ಲಟಗಳು**

ಆಮಂತ್ರಣ ಪತ್ರಿಕೆ / 80
ಉದ್ಘಾಟನಾ ಮಾತು: ಸಬಿಹಾ ಭೂಮಿಗೌಡ / 82
ದಿಕ್ಸೂಚಿ ಭಾಷಣ: ವೋಲ್ಗಾ, ಅನುವಾದ– ಅಜೇಯ ವರ್ಮ ಅಲ್ಲೂರಿ / 86
ವೋಲ್ಗಾ ಪರಿಚಯ

ಅಧ್ಯಕ್ಷೀಯ ಮಾತು: ಮೀರಾ ಶಿವಲಿಂಗಯ್ಯ / 95
ಮಹಿಳಾ ಬದುಕಿನ ಪಲ್ಲಟಗಳು– ಕೃಷಿ ನೆಲೆಯಿಂದ: ವಿ. ಗಾಯತ್ರಿ / 101
ಮಹಿಳಾ ಬದುಕಿನ ಪಲ್ಲಟಗಳು – ರಾಜಕೀಯ ನೆಲೆಯಿಂದ: ಸಬಿತಾ ಬನ್ನಾಡಿ / 110
ಮಹಿಳಾ ಬದುಕಿನ ಪಲ್ಲಟಗಳು – ಔದ್ಯೋಗಿಕ ನೆಲೆಯಿಂದ: ಸತ್ಯಾ ಎಸ್. / 116
ಸಂಪನ್ಮೂಲ ವ್ಯಕ್ತಿಗಳ ಪರಿಚಯ
ಅನುಭವ ಕಥನ: / 125
ರತ್ನಮ್ಮ ಗೆಜ್ಜಲಗೆರೆ, ಗಾಟು
ಅರುಂಧತಿ, ಮಂಡ್ಯ
ಜನಾರ್ಧನ ಹೂತಗೆರೆ, ವಿಮೋಚನ

**ಕಪ್ಪು ಉಡುಗೆಯಲ್ಲಿ ಮಹಿಳೆಯರು / 134**
ಕರಪತ್ರ
ಚಾಲನಾ ಮಾತು– ಕಾರಿನ್ ಕುಮಾರ್

**ಹಕ್ಕೊತ್ತಾಯ ಜಾಥಾ**
ಕರಪತ್ರ / 140
ಆಮಂತ್ರಣ ಪತ್ರಿಕೆ / 142
ಪ್ರಾಸ್ತಾವಿಕ ಮಾತು: ವಾಣಿ ಪೆರಿಯೋಡಿ / 151
ದಿಕ್ಸೂಚಿ ಭಾಷಣ: ಶಬ್ನಂ ಹಶ್ಮಿ. ಅನುವಾದ– ಮಲ್ಲಿಗೆ ಸಿರಿಮನೆ / 156
ಶಬ್ನಂ ಹಶ್ಮಿ ಪರಿಚಯ
ಅಧ್ಯಕ್ಷೀಯ ಮಾತು: ಸುನಂದಾ ಜಯರಾಂ / 164

**ಮಹಿಳಾ ದಿನದ ಅನುಭವಗಳು / 168**
ವಾಣಿ ಪೆರಿಯೋಡಿ
ಕುಮಾರಿ, ಸಿ.ಐ.ಟಿ.ಯು.
ಜ್ಯೋತಿ, ಮಹಿಳಾ ಮುನ್ನಡೆ
ಶ್ರೀಲತಾ
ಮುದ್ದೇಗೌಡ
ಲೀಲಾ ಅಪ್ಪಾಜಿ

**ಫೋಟೋ ಸಂಚಯ / 185**

# ಸಕ್ಕರೆಯ ನಗರದಲ್ಲಿ ಅರಿವಿನ ಸಿಹಿ ಪಯಣ

2019ರ ಮಾರ್ಚ್‌ನಲ್ಲಿ ಧಾರವಾಡದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ವೇದಿಕೆಯಿಂದ ಮುಂದಿನ ಸಮಾವೇಶ ನಡೆಯಬೇಕಾದ ಮಂಡ್ಯ ಜಿಲ್ಲೆಗೆ ಮಾವಿನ ಮತ್ತು ಹೊಂಗೆಯ ಸಸಿಗಳು ಬಂದಾಗ, ಈ ಪಯಣವು ತಣ್ಣೆಳಲಲ್ಲಿ ಮಾವಿನ ಸವಿಯೊಂದಿಗಿನ ಸಿಹಿ ಪಯಣವಾಗಲೆಂಬ ಹಾರೈಕೆ ಮನಸ್ಸಿನಲ್ಲಿತ್ತು. ಅದಕ್ಕೆ ತಕ್ಕಂತೆ ಸಕ್ಕರೆಯ ನಗರವಾದ ಮಂಡ್ಯದ ಎಲ್ಲ ಮಹಿಳಾಪರ ಮನಸ್ಸುಗಳೂ ಸೇರಿಕೊಂಡು 2020ರ ಮಾರ್ಚ್ 7–8ರವರೆಗಿನ ನಡಿಗೆಯನ್ನು ಅವಿಸ್ಮರಣೀಯಗೊಳಿಸಿದವು. 2019ರ ಮೇ ತಿಂಗಳಿನಿಂದ ಆರಂಭವಾದ ಈ ಪಯಣ 2020ರ ಮಾರ್ಚ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯವರೆಗೂ, ಅಷ್ಟಕ್ಕೇ ನಿಲ್ಲದೆ ಅಲ್ಲಿಂದ ಮುಂದಕ್ಕೂ ನಿರಂತರವಾಗಿ ಸಾಗುತ್ತಾ ಬಂದಿದೆ. ಮಂಡ್ಯದ ಎಲ್ಲ ಮಹಿಳಾ ಮತ್ತು ಜನಪರ ಸಂಘಟನೆಗಳ ನಡುವೆ ಒಂದು ವಿಶಿಷ್ಟವಾದ ಸಹೋದರಿತ್ವದ ಎಳೆಯನ್ನು ಬೆಸೆದಿದೆ.

ಈ ಸಮಾವೇಶದ ಸಂಘಟನೆಯ ಮೊದಲ ಹೆಜ್ಜೆಗಳು ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಗೆಳತಿಯರೊಂದಿಗಿನ ಚರ್ಚೆಯೊಂದಿಗೆ ಮೊದಲಾದವು. ಸಿದ್ಧತಾ ಸಭೆಗಳು, ಸಮನ್ವಯ ತಂಡಗಳ ರಚನೆಯೊಂದಿಗೆ ಕಾರ್ಯಚಟುವಟಿಕೆಗಳಿಗೆ ವೇಗ ಸಿಕ್ಕಿತು. ಮಂಡ್ಯದ ರೈತ, ಮಹಿಳಾ, ವಿದ್ಯಾರ್ಥಿ, ಯುವಜನ, ಕಾರ್ಮಿಕ, ದಲಿತ ಹಾಗೂ ಸಾಹಿತ್ಯ ವಲಯದ ಸಮಾನ ಮನಸ್ಕರು ಅರಿವಿನ ಪಯಣವೆಂಬ ಹೊಸ ಅನುಭೂತಿಯನ್ನು ದೊರಕಿಸಿಕೊಳ್ಳುವ ಆಸಕ್ತಿ ತೋರಿದರು. ಹಾಡು, ನಾಟಕ, ಕಥೆ, ಸಂವಾದಗಳೇ ಮೊದಲಾದ ಸೃಜನಶೀಲ ಕಾರ್ಯಕ್ರಮಗಳನ್ನು ನಡೆಸಿಕೊಡುವ ತರಬೇತಿ ಪಡೆದುಕೊಳ್ಳುತ್ತಿದ್ದ ಹಾಗೆ ಆರಂಭವಾದ ಅರಿವಿನ ಪಯಣಗಳು, ಅವುಗಳಲ್ಲಿ ಪಾಲ್ಗೊಂಡ ಪ್ರತಿಯೊಬ್ಬರಿಗೂ ತಮ್ಮದೇ ಆದ ನೆಲೆಗಳಲ್ಲಿ ಮರೆಯಲಾಗದ ನೆನಪುಗಳನ್ನು ನೀಡಿದವು. ಶಾಲಾ ಕಾಲೇಜುಗಳಲ್ಲಿ, ಗ್ರಾಮಗಳಲ್ಲಿ, ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳಲ್ಲಿ, ಮಂಡ್ಯ ನಗರದ ವಿವಿಧ ಪ್ರದೇಶಗಳಲ್ಲಿ, ನಗರಗಳಲ್ಲಿ ಜೊತೆಯಾಗಿ ಅಡ್ಡಾಡುತ್ತಾ ಮಕ್ಕಳು, ಮಹಿಳೆಯರು ಮತ್ತು ಎಲ್ಲ ನಾಗರಿಕರೊಂದಿಗೆ ನಡೆಸಿದ ಸಂವಾದ, ಚರ್ಚೆ, ವಿಚಾರ ವಿನಿಮಯಗಳು ಜೆಂಡರ್ ಬಗೆಗಿದ್ದ ತಿಳುವಳಿಕೆಯನ್ನು ಸರಿಪಡಿಸಿಕೊಳ್ಳುವ, ಅರಿವಿನ

ಕ್ಷಿತಿಜವನ್ನು ವಿಸ್ತರಿಸುವ ಉಪಕರಣವಾಗಿ ಕೆಲಸ ಮಾಡಿದವು.

ಅರಿವಿನ ಪಯಣಗಳಿಗೆಂದೇ ಪ್ರತಿವರ್ಷ ತಯಾರಿಸಲಾಗುತ್ತಿರುವ ಕಿರುಪುಸ್ತಕ ಈ ಹಿಂದಿನಂತೆ ಜೆಂಡರ್ ಕುರಿತ ಮೂಲಭೂತ ಪರಿಕಲ್ಪನೆಗಳನ್ನು ಪರಿಚಯಿಸುವ, ಲೈಂಗಿಕ ಹಿಂಸಾಚಾರ, ವರದಕ್ಷಿಣೆ ಮತ್ತು ಕೌಟುಂಬಿಕ ಹಿಂಸೆ, ಜಾತಿ ತಾರತಮ್ಯ ಮುಂತಾದವುಗಳನ್ನು ಚರ್ಚಿಸುವ ಬರಹಗಳ ಜೊತೆಗೆ, ಮಂಡ್ಯ ಜಿಲ್ಲೆಯನ್ನು ವಿಶೇಷವಾಗಿ ಕಾಡಿದ–ಕಾಡುತ್ತಿರುವಂತಹ ಬಾಲ್ಯವಿವಾಹ, ಹೆಣ್ಣು ಭ್ರೂಣಹತ್ಯೆ, ಮರ್ಯಾದೆಗೇಡು ಹತ್ಯೆಗಳು ಮುಂತಾದ ವಿಷಯಗಳನ್ನೂ ಕೂಡಾ ಒಳಗೊಂಡಿತು. ಜಿಲ್ಲೆಯಾದ್ಯಂತ ನಡೆದ 'ಕಪ್ಪು ಉಡುಗೆಯಲ್ಲಿ ಮಹಿಳೆ' ಮೌನ ಜಾಗೃತಿಯೂ ಮಹಿಳಾ ಧ್ವನಿಯನ್ನು ಬಿಂಬಿಸುವಂತಿತ್ತು.

ಅರಿವಿನ ಪಯಣಗಳಲ್ಲಿ, ಕಾರ್ಯಕ್ರಮದ ಸಂಘಟನೆಯ ಇತರ ಕೆಲಸಗಳಲ್ಲಿ ತೊಡಗಿಕೊಂಡವರೆಲ್ಲ ಸಾಕಷ್ಟು ಕಾಲದಿಂದ ಸಾಮಾಜಿಕ ಕ್ಷೇತ್ರದಲ್ಲಿ ಸಕ್ರಿಯವಾಗಿ ತೊಡಗಿಕೊಂಡಿದ್ದವರೇ. ಆದರೂ, ತಮ್ಮ ತಮ್ಮ ಸಂಘಟನೆಗಳಲ್ಲಿ, ಕಾಲೇಜುಗಳಲ್ಲಿ ಪ್ರತ್ಯೇಕವಾಗಿ ನಡೆಸುತ್ತಿದ್ದ ಕಾರ್ಯಚಟುವಟಿಕೆಗಳನ್ನು ಜೊತೆಗೂಡಿ ಮಾಡಿದಾಗ ಅದು ಮೂಡಿಸುವ ಹೊಸ ವಿಶ್ವಾಸವನ್ನೂ, ಕೆಲವು ಪಟ್ಟು ಹೆಚ್ಚುವ ಪರಿಣಾಮವನ್ನೂ ನೇರವಾಗಿ ಕಂಡು ಅನುಭವಿಸುವ ಅವಕಾಶ ಮಂಡ್ಯದಲ್ಲಿ ಇದರಲ್ಲಿ ತೊಡಗಿಕೊಂಡ ಎಲ್ಲರಿಗೂ ದೊರೆತಂತಾಯಿತು. ಜೊತೆಗೆ ಕೆಲವೊಂದು ಹೊಸ ಸಹಪಯಣಿಗರೂ ಮಹಿಳಾ ದಿನದ ಕೆಲಸಗಳ ಮೂಲಕ ಜೊತೆಯಾದರು.

ಅರಿವಿನ ಪಯಣಗಳ ಜೊತೆಜೊತೆಗೇ ಮಹಿಳಾ ಚಳವಳಿಯ ಕೆಲಸಗಳಲ್ಲಿ ತೊಡಗಿರುವ ಕಾರ್ಯಕರ್ತೆಯರು ಮತ್ತು ಕಾರ್ಯಕರ್ತರಿಗೆ ಅತ್ಯಗತ್ಯವಾಗಿದ್ದ ಅಧ್ಯಯನ ಶಿಬಿರವು ಮಂಡ್ಯ ಜಿಲ್ಲೆಯ ಮೇಲುಕೋಟೆಯ ಜನಪದ ಸೇವಾಟ್ರಸ್ಟ್‌ನ ಸಂತೋಷ್ ಕೌಲಗಿಯವರು, ಅವರ ಸಿಬ್ಬಂದಿ ಮತ್ತು ಕುಟುಂಬದವರ ಸಹಕಾರದೊಂದಿಗೆ 'ಹೊಸ ಜೀವನ ದಾರಿ'ಯ ಚೇತೋಹಾರಿ ಪರಿಸರದಲ್ಲಿ ನಡೆಯಿತು. ಬೌದ್ಧಧರ್ಮದ ಮೂಲತತ್ವಗಳ ಪರಿಚಯ, ಸೂಫಿತತ್ವದ ಪರಿಚಯ, ಮಹಿಳೆಯರಿಗೂ ಕೃಷಿಗೂ ಇರುವ ಅವಿನಾಭಾವ ಸಂಬಂಧದ ಕುರಿತ ಚರ್ಚೆ, ಮನುಷ್ಯ ಜಗತ್ತಿನ ವಿಕಾಸದ ಹಾದಿಯಲ್ಲಿ ಜೆಂಡರ್ ತಾರತಮ್ಯಗಳು ಸೃಷ್ಟಿಯಾದ ಕುರಿತ ಚರ್ಚೆ, ರೈತ ಚಳವಳಿಯ ಹಿನ್ನೆಲೆ ಮತ್ತು ಅನುಭವ–ಹೀಗೆ ವೈವಿಧ್ಯಮಯವಾದ ಮತ್ತು ಅತ್ಯಂತ ಉಪಯುಕ್ತವಾದ ಸಂಗತಿಗಳನ್ನು ಅರಿಯುವ ಸಂದರ್ಭ ಅದಾಗಿತ್ತು. ಈ ಎಲ್ಲ ವೈಚಾರಿಕ ಸಂವಾದಗಳ ನಡುವೆ ಕಾವ್ಯಾಸಕ್ತಿಯನ್ನು ಪ್ರೋತ್ಸಾಹಿಸುವುದಕ್ಕೆಂದೇ ಮೀಸಲಾದ ಮಹಿಳಾ ಕಾವ್ಯಗೋಷ್ಠಿಯೂ ಇತ್ತು. ಎರಡು ದಿನಗಳ ಅಧ್ಯಯನ ಶಿಬಿರವು ಕಾರ್ಯಕರ್ತೆಯರ ಹುಮ್ಮಸ್ಸು ಮತ್ತು ತಿಳುವಳಿಕೆಯ ಕ್ಷಿತಿಜವನ್ನು ವಿಸ್ತರಿಸಿತು.

ಹೀಗೆ ಬಹಳಷ್ಟು ನಿರೀಕ್ಷೆಗಳು, ಸಂಭ್ರಮ–ಸಡಗರ, ಜೊತೆಗೇ ಒಂದಷ್ಟು ಆತಂಕದೊಂದಿಗೇ ನಡೆದ ಎರಡು ದಿನಗಳ ಕಾರ್ಯಕ್ರಮವನ್ನು ಸಂಘಟಿಸುವ ಜವಾಬ್ದಾರಿಯ ಕೆಲಸ, ಈ ನೆನಪಿನ ಹೊತ್ತಿಗೆಯನ್ನು ನಿಮ್ಮ ಕೈಗಿಡುವುದರೊಂದಿಗೆ ಒಂದು ಬಗೆಯಲ್ಲಿ ಅಧಿಕೃತ ಮುಕ್ತಾಯ ಕಾಣುತ್ತದೆ. ಆದರೆ, ಇದು ಕೊನೆಯಲ್ಲ; ಜೊತೆಗೂಡಿ ಬಹಳ ಕಾಲ ಮುಂದುವರೆಯಲಿರುವ ಒಡನಾಡಿಗಳ ಹೊಸ ಪಯಣವೊಂದರ ಆರಂಭ.

ಈ ಪುಸ್ತಕದಲ್ಲಿ, ಅರಿವಿನ ಪಯಣದ ಹಿನ್ನೆಲೆ, ಸ್ಪಂದನೆ ಮತ್ತು ಪ್ರತಿಕ್ರಿಯೆ, ಅಧ್ಯಯನ ಶಿಬಿರದಲ್ಲಿ ಮಂಡನೆಯಾದ ವಿಷಯಗಳ ಕುರಿತ ಪ್ರಬಂಧಗಳು, ವಿಚಾರ ಸಂಕಿರಣದಲ್ಲಿ ಮಂಡನೆಯಾದ ಪ್ರಬಂಧಗಳು, ಕಪ್ಪು ಉಡುಗೆಯಲ್ಲಿ ಮಹಿಳೆಯರು– ಹೋರಾಟದ ಹಿನ್ನೆಲೆ ಮತ್ತು ಉದ್ಘಾಟಕರ ಮಾತು, ಸಮಾವೇಶದ ಭಾಷಣಗಳು ಮತ್ತು ಪ್ರತಿಸ್ಪಂದನೆಗಳು, ಚಿತ್ರಸಂಪುಟ ಮತ್ತು ಪತ್ರಿಕಾ ವರದಿಗಳು ಹಾಗೂ ಅನುಬಂಧ–ಇವೆಲ್ಲವೂ ಒಳಗೊಂಡಿವೆ. ಈ ಗೋಷ್ಠಿಗಳಲ್ಲಿ ಮತ್ತು ಸಮಾವೇಶದಲ್ಲಿ ನಮ್ಮ ಪ್ರೀತಿಯ ಕೋರಿಕೆಗೆ ಓಗೊಟ್ಟು ಬಂದು ಮಾತನಾಡಿದ ಮತ್ತು ಪ್ರಬಂಧಗಳನ್ನು ಸಿದ್ಧಪಡಿಸಿಕೊಟ್ಟ ಎಲ್ಲ ಸಂಪನ್ಮೂಲ ವ್ಯಕ್ತಿಗಳಿಗೂ ನಮ್ಮ ಹೃತ್ಪೂರ್ವಕ ಧನ್ಯವಾದಗಳು.

ಈ ಕೆಲಸಕ್ಕೆ ಕೈಜೋಡಿಸಲು ಮುಂದಾದವರು ಹಲವರು; ನೇರವಾಗಿ ಪ್ರತಿದಿನ ಅರಿವಿನ ಪಯಣಗಳನ್ನು ನಡೆಸುವ ಕೆಲಸಗಳಲ್ಲಿ ಪಾಲ್ಗೊಳ್ಳುವಂತಹವರು ಕೆಲವರಾದರೆ, ಇವೆಲ್ಲವನ್ನೂ ಸಂಘಟಿಸಲು ಬೇಕಿರುವ ಹಿನ್ನೆಲೆಯ ಕೆಲಸಗಳಲ್ಲಿ ತೊಡಗುವವರು ಕೆಲವರು. ಈ ಎಲ್ಲವನ್ನೂ ನೋಡುತ್ತಾ, ಮೆಚ್ಚುತ್ತಾ ಆಗಾಗ ಪ್ರೋತ್ಸಾಹದ ಮಾತುಗಳಿಂದ 'ನಿಮ್ಮೊಂದಿಗೆ ನಾವಿದ್ದೇವೆ' ಎಂಬ ವಿಶ್ವಾಸ ಮೂಡಿಸಿದ ತೆರೆಮರೆಯಲ್ಲೇ ನಿಂತು ಪರೋಕ್ಷ ಕೊಡುಗೆ ನೀಡಿದವರು ಇನ್ನೂ ಹಲವರು. ಒಟ್ಟಿನಲ್ಲಿ ಎಲ್ಲರ ಸಾಮೂಹಿಕ ಪ್ರಯತ್ನದ ಕಾರಣಕ್ಕೆ ಎಲ್ಲ ಬಗೆಯ ಅಡ್ಡಿ ಆತಂಕಗಳನ್ನೂ ಮೀರಿ ಯಶಸ್ವಿಯಾದ ಮಹಿಳಾ ದಿನದ ವಿಚಾರಗೋಷ್ಠಿ ಮತ್ತು ಸಮಾವೇಶವನ್ನು ಸಂಘಟಿಸಿದ ಸಾರ್ಥಕ ಭಾವ ನಮ್ಮೆಲ್ಲರದ್ದಾಗಿದೆ.

ಇದಕ್ಕೆ ಕಾರಣವಾದ ಎಲ್ಲರನ್ನೂ ತುಂಬು ಹೃದಯದಿಂದ ನೆನೆಯುತ್ತೇವೆ. ಇಷ್ಟು ದೊಡ್ಡ ಕೆಲಸವನ್ನು ಮೊದಲಿನಿಂದ ಕೊನೆಯವರೆಗೂ ಯಶಸ್ವಿಯಾಗಿ ನಡೆಸಲು ಸಹಕರಿಸಿದ ರಾಜ್ಯ ಒಕ್ಕೂಟದ ವಾಣಿ ಪೆರಿಯೋಡಿ, ದು. ಸರಸ್ವತಿ. ಉಪಕುಲಪತಿಗಳ ಹುದ್ದೆಯ, ವೈದ್ಯ ವೃತ್ತಿಯ ಕಾರ್ಯಭಾರಗಳ ಒತ್ತಡವನ್ನೂ ಬದಿಗಿಟ್ಟು ಜೊತೆಯಾಗುತ್ತಿದ್ದ ಡಾ. ಸಬಿಹಾ ಭೂಮಿಗೌಡ ಮತ್ತು ಡಾ. ಅನುಪಮಾ ಅವರಿಗೆ ಕೃತಜ್ಞತೆಗಳು ಸಲ್ಲುತ್ತವೆ. ಜೊತೆಯಾದ ಹಾಗೂ ನಿರಂತರವಾಗಿ ಜಿಲ್ಲಾದ್ಯಂತ ಮಂಡ್ಯದ ಸಮನ್ವಯ ತಂಡದವರಾದ ವಿಜಯಲಕ್ಷ್ಮಿ ರಘುನಂದನ್, ಸ್ಟೆಲ್ಲಾ, ದೇವಿ, ಮಂಜುಳ, ರತ್ನಮ್ಮ, ಪೂರ್ಣಿಮರವರಿಗೂ

ಹಾಗೂ ಎಲ್ಲ ಯುವಜನತೆಗೂ ಧನ್ಯವಾದಗಳು. ಮಂಡ್ಯ ಕಾರ್ಯಕ್ರಮಕ್ಕೆ ಹೊರಗಿನಿಂದ ಬಂದ ವಿಶೇಷ ಅತಿಥಿಗಳಾದ ವೋಲ್ಗಾ, ಶಬ್ನಂ ಹಶ್ಮಿ ಮತ್ತು ಅಮ್ಮಯಮ್ಮ ಅವರಿಗೆ ನೀಡಲು ಸುಂದರವಾದ ಕೌದಿಗಳನ್ನು ಹೊಲೆದು ಕೊಟ್ಟ ಶಿವಮೊಗ್ಗ, ಧಾರವಾಡ ಮತ್ತು ಮಂಗಳೂರಿನ ಗೆಳತಿಯರಿಗೂ ಕೌದಿಯಷ್ಟೇ ಬೆಚ್ಚಗಿನ ಪ್ರೀತಿಯ ವಂದನೆಗಳು. ವಿಚಾರ ಸಂಕಿರಣದ ಸಂಪೂರ್ಣ ಉಸ್ತುವಾರಿ ಮತ್ತು ಹೊಣೆಹೊತ್ತುಕೊಂಡ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಕುಲಸಚಿವರಾದ ಡಾ. ಸುನಂದಮ್ಮ ಮತ್ತು ಮಂಡ್ಯ ವಿಸ್ತರಣಾ ಕೇಂದ್ರದ ನಿರ್ದೇಶಕರಾದ ಡಾ. ಹೇಮಲತಾ ಮತ್ತು ಅವರ ತಂಡಕ್ಕೂ; ಬೇರೆ ಬೇರೆ ಜಿಲ್ಲೆಗಳಿಂದ ಬಂದು ಒಕ್ಕೂಟದ ಸಮನ್ವಯ ಸಮಿತಿಯ ಜೊತೆ ಮಂಡ್ಯ ಮತ್ತು ರಾಜ್ಯದ ವಿವಿಧೆಡೆಯಿಂದ ಆರ್ಥಿಕ ಸಹಾಯ ಮಾಡಿದವರಿಗೂ ಹಾಗೂ ನೇರವಾಗಿ ಪರೋಕ್ಷವಾಗಿ ಇದಕ್ಕಾಗಿ ಶ್ರಮಿಸಿದ ಎಲ್ಲರಿಗೂ ಈ ಹೊತ್ತಿನಲ್ಲಿ ಕೃತಜ್ಞತೆಗಳನ್ನು ಸಲ್ಲಿಸಲು ಬಯಸುತ್ತೇವೆ. ಮೂರ್ನಾಲ್ಕು ವರ್ಷಗಳಿಂದ ಒಕ್ಕೂಟದ ಪ್ರಕಟಣೆಗಳನ್ನು ಸಮಯಕ್ಕೆ ಸರಿಯಾಗಿ ಮಾಡಿಕೊಡುವುದೇ ಅಲ್ಲದೇ ತಮ್ಮನ್ನೂ ಒಕ್ಕೂಟದ ಭಾಗವೆಂದೇ ತಿಳಿದು, ಯಾವ ಶುಲ್ಕವನ್ನೂ ಪಡೆಯದೇ, ಉಚಿತವಾಗಿ ಪುಸ್ತಕ ವಿನ್ಯಾಸ ಮಾಡಿಕೊಡುವ ಎಚ್. ಕೆ. ಶರತ್ ಎಂಬ ಒಕ್ಕೂಟದ ಪ್ರೀತಿಯ ಸೋದರನಿಗೆ ನಮ್ಮೆಲ್ಲರ ಪ್ರೀತಿಯ ಧನ್ಯವಾದ ಸಲ್ಲಲೇಬೇಕು. ಅವರ ಹಾಗೆಯೇ ಸದಾ ಒಕ್ಕೂಟದ ಪ್ರಕಟಣೆಯ ಕೆಲಸಗಳಿಗೆ ಬೆಂಬಲ ಕೊಡುತ್ತಾ, ಕಡಿಮೆ ಅವಧಿಯಲ್ಲಿ ಮುಖಪುಟ ಮಾಡಿಕೊಟ್ಟ ಜಿ. ಅರುಣಕುಮಾರ್ ಹಾಗೂ ಒಪ್ಪವಾಗಿ, ಅಚ್ಚುಕಟ್ಟಾಗಿ, ಕಡಿಮೆ ಬೆಲೆಯಲ್ಲಿ ನಮ್ಮ ಹೊತ್ತಗೆಗಳ ಮುದ್ರಿಸಿಕೊಟ್ಟ ಇಳಾ ಪ್ರೆಸ್‌ನ ಗುರುಮೂರ್ತಿ ಮತ್ತು ಸಂಗಾತಿಗಳಿಗೆ ಮನದಾಳದ ಕೃತಜ್ಞತೆಗಳು ಸಲ್ಲುತ್ತವೆ.

ಈಗ ಕೋಲಾರದ ಗೆಳತಿಯರು ಪಡೆದಿರುವ ಮಹಿಳಾ ದಿನದ ಹಣತೆಯು ಯಶಸ್ವಿಯಾದ ಕಾರ್ಯಕ್ರಮದೊಂದಿಗೆ ಕೋಲಾರ ಜಿಲ್ಲೆಗೆ ಹೊಸಬೆಳಕಿನ ಹುಮ್ಮಸ್ಸು ಮೂಡಿಸಲಿ ಎಂಬ ಹಾರೈಕೆಯೊಂದಿಗೆ, ಮತ್ತೆ ಸಿಗೋಣ. ಜೊತೆಯಾಗಿ ಸಾಗೋಣ!

**– ಸಂಪಾದಕ ಮಂಡಳಿ**

# ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ

## ನಮ್ಮ ಸಂವಿಧಾನ

ಸ್ವಾತಂತ್ರ್ಯ, ಸಮಾನತೆ, ಬಂಧುತ್ವವೇ ಜೀವಾಳವಾದ ನಮ್ಮ ಸಂವಿಧಾನದಲ್ಲಿ ಶ್ರದ್ಧೆ, ನಂಬಿಕೆಗಳನ್ನಿರಿಸಿರುವ ನಾವು, ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಸಂಗಾತಿಗಳು. ಒಕ್ಕೂಟವು ಒಂದು ಸಂಘವಲ್ಲ, ಸಂಸ್ಥೆಯಲ್ಲ, ಸಂಘಟನೆಯಲ್ಲ, ಬದಲಿಗೆ ಹಲವು ಜನಪರ, ಜೀವಪರ, ಪ್ರಜಾಸತ್ತಾತ್ಮಕ ಸಂಘಟನೆಗಳ ಒಗ್ಗಟ್ಟಿನ ಜಾಲ. ಸಮಾನತೆ, ಸ್ವಾತಂತ್ರ್ಯ, ಸೋದರಿತ್ವ, ಪ್ರಜಾಸತ್ತಾತ್ಮಕ ಮೌಲ್ಯ ಮತ್ತು ಸಾಮಾಜಿಕ ನ್ಯಾಯಗಳಲ್ಲಿ ನಂಬಿಕೆ ಇರುವವರೆಲ್ಲ ಇದರ ಸದಸ್ಯರು. ಪ್ರೀತಿ ಮತ್ತು ನಿರ್ಭೀತಿಯೇ ಪ್ರವೇಶ ಶುಲ್ಕ. ಈ ನೆಲ, ಜನ, ಭಾಷೆ, ಅಭಿಪ್ರಾಯಗಳನ್ನು ಸಮಾನ ಗೌರವದಲ್ಲಿ ಕಾಣುವುದೇ ನಮ್ಮ ಧರ್ಮ.

ನಾವು, ಈ ನೆಲದ ಹೆಣ್ಣುಗಳ ಆಶಯ, ಕನಸು ಇವು:

- ಲಿಂಗ, ಲಿಂಗತ್ವ, ಜಾತಿ, ವರ್ಗ, ಮತ, ಧರ್ಮ, ಸಂಸ್ಕೃತಿ, ಜನಾಂಗ, ಯುದ್ಧ, ಸಿದ್ಧಾಂತ, ಗಡಿ, ಭಾಷೆಗಳ ಹೆಸರಿನಲ್ಲಿ ನಡೆಯುವ ಹಿಂಸೆ, ಅತ್ಯಾಚಾರ, ತಾರತಮ್ಯಗಳಿರದ, ಭಯಮುಕ್ತ ನಾಡನ್ನು ಕಟ್ಟಲು ನಾವು ಬದ್ಧರಾಗುತ್ತೇವೆ.
- ಪಾರಂಪರಿಕವಾಗಿ ಬಂದ ಮಹಿಳೆಯರ ಜ್ಞಾನ, ಅನುಭವ, ಕೌಶಲ್ಯ, ದುಡಿಮೆ, ಆತ್ಮಗೌರವನ್ನು ಎತ್ತಿ ಹಿಡಿಯುತ್ತೇವೆ.
- ಸಾರ್ವಜನಿಕ ಸ್ಥಳ/ಸಂಸ್ಥೆಗಳಲ್ಲಿ, ವಿವಾಹ ಮತ್ತು ಕುಟುಂಬ ವ್ಯವಸ್ಥೆಯಲ್ಲಿ ಮಹಿಳೆಯರನ್ನು ಸಹಜೀವಿಯಾಗಿ, ಸಮಾನ ಗೌರವದೊಂದಿಗೆ ಕಾಣುವಂತಹ ವ್ಯವಸ್ಥೆಯನ್ನು ರೂಪಿಸಲು, ಮನಸುಗಳನ್ನು ಕಟ್ಟಲು ದುಡಿಯುತ್ತೇವೆ.
- ಸರ್ಕಾರ ರಚನೆಯಲ್ಲಿ ಮತ್ತು ರಾಜಕೀಯರಂಗವೂ ಸೇರಿದಂತೆ ಎಲ್ಲ ರಂಗಗಳಲ್ಲಿ ಸಾಮಾಜಿಕ ನ್ಯಾಯ ಆಧರಿಸಿದ ಮೀಸಲಾತಿಯನ್ನು ಕಡ್ಡಾಯವಾಗಿ ಜಾರಿಗೊಳಿಸಲು, ರಾಜಕೀಯ ಪಕ್ಷಗಳಲ್ಲಿ ಮತ್ತು ಸಂಘ, ಸಂಸ್ಥೆ, ಸಂಘಟನೆಗಳಲ್ಲಿ ಸಮಾನ ಮಹಿಳಾ ಪ್ರಾತಿನಿಧ್ಯ ದೊರೆಯಲು ಶ್ರಮಿಸುತ್ತೇವೆ.
- ಮಹಿಳೆಯರ ಸಾಮರ್ಥ್ಯಕ್ಕೆ ತಕ್ಕ ಉದ್ಯೋಗಕ್ಕಾಗಿ, ಸಂಘಟಿತ– ಅಸಂಘಟಿತ ವಲಯದ ಎಲ್ಲ ದುಡಿಮೆಗಾರರಿಗೆ ಗೌರವದಿಂದ ಬದುಕಲು ಸಾಧ್ಯಮಾಡುವ ವೇತನ ಮತ್ತು ಆರೋಗ್ಯಕರ, ಲೈಂಗಿಕ ಕಿರುಕುಳಮುಕ್ತ ಕೆಲಸದ ವಾತಾವರಣಕ್ಕಾಗಿ ಶ್ರಮಿಸುತ್ತೇವೆ. ಆಧುನಿಕ ಜೀತಪದ್ಧತಿಯಾದ ಗುತ್ತಿಗೆ ಪದ್ಧತಿ, ಅತಿದುಡಿಮೆ, ಒತ್ತಾಯದ ದುಡಿಮೆಗಳನ್ನು ನಿಲ್ಲಿಸಲು ಯತ್ನಿಸುತ್ತೇವೆ.

- ದೇವದಾಸಿ ಪದ್ಧತಿ ಕೊನೆಗೊಳಿಸಲು ಅವರಿಗೆ ಉತ್ತಮ ಆರೋಗ್ಯ ಸೇವೆ, ಶಿಕ್ಷಣ, ವಸತಿ ಮತ್ತು ಉದ್ಯೋಗ ದೊರಕಿಸಿಕೊಡಲು, ಮಹಿಳೆ ಮತ್ತು ಮಕ್ಕಳ ಸಾಗಾಣಿಕೆ ತಡೆಯಲು, ಲಿಂಗತ್ವ ಅಲ್ಪಸಂಖ್ಯಾತರ, ಲೈಂಗಿಕ ಕಾರ್ಯಕರ್ತರ ಮಾನವ ಹಕ್ಕುಗಳ ಉಲ್ಲಂಘನೆ ನಿಲ್ಲಿಸಲು ಶ್ರಮಿಸುತ್ತೇವೆ.
- ದಲಿತ, ದಮನಿತ, ಅಸಹಾಯಕ ಮಹಿಳೆಯರೂ ಸೇರಿದಂತೆ ಎಲ್ಲ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ–ಕಿರುಕುಳ–ಅತ್ಯಾಚಾರ ಕೊನೆಗೊಳಿಸಲು ಶ್ರಮಿಸುತ್ತೇವೆ. ಹೆಣ್ಣು ಭ್ರೂಣಹತ್ಯೆ, ಬಾಲ್ಯ ವಿವಾಹ, ಆಸಿಡ್ ದಾಳಿ, ಮಹಿಳೆ ಮತ್ತು ಮಕ್ಕಳ ಮಾರಾಟ, ವರದಕ್ಷಿಣೆ, ಸಾರಾಯಿ ಮಾರಾಟವೇ ಮೊದಲಾದ ಅನಿಷ್ಟ ಪದ್ಧತಿಗಳನ್ನು ನಿಲ್ಲಿಸಲು ದುಡಿಯುತ್ತೇವೆ. ಬಾಲಕಾರ್ಮಿಕ ಪದ್ಧತಿಯನ್ನು ನಿಲ್ಲಿಸಲು, ಮಕ್ಕಳಿಗೆ ಆರೋಗ್ಯಕರ ಸಾಮಾಜಿಕ ವಾತಾವರಣ ನಿರ್ಮಿಸಲು ಶ್ರಮಿಸುತ್ತೇವೆ. ಗಂಡುಹೆಣ್ಣು ಭೇದಭಾವವನ್ನು ಬಾಲ್ಯದಿಂದಲೇ ತೊಡೆದುಹಾಕಲು, ಶಾಲಾಪಠ್ಯಗಳಲ್ಲಿ ಲಿಂಗಸೂಕ್ಷ್ಮತೆಯ ವಿಷಯ ಸೇರಿಸಲು ಮತ್ತು ಲಿಂಗಸೂಕ್ಷ್ಮತೆಯ ಕಾರ್ಯಾಗಾರಗಳನ್ನು ನಡೆಸಲು ಯತ್ನಿಸುತ್ತೇವೆ.
- ಬಂಡವಾಳ ಹೂಡಿಕೆಯ ವಿಷಯದಲ್ಲಿ ಸರ್ಕಾರ/ಸಾರ್ವಜನಿಕರ ಸಹಭಾಗಿತ್ವ ಮತ್ತು ಸಹಕಾರಿ ತತ್ವಗಳ ಸ್ವಾಮ್ಯತೆಯ ಜಾರಿಗಾಗಿ ದುಡಿಯುತ್ತೇವೆ.
- ದಲಿತ, ಆದಿವಾಸಿ, ಲಿಂಗತ್ವ ಅಲ್ಪಸಂಖ್ಯಾತ, ಧಾರ್ಮಿಕ ಅಲ್ಪಸಂಖ್ಯಾತ ಇನ್ನಿತರ ಎಲ್ಲ ಅಲ್ಪಸಂಖ್ಯಾತ ಮತ್ತು ಅಂಚಿಗೆ ಸರಿಸಲಾದವರ ಮಾನವ ಹಕ್ಕುಗಳನ್ನು ಗೌರವಿಸುತ್ತೇವೆ. ಅದಕ್ಕಾಗಿ ಅವರು ಮಾಡುತ್ತಿರುವ ಹೋರಾಟಗಳನ್ನು ಬೆಂಬಲಿಸುತ್ತೇವೆ.
- ಈ ನೆಲದಲ್ಲಿ ಹುಟ್ಟಿದ, ಈ ನೆಲದಲ್ಲಿ ನೆಲೆಯಾಗಿರುವ ಎಲ್ಲ ಧರ್ಮಗಳ ಜೀವಪರ ಮೌಲ್ಯಗಳನ್ನು ಗೌರವಿಸುತ್ತೇವೆ, ನಡೆ, ನುಡಿಗಳಲ್ಲಿ ಅಳವಡಿಸಿಕೊಳ್ಳುತ್ತೇವೆ. ಈ ನೆಲದ ಸಮನ್ವಯ/ಸಹಿಷ್ಣು ಬಹುಸಂಸ್ಕೃತಿಯನ್ನು ಗೌರವಿಸಿ ಕಾಪಾಡುತ್ತೇವೆ.
- ಮುಟ್ಟಿನ ಹೆಸರಿನಲ್ಲಿ ಆಚರಿಸುವ ಮೈಲಿಗೆ, ಪಾಪ–ಪುಣ್ಯ–ಶ್ರೇಷ್ಠ–ಕನಿಷ್ಠ–ಶಾಪ–ಸ್ವರ್ಗ–ನರಕವೇ ಮೊದಲಾದ ಮಹಿಳಾವಿರೋಧಿ, ಜೀವವಿರೋಧಿ ನಂಬಿಕೆ–ಮೌಢ್ಯಾಚರಣೆಗಳನ್ನು ಕೊನೆಗಾಣಿಸಲು ದುಡಿಯುತ್ತೇವೆ.
- ಶ್ರಮದ ದುಡಿಮೆಯನ್ನು ಗೌರವಿಸುತ್ತೇವೆ ಮತ್ತು ಅಂತಹ ದುಡಿಮೆಗೆ ಕೈಜೋಡಿಸುತ್ತೇವೆ. ದೇಸಿ ಮತ್ತು ಕೈ ಉತ್ಪನ್ನಗಳನ್ನು ಬಳಸುತ್ತೇವೆ.
- ಮಲಬಾಚುವ ಪದ್ಧತಿಯೂ ಸೇರಿದಂತೆ ಯಾವುದೇ ಸ್ವರೂಪದಲ್ಲಿ ಅಸ್ಪೃಶ್ಯತೆಯನ್ನು ಆಚರಿಸುವುದಿಲ್ಲ, ಜಾತಿ ತಾರತಮ್ಯ ಮಾಡುವುದಿಲ್ಲ.

ಆಹಾರದಲ್ಲಿ ಭೇದವೆಣಿಸುವುದಿಲ್ಲ. ಹಿಂಸೆಯನ್ನೆಂದೂ ಬೆಂಬಲಿಸುವುದಿಲ್ಲ. ಮಹಿಳೆಯರಿಗೆ ಅವಮಾನಕರ ಮತ್ತು ನಿಂದನಾಸೂಚಕವಾಗಿರುವ ಪದ ಬಳಸುವುದಿಲ್ಲ. ಅಂತಹ ಜಾಹೀರಾತು/ಸಂಗತಿಗಳನ್ನು ಒಪ್ಪುವುದಿಲ್ಲ.

- ಜೀವಪರ, ಪರಿಸರ, ಜನಪರ ಅಭಿವೃದ್ಧಿ ಮಾದರಿಗಳನ್ನು ಬೆಂಬಲಿಸುತ್ತೇವೆ ಅದಕ್ಕಾಗಿ ದುಡಿಯುತ್ತೇವೆ. ಆ ನಿಟ್ಟಿನಲ್ಲಿ ಸರಳ ಜೀವನ ಶೈಲಿಯನ್ನು ಅಳವಡಿಸಿಕೊಳ್ಳುತ್ತೇವೆ
- ಒಕ್ಕೂಟದ ಸಂವಿಧಾನಕ್ಕೆ ಅನುಗುಣವಾಗಿ ಕೈಗೊಳ್ಳುವ ಕೆಲಸ/ಕಾರ್ಯಕ್ರಮ/ ಚಟುವಟಿಕೆಗಳನ್ನು ಸಾಮಾಜಿಕ ನ್ಯಾಯ ಮತ್ತು ಪ್ರಜಾಸತ್ತಾತ್ಮಕ ಪ್ರಕ್ರಿಯೆಯ ಮೂಲಕವೇ ಸಾಮೂಹಿಕವಾಗಿ ತೀರ್ಮಾನಿಸಿ ಕೈಗೊಳ್ಳುತ್ತೇವೆ. ನಂತರ ಕಡ್ಡಾಯವಾಗಿ ಅವಲೋಕನ ಮಾಡಿಕೊಳ್ಳುತ್ತೇವೆ.
- ಯಾವುದೇ ಸಾಂಸ್ಥೀಕೃತ ಧನಸಹಾಯವನ್ನು ತೆಗೆದುಕೊಳ್ಳದೇ ಸಾರ್ವಜನಿಕವಾಗಿ ಹಣ ಸಂಗ್ರಹಿಸಿ ಒಕ್ಕೂಟದ ಕಾರ್ಯಕ್ರಮಗಳನ್ನು ನಡೆಸುತ್ತೇವೆ. ಹಣ ದುರುಪಯೋಗವಾಗದಂತೆ ಪಾರದರ್ಶಕವಾಗಿ ಎಲ್ಲವನ್ನು ಲೆಕ್ಕವಿಟ್ಟು ಸಾರ್ವಜನಿಕರಿಗೆ ಒಪ್ಪಿಸುತ್ತೇವೆ.
- ಒಕ್ಕೂಟದ ಆಗುಹೋಗುಗಳಲ್ಲಿ ಹುಟ್ಟಬಹುದಾದ ಭಿನ್ನಾಭಿಪ್ರಾಯಗಳನ್ನು, ಮನಸ್ತಾಪಗಳನ್ನು ಸಹನೆ/ ತಾಳ್ಮೆ ಮತ್ತು ಮುಕ್ತ ಚರ್ಚೆಗಳ ಮೂಲಕ ಬಗೆಹರಿಸಿಕೊಳ್ಳುತ್ತೇವೆ.
- ಅಧಿಕಾರ ವಿಕೇಂದ್ರೀಕರಣವಿರುವ, ಶ್ರೇಣೀಕರಣವಿಲ್ಲದ, ಸಾಮಾಜಿಕ ನ್ಯಾಯ ಮತ್ತು ಪ್ರಜಾಸತ್ತಾತ್ಮಕ ಮೌಲ್ಯವನ್ನು ಆಧರಿಸಿದ ಸಾಮೂಹಿಕ ನಾಯಕತ್ವ ಕಟ್ಟಲು ಶ್ರಮಿಸುತ್ತೇವೆ. ಆ ನಿಟ್ಟಿನಲ್ಲಿ ಯುವ ಪೀಳಿಗೆಗೆ ಓದು, ಅಧ್ಯಯನ, ಕಲೆ, ಬರವಣಿಗೆ ಇತ್ಯಾದಿ ಕಲಿಕೆಯ ಹೊಸಹೊಸ ಅವಕಾಶಗಳನ್ನು ಕಲ್ಪಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ.
- ಕಾಲಕಾಲಕ್ಕೆ ಸಂಗಾತಿಗಳು ಒಟ್ಟು ಸೇರಿ ಚರ್ಚಿಸಿ, ಅಗತ್ಯ ಬಿದ್ದಲ್ಲಿ ಈ ಸಂವಿಧಾನಕ್ಕೆ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅವಕಾಶವನ್ನು ಮುಕ್ತವಾಗಿರಿಸಿದ್ದೇವೆ.

*ಕೇಳು ಸಂಗಾತಿ, ಇದು ನಮ್ಮ ಹೃದಯದ ದನಿ,*
*ಬಾ ನಮ್ಮೊಡನೆ, ಇದು ಸಕಲರ ಏಳಿಗೆಯ ಸಮತೆಯ ಹಾದಿ.*
*ಅದು ಅರಿವಿನ ಹಾದಿ, ಅದು ಕರುಣದ ಹಾದಿ,*
*ಅದು ಮೈತ್ರಿಯ ಹಾದಿ, ಅದು ಸಮಚಿತ್ತದ ಹಾದಿ,*
*ಅದು ನೆಲ, ಜಲ, ಜೀವಗಳ ಉಳಿವಿನ ಹಾದಿ..*

# ಸಮಾವೇಶದ ಹಿಂದಿನ ನಡಿಗೆ

**– ವಾಣಿ ಪೆರಿಯೋಡಿ**

ಧಾರವಾಡದಿಂದ ಸಸಿ ಹಿಡಿದುಕೊಂಡು ಬರುವಲ್ಲಿಂದಲೇ ಶುರುವಾಗುತ್ತದೆ ಮಂಡ್ಯದ ಸಮಾವೇಶದ ಕಥೆ; ಮತ್ತು ಸಮಾವೇಶ ಮುಗಿವವರೆಗೂ ಒಂದಲ್ಲ ಒಂದು ರೀತಿಯ ತಯಾರಿಗಳು ನಡೆಯುತ್ತಲೇ ಇರುತ್ತವೆ. ಮಹಿಳಾ ಮುನ್ನಡೆ ಹಾಗೂ ಗಾಟು ಸಂಸ್ಥೆಯವರು ಪ್ರೀತಿಯಿಂದ, ಮಂಡ್ಯದ ಸಂಗಾತಿಗಳ ಬೆಂಬಲದ ಭರವಸೆಯೊಂದಿಗೆ ಗಿಡ ತಂದಿದ್ದೇ ಕೆಲಸ ಶುರು. ನಮ್ಮ ಜೊತೆಗೆ ನಡೆಯಬಹುದಾದವರ ಹುಡುಕಾಟವೇ ಈ ಪ್ರಕ್ರಿಯೆಯ ಮೊದಲ ಕೆಲಸ. ಸಂಬಂಧಗಳನ್ನು ಬೆಸೆಯುತ್ತಾ ಕಾರ್ಯಕ್ರಮದ ಆಶಯವನ್ನು ಎಲ್ಲರ ಎದೆಯೊಳಗೆ ಇಳಿಸುತ್ತಾ ಜೊತೆಗೂಡಿ ನಡೆಯುವುದೇ ಚಂದ.

ಮೊದಮೊದಲಿಗೆ ಒಕ್ಕೂಟದ ಸಂಗಾತಿಗಳಾದ ಸಬಿಹಾ, ಸರಸ್ವತಿ ಮುಂತಾದವರು ಮಂಡ್ಯದ ಮಂದಿಯೊಂದಿಗೆ, ಸಣ್ಣ ಸಣ್ಣ ಸಭೆಗಳನ್ನು ನಡೆಸಿದರು. ಒಂದು ಚಿಕ್ಕ ತಂಡ ಮುಂದೆ ನಿಂತು ಕೆಲಸ ಮಾಡುವ ಉತ್ಸಾಹ ತೋರಿಸುತ್ತಿದ್ದಂತೆಯೇ, ಜೂನ್ 30, 2019ರಂದು ಮೊದಲ ಸುತ್ತಿನ ಸಭೆ ನಡೆಸಲಾಯಿತು. ಅನೇಕ ಸಂಘಟನೆಯ ಮಂದಿ, ಸಮಾನಾಸಕ್ತ ವ್ಯಕ್ತಿಗಳು ಈ ಸಭೆಯಲ್ಲಿ ಸೇರಿದ್ದರು. ಒಕ್ಕೂಟದ ವಿವರವಾದ ಪರಿಚಯದೊಂದಿಗೆ ಮಂಡ್ಯ ಸಮಾವೇಶದಲ್ಲಿ ಮಂಡ್ಯ ಜಿಲ್ಲೆಗೆ ಪ್ರಸ್ತುತವೆನಿಸುವ ಯಾವ ವಿಚಾರಗಳ ಕಡೆಗೆ ಗಮನ ಕೊಡಬೇಕು ಎಂಬುದು ಈ ಸಭೆಯಲ್ಲಿ ಮುಖ್ಯವಾಗಿ ಚರ್ಚೆ ಆಯಿತು. ಅಂದಿನಿಂದ ಆಗಾಗ ಸಭೆಗಳು ನಡೆಯುತ್ತಾ ಬಂದವು. ಮೀರಾ ಶಿವಲಿಂಗಯ್ಯ ಅವರ ಕಛೇರಿಯೇ ಒಕ್ಕೂಟದ ಕೆಲಸಗಳಿಗೆ ಕಛೇರಿಯಾಯಿತು. ಸಮನ್ವಯ ಸಮಿತಿಯ ರಚನೆ ಆಯಿತು. ಈ ಸಮಿತಿ ನಿರಂತರ ನೆಲೆಯಲ್ಲಿ ಸೇರುತ್ತಾ, ಕಾರ್ಯಕ್ರಮಗಳನ್ನು ನಡೆಸುತ್ತಾ, ಮುಂದಿನ ಹೆಜ್ಜೆಗಳನ್ನು ರೂಪಿಸುತ್ತಾ ಹೋಯಿತು. ಕೆಲವು ಸಭೆಗಳಲ್ಲಿ ಅಕ್ಕಪಕ್ಕದ ಜಿಲ್ಲೆಯವರು ಜೊತೆಗೂಡಿ ಭರವಸೆ ನೀಡುತ್ತಿದ್ದರು. ಡಿಸೆಂಬರ್ 22, 2019 ರಂದು ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ಸಭೆ ನಡೆದು ಮಂಡ್ಯದ ಸಮಾವೇಶದಲ್ಲಿ ಎಲ್ಲರ ಸಹಭಾಗಿತ್ವದ ಕುರಿತು ಮಾತುಕತೆ ನಡೆಸಲಾಯಿತು. ಇದಕ್ಕೆ ಮೊದಲು ಜಿಲ್ಲಾ ಮಟ್ಟದಲ್ಲಿ ಬಹಳಷ್ಟು ಚಿಂತನೆ ನಡೆಸಿ ರೂಪಿಸಿದ ಮಂಡ್ಯ ಸಮಾವೇಶದ ಘೋಷವಾಕ್ಯವೂ ಇದೇ ಸಭೆಯಲ್ಲಿ, ಅಂತಿಮ ರೂಪ ಪಡೆದುಕೊಂಡಿತು. "ಗಟ್ಟಿದನಿ, ದಿಟ್ಟ ನಡೆ,

ಘನತೆವೆತ್ತ ಬದುಕು" ಸಮಾವೇಶದ ಆಶಯವನ್ನು ಗಟ್ಟಿಗೊಳಿಸಿತು.

ನಮ್ಮ 'ಅರಿವಿನ ಪಯಣ' ಕಾರ್ಯಕ್ರಮ ಎಲ್ಲರ ಅಂತರಂಗವನ್ನು ಮಿಡಿಯುವುದು ಎದ್ದು ಕಾಣುವ ವಿಚಾರ. ಶುರುಮಾಡುವುದೇ ತಡ ಹಾಗೆಯೇ ಹರಿದುಕೊಂಡು ಹೋಗತೊಡಗುತ್ತದೆ. ಜುಲೈ 20, 21 2019 ರಂದು ಅರಿವಿನ ಪಯಣ ನಡೆಸುವ ರೀತಿ ನೀತಿಗಳ ಬಗ್ಗೆ ಒಕ್ಕೂಟದ ಸಹಚರಿಗಳು ಮಂಡ್ಯದ ತಂಡಕ್ಕೆ ತರಬೇತಿ ನೀಡಿದರು. ಧಾರವಾಡ ಒಕ್ಕೂಟದಿಂದ ರಾಜೇಶ್ವರಿಯವರು ಈ ಕಾರ್ಯಕ್ರಮದಲ್ಲಿ ಜೊತೆಗೂಡಿದರು. ಒಟ್ಟಾರೆ ಕಾರ್ಯಕ್ರಮದ ಸ್ವರೂಪ, ಅದರಲ್ಲಿ ಒಳಗೊಂಡಿರುವ ವಿಚಾರಗಳು, ಕಾರ್ಯಕ್ರಮ ನಡೆಸುವಾಗ ತಂಡದ ಒಳಗೆ ಇರಬೇಕಾದ ಸೌಹಾರ್ದ ವಾತಾವರಣ ಹೀಗೇ ಎಲ್ಲಾ ವಿಚಾರಗಳ ಬಗ್ಗೆ ವಿವರವಾದ ಓರಿಯೆಂಟೇಶನ್ ನಡೆಯಿತು. ಒಕ್ಕೂಟದ ಕಿರು ಪರಿಚಯ, ಲಿಂಗ ತಾರತಮ್ಯ ಕುರಿತ ಹಾಡು, ವಿವಿಧ ತಾರತಮ್ಯಗಳ ಕುರಿತು ಸಂವಾದ, ಕಪ್ಪು ಬಣ್ಣದ ಬಗೆಗಿನ ಕೀಳರಿಮೆ ತೊಡೆಯುವಂತಹ ಕಿರು ಕಥೆ– ಕಪ್ಪು ಬಲೂನು, ಲೈಂಗಿಕ ಕಿರುಕುಳ ಕುರಿತ ನಾಟಕ ನೀಲಿ ರಿಬ್ಬನ್, ಈ ಕುರಿತು ವಿವರವಾದ ಸಂವಾದ, ಶ್ರಮದ ಮಹತ್ವ, ಸೌಂದರ್ಯದ ಬಗ್ಗೆ ಇರುವ ಪರಿಕಲ್ಪನೆ, ಮೆರಿಟ್ ಬಗ್ಗೆ ಇರುವ ಭ್ರಮೆ ಇತ್ಯಾದಿಗಳ ಕುರಿತು ಕತೆ ಸಂವಾದಗಳು, ಕೌಟುಂಬಿಕ ದೌರ್ಜನ್ಯ ಕುರಿತ ನಾಟಕ ದುರ್ಗಾ, ಬದುಕಿನ ಅರಿವು ನೀಡುವ ಬುದ್ಧನ ಕತೆಗಳು ಹೀಗೆ ಅರಿವಿನ ಪಯಣದ ಎಲ್ಲಾ ಅಂಶಗಳನ್ನು ಮುಂದಿಡಲಾಯಿತು. ನಾವು ಯಾವ ಗುಂಪಿನ ಎದುರು ಕಾರ್ಯಕ್ರಮ ಮಂಡಿಸುತ್ತೇವೆಯೋ ಅವರಿಗೆ ತಕ್ಕ ಹಾಗೆ ಅವರು ಕೊಟ್ಟ ಸಮಯಕ್ಕೆ ತಕ್ಕ ಹಾಗೆ ಕಾರ್ಯಕ್ರಮವನ್ನು ಸಂಯೋಜಿಸುವ ಅಗತ್ಯವನ್ನು ಕೂಡಾ ಗುರುತಿಸಲಾಯಿತು.

ಇಷ್ಟಾದ ಮೇಲೆ, ಆಗಸ್ಟ್ 3, 2019ರಂದು, ಮಂಡ್ಯದ ಮಾಂಡವ್ಯ ಕಾಲೇಜಿನಲ್ಲಿ ಅರಿವಿನ ಪಯಣ ಉದ್ಘಾಟನೆಗೊಂಡು, ಹೊರಟಿತು. ಅಂದಿನಿಂದ ಮಾರ್ಚ್ 4, 2020ರವರೆಗೂ ಪಯಣ ಸಾಗಿಯೇ ಸಾಗಿತ್ತು. ಸುಮಾರು 32 ಶಾಲಾ ಕಾಲೇಜುಗಳಿಗೆ 31 ಮಹಿಳಾ ಸಂಘಗಳಿಗೆ, 9 ಇತರ ಸಂಘಸಂಸ್ಥೆಗಳಿಗೆ ಅರಿವಿನ ಪಯಣ ಹೆಜ್ಜೆ ಇಟ್ಟಿತು. ಸುಮಾರು 7,500 ವಿದ್ಯಾರ್ಥಿಗಳನ್ನು, 4,000ದಷ್ಟು ಮಹಿಳೆಯರನ್ನು, 600 ಅಂಗನವಾಡಿ ಕಾರ್ಯಕರ್ತರನ್ನು, 700 ಗ್ರಾಮಸ್ಥರನ್ನು, 500 ಸಂಘಟನೆಗಳ ಸದಸ್ಯರನ್ನು, 30 ಪೋಲೀಸರನ್ನು ತಲುಪಿತು; ಅಂದರೆ ಸುಮಾರು 12,000ಕ್ಕೂ ಮಿಕ್ಕಿ ಜನರನ್ನು ತಲುಪಿತು. ವಿದ್ಯಾರ್ಥಿಗಳು, ಮಹಿಳೆಯರು, ಪುರುಷರು ತುಂಬು ಹೃದಯದಿಂದ ಕಾರ್ಯಕ್ರಮವನ್ನು ಸ್ವಾಗತಿಸಿ ಬೆಂಬಲಿಸಿದರು. ಅರಿವಿನ ಪಯಣ ತಂಡ ದಿನದಿಂದ ದಿನಕ್ಕೆ ಹೆಚ್ಚೆಚ್ಚು ಉತ್ಸಾಹದಿಂದ ಕಾರ್ಯ ನಿರ್ವಹಿಸಿತು. ಕಾರ್ಯಕ್ರಮದ ಒಂದೊಂದು ಅಂಶವನ್ನು ಒಬ್ಬೊಬ್ಬರು ಮಾಡಲು ಕಲಿತರು, ಪರಿಣಿತರಾದರು. ಯುವ ಸಂಗಾತಿಗಳಾದ ಪೂರ್ಣಿಮಾ, ಅಂಜಲಿ, ಜ್ಯೋತಿ ಜೊತೆಗೆ ರತ್ನಮ್ಮ ಮುಂತಾದವರು ನೀಲಿ ರಿಬ್ಬನ್, ದುರ್ಗಾ ನಾಟಕಗಳನ್ನು ನಿರ್ಭಿಡೆಯಿಂದ ಮಾಡತೊಡಗಿದರು. ಅರಿವಿನ ಪಯಣದಲ್ಲಿ

ಭಾಗವಹಿಸಿದ ಪ್ರತಿಯೊಬ್ಬರೂ ತಮ್ಮ ತಮ್ಮದೇ ನೆಲೆಯಿಂದ ಅನುಭವದ ಸಾರ್ಥಕತೆಯನ್ನು ತಮ್ಮದಾಗಿಸಿಕೊಂಡರು.

ಹಿಂದಿನ ಜಿಲ್ಲೆಗಳಲ್ಲಿ ಮುದ್ರಿಸಿದ 'ಅರಿವಿನ ಪಯಣ' ಪುಸ್ತಕಗಳನ್ನು ಈ ಸಂದರ್ಭದಲ್ಲಿ ಬಳಸಿಕೊಳ್ಳಲಾಯಿತು. ಮಂಡ್ಯದ ಅಗತ್ಯಕ್ಕೆ ತಕ್ಕಂತೆ 'ಅರಿವಿನ ಪಯಣ' ಹೊಸ ಪುಸ್ತಕ ಮುದ್ರಿಸಲಾಯಿತು. ಪುಸ್ತಕ ಮಾರಾಟ ಮಾಡುತ್ತಾ ಅರಿವಿನ ಪ್ರಸಾರದ ಜೊತೆಗೆ ಒಂದಿಷ್ಟು ಹಣಕಾಸು ಸಂಗ್ರಹವಾಯಿತು.

ಈ ಎರಡು ವರುಷಗಳಿಂದ ಸಮಾವೇಶ ನಡೆಯುವ ಜಿಲ್ಲೆಯಲ್ಲಿಯೇ, ಒಕ್ಕೂಟದ ಅಧ್ಯಯನ ಶಿಬಿರ ನಡೆಸಿಕೊಂಡು ಬಂದಿದ್ದೇವೆ. ಸಮಾವೇಶಕ್ಕೆ ನೇರ ಸಂಬಂಧ ಇಲ್ಲದೇ ಹೋದರೂ, ಒಕ್ಕೂಟದ ಸಂಗಾತಿಗಳು ಕಿರಿಯರು, ಹಿರಿಯರು ಸೇರಿ ಅರಿಯುವ ಬೆಳೆಯುವ ಪ್ರಕ್ರಿಯೆ ಇದು. ಸೆಪ್ಟೆಂಬರ್ 8,9,10–2019 ರಂದು ಮೇಲುಕೋಟೆಯಲ್ಲಿ ನಮ್ಮ ಅಧ್ಯಯನ ಶಿಬಿರ ನಡೆಯಿತು.

ಸಮಾವೇಶದ ಹಿನ್ನೆಲೆಯಲ್ಲಿ, ಹಿಂಸೆಯ ವಿರುದ್ಧ ನಮ್ಮ ನಕಾರವನ್ನು ದಾಖಲಿಸಲು ಮತ್ತು ಅಂತರಂಗದಿಂದ ಪ್ರತಿಭಟನೆ ಮಂಡಿಸಲು ನಾವು ಮಾಡುತ್ತಾ ಬಂದ ಅರ್ಥಪೂರ್ಣ ಕಾರ್ಯಕ್ರಮ 'ಕಪ್ಪು ಉಡುಪಿನಲ್ಲಿ ಮಹಿಳೆಯರು, ಮೌನ ಪ್ರತಿಭಟನೆ'. ಅಂತೆಯೇ, ಮಂಡ್ಯ ಜಿಲ್ಲೆಯಲ್ಲಿಯೂ, ಶ್ರೀರಂಗಪಟ್ಟಣ, ಪಾಂಡವಪುರ, ಕೆ.ಆರ್.ಪೇಟೆ, ಮದ್ದೂರು, ಮಳವಳ್ಳಿ ಮತ್ತು ನಾಗಮಂಗಲಗಳಲ್ಲಿ ಈ ಕಾರ್ಯಕ್ರಮ ಸಾರ್ವಜನಿಕರ ಗಮನ ಸೆಳೆಯಿತು.

ಆಯವ್ಯಯ ಹಾಕಿ ಹಣಕಾಸು ಸಂಗ್ರಹದ ಕೆಲಸ, ತಯಾರಿಯ ಇನ್ನೊಂದು ದೊಡ್ಡ ಭಾಗ. ಒಟ್ಟು ಸುಮಾರು 8 ಲಕ್ಷ ಸಂಗ್ರಹಿಸಬೇಕಾಗಿತ್ತು. ಧಾರವಾಡ ಒಕ್ಕೂಟದಿಂದ ಒಂದು ಲಕ್ಷ ರೂಪಾಯಿ ಮಂಡ್ಯ ಸೇರಿತು. ವಿಚಾರ ಸಂಕಿರಣದ ಜವಾಬ್ದಾರಿಯನ್ನು ಕರ್ನಾಟಕ ರಾಜ್ಯ ಅಕ್ಕಮಹಾದೇವಿ ವಿಶ್ವವಿದ್ಯಾಲಯ, ವಿಜಯಪುರ ವಹಿಸಿಕೊಂಡಿತು. ಅರಿವಿನ ಪಯಣ ಪುಸ್ತಕ ಮಾರಾಟ ನಡೆದಿತ್ತು. ಕರವಸ್ತ್ರ ಹೊಲಿಸಿ ಮಾರುವುದೂ ನಡೆಯಿತು. ಒಂದಷ್ಟು ಮಂದಿ ದೇಣಿಗೆ ಕೊಡುವವರನ್ನು ಗುರುತಿಸಲಾಯಿತು. ಮತ್ತೆ ಒಂದಷ್ಟು ದಿನ ಬೀದಿಬೀದಿಯಲ್ಲಿ ಜನರನ್ನು ಮಾತಾಡಿಸುತ್ತಾ ಕರಪತ್ರ ಹಂಚುತ್ತಾ ಹಣ ಸಂಗ್ರಹಿಸುವ ಕೆಲಸವೂ ನಡೆಯಿತು. ಜನ ಕೊಡುವ ಒಂದೊಂದು ಕಾಸು ಕೂಡಾ ನಮ್ಮ ಕೆಲಸಕ್ಕೆ ಹೆಚ್ಚಿನ ಮೌಲ್ಯ ತುಂಬುವ ಹಾಗೆ ಆಗುತ್ತಿತ್ತು.

ಇವೆಲ್ಲಾ ತಯಾರಿಗಳು ಕಾರ್ಯಕ್ರಮಗಳು ನಡೆಯುವ ಹೊತ್ತಿನಲ್ಲಿ, ಹೊರಗಿಂದ ಬಂದು ತೊಡಗಿಸಿಕೊಂಡ ಒಕ್ಕೂಟದ ಮಂದಿಗೆ, ಮಂಡ್ಯದ ಮಂದಿ ಬಹಳ ಪ್ರೀತಿಯಿಂದ ಮನೆ ಮನೆಗೆ ಕರೆದು ಉಣಬಡಿಸಿದ ಪರಿಯನ್ನು ಹೇಳದಿದ್ದರೆ ಹೇಗೆ? ರಾಗಿ ಮುದ್ದೆ, ಕೋಳಿ ಸಾರು, ಬಿರಿಯಾನಿಗಳು, ಸಾರು ಸಾಂಬಾರುಗಳು, ಕಜ್ಜಾಯ, ಮದ್ದೂರು

ವಡೆ ತಿಂದುಂಡ ಬಗೆಯನ್ನು ತಯಾರಿಯಲ್ಲಿ ನಿರತರಾದವರು ಮರೆಯುವುದಕ್ಕೇ ಸಾಧ್ಯವಿಲ್ಲ. ಮಂಡ್ಯದ ಸಂಗಾತಿಗಳು ಸರತಿಯಂತೆ ಹೊಣೆ ಹೊತ್ತುಕೊಂಡು ಎಲ್ಲರನ್ನೂ ತುಂಬು ಮನಸ್ಸು ಮತ್ತು ತುಂಬು ತಟ್ಟೆಯೊಂದಿಗೆ ನೋಡಿಕೊಂಡರು.

ಈ ಕೆಲಸಗಳೇ ಹೀಗೆ, ಬೆಟ್ಟದಷ್ಟು ಇರುತ್ತವೆ. ಹೆಸರು, ಹಣ, ಅಧಿಕಾರದ ಹಂಗಿಲ್ಲದೆ, ಯಾರ್‍ಯಾರೋ ಪ್ರೀತಿಯಿಂದ ಕೈ ಜೋಡಿಸುತ್ತಾರೆ, ಹೆಗಲು ಕೊಡುತ್ತಾರೆ. ಅದಕ್ಕಾಗಿ ಸಂಭ್ರಮದಿಂದ ನಡೆಯುವ ಸಮಾವೇಶ ಎಷ್ಟು ಮುಖ್ಯವೋ, ಅದರ ಹಿಂದೆ ನಡೆವ ಎಲ್ಲಾ ತಯಾರಿಯ ಕೆಲಸಗಳು, ಸಹೋದರಿತ್ವವನ್ನು ಕಟ್ಟುವ ದಾರಿಯಲ್ಲಿ ಅಷ್ಟೇ ಮುಖ್ಯ. ಈ ತಯಾರಿಗಳೇ ಕಟ್ಟುವ ದಾರಿಯ ಅಡಿಪಾಯ.

# ಮಂಡ್ಯ ಜಿಲ್ಲೆಯಲ್ಲಿ ನಡೆದ ಅರಿವಿನ ಪಯಣ ಕಾರ್ಯಕ್ರಮಗಳ ವಿವರ

| ಸಂ. | ಯಾವಾಗ | ಯಾರಿಗಾಗಿ | ಎಲ್ಲಿ | ಎಷ್ಟು ಜನ |
|---|---|---|---|---|
| 1 | 3.8.2019 | ವಿದ್ಯಾರ್ಥಿಗಳು, ಪಿಯು ಕಾಲೇಜು | ಮಾಂಡವ್ಯ, ಮಂಡ್ಯ | 250–300 |
| 2 | 7.9.2019 | ವಿದ್ಯಾರ್ಥಿಗಳು, ಸರಕಾರಿ ಮಹಿಳಾ ಕಾಲೇಜು | ಮದ್ದೂರು | 250–300 |
| 3 | 7.9.2019 | ವಿದ್ಯಾರ್ಥಿಗಳು, ಅರಕೇಶ್ವರ ಪದವಿ ಪೂರ್ವ ಕಾಲೇಜು | ಮದ್ದೂರು, ಗುತ್ತಿಲು | 1,150 |
| 4 | 17.9.2019 | ಮಹಿಳೆಯರು, ಜ್ಯೋತಿ ಮಹಿಳಾ ಮಂಡಳ | ಅರಕೇಶ್ವರ ನಗರ, ಮದ್ದೂರು | 50 |
| 5 | 19.9.2019 | ವಿದ್ಯಾರ್ಥಿಗಳು, ಅಕ್ಕಮಹಾದೇವಿ ವಿಶ್ವವಿದ್ಯಾನಿಲಯ | ಮಂಡ್ಯ | 100 |
| 6 | 20.9.2019 | ವಿದ್ಯಾರ್ಥಿಗಳು, ಎಚ್.ಕೆ.ವಿ ಕಾಲೇಜು | ಮದ್ದೂರು | 500 |
| 7 | 26.09.2019 | ವಿದ್ಯಾರ್ಥಿಗಳು, ಪಿ.ಇ.ಎಸ್ ಕಾನೂನು ಕಾಲೇಜು | ಮಂಡ್ಯ | 200 |
| 8 | 2.10.2019 | ವಿದ್ಯಾರ್ಥಿಗಳು, ಆಲದಹಳ್ಳಿ ಕಾಲೇಜು | ಆಲದಹಳ್ಳಿ | 150 |
| 9 | 24.10.2019 | ವಿದ್ಯಾರ್ಥಿಗಳು,ಪದವಿ ಪೂರ್ವ ಕಾಲೇಜು, ಪೋಲಿಸ್ ಕಾಲೊನಿ | ಮಂಡ್ಯ | 150 |
| 10 | 31.10.2019 | ವಿದ್ಯಾರ್ಥಿಗಳು,ಕಾರ್ಮೆಲ್ ಕಾನ್ವೆಂಟ್ | | 200 |
| 11 | 06.11.2019 | ಸದಸ್ಯರು, ದೊಡ್ಡ ಬಾಣಸವಾಡಿ ಮಹಿಳಾ ಸಂಘಟನೆ | ದೊಡ್ಡ ಬಾಣಸವಾಡಿ | 70 |
| 12 | 09.11.2019 | ಗಾಟು ಸಂಘಟನೆ | ಮದ್ದೂರು | 40 |
| 13 | 12.11.2019 | ವಿದ್ಯಾರ್ಥಿಗಳು,ಸ.ಹಿ.ಪ್ರಾ.ಶಾಲೆ | ಮರಿಗೌಡನ ಹಳ್ಳಿ, ಕೆರಗೋಡು, ಮಂಡ್ಯ | 200 |
| 14 | 14.11.2019 | ಗಾಟು ಮಹಿಳಾ ಸಂಘ | ಲಾಲಿಪಾಳ್ಯ, ಶ್ರೀರಂಗಪಟ್ಟಣ | 50 |
| 15 | 22.11.2019 | ವಿದ್ಯಾರ್ಥಿಗಳು,ಸ.ಹಿ. ಪ್ರೌಢಶಾಲೆ | ಗುದನೂರು, | 250–300 |
| 16 | 22.11.2019 | ಶಾಲೆ | ಹಳೆ ಗುದನೂರು | 100 |
| 17 | 23.11.2019 | ವಿಜಯ ಬ್ಯಾಂಕ್, ಸ್ವ-ಉದ್ಯೋಗ ತರಬೇತಿದಾರರು | ವೆಬ್‌ಸಿಟಿ, ಮಂಡ್ಯ | 300 |
| 18 | 07.12.2019 | ಮಹಿಳಾ ಸಂಘ | ಬುದನೂರು | 250 |
| 19 | 16.12.2019 | ವಿದ್ಯಾರ್ಥಿಗಳು, ಸ.ಪಿಯು. ಕಾಲೇಜು | ಬಲ್ಲೇನ ಹಳ್ಳಿ, ಕೆ.ಆರ್.ಪೇಟೆ | 200 |

| | | | | |
|---|---|---|---|---|
| 20 | 16.12.2019 | ವಿದ್ಯಾರ್ಥಿಗಳು,ಸ.ಹಿ.ಪ್ರಾ. ಶಾಲೆ | ಬೂದನಕೆರೆ, ಕೆ.ಆರ್.ಪೇಟೆ | 150 |
| 21 | 27.12.2019 | ಮಹಿಳಾ ಸಂಘ | ಗುನ್ನಾಯಕನ ಹಳ್ಳಿ | 250 |
| 22 | 02.01.2020 | ವಿದ್ಯಾರ್ಥಿಗಳು,ಪಿಇಎಸ್, ಪ್ರೌಢ ಶಾಲೆ | ಮಂಡ್ಯ | 300 |
| 23 | 05.01.2020 | ಪೋಲಿಸ್ ಠಾಣೆ | ಮಂಡ್ಯ | 30 |
| 24 | 08.01.2020 | ಮಹಿಳಾ ಸಂಘ | ಹನ್ನೂರು, ಮದ್ದೂರು | 50 |
| 25 | 22.01.2020 | ನಗರಕೆರೆ ಮಹಿಳಾ ಸಂಘ | ಮದ್ದೂರು | 30 |
| 26 | 22.01.2020 | ಮಹಿಳಾ ಸಂಘ/ಪ್ರೌಢ ಶಾಲೆ | ಗೆಜ್ಜಲಗೆರೆ | 200 |
| 27 | 24.01.2020 | ಮಹಿಳಾ ಸಂಘ | ಶ್ರಮಿಕ ನಗರ, ಮದ್ದೂರು | 25 |
| 28 | | ಮಹಿಳಾ ಸಂಘ | ಮರಿಗೌಡ ಬಡಾವಣೆ, ಮದ್ದೂರು | 150 |
| 29 | 26.01.2020 | ಮಹಿಳಾ ಸಂಘ | ತಳಗವಾದಿ ಗ್ರಾಮ | 200 |
| 30 | | ಮಹಿಳಾ ಸಂಘ | ಮಳವಳ್ಳಿ ಟೌನ್ | 100 |
| 31 | | ಮಹಿಳಾ ಸಂಘ | ಗುಳಗಟ್ಟ ಗ್ರಾಮ | 250 |
| 32 | 27.01.2020 | ವಿದ್ಯಾರ್ಥಿಗಳು,ಸ.ಪ್ರಥಮ ದರ್ಜೆ ಕಾಲೇಜು | ಹಲಗೂರು | 150 |
| 33 | 27.01.2020 | ವಿದ್ಯಾರ್ಥಿಗಳು,ಸ.ಕಾಲೇಜು | ನಡಕಲಪುರ, ಮಳವಳ್ಳಿ | 300 |
| 34 | 27.01.2020 | ಮಹಿಳಾ ಸರಕಾರಿ ಕಾಲೇಜು ಎನ್.ಎಸ್.ಎಸ್. | ತೊರೆಶೆವ ಹಳ್ಳಿ | |
| 35 | 28.01.2020 | ವಿದ್ಯಾರ್ಥಿಗಳು,ತರಗವಾಡಿ, ಎನ್.ಎಸ್.ಎಸ್. ಕ್ಯಾಂಪ್ | | |
| 36 | 31.01.2020 | ಮಹಿಳಾ ಸಂಘ | ಕೋಳಗೆರೆ, ಮದ್ದೂರು | 250 |
| 37 | 31.01.2020 | ಸರಕಾರಿ ಪ್ರೌಢ ಶಾಲೆ | ಕೋಳಗೆರೆ, ಮದ್ದೂರು | 100 |
| 38 | 31.01.2020 | ಸರಕಾರಿ ಮಹಿಳಾ ಕಾಲೇಜು | ಕೆ.ಆರ್.ಪೇಟೆ | 300 |
| 39 | 31.01.2020 | ಸರಕಾರಿ ಕಾಲೇಜು | ಶೀಳನೆರೆ, ಕೆ.ಆರ್.ಪೇಟೆ | |
| 40 | 31.01.2020 | ರಾಮಯ್ಯ ಕಾಲೊನಿ | ಕೆ.ಆರ್.ಪೇಟೆ | 60 |
| 41 | 01.02.2020 | ಮಹಿಳಾ ಸಂಘ | ಬಸವನಪುರ ಕಾಲೊನಿ, ಮದ್ದೂರು | 40 |
| 42 | 04.02.2020 | ಮಹಿಳಾ ಸಂಘ | ಹೆಮ್ಮಿಗೆ ಗ್ರಾಮ, ಮಂಡ್ಯ | 100 |

| | | | | |
|---|---|---|---|---|
| 43 | 04.02.2020 | ಮಹಿಳಾ ಸಂಘ | ಗೋಪಾಲಪುರ, ಮಂಡ್ಯ | 50 |
| 44 | 05.02.2020 | ವಿದ್ಯಾರ್ಥಿಗಳು | ನರ್ಸಿಂಗ್ ಹಾಸ್ಟೆಲ್, ಮಂಡ್ಯ | 50 |
| 45 | 06.02.2020 | ವಿದ್ಯಾರ್ಥಿಗಳು,ಸ.ಕಾಲೇಜು | ಕೊಪ್ಪ, ಮದ್ದೂರು | 300 |
| 46 | 06.02.2020 | ವಿದ್ಯಾರ್ಥಿಗಳು,ಸ.ಪ್ರ.ದರ್ಜೆ ಕಾಲೇಜು | ಪಾಂಡವಪುರ | 150 |
| 47 | 06.02.2020 | ಮಹಿಳಾ ಸಂಘ | ತಾಮರ ಹಳ್ಳಿ, ಪಾಂಡವಪುರ | 50 |
| 48 | 07.02.2020 | ಮಹಿಳಾ ಸಂಘ | ಕೀಲಾರ, ಮಂಡ್ಯ | 200 |
| 49 | 07.02.2020 | ಮಹಿಳಾ ಸಂಘ | ಈಚಗೆರೆ, ಮಂಡ್ಯ | 50, , |
| 50 | 07.02.2020 | ಮಹಿಳಾ ಸಂಘ | ಸಿಐಟಿಯು ಕಛೇರಿ, ಮಂಡ್ಯ | 40 |
| 51 | 07.02.2020 | ಮಹಿಳಾ ಸಂಘ | ಹುಲಿವಾಲ, ಮಂಡ್ಯ | 40 |
| 52 | 08.02.2020 | ಮಹಿಳಾ ಸಂಘ | ಚಿಕ್ಕ ಕೊಪ್ಪಲು, ಪಾಂಡವಪುರ | 30 |
| 53 | 08.02.2020 | ಮಹಿಳಾ ಸಂಘ | ಸ್ವಾಭಿಮಾನಿ, | 40 |
| 54 | 10.02.2020 | ವಿದ್ಯಾರ್ಥಿಗಳು,ಡಿ.ದೇವರಾಜ ಅರಸು ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ | ಮಂಡ್ಯ | 250 |
| 55 | 10.02.2020 | ಸಂಘಟನೆ | ಸಿಲ್ವರ್ ಜುಬಿಲಿ ಪಾರ್ಕ್ | 300 |
| 56 | 11.02.2020 | ವಿದ್ಯಾರ್ಥಿಗಳು,ಪ್ರೌಢ ಶಾಲೆ | ಸಂತೆಕಸಲಗೆರೆ, ಮಂಡ್ಯ, | 100 |
| 57 | 11.02.2020 | ಮಹಿಳಾ ಸಂಘ | ಸಂತೆಕಸಲಗೆರೆ ಮಂಡ್ಯ, | 100 |
| 58 | 12.02.2020 | ಸಂಘಟನೆ | ಬಾಲಭವನ, ಮಂಡ್ಯ | 50 |
| 59 | 12.02.2020 | ವಿದ್ಯಾರ್ಥಿಗಳು,ಎಸ್.ಟಿ.ಜಿ ಶಾಲೆ | ಪಾಂಡವಪುರ | 400 |
| 60 | 12.02.2020 | ಎನ್.ಎಸ್.ಎಸ್. ಶಿಬಿರ | ತಸಗವಾಡಿ, ಮಂಡ್ಯ | 150 |
| 61 | 13.02.2020 | ಸಿ.ಐ.ಟಿಯು ಸಂಘಟನೆಯವರು | ಬಾಲ ಭವನ | 100 |
| 62 | 14.02.2020 | ಗ್ರಾಮಸ್ಥರು, ರೈತಸಂಘ | ದಬ್ಬೆಘಟ, ಕೆ.ಆರ್.ಪೇಟೆ | 70 |
| 63 | 14.02.2020 | ಗ್ರಾಮಸ್ಥರು, ರೈತ ಸಂಘ | ಮಾದಪುರ, ಕೆ.ಆರ್.ಪೇಟೆ | 30 |

| | | | | |
|---|---|---|---|---|
| 64 | 15.02.2020 | ಸಂಘಟನೆಯವರು | ಪ್ರವಾಸಿ ಮಂದಿರ, ಮದ್ದೂರು | 30 |
| 65 | 18.02.2020 | ಮಹಿಳಾ ಸಂಘಟನೆ – ಎಸ್.ಐ.ಆರ್.ಡಿ | ಹಳೆಬದನೂರು, ಮಂಡ್ಯ | 150 |
| 66 | 18.02.2020 | ಮಹಿಳಾ ಸಂಘಟನೆ | ನೆಲಮಾಕನ ಹಳ್ಳಿ, ಮಳವಳ್ಳಿ | 250 |
| 67 | 19.02.2020 | ವಿದ್ಯಾರ್ಥಿನಿಯರ ವಸತಿ ನಿಲಯ | ಪೊಲಿಸ್ ಕಾಲೊನಿ, | 200 |
| 68 | 26.02.2020 | ಅಂಗನವಾಡಿ ಕಾರ್ಯಕರ್ತರು | ವಳನಗೆರೆ, ಗುರುದೇವರಳ್ಳಿ, ಕೆ.ಹೊನ್ನಲಗೆರೆ, ಮದ್ದೂರು, | 400 |
| 69 | 26.02.2020 | ಅಂಗನವಾಡಿ ಕಾರ್ಯಕರ್ತರು | ಕೆ.ಎಮ್ ದೊಡ್ಡ, ಮದ್ದೂರು | 60 |
| 70 | 26.02.2020 | ಅಂಗನವಾಡಿ ಕಾರ್ಯಕರ್ತರು | ಕೊಪ್ಪ, ಚಿಕ್ಕಳಲೆ, ಕಾಕಳೆ, ಮದ್ದೂರು | 150 |
| 71 | 27.02.2020 | ವಿದ್ಯಾರ್ಥಿಗಳು,ಸರಕಾರಿ ಮಹಿಳಾ ಕಾಲೇಜು | ಮಂಡ್ಯ | 500 |
| 72 | 27.02.2020 | ಗ್ರಾಮಸ್ಥರು | ನೆಲ್ಲೂರು, ಮಳವಳ್ಳಿ, | 150 |
| 73 | 02.03.2020 | ಗ್ರಾಮಸ್ಥರು | ಗೊಲ್ಲರ ದೊಡ್ಡಿ, ಮದ್ದೂರು | 50 |
| 74 | 02.03.2020 | ಗ್ರಾಮಸ್ಥರು, | ಜನಪದ ಉತ್ಸವ, ಕೀಲಾರ, ಮದ್ದೂರು | 300 |
| 75 | 04.03.2020 | ಗ್ರಾಮಸ್ಥರು | ಆಲದಹಳ್ಳಿ, ಮದ್ದೂರು | 70 |

# ‘ಅರಿವಿನ ಪಯಣ’ದ ಅನುಭವಗಳು

**ಪೂರ್ಣಿಮಾ ಜಿ, ಮಹಿಳಾ ಮುನ್ನಡೆ**

ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ವತಿಯಿಂದ ರಾಜ್ಯ ಮಟ್ಟದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಮಂಡ್ಯದಲ್ಲಿ ಮಾಡಬೇಕೆಂದು ತೀರ್ಮಾನಿಸಿ ಪ್ರಾರಂಭಿಸಿದ ಮೊದಲನೆಯ ಹಂತದಿಂದಲೂ ಮಹಿಳಾ ಮುನ್ನಡೆ ಇದರ ಜೊತೆಗೂಡಿಕೊಂಡು ಬಂದಿದೆ. ಮಂಡ್ಯದಲ್ಲಿ ರಾಜ್ಯಮಟ್ಟದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಮಾಡಲು ತೀರ್ಮಾನಿಸಿದಾಗ ಬಹಳ ಸಂತೋಷ ಜೊತೆಗೆ ಜವಾಬ್ದಾರಿಯನ್ನು ನಿಭಾಯಿಸುವ ಆತಂಕ ಕೂಡಾ ಸುರುವಾಗಿತ್ತು. ಇಲ್ಲಿನ ಎಲ್ಲಾ ಸಂಘಟನೆಗಳ ಜೊತೆಗೂಡಿ ಒಂದು ವೇದಿಕೆಯಲ್ಲಿ ಕೆಲಸಮಾಡುವ ಒಂದು ಒಳ್ಳೆಯ ಅವಕಾಶವನ್ನು ನಾವು ಮನಃಪೂರ್ವಕವಾಗಿ ಆನಂದಿಸಿದೆವು. ಅರಿವಿನ ಪಯಣ ಕಾರ್ಯಕ್ರಮಕ್ಕೂ ಮುನ್ನ ನಮ್ಮ ತಂಡದ ಕೆಲವರಿಗೆ ವಾಣಿ ಪೆರಿಯೋಡಿ ಮತ್ತು ಪವಿತ್ರರವರು ಬಂದು ನೀಲಿ ರಿಬ್ಬನ್, ಹಾಗೂ ದುರ್ಗಾದಂತಹ ಏಕಪಾತ್ರಭಿನಯ ನಾಟಕವನ್ನು ಸಂಕೋಚ ಬಿಟ್ಟು ಮಾಡುವಂತೆ ಹುರಿದುಂಬಿಸಿ ಕಲಿಸಿದ್ದರು. ಅವರಿಗೆ ಧನ್ಯವಾದಗಳು.

ಮಂಡ್ಯದಲ್ಲಿ ನಡೆಯುವ ಮಹಿಳಾ ದಿನಾಚರಣೆಗೆ ಮೇಲುಕೋಟೆಯಲ್ಲಿ ನಡೆದ ಎರಡು ದಿನದ ಚಿಂತನ ಶಿಬಿರದಲ್ಲಿ ಹಲವು ವಿಚಾರಗಳನ್ನು ತಿಳಿದುಕೊಂಡೆವು. ಜೊತೆ ಸೇರಿ ಕೌದಿ ಹೊಲಿಗೆಗೆ ಕೆಲಸ ಮಾಡಿದ್ದು ಬಹಳ ಖುಷಿಕೊಟ್ಟಿತ್ತು. ಒಕ್ಕೂಟದ ಕೆಲಸಗಳು ಪ್ರಾರಂಭವಾದಾಗ ಮಂಡ್ಯದ ಎಲ್ಲಾ ವಲಯದ ಶಾಲಾಕಾಲೇಜುಗಳಲ್ಲಿ, ಹಳ್ಳಿಗಳಲ್ಲಿ ಅರಿವಿನ ಪಯಣ ಕೂಡಾ ಶುರುವಾಗಿತ್ತು. ಈ ಅರಿವಿನ ಪಯಣವು ಕಥೆಗಳು, ಕಿರು ನಾಟಕಗಳು ಮತ್ತು ಹಾಡುಗಳಿಂದ ಕೂಡಿದ, ಹೆಚ್ಚು ಭಾಷಣವಿಲ್ಲದ ಹೊಸಬಗೆಯ ಕಾರ್ಯಕ್ರಮವಾಗಿತ್ತು.

ಮೊದಲಿಗೆ ಕಪ್ಪು ಬಲೂನು – ಈ ಕಥೆಯು ಇವತ್ತಿನ ಸಮಾಜದಲ್ಲಿರುವ ಬಣ್ಣಗಳ ಕುರಿತಾದ ವರ್ಣ ತಾರತಮ್ಯದ ಬಗ್ಗೆ ಮನಸ್ಸಿಗೆ ಮುಟ್ಟುವ ಹಾಗೆ ತಿಳಿಸುತಿತ್ತು, ವರ್ಣತಾರತಮ್ಯದಿಂದ ನೊಂದವರ ಮನಸ್ಸಿನಲ್ಲಿ ಆತ್ಮವಿಶ್ವಾಸ ಮೂಡಿಸುವ ರೀತಿಯಲ್ಲಿ ಕಥೆ ಮೂಡಿಬರುತಿತ್ತು. ಇನ್ನು ಬೆವರಿನ ಮಹತ್ವ ಬಗ್ಗೆ ತಿಳಿಸಿಕೊಡುವಾಗ ಮನೆಯಲ್ಲಿ

ಕೂಲಿಕೆಲಸ ಮಾಡಿ ತಮ್ಮ ಮಕ್ಕಳ ಭವಿಷ್ಯಕ್ಕಾಗಿ ಶ್ರಮಿಸುವ ತಂದೆ–ತಾಯಿಗಳ ಶ್ರಮದ ಬಗ್ಗೆ ಅವರ ನಿಜವಾದ ಹಿರಿಮೆಯ ಬಗ್ಗೆ ಮಕ್ಕಳಿಗೆ ಅರಿವಿನ ಪಾಠ ಸಿಗುತ್ತಿತ್ತು ಎಂದು ಹೇಳಬಹುದು. ಪೌರಕಾರ್ಮಿಕರ ಬಗ್ಗೆ ಹೇಳುವಾಗ ಇಡೀ ಸಮಾಜವೇ ಪೌರಕಾರ್ಮಿಕರ ಬಗ್ಗೆ ಕೀಳರಿಮೆಯ ಧೋರಣೆಯನ್ನು ಹೊಂದಿದೆ. ಇವತ್ತಿಗೂ ನಮ್ಮ ದೇಶ ತಂತ್ರಜ್ಞಾನಗಳಲ್ಲಿ ಎಷ್ಟೇ ಮುಂದುವರಿದರೂ ಮಲಬಾಚುವಂತಹ ಹೀನ ಪದ್ಧತಿಗಳು ಜೀವಂತವಾಗಿವೆ. ಸಮಾಜದ ಕೊಳಕನ್ನು ತೆಗೆಯುವ ಪೌರ ಕಾರ್ಮಿಕರನ್ನು ತಮ್ಮಂತೆ ಅವರು ಮನುಷ್ಯರು ಎಂದು ಸಮನಾಗಿ ನೋಡುವ ಪರಿಯೆ ಮಾಯವಾಗಿರುವ ಸಂದರ್ಭದಲ್ಲಿ ಸಮಾಜದ ಸ್ವಾಸ್ಥ್ಯ ಕಾಪಾಡುವುದರಲ್ಲಿ ಮಹತ್ವದ ಪಾಲು ಪೌರಕಾರ್ಮಿಕರದ್ದಾಗಿದೆ ಎಂದು ತಿಳಿಸಿಕೊಟ್ಟು ಅವರ ಕೆಲಸಕ್ಕೂ ಮತ್ತು ಅವರ ವ್ಯಕ್ತಿತ್ವಕ್ಕೂ ಗೌರವ ಸಲ್ಲಿಸಬೇಕೆಂದು ಹೇಳುವ ಪರಿ ಯಾವ ಪಠ್ಯ ಪುಸ್ತದಲ್ಲಿಯೂ ಇಲ್ಲ ಎನಿಸಿತ್ತು.

ಇನ್ನೂ ನೀಲಿ ರಿಬ್ಬನ್ ನಾಟಕದಲ್ಲಿ ಬರುವ ಸನ್ನಿವೇಶಗಳು ಹೆಣ್ಣು ಎಂಬ ಕಾರಣಕ್ಕೆ ಮನೆಯಿಂದಲೇ ಭ್ರೂಣ ಹತ್ಯೆಯ ಹಂತದಲ್ಲಿ ಪ್ರಾರಂಭವಾಗಿ ತಾರತಮ್ಯದಿಂದ ಬೆಳೆಯುತ್ತಾ ಅನುಭವಿಸುವ ಲೈಂಗಿಕ ಕಿರುಕುಳಗಳು ಅದರಿಂದ ಅವಳ ಸುತ್ತ ರಚಿತವಾಗುವ ನಿರ್ಬಂಧಗಳು ಸ್ವಂತ ಅಪರಾಧವಿಲ್ಲದಿದ್ದರೂ ಹೊತ್ತುಕೊಳ್ಳುವ ಅಪವಾದ ಮತ್ತು ಅನುಭವಿಸುವ ಶಿಕ್ಷೆಗಳ ಎಳೆ ಎಳೆಯಾದ ರೂಪವನ್ನು ಬಿಚ್ಚಿಡುತ್ತದೆ. "ಇಂತಹ ಘಟನೆಗಳು ನಮ್ಮ ಜೀವನದಲ್ಲಿ ನಡೆದೆ ಇಲ್ಲ ಎಂದು ಎದೆ ತಟ್ಟಿ ಹೇಳಿಕೊಳ್ಳುವವರು ಯಾರಾದರೂ ಇದ್ದಾರೆಯೇ?" ಎಂದು ನಾಟಕದಲ್ಲಿ ಮೂಡಿಬರುವ ಪ್ರಶ್ನೆಗೆ ಸಭೆಯಲ್ಲಿ ಇರುತ್ತಿದ್ದ ಹೆಣ್ಣು ಮಕ್ಕಳ ಮುಖದಲ್ಲಿ ಒಂದು ಅಸಹಾಯಕತೆ, ನೋವು ಮತ್ತು ಅವಮಾನದ ಛಾಯೆ ಹಾಗೆ ಬಂದು ಹೋಗುತ್ತಿತ್ತು. ಇಂತಹ ಒಂದು ಕಾರ್ಯಕ್ರಮದಲ್ಲಿ ಮಹಿಳಾ ಪೋಲೀಸ್ ಪೇದೆಯೊಬ್ಬರು ಇದರ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿ ಅತ್ತಿದ್ದುಂಟು. ಯಾವೊಬ್ಬ ಹೆಣ್ಣುಮಗಳು ದೌರ್ಜನ್ಯದಿಂದ ಹೊರತಾಗಿಲ್ಲ ಎಂಬುದನ್ನು ತಿಳಿಸಿಕೊಡುವ ನೀಲಿರಿಬ್ಬನ್ ನಾಟಕ ಹೆಣ್ಣುಮಕ್ಕಳು ಆಡದ ಮಾತುಗಳಿಗೆ ಧ್ವನಿಯಾಗಿತ್ತು.

ಇನ್ನೂ ದುರ್ಗಾ ನಾಟಕದ ವಿಚಾರಕ್ಕೆ ಬಂದರೆ ಆ ನಾಟಕದ ಸನ್ನಿವೇಶಗಳು ಮತ್ತು ನನ್ನ ಜೀವನ ಎರಡೂ ಬೇರೆ ಎಂದು ಅನಿಸಲಿಲ್ಲ. ನಾಟಕದಲ್ಲಿ ಬರುವ ಅಷ್ಟು ಸನ್ನಿವೇಶಗಳು ನನ್ನ ಜೀವನದ ವಾಸ್ತವತೆಯಾಗಿತ್ತು. ಈ ನಾಟಕದಲ್ಲಿ ನಾನು ಏಕಪಾತ್ರ ಅಭಿನಯ ಮಾಡುವಾಗ ನಾನು ನಾಟಕ ಮಾಡುತ್ತಿದ್ದೇನೆ ಎಂದೆನಿಸದೆ ನನ್ನ ನಿಜ ಜೀವನವನ್ನು ತೆರೆದಿಡುತ್ತಿದ್ದೇನೆ ಅನಿಸುತ್ತಿತ್ತು. ಗಂಡ ಎಂಬ ಮನುಷ್ಯನ ಬಾಯಲ್ಲಿ ಬರುವ ಕೆಟ್ಟ ಪದಗಳು, ತಿಂದ ಏಟುಗಳು ಸನ್ನಿವೇಶಗಳಲ್ಲಿ ಹಳೆ ಜೀವನದ ನೆನಪಾಗಿ ಕಣ್ಣೀರು ಬಂದಿದ್ದುಂಟು. ಆದರೆ ಕಿರುನಾಟಕದ ಕೊನೆಯಲ್ಲಿ ಬರುವ, ದುರ್ಗಾ ಗಂಡನಲ್ಲಿ ಕ್ಷಮೆ ಕೇಳಿ ಜೊತೆಗೆ ಬಾಳಬೇಕೆ, ದುಡಿದು ಬದುಕಬೇಕೆ ಎಂಬ ಪ್ರಶ್ನೆಗೆ ಅಲ್ಲಿದ್ದ

ಹೆಣ್ಣುಮಕ್ಕಳು ಒಕ್ಕೊರಲಿನಲ್ಲಿ ದುಡಿದು ಬದುಕಬೇಕೆಂಬ ಉತ್ತರ ಹೇಳಿದಾಗ ಹೃದಯ ಹಗುರವೆನಿಸುತ್ತಿತ್ತು. ಇದು ಒಬ್ಬ ದುರ್ಗೆಯ ಕಥೆಯಾಗಿರದೆ ಸಾವಿರಾರು ದುರ್ಗೆಯರ ಕಥೆಯಾಗಿತ್ತು. ಈ ಸಮಾಜದಲ್ಲಿ ಒಬ್ಬಂಟಿಯಾಗಿ ನನ್ನ ಮಕ್ಕಳ ಹೊಣೆಹೊತ್ತು ಗಟ್ಟಿಯಾಗಿ ಬದುಕುವ ಪಾಠ ಕಲಿಸಿಕೊಟ್ಟು ನನ್ನ ನೋವುಗಳಿಗೆ ಕಣ್ಣೀರಿಗೆ ಹೆಗಲಾದ ಮಹಿಳಾ ಮುನ್ನಡೆಯ ಮಲ್ಲಿಗೆ, ಕಮಲ ಮತ್ತು ಕರ್ನಾಟಕ ಜನಶಕ್ತಿಯ ಡಾ.ವಾಸು ಇನ್ನೂ ಹಲವರಿಗೆ ನಾನು ಆಭಾರಿ.

ಪ್ರತಿ ತಾಲೂಕಿನಲ್ಲಿ ನಡೆಯುತ್ತಿದ್ದ ಕಪ್ಪು ಉಡುಪಿನಲ್ಲಿ ಮಹಿಳೆಯರ ಕಾರ್ಯಕ್ರಮದಲ್ಲಿ ಮಹಿಳೆಯರು ಕಪ್ಪು ಉಡುಪಿನಲ್ಲಿ ಮೇಣದ ಬತ್ತಿ ಹಿಡಿದು ಮೌನವಾಗಿ ಸಾಲಾಗಿ ನಿಲ್ಲುವುದು, ನಿಜವಾಗಿ ಅದೆಷ್ಟೋ ಹೆಣ್ಣು ಮಕ್ಕಳು ನಾಲ್ಕು ಗೋಡೆಯ ನಡುವೆ ಹಿಂಸೆಯನ್ನು ಸಹಿಸುತ್ತಾ ಮಂದ ಬೆಳಕಿನಲ್ಲಿ ಹರಿದು ಮಾಯವಾಗುತ್ತಿದ್ದ ಅವರ ಕಣ್ಣೀರಿಗೆ ಸಾಕ್ಷಿಯಾಂತಿತ್ತು, ಜೊತೆಗೆ ಹೆಣ್ಣು ಮಕ್ಕಳ ಮೌನಕ್ಕೂ ಪ್ರತಿರೋಧದ ಶಕ್ತಿ ಇದೆ ಎಂದು ಜಗತ್ತಿಗೆ ಸಾರಿ ಹೇಳಿದಂತಿರುತ್ತಿತ್ತು.

ಒಟ್ಟಾರೆ ಹೇಳುವುದಾದರೆ ಅರಿವಿನ ಪಯಣವು ಜನರಿಗೂ ಬೇಕಾದ ಅರಿವನ್ನು ಮೂಡಿಸುವುದರ ಜೊತೆಗೆ ನಮ್ಮೊಳಗಿನ ಅಂತರಾಳದ ಅರಿವನ್ನು ಬಡಿದೆಬ್ಬಿಸುವ, ಜೀವನದ ಪಾಠವನ್ನು ಕಲಿಸುವ ಸಮಸಮಾಜದ ಕನಸ ಹೊತ್ತ ಹೊಸ ಹಾದಿಯ ಹುಡುಕಾಟ ಎಂದು ಹೇಳಬಹುದು. ಒಕ್ಕೂಟದ ಒಡನಾಡಿಗಳಾದ ಡಾ. ಎಚ್. ಎಸ್. ಅನುಪಮ, ದು. ಸರಸ್ವತಿ, ಸಬಿಹಾ ಭೂಮಿಗೌಡ, ವಾಣಿ ಪೆರಿಯೋಡಿ, ಮಲ್ಲಿಗೆ ಇನ್ನೂ ಮುಂತಾದ ಹಲವು ಹಿರಿಯ ಅಕ್ಕಂದಿರು ಸೇರಿ ಒಕ್ಕೂಟದ ಮಹಿಳಾ ದಿನಾಚರಣೆಯನ್ನು ಒಂದು ಸಂಭ್ರಮದ ಆಚರಣೆಗಷ್ಟೇ ಸೀಮಿತವಾಗಿರಿಸದೆ ಎಲ್ಲರನ್ನೂ ಒಗ್ಗೂಡಿಸುವ, ಎಲ್ಲಾ ವರ್ಗದವರನ್ನು ಒಂದು ವೇದಿಕೆಗೆ ತಂದು ಹೆಣ್ಮಸ್ಸಿನ ತುಮುಲಗಳನ್ನು ಜಗತ್ತಿಗೆ ತೆರೆದಿಡುವ ಪ್ರಯತ್ನ ಮಾಡುತ್ತಾ ಈ ಪ್ರಯತ್ನಕ್ಕೆ ನಮ್ಮನ್ನು ಭಾಗಿಗಳನ್ನಾಗಿ ಮಾಡಿಕೊಂಡಿರುವುದು ನಮಗೆ ಸಂತೋಷ. ಈ ಪಯಣ ನಿಲ್ಲದಿರಲಿ, ನಿರಂತರವಾಗಿ ಸಾಗಲಿ ಎಂದು ಹೇಳಬಯಸುತ್ತೇನೆ.

**ಕಲಾವಿದೆ ಮಂಜುಳಾ**

ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧೀ ಒಕ್ಕೂಟವು ಪ್ರತೀ ಜಿಲ್ಲೆಯಲ್ಲಿಯೂ ಮಹಿಳಾ ದಿನವನ್ನು ಆಚರಿಸಿಕೊಂಡು ಬರುತ್ತಿದೆ. 2020 ರಲ್ಲಿ ಮಂಡ್ಯದಲ್ಲಿ ಸಮಾವೇಶ ನಿಗದಿಯಾದಾಗ ಈ ಜಿಲ್ಲೆಯಲ್ಲಿ ಇರುವ ಸಮಸ್ಯೆಗಳನ್ನು ಆಧರಿಸಿ ಈ ಕಾರ್ಯಕ್ರಮ ರೂಪಿಸಿಬೇಕೆಂದು ತೀರ್ಮಾನವಾಯಿತು. ಇದರ ಭಾಗವಾಗಿ ಮಂಡ್ಯದ 7 ತಾಲ್ಲೂಕುಗಳಲ್ಲಿಯೂ ಅರಿವಿನ ಪಯಣ ಕಾರ್ಯಕ್ರಮ ನಡೆಸಲು ಯೋಜಿಸಲಾಯಿತು.

ನಾನು ಕೆ. ಆರ್ ಪೇಟೆ, ಮದ್ದೂರು ಮಂಡ್ಯ, ಶ್ರೀರಂಗಪಟ್ಟಣಗಳಲ್ಲಿ ನಡೆದ ಅರಿವಿನ ಪಯಣದಲ್ಲಿ ಭಾಗವಹಿಸಿದೆ.

ನಾನು ಮೂಲತ: ಹಾಡುಗಾರ್ತಿ, ಕಲಾವಿದೆಯಾದರೂ ಒಕ್ಕೂಟದ ಸಂಘಟನೆಯ ಸದಸ್ಯರೊಂದಿಗೆ ಬೆರೆತು ಅರಿವಿನ ಪಯಣದೊಂದಿಗೆ ಸಾಗಿ ಹಳ್ಳಿಹಳ್ಳಿಗೂ ಹೋಗಿ ಹಾಡಿನ ಮೂಲಕ ನಾಟಕದ ಮೂಲಕ ಹಲವಾರು ವಿಷಯಗಳನ್ನು ಹೆಣ್ಣುಮಕ್ಕಳಿಗೆ ತಿಳಿಸುವ ಜೊತೆಗೆ ನಾನೂ ತಿಳಿದುಕೊಂಡೆ. ಮಾನವೀಯ ಮೌಲ್ಯದೊಂದಿಗೆ ಅವರೆಲ್ಲ ತೋರಿಸಿದ ಸ್ನೇಹ ಬಾಂಧವ್ಯ ನನ್ನ ಮನಸ್ಸನ್ನು ಬಹಳವೇ ಬದಲಾಯಿಸಿತು. ಮಹಿಳೆಯಾಗಿ ನನಗಾಗಿ ಮಾತ್ರ ನಾನು ಬದುಕಬಾರದೆಂದು ತಿಳಿದುಕೊಂಡೆ. ಒಕ್ಕೂಟದ ಸದಸ್ಯರು ನೀಲಿ ರಿಬ್ಬನ್ ಮತ್ತು ದುರ್ಗಾ ನಾಟಕ ಮಾಡಿದಾಗಲಂತೂ ಯುವತಿಯರು, ಮದುವೆಯಾದ ಹೆಣ್ಣುಮಕ್ಕಳು ಎಲ್ಲರೂ ತಮ್ಮನ್ನು ಅಲ್ಲಿ ಕಾಣುತ್ತಿದ್ದರು. ಒಬ್ಬ ಕಲಾವಿದೆಯಾಗಿ ನಾಟಕದ ಮೂಲಕ ಜನರನ್ನು ತಟ್ಟುವ ನನಗೆ ಇದು ಬಹಳ ಚೆನ್ನಾಗಿ ಅರಿವಿಗೆ ಬರುತ್ತಿತ್ತು. ಈ ಸಮಾವೇಶದಿಂದ ನಾನು ಒಂಟಿ ಅಲ್ಲ, ನನ್ನೊಂದಿಗೆ ಎಲ್ಲರೂ ಇದ್ದಾರೆ ಎಂಬ ಭಾವನೆ ನನ್ನಲ್ಲಿ ಮೂಡಿದೆ.

**ದೇವಿ, ಅಧ್ಯಕ್ಷರು, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ**

ಕೃಷಿ ಪ್ರಧಾನವಾದ ಮಂಡ್ಯ ಜಿಲ್ಲೆಯಲ್ಲಿ ರೈತ ಮತ್ತು ಕೃಷಿ ಕೂಲಿಕಾರ ಮಹಿಳೆಯರದು ಪ್ರತಿ ನಿತ್ಯ ಹೊಲ-ಗದ್ದೆಗಳಲ್ಲಿ ಹುಲ್ಲು-ಸೊಪ್ಪಲು-ಸದೆ ದನಕರು ಜೊತೆಗೆ ಮನೆಯ ಒಳಗೆ ಹೊರಗೆ ಬಿಡುವಿಲ್ಲದ ದುಡಿಮೆ. ಸ್ತ್ರೀಶಕ್ತಿ ಸ್ವ-ಸಹಾಯ ಗುಂಪುಗಳಿಗೆ ಸೇರಿರುವುದರಿಂದ ಅಷ್ಟೋ-ಇಷ್ಟೋ ಅರಿವಿನ ಜ್ಞಾನ ಮೂಡಿಸಿರುವುದರಿಂದ ತಮ್ಮ ಹಕ್ಕುಗಳಿಗಾಗಿ ಹೋರಾಟ ನಡೆಸಬೇಕೆಂಬ ಮನೋಭಾವ ಇರುವುದರ ಜೊತೆಗೆ ತಿಳುವಳಿಕೆ ಪಡೆದುಕೊಳ್ಳುವ ಆಸಕ್ತಿ ಮೂಡಿದೆ. ನಾವು ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಹಾಗೂ ಅರಿವಿನ ಪಯಣ ಕಾರ್ಯಕ್ರಮಗಳನ್ನು ನಿಗದಿ ಮಾಡಿಕೊಂಡು ತಂಡಗಳಾಗಿ ಹಳ್ಳಿಗಳಿಗೆ ಹೊರಡುತ್ತಿದ್ದೆವು. ಬಹುತೇಕ ಸಂಜೆ 6 ಗಂಟೆಯ ನಂತರ ನಾವು ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ಹೋಗಿ ಕುಳಿತುಕೊಂಡ ನಂತರ, ಅಲ್ಲಿನ ಹೆಂಗಸರು ಕಾಡಿನಿಂದ ಹೊಲಗದ್ದೆಗಳಿಂದ ದನ, ಎಮ್ಮೆ, ಕುರಿ, ಆಡುಗಳ ಜೊತೆಗೆ ಹುಲ್ಲು, ಸೊಪ್ಪು, ಸೌದೆ, ಮಡಿಲಲ್ಲಿ ಒಂದಿಷ್ಟು ತರಕಾರಿ ತೆಗೆದುಕೊಂಡು ಆತುರ ಆತುರವಾಗಿ ಮನೆಗಳಿಗೆ ಹೋಗುವುದು ಕಾಣುತ್ತಿತ್ತು. ಮನೆಯಲ್ಲಿ ಎಲ್ಲವನ್ನೂ ಅವುಗಳ ಜಾಗಕ್ಕೆ ಸೇರಿಸಿ, ದನಗಳ ಹಾಲು ಕರೆದುಕೊಂಡು ಡೈರಿಗೆ ಹಾಲು ಹಾಕಿ ಖಾಲಿ ತಪ್ಪಲೆ ಹಿಡಿದುಕೊಂಡು ನಾವು ಕುಳಿತಿದ್ದಲ್ಲಿಗೆ ಬರುತ್ತಿದ್ದರು. ಇನ್ನು ಕೆಲವರು, 'ಒಲೆಯ ಮೇಲೆ ಹಿಟ್ಟೆಸರು ಇಟ್ಟಿದೀನಿ, ಇರಿ ಬಂದೆ' ಎನ್ನುತ್ತಾ ಹಲವು ಕೆಲಸಗಳನ್ನು ಮಾಡಿ

ಮುಗಿಸಿ ಬಂದು ಸೇರುತ್ತಿದ್ದರು.

ಸುಮಾರು 7 ರಿಂದ 8 ಗಂಟೆಗೆ ಸೇರುತ್ತಿದ್ದರು. ಹೀಗೆ ಮಹಿಳೆಯರು ಊರ ಮುಂದಿನ ಅರಳಿಕಟ್ಟೆ, ದೇವಸ್ಥಾನದ ಅಂಗಳ, ಊರ ಮುಂದಿನ ರಂಗಮಂದಿರಗಳಲ್ಲಿ ಸೇರುವಾಗ, 'ಈ ಹೆಂಗಸರು ಏನು ಮಾತನಾಡುತ್ತಾರೆ?' ಎಂದು ಕುತೂಹಲದಿಂದ ಗಂಡಸರು ಬಂದು ಕೂರುತ್ತಿದ್ದರು. ನಮ್ಮ ತಂಡದವರು ನಾಟಕ ಮಾಡಿ ಮುಗಿಸುವ ಹೊತ್ತಿಗೆ ಗಂಡಸರ ಪ್ರಶ್ನೆಗಳ ಸುರಿಮಳೆ. 'ಪುರುಷರ ಮೇಲೆ ದೌರ್ಜನ್ಯವಾಗುತ್ತದೆ. ನಮ್ಮ ನಡುವೆ ಒಡಕು ತರಲು, ನಮ್ಮ ಮನೆಯ ಹೆಂಗಸರನ್ನು ಎತ್ತಿಕಟ್ಟುವುದಕ್ಕೆ ಬಂದಿದ್ದೀರಾ' ಅಂತ ಮಾತನಾಡುತ್ತಿದ್ದರು. ಇನ್ನೂ ಕೆಲವು ಗಂಡಸರು, ನಮಗೆ ನಲವತ್ತು ವರ್ಷ ಆಗಿದೆ. ರೈತರೆಂಬ ಕಾರಣಕ್ಕೆ ಹೆಣ್ಣುಗಳನ್ನು ಕೊಡುತ್ತಿಲ್ಲ. ಮದುವೆ ಮಾಡಿಸಿ ಅಂತ ಶುರುಮಾಡುತ್ತಿದ್ದರು. ಆಗ ಅಲ್ಲಿನ ಮಹಿಳೆಯರೇ ಆ ಗಂಡಸರನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದರು. 'ನೀನು ಸರಿಯಾಗಿದ್ದೀಯಾ? ಸುಮ್ಮನೆ ಇರಪ್ಪ ಸಾಕು. ನಿನ್ನ ಹೆಂಡತಿ ಮಕ್ಕಳನ್ನು ಸರಿಯಾಗಿ ನೋಡಿಕೊಂಡು ಹೋಗು. ನಿನಗೆ ಕುಡಿಯುವುದಕ್ಕೂ ನಿನ್ನ ಹೆಂಡತಿ ಕಾಸು ಕೊಡಬೇಕು. ಸುಮ್ಮನೆ ನಿಂತಿಕೊ' ಅಂತ ಅವರವರೆ ಉತ್ತರ ನೀಡುತ್ತಿದ್ದರು. ನಮ್ಮ ಮಾತುಗಳು ಮತ್ತೆ ಮುಂದುವರೆಯುತ್ತಿದ್ದವು. ಕೊನೆಗೆ ಪ್ರಶ್ನೆಗಳನ್ನು ಕೇಳುವಾಗ ಹೆಣ್ಣಿನ ಮೇಲಿನ ದೌರ್ಜನ್ಯ, ಕೌಟುಂಬಿಕ ಹಿಂಸೆ, ವರದಕ್ಷಿಣೆ ಕಿರುಕುಳ ಇನ್ನೂ ಜೀವಂತವಾಗಿ ಇವೆ ಎನ್ನುವುದಕ್ಕೆ ಸಾಕ್ಷಿ ಸಮೇತ ಹೆಣ್ಣು ಮಕ್ಕಳು ಬಂದು ನಿಲ್ಲುತ್ತಿದ್ದರು. ಕಷ್ಟಪಟ್ಟು ಕೂಲಿ ಕಂಬಳ ಮಾಡಿ ಮದುವೆ ಮಾಡಿದ ಗಂಡನಿಗೆ ಇವಳು ದುಡಿದು ಹಾಕಬೇಕು. ಜೊತೆಗೆ ಹಿಂಸೆ ಬೇರೆ ಎಂದು ಹೇಳುವುದರ ಜೊತೆಗೆ ಮೂಲಭೂತ ಸೌಕರ್ಯಗಳು ಇಲ್ಲದ ಸಮಸ್ಯೆಗಳನ್ನೂ ಹೇಳಿಕೊಳ್ಳುತ್ತಿದ್ದರು. ನೀರು–ಬಸ್ಸಿನ ಸೌಲಭ್ಯ ಬೇಕು, ಆಸ್ಪತ್ರೆ–ಉದ್ಯೋಗ ಖಾತ್ರಿ ಕೆಲಸಬೇಕು, ಸ್ತ್ರೀಶಕ್ತಿ ಸ್ವ–ಸಹಾಯ ಗುಂಪುಗಳಿಗೆ ಸಾಲ ಕೊಡಿಸಬೇಕು ಇನ್ನೂ ಹಲವಾರು ಸಮಸ್ಯೆಗಳನ್ನು ಹೇಳುತ್ತಿದ್ದರು. ಈ ಎಲ್ಲಾ ಸಮಸ್ಯೆಗಳಿಗೆ ಉತ್ತರವಾಗಿ ಹೋರಾಟ ಮಾಡೋಣ ಅಂತ ಹೇಳುತ್ತಿದ್ದೆವು.

ಕೊನೆಗೆ "ಗಟ್ಟಿದನಿ ದಿಟ್ಟನಡೆ; ಘನತೆವೆತ್ತ ಬದುಕು" ಘೋಷಣೆ ಕೂಗಿಸಿ, ಮಾರ್ಚ್ 7ಕ್ಕೆ ಮಂಡ್ಯಕ್ಕೆ ಬರಬೇಕು, ಮಹಿಳಾ ಸಮಾವೇಶಕ್ಕೆ ಎಂದು ಹೇಳಿ ಹೊರಡುವಾಗ ಮಹಿಳೆಯರು ಗುಂಪುಕಟ್ಟಿ ಮತ್ತೆ ನಮ್ಮ ಊರಿನ ಕಡೆ ಯಾವಾಗ ಬರ್ತಿರಾ ಮೇಡಂ ಎಂದು ಪ್ರಶ್ನೆ ಕೇಳುತ್ತಿದ್ದರು. ಅದಕ್ಕೆ ನಾವು ಉತ್ತರಿಸುತ್ತಾ ನೋಡುವಾಗ ಸಮಯ 9 ಗಂಟೆ ಆಗಿರುತ್ತಿತ್ತು. ನಮ್ಮ ಕಾರ್ಯಕರ್ತೆಯರ ಮನೆಯ ಕಡೆ ಹೊರಟಾಗ ಮನೆಯ ಒಳಗೆ ಹಬ್ಬದ ಸಂಭ್ರಮ. ಸಂಘಟನೆಯ ಗೆಳತಿಯರು ಸೇರಿ ಮಾಡಿದ ಬಾಡೂಟವನ್ನು ನಾ ಮುಂದು ತಾ ಮುಂದು ಎಂದು ಪ್ರೀತಿಯಿಂದ ಬಡಿಸಿ ಎಲೆ ಅಡಿಕೆ ನೀಡಿ ಹೊರಗೆ ಬರುವಷ್ಟರಲ್ಲಿ ಅವರ ಪ್ರೀತಿ ವಿಶ್ವಾಸಕ್ಕೆ ಸಮಯ ಗೊತ್ತಾಗದೆ 10–11 ಗಂಟೆ ಆಗಿ ಹೋಗಿರುತ್ತಿತ್ತು.

**ಪುಷ್ಪಲತಾ, ಮಹಿಳಾ ಮುನ್ನಡೆ: ಹೆಣ್ಣೋಟದ ಹೆಗ್ಗಳಿಕೆಯ ಹೆಮ್ಮೆ ನಮ್ಮೀ ಅರಿವಿನ ಪಯಣ**

ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು ಪ್ರತೀ ವರ್ಷ ಒಂದೊಂದು ಜಿಲ್ಲೆಯಲ್ಲಿ ಮಹಿಳಾ ದಿನಾಚರಣೆಯನ್ನು ಆಚರಿಸುತ್ತಾ ಬಂದಿದೆ.. ನಾವೂ ಸಹ ಸುಮಾರು 4–5 ಜಿಲ್ಲೆಯಲ್ಲಿ ನಡೆದ ಮಹಿಳಾ ದಿನಾಚರಣೆಯಲ್ಲಿ ಪಾಲ್ಗೊಂಡು ಅಲ್ಲಿನ ಪೂರ್ವಭಾವಿ ಕೆಲಸಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಕೊಂಡಿದ್ದೇವೆ. ಪ್ರತೀ ವರ್ಷವೂ ಒಬ್ಬೊಬ್ಬರು ಅತಿಥಿಗಳ ಮಾತುಗಳನ್ನು ಕೇಳಲು ಉತ್ಸಾಹ ತುಂಬಿಕೊಂಡು ಇರುತ್ತಿದ್ದವು. ಎಲ್ಲೆಲ್ಲಿ ನೋಡಿದರೂ ಮಹಿಳೆಯರ ಸಂಭ್ರಮವೋ ಸಂಭ್ರಮ...!!

ಕಳೆದ ಬಾರಿ ಧಾರವಾಡದಲ್ಲಿ ನಡೆದ ಮಹಿಳಾ ದಿನದಲ್ಲಿ ಮುಂದಿನ ಜಿಲ್ಲೆಯ ಜವಾಬ್ದಾರಿಯನ್ನು ಮಂಡ್ಯಕ್ಕೆ ಕೊಡಲು ತೀರ್ಮಾನವಾಗಿ ನಾವು ಮತ್ತು ಮಂಡ್ಯದ ಇತರ ಸಂಘಟನೆಗಳ ಗೆಳತಿಯರು ಜವಾಬ್ದಾರಿಯನ್ನು ಧಾರವಾಡದ ಗೆಳತಿಯರಿಂದ ಗಿಡವನ್ನು ತೆಗೆದುಕೊಳ್ಳುವುದರ ಮೂಲಕ ಮುಂದಿನ ಜಿಲ್ಲೆಯ ಜವಾಬ್ದಾರಿಯನ್ನು ಹೊತ್ತು ಸಾಗಿದೆವು.

'ಅರಿವಿನ ಪಯಣ' ಎಂಬುದು ಹೆಸರೇ ಹೇಳುವಂತೆ ಜಿಲ್ಲೆಯಾದ್ಯಂತ ಮಹಿಳೆಯರು, ಮಕ್ಕಳ ಕುರಿತಾದಂತೆ ಎಲ್ಲರಿಗೂ ಸಮಾನತೆಯ, ದೌರ್ಜನ್ಯವಿಲ್ಲದ ಸಮಾಜವನ್ನು ಕಟ್ಟಲು ಸಾಂಸ್ಕೃತಿಕ, ವೈಚಾರಿಕವಾಗಿ ಅರಿವನ್ನು ಮೂಡಿಸುವ ಒಂದು ಪಯಣವೇ ಆಗಿದೆ. ಅರಿವಿನ ಪಯಣದುದ್ದಕ್ಕೂ ಹೇಳುವಂತಹ ಒಂದೊಂದು ಪುಟ್ಟ ಕಥೆಗಳೂ ಮನುಷ್ಯರ ಜೀವನದ ಸತ್ಯ ಕಥೆಗಳೇ ಆಗಿರುವುದರಿಂದ ಜನಸಾಮಾನ್ಯರನ್ನು ಮುಟ್ಟಲು ಬಲುಸುಲಭದ ಕೆಲಸವಾಗಿತ್ತು. ಇಲ್ಲಿ ಬರುವ ನಾಟಕಗಳು ಎದುರು ನೋಡುತ್ತಿರುವವರ ಕಣ್ಣಾಲಿಗಳಲ್ಲಿ ನೀರು ತುಂಬಿಸುವ, ಮೈ ನಡುಕಗೊಳಿಸುವ, ಎಂದಿಗೂ ಮಾಧ್ಯಮಗಳಲ್ಲಾಗಲೀ, ಜನರಿಂದಾಗಲಿ ಕೇಳಿಸಿಕೊಂಡೇ ಇರದ ಸತ್ಯಸಂಗತಿಗಳನ್ನು ಬಿಡಿಸಿ ಕಟ್ಟಿಕೊಟ್ಟಿದ್ದವು. ಮಕ್ಕಳು, ಯುವಜನತೆ, ಜನಸಾಮಾನ್ಯರು, ವಯಸ್ಸಾದವರು, ಎಲ್ಲರೂ ಸಹ ಸಹಜವಾಗಿ ಅರಿಯಬಲ್ಲ ಒಂದು ಪಯಣವೇ ಈ ಅರಿವಿನ ಪಯಣವಾಗಿದೆ.

ಒಟ್ಟಾರೆಯಾಗಿ ಎಲ್ಲರೂ ಒಂದುಗೂಡಿ ಒಂದೊಂದು ಕಥೆಯನ್ನು ಹೇಳುತ್ತಾ ಅದರ ಸಾರವನ್ನು ಎಲ್ಲರಿಗೂ ಅರ್ಥೈಸುತ್ತಾ, ಸತ್ಯಾಸತ್ಯತೆಗಳನ್ನು ಎಲ್ಲರಿಗೂ ತಿಳಿಸುತ್ತಾ ಆತ್ಮಸ್ಥೈರ್ಯವನ್ನು ತುಂಬುವುದು ಒಂದು ದೊಡ್ಡ ಜವಾಬ್ದಾರಿಯೇ ಹೌದು! ಇದನ್ನು ಮಂಡ್ಯ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ, ಕಾಲೇಜು, ಶಾಲೆ, ಸಂಘ–ಸಂಸ್ಥೆಗಳು, ಸಾರ್ವಜನಿಕರಿಗೆ ತಿಳಿಸುವ ಮೂಲಕ ಎಲ್ಲರೂ ಒಟ್ಟುಗೂಡಿ ಕೆಲಸ ಮಾಡಿದ್ದು ಖುಷಿಯ ಸಂಗತಿಯಾಗಿದೆ. ಒಟ್ಟುಗೂಡಿ ಕೆಲಸ ಮಾಡುವುದು ಸರಳ ವಿಚಾರವಲ್ಲ. ನಾನು ಅಂತಿಮ ವರ್ಷದ ಕಾನೂನು ವಿದ್ಯಾರ್ಥಿಯಾದ್ದರಿಂದ ಇತ್ತ ಕಾಲೇಜು ಇತ್ತ ಅರಿವಿನ

ಪಯಣ! ಕಾರ್ಯಕ್ರಮ ಫಿಕ್ಸ್ ಆದದ್ದೇ ತಡ ಕಾಲೇಜಿಗೆ ರಜೆ ಹಾಕಿ ಓಡಿ ಬಂದುಬಿಡ್ತಿದ್ದೆ. ಅದೇನೋ ಒಂದು ರೀತಿಯ ಉತ್ಸಾಹವಿರುತ್ತಿತ್ತು. ಜೊತೆಗೆ ಜನರ ಭಾಗವಹಿಸುವಿಕೆಯನ್ನು ಸವಿಯಲು ಯಾವಾಗಲೂ ಮನಸ್ಸು ಹಾತೊರೆಯುತ್ತಿತ್ತು.

ವಿಶೇಷಂದರೆ ನಮ್ಮ ಅರಿವಿನ ಪಯಣ ತಂಡವೇ ನಮ್ಮ ಸ್ಥೈರ್ಯವಾಗಿತ್ತು. ಎಲ್ಲರೂ ಸ್ವತಃ ತಪ್ಪು ಒಪ್ಪುಗಳನ್ನು ಸರಿಪಡಿಸುತ್ತಾ, ಇಡೀ ಜಿಲ್ಲೆಯವರನ್ನು ಸಂಪರ್ಕಿಸಿ ಸುತ್ತಾಡುತ್ತಾ, ನಮ್ಮನ್ನು ನಾವು ಎಲ್ಲರೊಟ್ಟಿಗೆ ತೊಡಗಿಸಿಕೊಂಡು ಮುನ್ನುಗ್ಗುವುದೇ ನಮಗೆ ಮತ್ತಷ್ಟು ಶಕ್ತಿಯನ್ನು ತುಂಬಿತ್ತು.

**ಕಮಲ, ಮಹಿಳಾ ಮುನ್ನಡೆ**

ನಾನು ಮಹಿಳಾ ಮುನ್ನಡೆ ಸಂಘಟನೆಯಲ್ಲಿ ಕಳೆದ 15 ವರ್ಷಗಳಿಂದ ಕೆಲಸ ಮಾಡ್ತಾಯಿದ್ದೀನಿ. ಮಾರ್ಚ್ 7–8ರಂದು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದಿಂದ ಸಂಘಟಿಸಿದ್ವಿ. ಇದಕ್ಕೋಸ್ಕರ ಹಳ್ಳಿಗಳಲ್ಲಿ, ತಾಲೂಕು ಕೇಂದ್ರಗಳಲ್ಲಿ, ಮಂಡ್ಯ ನಗರದ ಶ್ರಮಿಕ ನಗರಗಳಲ್ಲೆಲ್ಲ ನಾವು ಅರಿವಿನ ಪಯಣ ಅನ್ನೋವಂಥ ವಿಶಿಷ್ಟವಾದ ಕಾರ್ಯಕ್ರಮಗಳನ್ನ ಹಮ್ಮಿಕೊಂಡ್ವಿ. ಮುಂಚೆ ನಾವು 'ಅರಿವಿನ ಪಯಣ' ಅನ್ನೋ ಕಾರ್ಯಕ್ರಮಗಳ ಬಗ್ಗೆ ಕೇಳಿದ್ವಿ. ಆದರೆ, ಮಂಡ್ಯದಲ್ಲೇ ಮಹಿಳಾ ದಿನಾಚರಣೆ ನಿಗದಿಯಾಗಿ, ಅರಿವಿನ ಪಯಣಗಳಲ್ಲಿ ಪಾಲ್ಗೊಂಡ ಮೇಲೆ ನನಗೆ ಅನಿಸಿದ್ದು ಇಂತಹ ಕಾರ್ಯಕ್ರಮಗಳು ಮಂಡ್ಯಕ್ಕೆ ಬೇಕಾಗಿದ್ವು, ಮತ್ತೆ ರಾಜ್ಯ ಮಟ್ಟದ ಮಹಿಳಾ ದಿನಾಚರಣೆನೂ ಬೇಕಾಗಿತ್ತು ಅಂತ. ಯಾಕೆಂದರೆ, ಮಂಡ್ಯದಲ್ಲಿ ಸಾಕಷ್ಟು ಪುಟ್ಟ ಹೆಣ್ಣುಮಕ್ಕಳ ಅತ್ಯಾಚಾರ ಮತ್ತು ಕೊಲೆ ಪ್ರಕರಣಗಳಾಗಿವೆ. ಹೆಣ್ಣು ಭ್ರೂಣಹತ್ಯೆನೂ ಜಾಸ್ತಿನೇ ಇತ್ತು. ವರದಕ್ಷಿಣೆ ಕಿರುಕುಳಕ್ಕೆ ಒಳಗಾಗುವ ಹೆಣ್ಣುಮಕ್ಕಳೂ ದೊಡ್ಡ ಸಂಖ್ಯೆಯಲ್ಲಿದ್ದಾರೆ. ಅದಕ್ಕೂ ಮೀರಿ ಜಾತಿ ಕಾರಣಕ್ಕೆ ನಡೆಯೋ ಮರ್ಯಾದೆಗೇಡು ಹತ್ಯೆಗಳಿಂದ ನಮ್ಮ ಜಿಲ್ಲೆ ನಲುಗಿದೆ. ಅದಕ್ಕಾಗಿ ಅರಿವಿನ ಪಯಣದಂತಹ ಅರ್ಥಪೂರ್ಣವಾದ ಕಾರ್ಯಕ್ರಮಗಳು ತುಂಬ ಅಗತ್ಯ ಇತ್ತು.

ಅರಿವಿನ ಪಯಣದ ಮೂಲಕ ನೀಲಿ ರಿಬ್ಬನ್ ಮತ್ತು ದುರ್ಗಾಳ ಜಗತ್ತಿಗೆ ನಮ್ಮ ಪ್ರವೇಶವಾಯಿತು. ನಾವು ಹಲವು, ಹಳ್ಳಿಗಳಲ್ಲಿ, ಕಾಲೇಜುಗಳಲ್ಲಿ, ಶ್ರಮಿಕನಗರಗಳಲ್ಲಿ (ಮಂಡ್ಯ ನಗರದ ಸ್ಲಂಗಳಲ್ಲಿ) ಈ ನಾಟಕ ಮಾಡಿ ಹೆಣ್ಣುಮಕ್ಕಳನ್ನ ಮತ್ತೆ ಎಲ್ಲರನ್ನೂ ಕಾರ್ಯಕ್ರಮಕ್ಕೆ ಕರೆದ್ವಿ, ಅವರ ಜೊತೆಗೆ ಸಂವಾದ ಮಾಡಿದ್ವಿ. ಶ್ರಮಿಕನಗರಗಳ ಹೆಣ್ಣುಮಕ್ಕಳಿಗೆ ದುರ್ಗಾಳಂತಹ ಅನುಭವ ತುಂಬ ಆಗಿರತ್ತೆ, ಪ್ರತಿದಿನ ಆಗ್ತಾನೇ ಇರತ್ತೆ. ಅವರುಗಳು ನಾಟಕ ನೋಡಿ ಕಣ್ಣೀರು ಹಾಕ್ತಿದ್ರು, ಅವರುಗಳ ಬದುಕಿನ ಕಥೆ ಹೇಳ್ತಿದ್ರು, ಅದನ್ನು ಕೇಳಿ ನಾವು ಕಣ್ಣೀರು ಹಾಕಿದ್ದು ಎಷ್ಟೋ ಸಲ.

ಹಾಗೇನೆ, ಹಳ್ಳಿಗಳಲ್ಲಿ ಕಾಲೇಜುಗಳಲ್ಲಿ ಮುಟ್ಟಿನ ಬಗ್ಗೆ "ಮುಟ್ಟು ಮುಟ್ಟೆಂದೇಕೆ ಕೀಳಾಗಿ ಕಾಣುವಿರಿ" ಹಾಡು ಹಾಡಿದ್ರೆ, ಮೊದಮೊದಲು ಹೆಣ್ಣುಮಕ್ಕಳು ನಾಚ್ಕೊಳ್ಳೋರು. ಆದರೆ ಕಾರ್ಯಕ್ರಮ ಆದಮೇಲೆ ಬಂದು ಆ ಹಾಡಿನಲ್ಲಿ ತುಂಬ ಸತ್ಯ ಇದೆ ಅಂತ ಹೇಳ್ತಿದ್ದರು. ಆ ಹಾಡು ಬರೆದವರಿಗೆ ಧನ್ಯವಾದ. ಅರಿವಿನ ಪಯಣ ನಿರಂತರವಾಗಿರಬೇಕು ಅನ್ನೋದೇ ನನ್ನಾಸೆ. ಅದು ಆವೊಂದು ವರ್ಷದ ಕಾರ್ಯಕ್ರಮಕ್ಕೆ ಸೀಮಿತ ಆಗಬಾರದು, ಅದನ್ನ ನಾವು ಮುಂದುವರೆಸಬೇಕು. ಹಾಗೇನೆ ಒಕ್ಕೂಟದ ಕೆಲಸಗಳು ಇನ್ನೂ ವಿಶಾಲವಾಗಿ ಬೆಳೀಬೇಕು.

**ರಾಧಾಮಣಿ, ವಿಕಸನ**

ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ವತಿಯಿಂದ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ಕಳೆದ 4 ತಿಂಗಳಿನಿಂದ ಅರಿವಿನ ಪಯಣ ಕಾರ್ಯಕ್ರಮಗಳನ್ನು ಜಿಲ್ಲೆಯ ಎಲ್ಲ ತಾಲೂಕುಗಳಲ್ಲೂ ನಡೆಸಲಾಯಿತು. ಸ್ತ್ರೀ ಶಕ್ತಿ ಸಂಘಗಳು, ಶಾಲಾ ಕಾಲೇಜುಗಳು, ಹಳ್ಳಿಗಳಲ್ಲಿ ಮಹಿಳೆಯರಿಗೆ ಮತ್ತು ಸಾರ್ವಜನಿಕರಿಗೆ ಹೋರಾಟದ ಹಾಡುಗಳು, ಕಿರುನಾಟಕಗಳು ಮತ್ತು ಸಂವಾದದ ಮೂಲಕ ಅರಿವು ಮೂಡಿಸಲಾಯಿತು. ಈ ಕಾರ್ಯಕ್ರಮಗಳಿಂದ ಸಂಘಟನೆಯ ಗುರಿ ಉದ್ದೇಶಗಳ ಬಗ್ಗೆ ಎಲ್ಲರಿಗೂ ತಿಳುವಳಿಕೆ ನೀಡಿದಂತಾಯಿತು. ಎಷ್ಟೋ ಮಹಿಳೆಯರು, ಮಕ್ಕಳು ಕುಟುಂಬದಲ್ಲಿ ಹಲವಾರು ಬಗೆಯ ದೌರ್ಜನ್ಯಗಳಿಗೆ ಒಳಗಾದವರು ಪೊಲೀಸ್ ಠಾಣೆ, ಕೋರ್ಟು, ಸಮಾಜದ ಮುಂದೆ ಬಾರದೆ ಕಷ್ಟಗಳನ್ನು ಅನುಭವಿಸಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಅಂತಹವರನ್ನು ನೋಡಿದಾಗ, ದೌರ್ಜನ್ಯಗಳು ಕಡಿಮೆಯಾಗದೆ ಹೆಚ್ಚೇ ಆಗುತ್ತಿವೆಯೇನೋ ಅನಿಸುತ್ತಿದೆ. ಆದ್ದರಿಂದ ಅರಿವಿನ ಪಯಣದಂತಹ ಕಾರ್ಯಕ್ರಮಗಳು ಇನ್ನೂ ಹೆಚ್ಚಾಗಬೇಕು.

**ಅಂಜಲಿ, ಮಹಿಳಾ ಮುನ್ನಡೆ**

ಅರಿವಿನ ಪಯಣದಲ್ಲಿ ಭಾಗಿಯಾಗಿದ್ದ ಮಗಳು ಧೃತಿ ಹಾಕುತ್ತಿದ್ದ ತೊದಲು ನುಡಿಯ ಘೋಷಣೆ ನನ್ನ ಮನತುಂಬಿ ಬರುವಂತೆ ಮಾಡುತ್ತಿತ್ತು. ನಾನು ನನ್ನ ಸಹಪಾಠಿಗಳು ಮಾಡುತ್ತಿದ್ದ ದುರ್ಗಾ ಮತ್ತು ನೀಲಿ ರಿಬ್ಬನ್ ನಾಟಕಗಳು ನೆರೆದಿರುವ ಹೆಂಗೆಳೆಯರ ಕಣ್ಣಂಚಲ್ಲಿ ನೀರು ತುಂಬಿಸುತ್ತಿತ್ತು. ನಾಟಕದ ಪಾತ್ರಗಳು ಎಂದೊ ನಮ್ಮ ಬದುಕಿನಲ್ಲಿ ಹಾದು ಹೋದಂತೆ ಭಾಸವಾಗುತ್ತಿತ್ತು. ಜೀವನದ ಅದೆಷ್ಟೋ ಸಂದರ್ಭದಲ್ಲಿ ಈ ರೀತಿಯ ಹೋರಾಟದ ಬದುಕಿನ ಕ್ಷಣಗಳು ಸ್ಫೂರ್ತಿ ತಂದು

ಮುನ್ನಡೆಯಲು ಸಾಧ್ಯವಾಯಿತು. ಎಲ್ಲಾ ಬಣ್ಣಗಳ ಬೆಸುಗೆ ಸಾಧ್ಯವಾಗಿದ್ದು ಸುಲಭದ ಮಾತಲ್ಲ. ಈ ಬೆಸುಗೆಯ ಕೊಂಡಿಯಲ್ಲಿ ನನ್ನ ಪಾಲು ಇದೆ ಎನ್ನುವುದೆ ನನಗೆ ಖುಷಿ.

**ಈಶ್ವರಿ, ಮಹಿಳಾ ಮುನ್ನಡೆ**

ನಾನು ಮಂಗಳೂರಿನಲ್ಲಿ ನಡೆದ ಒಕ್ಕೂಟದ ಮೊದಲ ಕಾರ್ಯಕ್ರಮದಿಂದಲೂ ಭಾಗವಹಿಸುತ್ತಿದ್ದೇನೆ. ಪ್ರತಿ ವರ್ಷವೂ ಒಂದೊಂದು ಜಿಲ್ಲೆಯಲ್ಲಿ ಒಕ್ಕೂಟದ ಹೋರಾಟ ವಿಭಿನ್ನವಾಗಿಯೂ, ಪ್ರೌಢತೆಯಿಂದಲೂ ಕರ್ನಾಟಕದ ಮಹಿಳಾ ಚಳವಳಿಗೆ ಕಸುವನ್ನು ತುಂಬುವ ಪಾತ್ರದೊಂದಿಗೆ ಬೆಳೆಯುತ್ತಿದೆ. ಒಕ್ಕೂಟದ ಕಾರ್ಯಕ್ರಮದ ಕೆಲಸಗಳಿಗೆ ಮಹಿಳಾ ಮುನ್ನಡೆ ತಂಡ ಒಂದು ವಾರ ಮುಂಚಿತವಾಗಿ ಹೋಗುವ ಸಂದರ್ಭದಲ್ಲಿ ನಾನು ಜೊತೆಯಾಗಿದ್ದೀನಿ. ಕಳೆದ ವರ್ಷ2020ರಲ್ಲಿ ಮಂಡ್ಯದಲ್ಲಿ ನಡೆದ ಒಕ್ಕೂಟದ ಹೋರಾಟ ಬಹಳ ಅಚ್ಚುಕಟ್ಟಾಗಿ ನಡೆಯಿತು. ನನ್ನದೇ ಊರಾದ ಮಂಡ್ಯದಲ್ಲಿ ಅರಿವಿನ ಪಯಣ ನನಗೆ ಬೇರೆ ರೀತಿಯ ಅನುಭವವನ್ನು ಕೊಟ್ಟಿದೆ. ಸ್ಥಳೀಯ ಸಮಸ್ಯೆಗಳನ್ನು ಆಧರಿಸಿ ಅರಿವಿನ ಪಯಣ ಮುನ್ನಡೆಯಬೇಕೆಂಬುದು ಒಳ್ಳೆಯ ತೀರ್ಮಾನವೆಂದು ನನ್ನ ಭಾವನೆ. 'ನೀಲಿ ರಿಬ್ಬನ್' ಮತ್ತು 'ದುರ್ಗ' ನಾಟಕಗಳು ಅದೆಷ್ಟೋ ಹೆಣ್ಣು ಮಕ್ಕಳ ನೋವಿನ ಪ್ರತಿರೂಪವಾಗಿತ್ತು. ಈ ನಾಟಕ ಪ್ರದರ್ಶನಗಳನ್ನು ನೋಡಿದ ನಂತರ ಮಹಿಳೆಯರು, ಹುಡುಗಿಯರು ನಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದ ಅನುಭವಗಳು ಪುರುಷಾಧಿಪತ್ಯದ ವಿಕಾರ ರೂಪವನ್ನು ಬಿಚ್ಚಿಡುತ್ತಿದ್ದವು. ಪ್ರತಿ ಹಳ್ಳಿಗಳಲ್ಲಿ, ಅಲ್ಲಿನ ಶಾಲಾ ಕಂದಮ್ಮಗಳಲ್ಲಿ ಅರಿವಿನ ಪಯಣ ಅರಿವನ್ನು ಮೂಡಿಸಲು ಯಶಸ್ವಿಯಾಗಿದೆ. ನಾವೆಲ್ಲ ಈ ರೀತಿ ಒಗ್ಗಟ್ಟಾಗಿ ಒಕ್ಕೂಟದಲ್ಲಿ ಕೆಲಸ ಮಾಡಿದ್ದು, ಮಾಡುತ್ತಿರುವುದು ಖುಷಿಯ ಜೊತೆಗೆ ನಾಳೆಗಳ ಬಗ್ಗೆ ವಿಶ್ವಾಸ ಮೂಡಿಸಿದೆ. ಇವೆಲ್ಲವುಗಳ ನಡುವೆ ಕೋಪ, ಮುನಿಸು, ವೈಯಕ್ತಿಕ ಒತ್ತಡಗಳ ಜೊತೆಗೆ ಮಂಡ್ಯದಲ್ಲಿ ನಡೆದ ಮಹಿಳಾ ಹೋರಾಟ ನನಗೆ ಅರಿವು ಮತ್ತು ಪ್ರೀತಿಯೊಂದಿಗೆ ಅನುಭವವನ್ನು ಕಟ್ಟಿಕೊಟ್ಟಿದೆ.

“ಪ್ರೀತಿ, ಕಾಳಜಿ, ಟೀಕೆ, ಅಸಹಾಯಕತೆ, ಪ್ರತಿರೋಧ ಎಲ್ಲವನ್ನೂ ಒಂದೇ 'ಪ್ಯಾಕೇಜ್'ನಲ್ಲಿ ಒಳಗೊಂಡ ಜೀವ ಹೆಣ್ಣು. ಆ ಪ್ಯಾಕೇಜೇ ಹೆಣ್ತನ. ಅದನ್ನವಳು ಕಲಿತದ್ದಲ್ಲ, ಬದುಕು ಕಲಿಸಿದ್ದು”

ಡಾ. ಎಚ್. ಎಸ್. ಅನುಪಮಾ ಅವರು ಬರೆದಿರುವ, ನನಗಿಷ್ಟವಾದ ಈ ಮೇಲಿನ ಸಾಲುಗಳೊಂದಿಗೆ ಹೆಣ್ಣಿನ ಘನತೆಗಾಗಿ, ಆಕೆಯ ಅಸ್ತಿತ್ವಕ್ಕಾಗಿ, ಬರಲಿರುವ ನಾಳೆಗಳು ನಮ್ಮವೆ ಎಂಬ ವಿಶ್ವಾಸದೊಂದಿಗೆ ಹೋರಾಟದ ಹಟ್ಟಿಯಲ್ಲಿರೋಣ.

**ಕೆ.ಎಸ್ ಮಂಜುಳಾ, ದೊಡ್ಡ ಬಾಣಸವಾಡಿ**

ನಮ್ಮೂರಿನಲ್ಲಿ ಅರಿವಿನ ಪಯಣ ಕಾರ್ಯಕ್ರಮ ನಡೆದಾಗ ನನ್ನ ಪರಿಚಿತ ಮತ್ತು ಅಪರಿಚಿತ ಹೆಣ್ಣುಮಕ್ಕಳು ತಮ್ಮೊಳಗಿನ ನೋವನ್ನು ದುಗುಡಗಳನ್ನು ಹಾದು ಬಂದ ಬಗೆಯನ್ನು ತೆರೆದಿಟ್ಟಾಗ ಮೂಕಳಾದೆ. ಅತಿ ಮಿತಿಯನ್ನು ಮೀರಿದರೆ ಅವನ್ನು ಎದುರಿಸುವ ದಾರಿಯನ್ನು ತೋರಿಸುತ್ತಿರುವ ಅರಿವಿನ ಪಯಣ ನಿಜಕ್ಕೂ ಯಶಸ್ವಿಯಾಗುತ್ತಿದೆ. ಹೆಣ್ಣಿನ ಅನಿಸಿಕೆಯನ್ನು, ಆತ್ಮವಿಶ್ವಾಸವನ್ನು ಬೆಳೆಸುತ್ತಿರುವ ಅರಿವಿನ ಪಯಣ ವಿಸ್ತರಿಸಲಿ.

**ಕೆ.ಎಸ್ ನಂದಿನಿ ಜಯರಾಮ್, ರೈತ ಸಂಘ**

ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಅರಿವಿನ ಪಯಣದ ಕಾರ್ಯಕ್ರಮಗಳು ತಾಲೂಕು, ಹೋಬಳಿ ಮತ್ತು ಗ್ರಾಮ ತಲುಪಿದ್ದು ಬಹುಶಃ ಒಂದು ಮಾದರಿಯ ನಡೆಯಾಗಿತ್ತು. ಇದು ಪ್ರಶಂಸನೀಯವಾದುದು.

**ರಾಣಿ ಚಂದ್ರಶೇಖರ್. ಕಾರ್ಯದರ್ಶಿ, ವಿ ಹೆಲ್ಪ್ ಗ್ರಾಮೀಣ ಮತ್ತು ನಗರಾಭಿವೃದ್ಧಿ ಸಂಸ್ಥೆ ಮಂಡ್ಯ (ರಿ)**

ಮಹಿಳಾ ದೌರ್ಜನ್ಯ ವಿರೋಧೀ ಒಕ್ಕೂಟವು 'ಅರಿವಿನ ಪಯಣ' ದ ಮೂಲಕ, ಶಾಲಾಕಾಲೇಜಿನ ವಿದ್ಯಾರ್ಥಿಗಳಲ್ಲಿ, ಹಾಗೂ ಸಮುದಾಯದ ಜನರಲ್ಲಿ ಲಿಂಗತಾರತಮ್ಯ, ಮೂಢನಂಬಿಕೆಗಳ ಮೂಲಕ ಮಹಿಳೆಯರ ಮೇಲೆ ನಿರಂತರವಾಗಿ ನಡೆಯುವಂತಹ ದೌರ್ಜನ್ಯಗಳು, ಭ್ರೂಣಹತ್ಯೆಗಳು, ಬಾಲ್ಯವಿವಾಹ, ಬಾಲಕಾರ್ಮಿಕ ವ್ಯವಸ್ಥೆ, ಮಕ್ಕಳ ಮೇಲೆ ನಿರಂತರವಾಗಿ ನಡೆಯುತ್ತಿರುವ ಲೈಂಗಿಕ ದೌರ್ಜನ್ಯಗಳ ಮೇಲೆ ಬೆಳಕು ಚೆಲ್ಲಲು ಮತ್ತು ಸಾವಿರಾರು ಜನರಿಗೆ ಅತೀ ಕಡಿಮೆ ಅವಧಿಯಲ್ಲಿ ಅರಿವು ಮೂಡಿಸಲು ಯಶಸ್ವಿಯಾಗಿದೆ.

# ಕುಮಾರನ ಪ್ರಶ್ನೆ

– ಮೂಡ್ನಾಕೂಡು ಚಿನ್ನಸ್ವಾಮಿ

ಖುದ್ದಕ ನಿಕಾಯ ತ್ರಿಪಿಟಕಗಳಲ್ಲಿ ಅಡಕವಾಗಿರುವ ಒಂದು ಗ್ರಂಥ. ಅದರಲ್ಲಿ ಬರುವ 'ಕುಮಾರ ಪನ್ಹ ಸುತ್ತ'ದಲ್ಲಿ ಬುದ್ಧ ಮಕ್ಕಳಿಗೆ ಧರ್ಮವನ್ನು ಕಲಿಸುವ ಬೋಧನಾ ವಿಧಾನ ಕುತೂಹಲಕಾರಿಯಾಗಿದೆ. ಒಂದು ಯಾವುದು, ಎರಡು ಯಾವುದು ಎಂಬ ಪ್ರಶ್ನೆಗಳಿಗೆ ಸರಿಯಾದ ಉತ್ತರ ಕೊಡಲು ಇಡೀ ಬೌದ್ಧಧರ್ಮದ ಸಾರವನ್ನು ಕರಗತ ಮಾಡಿಕೊಂಡಿರಬೇಕಾಗುತ್ತದೆ. ಆ ಕಥೆ ಹೀಗಿದೆ.

ಸೋಪಾಕ ಅಸ್ಪೃಶ್ಯ ಜಾತಿಗೆ ಸೇರಿದ ಒಬ್ಬ ಬಾಲಕ. ವಾಡಿಕೆಯಂತೆ ಅವನ ತಂದೆ ತಾಯಿಗಳು ಊರಿನ ಹೊರಗೆ ವಾಸಿಸುತ್ತಿದ್ದರು. ಊರನ್ನು ಸ್ವಚ್ಛಗೊಳಿಸುವುದು, ಸತ್ತ ಪ್ರಾಣಿಗಳನ್ನು ಹೊರಗೆ ಸಾಗಿಸುವುದು, ಅವುಗಳ ಚರ್ಮವನ್ನು ಸುಲಿದು ಚಪ್ಪಲಿಗಳನ್ನು ತಯಾರಿಸುವುದು ಮುಂತಾದ ಕೆಲಸಗಳನ್ನು ಮಾಡಿ ಜೀವನ ಸಾಗಿಸುತ್ತಿದ್ದರು. ಸೋಪಾಕನಿಗೆ ಏಳು ವರ್ಷವಾಗಿದ್ದಾಗ ಇದ್ದಕ್ಕಿದ್ದಂತೆ ಅವನ ತಂದೆ ಸಾವಿಗೀಡಾದನು. ಕೆಲ ದಿನಗಳ ನಂತರ ಅವನ ತಾಯಿ ಬೇರೊಬ್ಬನನ್ನು ಮದುವೆಯಾದಳು. ಆ ಮಲತಂದೆಗೆ ಸೋಪಾಕನನ್ನು ಕಂಡರೆ ಅಸೂಯೆ. ತನ್ನ ಹೆಂಡತಿಯು ಮಗನ ಕಡೆಗೆ ಹೆಚ್ಚು ಗಮನ ಕೊಡುತ್ತಿರುವುದನ್ನು ಸಹಿಸಲಾಗದೆ ಆ ಹುಡುಗನನ್ನು ದಿನವೂ ಹೊಡೆದು ಬಡಿದು ಚಿತ್ರಹಿಂಸೆ ಕೊಡುತ್ತಿದ್ದ. ತಾಯಿ ತುಂಬಾ ನೊಂದುಕೊಳ್ಳುತ್ತಿದ್ದಳು, ಆದರೆ ಅಸಹಾಯಕಳಾಗಿದ್ದಳು. ಮಲತಂದೆಗೆ ಇವನನ್ನು ಶಾಶ್ವತವಾಗಿ ಇಲ್ಲವಾಗಿಸಿಬಿಡಬೇಕೆನಿಸಿತು. ಒಂದು ದಿನ ಸೋಪಾಕನನ್ನು ಹತ್ತಿರ ಕರೆದು ಊರ ಹೊರಗೆ ಸುತ್ತಾಡಿಕೊಂಡು ಬರೋಣ ಬಾ ಎಂದ. ಹುಡುಗನಿಗೆ ಆಶ್ಚರ್ಯವಾಗಿ ನನ್ನ ಮಲತಂದೆ ಬದಲಾಗಿದ್ದಾನೆ ಎಂದು ಸಂತೋಷಪಟ್ಟುಕೊಂಡು ಜೊತೆಗೂಡಿ ಹೊರಟ. ಆದರೆ ಆ ದುಷ್ಟ, ಬಾಲಕನನ್ನು ಊರ ಹೊರಗಿನ ಸ್ಮಶಾನಕ್ಕೆ ಕರೆತಂದು ವಿಕಾರವಾಗಿ ಬಿದ್ದಿದ್ದ ಒಂದು ಹೆಣಕ್ಕೆ ಕಟ್ಟಿಹಾಕಿ ಹೊರಟುಬಿಟ್ಟ. ಹುಡುಗ ಹೆದರಿದ, ಊಳಿಡುತ್ತಿದ್ದ ತೋಳಗಳು ತನ್ನನ್ನು ತಿನ್ನಬಹುದೆಂದು ಭಾವಿಸಿ ಭಯಭೀತನಾಗಿ ಕಿರುಚುತ್ತಾ ರಾತ್ರಿಯನ್ನು ಕಳೆದ. ಅವನ ಆಕ್ರಂದನವನ್ನು ಕೇಳಿ ಯಾರೋ ಪುಣ್ಯಾತ್ಮರೊಬ್ಬರು ಅಪೂರ್ವವಾದ ಬೆಳಕನ್ನು ಪಸರಿಸುತ್ತಾ ಹತ್ತಿರ ಬರುತ್ತಿರುವಂತೆ

ಕಾಣಿಸಿತು. ಬ್ರಾಹ್ಮೀಮುಹೂರ್ತವನ್ನು ಬೌದ್ಧರು ಮಹಾಕರುಣಾಸಮಾಪತ್ತಿ ಕಾಲ ಎಂದು ಕರೆಯುತ್ತಾರೆ. ಆ ಸಮಯದಲ್ಲಿ ಬುದ್ಧ ಲೋಕವನ್ನು ಅವಲೋಕಿಸುತ್ತಾರೆ ಎಂಬ ಪ್ರತೀತಿ ಇದೆ. ಬುದ್ಧ ಸೋಪಾಕನ ದುರ್ದೆಸೆಯನ್ನು ಕಂಡು ಅಲ್ಲಿಗೆ ಧಾವಿಸಿರುತ್ತಾರೆ. ಬಾಲಕನಿಗೆ ಮರುಜೀವ ಬಂದಂತಾಗುತ್ತದೆ. ಅಕ್ಕರೆಯಿಂದ ಮೈದಡವಿ ಜೇತವನಕ್ಕೆ ಬರುವೆಯಾ ಎಂದು ಕರೆಯುತ್ತಾರೆ. ಬಾಲಕ ಹಿಂಬಾಲಿಸುತ್ತಾನೆ.

ಜೇತವನಕ್ಕೆ ಬಂದಮೇಲೆ ಹರ್ಷಚಿತ್ತನಾಗಿದ್ದ ಸೋಪಾಕನನ್ನು ನೋಡಿ ಬುದ್ದರು 'ನೀನು ನಿನ್ನ ಮುಂದಿನ ಜೀವನವನ್ನು ಭಿಕ್ಕುವಾಗಿ ಕಳೆಯಲು ಇಚ್ಛಿಸುವೆಯಾ'? ಎಂದು ಕೇಳುತ್ತಾರೆ. ಅವನು ಆಗಲಿ ಎನ್ನುತ್ತಾನೆ. ಬುದ್ಧ ಧಮ್ಮೋಪದೇಶವನ್ನು ನೀಡಿದ ನಂತರ ಏಳುವರ್ಷದ ಬಾಲಕನಿಗೆ ಜ್ಞಾನೋದಯವಾಗುತ್ತದೆ. ಅತ್ಯಂತ ಕಿರಿಯ ವಯಸ್ಸಿನಲ್ಲಿಯೆ ಅರಹಂತನೆನಿಸಿಕೊಳ್ಳುತ್ತಾನೆ.

ಮುಂದೊಮ್ಮೆ ಬುದ್ಧರು ಕೇಳಿದ ಹತ್ತು ಪ್ರಶ್ನೆಗಳಿಗೆ ಬಾಲಕ ಸೋಪಾಕನು ಈ ಕೆಳಗಿನಂತೆ ಉತ್ತರಿಸುತ್ತಾನೆ. ಇದು ಕುಮಾರ ಪನ್ಹ ಎಂದು ಪ್ರಸಿದ್ಧವಾಗಿದೆ.

ಯಾವುದು ಒಂದು?

ಎಲ್ಲ ಜೀವಿಗಳು ತಮ್ಮ ಜೀವರಕ್ಷಣೆಗಾಗಿ ಅವಲಂಬಿಸಿರುವ ಆಹಾರ.

ಯಾವುದು ಎರಡು?

ಈ ಜೀವಿಗಳು ನಾಮ ಮತ್ತು ರೂಪ ಎಂಬ ಎರಡರಿಂದ ಸೃಷ್ಟಿಯಾಗಿವೆ.

ಯಾವುದು ಮೂರು?

ಧಮ್ಮದ ಮೂರು ಆಧಾರ ಸ್ತಂಭಗಳಾದ ಅಶಾಶ್ವತತೆ, ದುಃಖ, ಮತ್ತು ಅನಾತ್ಮ [ಅನಿಚ್ಚ, ದುಃಖ, ಅನತ್ತ].

ಯಾವುದು ನಾಲ್ಕು?

ಮನುಷ್ಯರನ್ನು ಋಜುಮಾರ್ಗದಲ್ಲಿ ಕೊಂಡೊಯ್ಯುವ ನಾಲ್ಕು ಆರ್ಯಸತ್ಯಗಳು.

ಯಾವುದು ಐದು?

ಜೀವಿಗಳನ್ನು ಸಂಸಾರ ಬಂಧನಕ್ಕೆ ಜೋತುಬೀಳುವಂತೆ ಮಾಡುವ ರೂಪ, ವೇದನೆ, ಗ್ರಹಿಕೆ, ಮನೋನಿರ್ಮಾಣಗಳು [ಸಂಖಾರ] ಮತ್ತು ಪ್ರಜ್ಞೆಗಳೆಂಬ ಪಂಚಸ್ಕಂದಗಳು.

ಯಾವುದು ಆರು?

ಬಾಹ್ಯಲೋಕದ ಅರಿವು ಮೂಡಿಸುವ ಪಂಚೇಂದ್ರಿಯಗಳು ಮತ್ತು ಮನಸ್ಸು

ಯಾವುದು ಏಳು?

ಭಿಕ್ಕುಗಳು ತಮ್ಮ ಸಾಧನೆಯ ಹಾದಿಯಲ್ಲಿ ಅಳವಡಿಸಿಕೊಳ್ಳಬೇಕಾದ ಸಪ್ತ ಭೋಧಿ

ಅಂಗಗಳು ಅವು; ಮನೋಮಗ್ನತೆ (ಸತಿ), ಸತ್ಯಾನ್ವೇಷಣೆ, ಪ್ರಯತ್ನ, ಪರಮಾನಂದ, ಪ್ರಸನ್ನತೆ, ಸಮಾಧಿ, ಸಮಚಿತ್ತತೆ.

ಯಾವುದು ಎಂಟು?

ಜೀವಿಗಳನ್ನು ಸಂಸಾರ ಬಂಧನದಿಂದ ಮುಕ್ತಗೊಳಿಸಿ ನಿಬ್ಬಾಣಕ್ಕೆ ದಾರಿ ತೋರುವ ಅಷ್ಟಾಂಗಿಕ ಮಾರ್ಗ.

ಯಾವುದು ಒಂಭತ್ತು?

ಜೀವಿಗಳ ಅಸ್ತಿತ್ವವಿರುವ ಒಂಭತ್ತು ಲೋಕಗಳು.

ಯಾವುದು ಹತ್ತು?

ಅರಹಂತ ಪದವಿಗೇರಿಸುವ ದಶಪಾರಮಿಗಳೆಂದು ಕರೆಯಲಾದ ಹತ್ತು ಉತ್ಕೃಷ್ಟ ಗುಣಗಳು.

ಮೇಲ್ನೋಟಕ್ಕೆ ಇವು ಸರಳವಾದ ಉತ್ತರಗಳಂತೆ ಕಂಡರೂ ಇಡೀ ಬೌದ್ಧಧಮ್ಮದ ಸಾರಸತ್ವವೇ ಈ ಉತ್ತರಗಳಲ್ಲಿ ಅಡಗಿದೆ. ಅವುಗಳನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

**1. ಆಹಾರ:** ಜೀವರಕ್ಷಣೆಗಾಗಿ ಎಲ್ಲ ಜೀವಿಗಳೂ ಆಹಾರವನ್ನು ಅವಲಂಬಿಸಿವೆ. ಅದು ಭೌತಿಕ ಆಹಾರ. ಬುದ್ಧ ನಾಲ್ಕು ರೀತಿಯ ಆಹಾರವನ್ನು ಕುರಿತು ಹೇಳುತ್ತಾರೆ. ಉಳಿದ ಮೂರು ಸಂಪರ್ಕ, ಮನೋಸಂಚೇತನ [ಗ್ರಹಿಕೆ] ಮತ್ತು ಪ್ರಜ್ಞೆ. ಸಂಪರ್ಕ ಇಂದ್ರಿಯಗಳಿಗೆ ಸಂಬಂಧಿಸಿದ್ದು [ಕಣ್ಣಿಗೆ ಆಕೃತಿ, ಕಿವಿಗೆ ಶಬ್ದ, ಮೂಗಿಗೆ ವಾಸನೆ ಇತ್ಯಾದಿ]. ಗ್ರಹಿಕೆ ಮತ್ತು ಪ್ರಜ್ಞೆ ಸಂಪರ್ಕದಿಂದ ನಾವು ಮಾಡುವ ಕರ್ಮಗಳನ್ನು ಪ್ರೇರೇಪಿಸುತ್ತವೆ.

**2. ನಾಮ, ರೂಪ:** ನಾಮ ಎಂದರೆ ಮನಸ್ಸು, ರೂಪ ಎಂದರೆ ಶರೀರ. ನಾಮ ಮತ್ತು ರೂಪಗಳು ಒಂದುಗೂಡಿದಾಗ ಒಂದು ಯಂತ್ರದಂತೆ ಜೀವಿಯು ಚಲಿಸುತ್ತದೆ. ಅದೊಂದು ಸೋಜಿಗ. ಈ ಶರೀರ ಮತ್ತು ಮನಸ್ಸು ಒಂದಕ್ಕೊಂದು ಪೂರಕವಾಗಿವೆ. ಮನಸ್ಸಿಗೆ ಭೌತಿಕ ಜಗತ್ತಿನಲ್ಲಿ ತನ್ನಷ್ಟಕ್ಕೆ ತಾನೇ ವ್ಯಕ್ತವಾಗುವ ಶಕ್ತಿಯಿಲ್ಲ. ತಿನ್ನುವುದು, ಕುಡಿಯುವುದು, ನುಡಿಯುವುದಾಗಲೀ ಅಥವಾ ಚಲಿಸುವುದಾಗಲೀ ತನಗೆ ಸಾಧ್ಯವಿಲ್ಲ. ಅದು ಆಗುವುದು ಶರೀರದ ಮೂಲಕವೆ. ಈ ದೇಹವು ಮನಸ್ಸಿನ ನಿಯಂತ್ರಣದಲ್ಲಿದ್ದು ಅದರ ಆಜ್ಞಾಪಾಲನೆ ಮಾಡುತ್ತದೆ. ಮನಸ್ಸಿಗೆ ತಿನ್ನಬೇಕು, ನುಡಿಯಬೇಕು, ಚಲಿಸಬೇಕು ಎಂಬ ಆಸೆಯಾದಾಗ ಅದನ್ನು ದೇಹ ಮಾಡುತ್ತದೆ. ದೇಹಕ್ಕೆ ಬಾಧೆಯಾದಾಗ ಅದಕ್ಕೆ ತಿಳಿಯುವುದಿಲ್ಲ. ಮನಸ್ಸು ಅದನ್ನು ಸಂವೇದಿಸಿ ಕಾರ್ಯರೂಪಕ್ಕೆ ತರಲು ನಿರ್ದೇಶನ ನೀಡುತ್ತದೆ. ದೇಹ ಪಾಲಿಸುತ್ತದೆ. ಹೀಗೆ ಒಂದು ಇನ್ನೊಂದನ್ನು ಅವಲಂಬಿಸಿಯೇ ಬದುಕು ಸಾಗುತ್ತದೆ. ಇದು ಕುರುಡನ ಮೇಲೆ ಹೆಳವನು ಕೂತ ಕತೆಯನ್ನು ನೆನಪಿಗೆ

ತರುತ್ತಿದೆಯಲ್ಲವೆ? ಒಬ್ಬ ಕುರುಡ ಇನ್ನೊಬ್ಬ ಹೆಳವ. ಇಬ್ಬರೂ ಮುಂದೆ ಸಾಗುವುದು ಹೇಗೆ? ಕುರುಡ ಹೆಳವನಿಗೆ ಹೇಳುತ್ತಾನೆ. ನನಗೆ ನೋಡಲು ಕಣ್ಣಿಲ್ಲ. ನಡೆಯಲು ಕಾಲುಗಳಿವೆ. ನಿನಗೆ ನೋಡಲು ಕಣ್ಣುಗಳಿವೆ, ನಡೆಯಲು ಕಾಲುಗಳಿಲ್ಲ. ನೀನು ನನ್ನ ಹೆಗಲ ಮೇಲೆ ಕುಳಿತುಕೊ, ನಾನು ನೀನು ಹೇಳಿದಂತೆ ಎಡಕ್ಕೆ, ಬಲಕ್ಕೆ, ಹಿಂದಕ್ಕೆ, ಮುಂದಕ್ಕೆ ನಿನ್ನನ್ನು ಹೊತ್ತು ನಡೆಯುತ್ತೇನೆ. ಇಬ್ಬರಿಗೂ ದಾರಿ ಸಾಗುತ್ತದೆ. ಇಲ್ಲಿ ಇಬ್ಬರಿಗೂ ಏಕಾಂಗಿಯಾಗಿ ಚಲಿಸುವ ಶಕ್ತಿ ಇಲ್ಲ. ಇಬ್ಬರೂ ಕೂಡಿದಾಗ ಆ ಶಕ್ತಿ ಬರುತ್ತದೆ. ಹಾಗೆಯೆ, ಈ ಮನಸ್ಸು ಮತ್ತು ಶರೀರ ಕೆಲಸ ಮಾಡುತ್ತವೆ.

**3. ಅನಿಚ್ಚ, ದುಃಖ ಮತ್ತು ಅನತ್ತ:** ಅಶಾಶ್ವತತೆ, ದುಃಖ, ಮತ್ತು ಅನಾತ್ಮ ಇವು ಬೌದ್ಧಧರ್ಮದ ಮೂರು ಮುಖ್ಯ ಲಕ್ಷಣಗಳು. ಇವು ಎಷ್ಟು ಅನನ್ಯವಾಗಿವೆ ಎಂದರೆ ಜಗತ್ತಿನ ಬೇರೆ ಯಾವ ಧರ್ಮವೂ ಈ ಮೂರು ವಿಷಯಗಳನ್ನು ಒಪ್ಪಿಕೊಳ್ಳಲಾರವು. ಯಾಕೆಂದರೆ ಇವುಗಳು ಅವರು ನಂಬಿದ ಧಾರ್ಮಿಕ ತತ್ತ್ವಗಳಿಗೆ ವಿರುದ್ಧವಾಗಿವೆ.

*ಅನಿಚ್ಚ* – ಎಂದರೆ ಅನಿಶ್ಚಿತತೆ ಅಥವಾ ಅಶಾಶ್ವತತೆ. ಇದೊಂದು ವೈಜ್ಞಾನಿಕ ತತ್ತ್ವ. ಬದಲಾಗುವುದು ಪ್ರಕೃತಿ ನಿಯಮ. ಹಾಗೆಯೆ ನಶಿಸುವುದು ಕೂಡ. ಯಾವುದು ಉತ್ಪತ್ತಿಯಾಗುತ್ತದೋ ಅದು ಕ್ಷಯವಾಗಲೇಬೇಕು. ಹುಟ್ಟಿದ ಎಲ್ಲ ಜೀವರಾಶಿಗಳೂ ಬದಲಾವಣೆ ಹೊಂದುತ್ತವೆ. ಅದೇ ಬೆಳವಣಿಗೆ. ಏರುಮುಖವಾಗಿ ಬೆಳೆದು ಒಂದು ಹಂತದಿಂದ ಇಳಿಮುಖವಾಗುತ್ತಾ ಕೊನೆಗೆ ನಶಿಸುತ್ತವೆ. ಇತರ ಧರ್ಮಗಳು ದೇವರ ಅಸ್ತಿತ್ವವನ್ನೆ ಆಧರಿಸಿರುವುದರಿಂದ ದೇವರು ಶಾಶ್ವತ ಎಂದು ಒಪ್ಪಿಕೊಂಡುಬಿಟ್ಟಿವೆ. ಅವನು ಬದಲಾಗುವುದೇ ಇಲ್ಲ ಆದ್ದರಿಂದ ಕ್ಷಯಿಸುವ ಮಾತೇ ಇಲ್ಲ. ಹೀಗೆ ಒಂದೊಂದು ಧರ್ಮದಲ್ಲಿಯೂ ಒಂದೊಂದು ಕಲ್ಪಿತ ಕತೆಗಳಿವೆ. ಆದರೆ ಬುದ್ಧ ನಾನು ಪ್ರತ್ಯಕ್ಷ ಅನುಭವದ ಮಾತುಗಳನ್ನು ಹೇಳುತ್ತೇನೆ ಎನ್ನುತ್ತಾರೆ. ಪ್ರಕೃತಿಯನ್ನು, ಸಚರಾಚರ ಜೀವಲೋಕವನ್ನು ಸೂಕ್ಷ್ಮವಾಗಿ ಗಮನಿಸುವ ಮೂಲಕ ಅಂತಹ ಸತ್ಯಗಳು ಅವರಿಗೆ ಹೊಳೆದಿವೆ.

*ದುಃಖ* – ಈ ಪದವೇ ನೇತ್ಯಾತ್ಮಕ ಅರ್ಥವನ್ನು ವ್ಯಂಜಿಸುತ್ತದೆ ಮತ್ತು ಅನಾಕರ್ಷಕವಾಗಿದೆ. ಈ ಪದ ಕಿವಿಗೆ ಬಿದ್ದ ಕೂಡಲೆ ಸಂಪ್ರದಾಯಸ್ಥರು ದೇವರನ್ನು ನೆನಪು ಮಾಡಿಕೊಂಡು; ಬೇಡ ಬೇಡ ಎಂದು ಕೆನ್ನೆ ತಟ್ಟಿಕೊಳ್ಳುತ್ತಾರೆ. ಇದೇನು ಧರ್ಮವನ್ನು ಬೆಳೆಸಲು ಸಹಕಾರಿಯೆ? ಎಂದು ಮೂಗು ಮುರಿಯುತ್ತಾರೆ. ಆದರೆ ವಾಸ್ತವದಲ್ಲಿ ಯಾರೇ ಒಬ್ಬ ವ್ಯಕ್ತಿ ಬಡವ, ಶ್ರೀಮಂತ ಎಂಬ ವ್ಯತ್ಯಾಸವಿಲ್ಲದೆ ಅಧಿಕಾರ, ಅಂತಸ್ತುಗಳ ಪರಿವೆ ಇಲ್ಲದೆ ತನ್ನ ಅಂತರಂಗವನ್ನು ಕೆದಕಿ ಒಳಗನ್ನು ತಿಳಿಯಲಿಚ್ಛಿಸಿದರೆ ಅವನಿಗೆ ಕಾಣುವುದು ಅತೃಪ್ತಿಯೆ. ಬಯಕೆಯನ್ನು ಈಡೇರಿಸುವುದು ತೃಪ್ತಿ. ಬಯಕೆಯನ್ನು ಹತ್ತಿಕ್ಕುವುದೇ ಅತೃಪ್ತಿ. ಅತೃಪ್ತಿ ಒಂದು ಯಾತನೆ. ಅತೃಪ್ತಿ ದುಃಖದ ಆರಂಭಿಕ ಘಟ್ಟ.

ಅದು ಯಾತನೆಯಾಗಿ ಮುಂದುವರೆದು ದುಃಖವಾಗುತ್ತದೆ. ಈ ಕಾರಣದಿಂದಲೇ ಬೌದ್ಧಧರ್ಮ ನಿರಾಶಾವಾದವನ್ನು ಹೇಳುತ್ತದೆ ಎಂದು ಅಪಪ್ರಚಾರ ಮಾಡುವವರೂ ಇದ್ದಾರೆ. ಅದು ತಪ್ಪು ತಿಳಿವಳಿಕೆ. ಕತ್ತಲು ಒಂದು ಸ್ಥಾಯಿಯಾದ ಸ್ಥಿತಿ. ಸೂರ್ಯಕಿರಣದ ಪ್ರವೇಶದಿಂದ ಅದು ದೂರಾಗುತ್ತದೆ. ಹಾಗೆಯೆ ದುಃಖವನ್ನು ಕುರಿತು ಚಿಂತಿಸುವುದೆಂದರೆ ಅದು ಬೆಳಕನ್ನು ಹುಡುಕುವುದು ಮತ್ತು ಹರಡುವುದೇ ಆಗಿದೆ.

*ಅನತ್ತ* – ಅಂದರೆ ಅನಾತ್ಮ. ಯಾವುದೇ ಒಂದು ವಸ್ತುವು ತಂತಾನೆ ಸ್ವಯಂ ಅಸ್ತಿತ್ವವನ್ನು ಪಡೆದುಕೊಳ್ಳುವುದಿಲ್ಲ, ಎರಡು ಅಥವಾ ಹೆಚ್ಚು ವಸ್ತುಗಳ ಸಂಯೋಜನೆಯಿಂದಲೇ ಉಂಟಾಗುತ್ತವೆ.  ಆದ್ದರಿಂದ ಆತ್ಮ ಎನ್ನುವುದಿಲ್ಲ. ಇದು ಆತ್ಮದ ನಿರಾಕರಣೆಗೆ ಬುದ್ಧ ಕೊಡುವ ಸ್ಥೂಲವಾದ ಕಾರಣ. ಇದು ಭೌತಶಾಸ್ತ್ರದ ನಿಯಮ ಕೂಡ. ಮಿಕ್ಕೆಲ್ಲ ಧರ್ಮಗಳ ಬೆನ್ನೆಲುಬು ಆತ್ಮವೇ ಆಗಿದೆ. ಆತ್ಮಕ್ಕೆ ಸಾವಿಲ್ಲ, ಅದು ಶಾಶ್ವತವಾದದ್ದು. ಪರಮಾತ್ಮನೊಬ್ಬನಿದ್ದಾನೆ ಎಂದು ಒಪ್ಪಿಕೊಂಡಮೇಲೆ ಅವನ ಉಸ್ತುವಾರಿಯಲ್ಲಿ ಶಾಶ್ವತವಾದ ಆತ್ಮಗಳು ಇರಲೇಬೇಕಲ್ಲ? ಸೆಮೆಟಿಕ್ ಧರ್ಮಗಳಲ್ಲಿ ಈ ಆತ್ಮಗಳು ಮರಣಾನಂತರ ಸ್ವರ್ಗಕ್ಕೋ ನರಕಕ್ಕೋ ಹೋಗುತ್ತವೆ. ಹಿಂದೂ ಧರ್ಮದಲ್ಲಿ ಸುತ್ತಿ ಬಳಸಿ ಬೇರೆ ಬೇರೆ ಜನ್ಮಗಳ ತಂಗುದಾಣಗಳಲ್ಲಿ ಆಯಸ್ಸು ಕಳೆದು ಕೊನೆಯಲ್ಲಿ ಸ್ವರ್ಗ ಅಥವಾ ನರಕ ಸೇರಿಕೊಳ್ಳುತ್ತವೆ. ಈ ಬುದ್ಧನಿಗೆ ಎಷ್ಟು ಧೈರ್ಯ ನೋಡಿ. ದೇವರು ಇಲ್ಲ, ಆತ್ಮವೂ ಇಲ್ಲ, ಶಾಶ್ವತ ಅನ್ನುವುದು ಇಲ್ಲವೇ ಇಲ್ಲ; ಸಾಲದೆಂಬಂತೆ ದುಃಖವಿದೆ ಎಂಬ ಥಿಯರಿ ಇಟ್ಟುಕೊಂಡು ನೈತಿಕತೆಯ ತಳಹದಿಯ ಮೇಲೆ ಮನುಷ್ಯ ಕೇಂದ್ರಿತವಾದ ಒಂದು ಧರ್ಮವನ್ನೆ ಕಟ್ಟಿಬಿಟ್ಟಿದ್ದಾನೆ!!

**4. ನಾಲ್ಕು ಆರ್ಯಸತ್ಯಗಳು:** 1. ದುಃಖ 2. ದುಃಖ ಸಮುದಯ (ಕಾರಣ) 3. ದುಃಖ ನಿರೋಧ 4. ದುಃಖ ನಿರೋಧ ಮಾರ್ಗ ಅಥವಾ ಅಷ್ಟಾಂಗ ಮಾರ್ಗಗಳು.

ಮೊದಲು ದುಃಖದ ಇರುವನ್ನು ಅರಿಯಬೇಕು. ಹುಟ್ಟು ದುಃಖ, ಮುಪ್ಪು ದುಃಖ, ರೋಗವು ದುಃಖ, ಮರಣವು ದುಃಖ. ಯಾತನೆ, ನೋವು, ಸಂಕಟ, ಖಿನ್ನತೆ ಇವೆಲ್ಲವೂ ದುಃಖವೆ. ಅಪ್ರಿಯರೊಡನೆ ಇರುವುದು ದುಃಖ, ಪ್ರಿಯರಾದವರನ್ನು ಅಗಲುವುದು ದುಃಖ, ಬಯಸಿದ್ದು ಸಿಗದಿದ್ದಾಗ ದುಃಖ. ಬೇಡವಾದದ್ದು ಬಂದರೆ ದುಃಖ. ನೆರೆ ಕೆನ್ನೆಗೆ, ತೆರೆ ಗಲ್ಲಕೆ, ಶರೀರ ಗೂಡು ಹೋಗುವುದು; ಹಲ್ಲು ಹೋಗಿ, ಬೆನ್ನು ಬಾಗಿ ಅನ್ಯರಿಗೆ ಹೊರೆಯಾಗುವುದು; ಕಾಲಮೇಲೆ ಕೈಯನೂರಿ ಕೋಲು ಹಿಡಿಯುವುದು ಮುಪ್ಪು. ಅದು ದುಃಖವಲ್ಲದೆ ಇನ್ನೇನು? ಈ ದೇಹ ರೋಗಗಳಿಗೆ ತುತ್ತಾಗುತ್ತದೆ, ಅದು ಯಾರಿಗೂ ಇಷ್ಟವಾಗುವುದಿಲ್ಲ. ಇಷ್ಟವಾಗದಿರುವುದನ್ನು ಪಡೆದುಕೊಳ್ಳುವುದು ದುಃಖವೆ. ನೋವು, ಅದು ಮಾನಸಿಕವಾಗಿರಬಹುದು ಅಥವಾ ದೈಹಿಕವಾಗಿರಬಹುದು. ನಾನಾ ತೆರನಾದ ಸಂಕಟಗಳು ಎದುರಾಗುತ್ತವೆ, ಅವೆಲ್ಲವೂ ದುಃಖ.

ದುಃಖಕ್ಕೆ ಕಾರಣವಿದೆ ಎಂಬುದು ಎರಡನೆಯ ಆರ್ಯಸತ್ಯ. ಕನ್ನಡದಲ್ಲಿ 'ಆಸೆಯೇ ದುಃಖಕ್ಕೆ ಕಾರಣ' ಎಂಬ ಪ್ರಸಿದ್ಧ ಸರಳ ಹೇಳಿಕೆಯೊಂದಿದೆ. ಅದು ಸಮರ್ಪಕವಾದುದಲ್ಲ. ಬದುಕಲು ಕನಿಷ್ಠ ಆಸೆಗಳು ಇರಲೇಬೇಕಾಗುತ್ತದೆ. ಪಾಲಿಯ ತನ್ಹಾ ಎಂಬ ಪದಕ್ಕೆ ಆಸೆ ಸಂವಾದಿಯಲ್ಲ. ಇಂಗ್ಲಿಷಿನ craving ಪದ ಸ್ವಲ್ಪ ಹತ್ತಿರದ ಅರ್ಥ ಕೊಡಬಹುದೇನೊ. ದುರಾಶೆಯೆ (ಅಥವಾ ತೃಷ್ಣೆ) ದುಃಖಕ್ಕೆ ಕಾರಣ ಎಂದಿಟ್ಟುಕೊಳ್ಳೋಣ. ಮೂರು ರೀತಿಯ ತೃಷ್ಣೆಗಳಿವೆ. 1. ಕಾಮ ತೃಷ್ಣೆ 2. ಭವ ತೃಷ್ಣೆ 3. ವಿಭವ ತೃಷ್ಣೆ. ಕಾಮ ತೃಷ್ಣೆ ಎಂದರೆ ಬಯಕೆಗಳಿಗೆ ಜೋತುಬೀಳುವುದು. ಇನ್ನೂ ಬೇಕು ಬೇಕು ಎಂಬ ಹಳಹಳಿಕೆ. ಅದರಿಂದ ಮೋಹ ಹುಟ್ಟುತ್ತದೆ, ಲೋಭ ಹೆಚ್ಚುತ್ತದೆ. ಅದು ಮನುಷ್ಯನ ದುರ್ಗತಿಗೆ ಕಾರಣ. ಭವ ತೃಷ್ಣೆ ಎಂದರೆ ಇಹದ ಜೀವನದಲ್ಲಿ ವಿಭಿನ್ನ ಸ್ಥಿತಿಗಳಿಗೆ ಆಸೆಪಡುವುದು. ಶ್ರೀಮಂತನಾಗಬೇಕು, ದೊಡ್ಡ ಅಧಿಕಾರಿಯಾಗಬೇಕು, ರಾಜಕಾರಣಿಯಾಗಬೇಕು, ಯೋಗಿಯಾಗಬೇಕು, ಕೀರ್ತಿ ಪಡೆಯಬೇಕು ಮುಂತಾದ ಭವದ ಬಯಕೆಗಳು. ವಿಭವ ತೃಷ್ಣೆ ಎಂದರೆ ಜೀವನಕ್ಕೆ ವಿಮುಖನಾಗುವುದು, ಜೀವನದ ಬಗ್ಗೆ ಜಿಗುಪ್ಸೆಗೊಳ್ಳುವುದು, ಹತಾಶರಾಗುವುದು, ಯಾವ ಪ್ರಯತ್ನವನ್ನೂ ಮಾಡದೆ ಹಿಂದೆ ಸರಿಯುವುದು.

ಮೂರನೆಯ ಆರ್ಯಸತ್ಯ ದುಃಖ ನಿರೋಧ. ದುಃಖಕ್ಕೆ ಕಾರಣವನ್ನು ತಿಳಿದುಕೊಂಡಮೇಲೆ ದುಃಖ ನಿರೋಧ ಸಾಧ್ಯವಿದೆ. ಅಜ್ಞಾನ ಮತ್ತು ದುರಾಶೆಗಳನ್ನು ನಿವಾರಿಸಿಕೊಂಡರೆ ದುಃಖ ತಾನಾಗಿಯೆ ದೂರವಾಗುತ್ತದೆ. ತೃಷ್ಣೆಯಿಂದ ಲೋಭ, ಮೋಹ, ದ್ವೇಷಗಳು ಹುಟ್ಟುತ್ತವೆ. ಅವುಗಳ ನಿವಾರಣೆಯೆ ದುಃಖ ನಿರೋಧ.

ನಾಲ್ಕನೆಯ ಆರ್ಯಸತ್ಯ ದುಃಖ ನಿರೋಧ ಮಾರ್ಗ ಅಥವಾ ಅಷ್ಟಾಂಗ ಮಾರ್ಗ. ಇದನ್ನು ಮಧ್ಯಮಮಾರ್ಗವೆಂತಲೂ ಕರೆಯಲಾಗುತ್ತದೆ. ವಿವರ ಎಂಟನೆಯ ಪ್ರಶ್ನೆಯಲ್ಲಿದೆ.

**5. ಪಂಚಸ್ಕಂದಗಳು:** ಈ ಜೀವವು ಭೌತ ಮತ್ತು ಅಭೌತ ವಸ್ತುಗಳಿಂದ ಕೂಡಿದೆ. ಅವು ಶರೀರ ಮತ್ತು ಮನಸ್ಸು. ರೂಪ ಸ್ಕಂದವು ಶರೀರವನ್ನು ಉಳಿದ ನಾಲ್ಕು ಸ್ಕಂದಗಳು ನಾಮವನ್ನು ಅಂದರೆ ಮನಸ್ಸನ್ನು ಕುರಿತು ಚರ್ಚಿಸುತ್ತವೆ. ಭೌತಿಕವಾದ ಶರೀರವು ನಾಲ್ಕು ಮೂಲಧಾತುಗಳಾದ ನೆಲ, ಜಲ, ಬೆಂಕಿ ಮತ್ತು ಗಾಳಿಯಿಂದ ಕೂಡಿದೆ. ಇವುಗಳೂ ಸಹ ಏಕಾಂಗಿಯಾಗಿ ಎಲ್ಲೂ ಇರಲಾರವು. ಇವು ಒಂದಕ್ಕೊಂದು ಅವಲಂಬಿತವಾಗಿವೆ. ದೃಷ್ಟಿಲಭ್ಯವಲ್ಲದ ನಾಮವನ್ನು ಪ್ರತಿನಿಧಿಸುವ ಗುಂಪುಗಳು ನಾಲ್ಕು; ವೇದನೆ, ಗ್ರಹಿಕೆ, ಸಂಖಾರ (ಮನೋನಿರ್ಮಾಣಗಳು) ಮತ್ತು ತಿಳಿವು.

**6. ಆರು ಇಂದ್ರಿಯಗಳು ಮತ್ತು ಅವುಗಳ ಆಯತನಗಳು:** ಬೌದ್ಧರು ಆರು ಇಂದ್ರಿಯಗಳನ್ನು ಗುರುತಿಸುತ್ತಾರೆ. ಕಣ್ಣು, ಕಿವಿ, ಮೂಗು, ನಾಲಗೆ, ಶರೀರ ಮತ್ತು ಮನಸ್ಸು. ಬಹಿರಾಯತನಗಳಾದ ಇಂದ್ರಿಯಗೋಚರ ಲಕ್ಷಣಗಳು ಆರು. ಅವುಗಳು;

ನೋಟ, ಶಬ್ದ, ವಾಸನೆ, ರುಚಿ, ಸ್ಪರ್ಶ ಮತ್ತು ಆಲೋಚನೆಗಳು.

ಇಲ್ಲಿ ವ್ಯಕ್ತಿಯು ಕಣ್ಣನ್ನು ಅರಿಯುತ್ತಾನೆ. ಕಣ್ಣಿಗೆ ಕಾಣುವ ನೋಟವನ್ನು ಅರಿಯುತ್ತಾನೆ. ಇವೆರಡರ ಸಂಪರ್ಕದಿಂದ ಉಂಟಾಗುವ ಪರಿಣಾಮವನ್ನು ಅರಿಯುತ್ತಾನೆ. ಅದರ ಉತ್ಪತ್ತಿ ಮತ್ತು ನಾಶವನ್ನು ಅರಿಯುತ್ತಾನೆ. ಹಾಗೆಯೆ ಎಲ್ಲ ಇಂದ್ರಿಯಗಳ ಮತ್ತು ಅವುಗಳ ಬಹಿರಾಯತನಗಳ ಸಂಪರ್ಕದಿಂದ ಉಂಟಾಗುವ ಪರಿಣಾಮಗಳನ್ನು ಅರಿಯುತ್ತಾನೆ. ಉದಾಹರಣೆಗೆ ವೇದನೆಯು ಆರು ಇಂದ್ರಿಯಮೂಲಗಳಿಂದ ಉಂಟಾಗುತ್ತದೆ. ದೃಷ್ಟಿಯು ಸಂಪರ್ಕದಿಂದುಂಟಾಗುವ ವೇದನೆ, ಶಬ್ದದ ಸಂಪರ್ಕದಿಂದಾಗುವ ವೇದನೆ, ವಾಸನೆಯ ಸಂಪರ್ಕದಿಂದ ಉಂಟಾಗುವ ವೇದನೆ, ಸ್ಪರ್ಶದ ಸಂಪರ್ಕದಿಂದಾಗುವ ವೇದನೆ ಮತ್ತು ಮನಸ್ಸಿನ ಸಂಪರ್ಕದಿಂದ ಉಂಟಾಗುವ ವೇದನೆ. ಇವುಗಳಿಂದ ಉತ್ಪತ್ತಿಯಾಗುವ ಪರಿಣಾಮಗಳನ್ನು ಅರಿಯುತ್ತಾನೆ.

**7. ಏಳು ಸಂಬೋಧಿ ಅಂಗಗಳು:** ಭಿಕ್ಕುವಿಗೆ ಬೋಧಿ ಜ್ಞಾನ ಪ್ರಾಪ್ತಿಯಾಗಬೇಕಾದರೆ ಈ ಏಳು ಬೋಧಿ ಅಂಗಗಳಲ್ಲಿ ಧ್ಯಾನಸ್ಥನಾಗಿ ತಂಗಬೇಕು. ಅವುಗಳು ಹೀಗಿವೆ. ಮನೋಮಗ್ನತೆ (ಸತಿ), ಸತ್ಯಾನ್ವೇಷಣೆ, ಪ್ರಯತ್ನ, ಪರಮಾನಂದ, ಪ್ರಸನ್ನತೆ, ಸಮಾಧಿ, ಸಮಚಿತ್ತತೆ

**8. ಅಷ್ಟಾಂಗಮಾರ್ಗಗಳು:** ಅವು ಹೀಗಿವೆ. 1. ಸಮ್ಮಾ ದಿಟ್ಟಿ ಅಂದರೆ ಸರಿಯಾದ ದೃಷ್ಟಿ 2. ಸರಿಯಾದ ಸಂಕಲ್ಪ 3. ಸರಿಯಾದ ಮಾತು 4. ಸರಿಯಾದ ಕರ್ಮ 5. ಸರಿಯಾದ ಉದ್ಯೋಗ 6. ಸರಿಯಾದ ಪ್ರಯತ್ನ 7. ಸರಿಯಾದ ಎಚ್ಚರ 8. ಸಮ್ಮಾ ಸಮಾಧಿ.

**9. ಒಂಭತ್ತು ಲೋಕಗಳು:** ರೂಪ ಮತ್ತು ಅರೂಪ ಲೋಕಗಳನ್ನು ಬೌದ್ಧರು ಗುರುತಿಸುತ್ತಾರೆ. ರೂಪ ಮತ್ತು ಗ್ರಹಿಕೆ ಇರುವ, ಇಲ್ಲದಿರುವ ಅರೂಪ ಮತ್ತು ಗ್ರಹಿಕೆ ಇರುವ, ಇಲ್ಲದಿರುವ ಜೀವಿಗಳಿಗೆ ಸಂಬಂಧಿಸಿದ ಒಂಭತ್ತು ಲೋಕಗಳನ್ನು ಬುದ್ಧರು ವಿವರಿಸಿದ್ದಾರೆ.

**10. ದಶಪಾರಮಿಗಳು:** ಪಾರಮಿ ಅಥವಾ ಪಾರಮಿತ ಎಂದರೆ ಶ್ರೇಷ್ಠವಾದದ್ದು. ಪಾರಮಿ ಎಂದರೆ ಯಾವುದೇ ಒಂದು ಗುಣದ ಪರಮೋಚ್ಛ ಸ್ಥಿತಿ. ಅದಕ್ಕೆ ದುಃಖದಿಂದ ಪಾರುಮಾಡುವ ಶಕ್ತಿಯಿದೆ. ಚರಿಯ ಪಿಟಕವು ಹತ್ತು ಪಾರಮಿಗಳನ್ನು ಕುರಿತು ಹೇಳುತ್ತದೆ. ಅವುಗಳೆಂದರೆ ದಾನ, ಶೀಲ, ನಿಷ್ಕಾಮ, ಪ್ರಜ್ಞೆ, ಪ್ರಯತ್ನ, ತಾಳ್ಮೆ, ಸತ್ಯ, ದೃಢತೆ, ಮೈತ್ರಿ ಮತ್ತು ಸಮಚಿತ್ತ. ಬೋಧಿಸತ್ವ ಈ ಹತ್ತೂ ಪಾರಮಿತಗಳಲ್ಲಿ ಪರಿಪೂರ್ಣನಾಗಿರಬೇಕು. ಆಗ ಮಾತ್ರ ಬುದ್ಧತ್ವ ಪ್ರಾಪ್ತಿಯಾಗುತ್ತದೆ. ಪಾರಮಿಗಳಲ್ಲಿ ಮೂರು ಹಂತಗಳಿವೆ. ಪ್ರಾಥಮಿಕ, ಮಾಧ್ಯಮಿಕ ಮತ್ತು ಪರಮಾರ್ಥ ಪಾರಮಿ. ಉದಾಹರಣೆಗೆ ದಾನದಲ್ಲಿ ಬಾಹ್ಯ ವಸ್ತುಗಳ ದಾನವು ಶ್ರೇಷ್ಠಾದದ್ದೆ. ತನ್ನ ಅಂಗಾಂಗಗಳನ್ನು ದಾನ ಮಾಡುವುದು

ಇನ್ನೂ ಶ್ರೇಷ್ಠ. ಪರರಿಗಾಗಿ ತನ್ನ ಜೀವವನ್ನೇ ದಾನ ಮಾಡುವುದು ಮತ್ತೂ ಶ್ರೇಷ್ಠವಾದದ್ದು, ಹೀಗೆ ಈ ಹತ್ತು ಪಾರಮಿಗಳನ್ನು ಮೂರು ಬಾರಿ ಆಚರಿಸಿದರೆ ಬುದ್ಧತ್ವ ಪ್ರಾಪ್ತಿಯಾಗುತ್ತದೆ.

ತ್ರಿಪಿಟಕಗಳೆಂದರೆ ಮೂರು ಬುಟ್ಟಿಗಳು. ವಿನಯ, ಸುತ್ತ ಮತ್ತು ಅಭಿದಮ್ಮ. ಜನಸಾಮಾನ್ಯರಿಗಾಗಿ ಬೋಧಿಸಲ್ಪಟ್ಟಿರುವ ಸುತ್ತ ಪಿಟಕದ ಬಹುತೇಕ ಅಂಶಗಳು ಈ ಹತ್ತು ಪ್ರಶ್ನೆಗಳಲ್ಲಿ ಅಡಕವಾಗಿರುವುದು ಸೋಜಿಗವೆನಿಸುತ್ತದೆ.

# ರೈತ ಚಳವಳಿ ಮತ್ತು ನಾನು

**ಸುನಂದಾ ಜಯರಾಮ್**

24–11–1982 ಗೆಜ್ಜಲಗೆರೆಯಲ್ಲಿ ರೈತರ ಮೇಲೆ ಗೋಲಿಬಾರ್ ನಡೆದಿತ್ತು. ಈ ಘಟನೆಯಲ್ಲಿ ಇಬ್ಬರು ರೈತರು ಸಾವನ್ನಪ್ಪಿದ್ದರು. ಸಕ್ಕರೆ ಕಾರ್ಖಾನೆಯು ಬಾಕಿ ಹಣ ಕೊಡದಿರುವ ಬಗ್ಗೆ ರೈತರು ರಸ್ತೆ ತಡೆ ಮಾಡಿ ಪ್ರತಿಭಟಿಸುತ್ತಿದ್ದ ವೇಳೆ ಈ ಘಟನೆ ನಡೆದಿತ್ತು. ನಂತರ ಗೋಲಿಬಾರ್ ಮಾಡಿಸಿದ ಸರ್ಕಾರದ ನಿಲುವನ್ನು ಖಂಡಿಸಲು ರೈತರನ್ನು ಸಂಘಟಿಸಲು ನಮ್ಮ ಗ್ರಾಮಕ್ಕೆ ರೈತ ಚಳವಳಿಯ ಮುಂಚೂಣಿ ನಾಯಕರುಗಳಾದ ಪ್ರೊ.ನಂಜುಂಡಸ್ವಾಮಿ, ಸುಂದರೇಶ್, ಹೆಚ್.ಶ್ರೀನಿವಾಸ್ ಮುಂತಾದವರುಗಳು ಭಾಷಣ ಮಾಡುತ್ತಿದ್ದು, ಆ ದಿನ ಅವರುಗಳ ಆಡಿದ ಮಾತುಗಳು ನನ್ನ ಮನಸ್ಸಿನ ಮೇಲೆ ಬಹಳ ಪರಿಣಾಮ ಉಂಟುಮಾಡಿದವು. ಈ ಸಂದರ್ಭವೇ ನಾನು ಮುಂದೆ ರೈತ ಚಳವಳಿಯನ್ನು ಪ್ರವೇಶಿಸಲು ನಾಂದಿಯಾಯಿತು.

ಮೂಲತ: ನನ್ನ ತವರು, ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಅರಕೆರೆ. ನನ್ನದು ಗ್ರಾಮದ ರೈತಕುಟುಂಬ. ಮೂವತ್ತು ಜನರಿದ್ದ ಅವಿಭಜಿತ ಕುಟುಂಬ ನಮ್ಮದು. ಸಂಪೂರ್ಣವಾದ ಕೃಷಿ ಬದುಕು. ನಮ್ಮ ಕುಟುಂಬದ ಜನರ ಒಗ್ಗಟ್ಟು, ಬೌದ್ಧಿಕ ಜ್ಞಾನ, ಕೃಷಿಕಾರ್ಮಿಕರೊಂದಿಗೆ ಹಾಗೂ ಜನಸಾಮಾನ್ಯರೊಟ್ಟಿಗೆ ಬೆರೆಯುತ್ತಿದ್ದ ರೀತಿ ನನ್ನ ಮನಸ್ಸಿನ ಮೇಲೆ ಅಚ್ಚೊತ್ತಿದಂತಿದೆ. ನನ್ನ ತಂದೆಯ ತಾಯಿ ದೇವಮ್ಮ 100 ವರ್ಷ ಶತಾಯುಷಿಯಾಗಿ ಬದುಕಿದವರು. ಕುಟುಂಬದ ಹಿರಿಯ ಸದಸ್ಯಳಾಗಿ ಅವರ ನಡೆ,ನುಡಿ, ಜಾನಪದ ಅರಿವು, ಕುಟುಂಬದ ಸದಸ್ಯರೆಲ್ಲರ ಮೇಲೆ ಅವರು ತೋರುತ್ತಿದ್ದ ಸಮಾನ ಪ್ರೀತಿ, ಕೃಷಿಯ ಬಗ್ಗೆ ಅವರಿಗಿದ್ದ ಜ್ಞಾನ, ಅದನ್ನು ಕಾಲಕಾಲಕ್ಕೆ ತಕ್ಕಂತೆ ಮಕ್ಕಳಿಗೆ ವರ್ಗಾಯಿಸುತ್ತಿದ್ದ ರೀತಿ, ಎಲ್ಲವೂ ನನ್ನ ಮೇಲೆ ಬಹಳ ಪ್ರಭಾವ ಬೀರಿತ್ತು. ನನ್ನ ಮನೆಯಲ್ಲಿ ಕೃಷಿಯ ಜೊತೆಗೆ ಹೈನುಗಾರಿಕೆಯೂ ಇತ್ತು. ಹನ್ನೆರಡು ಕಂಬದ ತೊಟ್ಟಿ ಮನೆಯಲ್ಲಿ ಅರ್ಧ ಭಾಗ ಜನರ ವಾಸಕ್ಕಾದರೆ ಇನ್ನರ್ಧ ಭಾಗ ಹಸು, ಎಮ್ಮೆ, ಕುರಿ, ಕೋಳಿ, ಎತ್ತುಗಳಿಗೆ ಮೀಸಲಾಗಿತ್ತು. ಮನೆಯ ಮಧ್ಯದಲ್ಲಿ ನೀರಿನ ಬಾವಿಯಿತ್ತು. ನಾನು ಜನಿಸಿದ್ದು ಜೂನ್ 30, 1961 ರಲ್ಲಿ. ನನ್ನ ತಾಯಿಯವರದು ಎಲ್ಲರನ್ನೂ ಸಮಾನವಾಗಿ ಪ್ರೀತಿಸುವ ಗುಣ. ನನ್ನ ತಂದೆಯವರು ಸತ್ಯ, ನ್ಯಾಯ,

ಶಿಸ್ತು, ಸಮಯಪಾಲನೆ, ಸರಳತೆಗೆ ಹೆಸರುವಾಸಿ. ಸಮಾಜವಾದಿ ಚಿಂತನೆಯನ್ನು ಮೈಗೂಡಿಸಿಕೊಂಡಿದ್ದ ಅವರು ಸುತ್ತಮುತ್ತ ಹಲವಾರು ಹಳ್ಳಿಗಳಲ್ಲಿ ಸಾಮಾಜಿಕ ನ್ಯಾಯದ ಜವಾಬ್ದಾರಿ ವಹಿಸಿಕೊಂಡಿದ್ದರು.

ಮುಖ್ಯವಾಗಿ ಕುಟುಂಬದಲ್ಲಿ ಕೃಷಿಸಂಬಂಧೀ ಚಟುವಟಿಕೆಗಳಲ್ಲಿ ನಮ್ಮನ್ನೆಲ್ಲ ಭಾಗಿಯಾಗಿಸುತ್ತಿದ್ದರು. ಹೀಗಾಗಿ ಅವುಗಳ ಅನುಭವ, ಅರಿವು ನನಗಾಯಿತು. ಕೃಷಿಗೆ ಮುಖ್ಯವಾಗಿ ಬೇಕಾಗಿರುವ ಬಿತ್ತನೆ ಬೀಜದ ಶೇಖರಣೆ, ಸಂಸ್ಕರಣೆ, ಮರುಬಳಕೆ, ರೈತರಿಂದ ರೈತರಿಗೆ ವಿನಿಮಯ, ಬಿತ್ತನೆ, ನಾಟಿ, ಕೊಯ್ಲು, ಒಕ್ಕಣೆ ಇದೆಲ್ಲದರ ಜೊತೆಗೆ ಹೈನುಗಾರಿಕೆಯ ಪರಿಚಯವೂ ನನಗಾಗಿತ್ತು. ಇದಲ್ಲದೆ ಗುಡಿಕೈಗಾರಿಕೆಗಳಾದ ಎಣ್ಣೆಗಾಣ, ಕಬ್ಬಿಣದ ಕೆಲಸ, ಮರಗೆಲಸ, ಕೈಮಗ್ಗ, ಕಡಲೆಪುರಿಯ ಭಟ್ಟಿ ಮುಂತಾದುವುಗಳ ಕೆಲಸವನ್ನು ಬಹಳ ಹತ್ತಿರದಿಂದ ನೋಡಿ ತಿಳಿದೆ. ಆದರೆ ಇದರ ಜೊತೆಗೇ, ಅತೀ ಬಡವರು ಪಿತೃಪಕ್ಷದಂತಹ ಹಬ್ಬಗಳಲ್ಲಿ ಬುಟ್ಟಿ ಹೊತ್ತು ಊಟಕ್ಕೆ–ತಿಂಡಿಗೆ ಉಳ್ಳವರ ಮನೆಗೆ ಬಂದು ಬೇಡುತ್ತಿದ್ದುದು ನನಗೆ ಯಾವಾಗಲೂ ಇಷ್ಟವಾಗುತ್ತಿರಲಿಲ್ಲ. ಮುಂದೆ ನನ್ನ ಮದುವೆಯು, ಮದ್ದೂರು ತಾಲ್ಲೂಕಿನ ಗೆಜ್ಜಲಗೆರೆ ಗ್ರಾಮದ ಜಯರಾಂ ಅವರೊಂದಿಗೆ ಆಯಿತು. ಅವರು ಮೈಸೂರಿನ ಯುವರಾಜ ಕಾಲೇಜಿನಿಂದ ಬಿಎಸ್.ಸಿ. ಪದವಿ ಪಡೆದಿದ್ದರು. ಅವರು ವಿದ್ಯಾರ್ಥಿ ದೆಸೆಯಿಂದಲೇ ಸಮಾಜಮುಖಿ ಚಿಂತನೆ, ಆದರ್ಶ, ಸರಳತೆಯನ್ನು ಮೈಗೂಡಿಸಿಕೊಂಡಿದ್ದರು. ಪುಸ್ತಕಗಳನ್ನು ಓದುವ ಅಭ್ಯಾಸವಿದ್ದ ಅವರಿಂದ ನಾನು ಸಾಕಷ್ಟು ಪ್ರಭಾವಿತಳಾದೆ.

1985–86 ರಲ್ಲಿ ಕುಟುಂಬದವರ ಹಾಗೂ ಗೆಜ್ಜಲಗೆರೆಯ ಗ್ರಾಮಸ್ಥರ ಸಹಕಾರದಿಂದ ರೈತ ಸಂಘದ ಚಟುವಟಿಕೆಗಳಲ್ಲಿ ನಾನು ಭಾಗವಹಿಸಲಾರಂಭಿಸಿದೆ. ಗ್ರಾಮೀಣ ಪ್ರದೇಶದಲ್ಲಿಯೇ ಬೆಳೆದ ನಾನು ವೈಜ್ಞಾನಿಕವಲ್ಲದ, ಸಾಂಪ್ರದಾಯಿಕ ವಿಷಯಗಳೊಂದಿಗೆ ಬೆಳೆದ ನಾನು ಇಷ್ಟವಿಲ್ಲದಿದ್ದರೂ ಒಲ್ಲದ ಮನಸ್ಸಿನಿಂದ ಅವುಗಳಲ್ಲಿ ಭಾಗವಹಿಸುತ್ತಿದ್ದೆ. ಹಳ್ಳಿಯ ಮಹಿಳೆಯರು ಮಸಿ ಹಿಡಿದ ಅಡುಗೆಮನೆಯ ಕತ್ತಲ ಕೋಣೆಯಲ್ಲಿ ಅರಿವಿಲ್ಲದೆ ಸಂಪೂರ್ಣವಾಗಿ ತಮ್ಮನ್ನು ದುಡಿಮೆಗೆ ತೊಡಗಿಸಿಕೊಂಡು, ರೋಗ, ಸಾಲ, ಬಡತನ, ಶಿಕ್ಷಣವಿಲ್ಲದಿರುವುದು, ಸಾಲದ ಕಾರಣಕ್ಕೆ ಮನೆ ಜಪ್ತಿಯಾಗುವಾಗ ಅವರು ಅನುಭವಿಸುತ್ತಿದ್ದ ನೋವು ಸಂಕಟ, ಅಪಮಾನಗಳನ್ನು ನೋಡಿ ನನಗೆ ಬಹಳ ಹಿಂಸೆಯಾಗುತ್ತಿತ್ತು. ಈ ಬಗ್ಗೆ ನನ್ನ ಮನೆಯಲ್ಲಿ ಬಹಳವೇ ಚರ್ಚೆಯಾಗುತ್ತಿತ್ತು. ಆ ಸಮಯದಲ್ಲಿಯೇ ನನಗೆ ಬುದ್ಧ, ಬಸವಣ್ಣ, ಗಾಂಧಿ, ಲೋಹಿಯಾ, ಅಂಬೇಡ್ಕರ್ ಮುಂತಾದ ಹಲವಾರು ಮಹನೀಯರ ಬದುಕಿನ ಪರಿಚಯವಾಯಿತು. ನನ್ನ ಮನಸ್ಸಿನಲ್ಲಿ ಮೂಡುತ್ತಿದ್ದ ಹಲವಾರು ಪ್ರಶ್ನೆಗಳಿಗೆ ಇವರಿಂದ ಉತ್ತರ ದೊರಕಿತ್ತು. ಆದರೂ ಬದಲಾವಣೆ ಅಷ್ಟು ಸುಲಭವಲ್ಲ ಎಂಬ ಅರಿವೂ ನನಗಾಗಿತ್ತು.

ಹೆಣ್ಣುಮಕ್ಕಳನ್ನು ಹೊರಗೇ ಬಿಡದಂತಹ ಆ ಕಾಲದಲ್ಲಿ ನಾನು ರೈತ ಚಳವಳಿಗೆ ಬಂದದ್ದನ್ನು ನನ್ನ ತಾಯಿ ಮುಕ್ತ ಮನಸ್ಸಿನಿಂದ ಪ್ರೋತ್ಸಾಹಿಸಿದ್ದರು. ನನ್ನ ಮನಸ್ಸಿನಲ್ಲಿ ಮೂಡುತ್ತಿದ್ದ ಪ್ರಶ್ನೆಗಳಿಗೆ ರೈತ ಚಳವಳಿ ಉತ್ತರ ನೀಡುತ್ತಿತ್ತು. ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರಿಂದ ನಾನಾ ಪ್ರದೇಶಗಳ ಸಂಪರ್ಕ, ನಾನಾ ಜನರೊಂದಿಗೆ ಒಡನಾಟ ದೊರಕಿತು. ಅಲ್ಲಿ ರೈತರಿಗಾಗುತ್ತಿದ್ದ ಅನ್ಯಾಯ, ಎಷ್ಟು ದುಡಿದರೂ ತಪ್ಪದ ಸಾಲ, ಬಡತನ, ರೈತರು ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯ ಹಿಂದುಳಿದಿರುವಿಕೆ ಹೀಗೇ ಹಲವಾರು ಸಮಸ್ಯೆಗಳನ್ನು ಗುರುತಿಸುವಂತಾಯಿತು. ಅವುಗಳ ವಿರುದ್ಧದ ಹೋರಾಟಗಳಲ್ಲಿ ಭಾಗವಹಿಸುವಂತಾಯಿತು.

ರೈತ ಚಳವಳಿಯ ಜೊತೆಗೆ ನನ್ನ ಸಂಗಾತಿಯೂ ಸರಳ ಬದುಕನ್ನೇ ಪ್ರತಿಪಾದಿಸುತ್ತಿದ್ದರಿಂದ ನಾನು ಸರಳ ಬದುಕನ್ನೇ ಆಯ್ದುಕೊಂಡೆ. ಮೂಢನಂಬಿಕೆ, ಆಡಂಬರದ ಆಚರಣೆ ಇವೆಲ್ಲವೂ ಅರ್ಥಹೀನ, ಆರೋಗ್ಯಕರ ಸಮಸಮಾಜ ನಿರ್ಮಾಣವಾಗಬೇಕಾದರೆ ವೈಚಾರಿಕತೆಯಿಂದ ಮಾತ್ರ ಸಾಧ್ಯ ಎಂದು ರೈತ ಚಳವಳಿ ನನಗೆ ಮನವರಿಕೆ ಮಾಡಿಕೊಟ್ಟಿತು. ಹೀಗಾಗಿ ನಾನು ಆಡಂಬರದ ಮದುವೆ, ಔತಣಕೂಟ, ಬರ್ತ್‌ಡೇ, ತಿಥಿ, ಪೂಜೆ, ದೇವಸ್ಥಾನ ಇವೆಲ್ಲವುಗಳಲ್ಲಿ ಭಾಗವಹಿಸುವುದನ್ನು ನಿಲ್ಲಿಸಿದೆ. ಇದಕ್ಕೆ ನನ್ನ ತವರು ಹಾಗೂ ಗಂಡನ ಮನೆಯವರೂ ಸಹ ಸಹಕರಿಸಿದರು. ನನ್ನ ವಿಚಾರಗಳನ್ನು ಅವರೂ ಅವರೊಳಗೇ ಚರ್ಚಿಸಲು ಪ್ರಾರಂಭಿಸಿದರು. ನನ್ನ ನಿಲುವನ್ನು ಗೌರವಿಸಿದರು. ನನ್ನ ತಾಯಿ, ತಂದೆ ಅತ್ತೆ ಮರಣ ಹೊಂದಿದಾಗಲೂ ಸಹ ನಾನು ಅವರ ಅಂತಿಮ ದರ್ಶನಕ್ಕೆ ಹೋದೆನೇ ಹೊರತು, ನಂತರ ನಡೆದ ಯಾವ ಕಾರ್ಯಗಳಲ್ಲಿಯೂ ಭಾಗವಹಿಸಲಿಲ್ಲ. ಮುಂದೆ ನಾನೇ ನನ್ನ ಸಂಘಟನೆಯ ಕಾರ್ಯಕರ್ತರ ಮನೆಗಳಲ್ಲಿ 'ತಿಥಿ ಬಿಡಿ, ಸಸಿ ನೆಡಿ' ಎಂಬ ಹೊಸ ಕಾರ್ಯಕ್ರಮವನ್ನೇ ಪ್ರಾರಂಭಿಸಿದೆ. ಇದರ ಮೂಲಕ ಪರಿಸರಪ್ರಜ್ಞೆಯನ್ನು ಮೂಡಿಸಲು ಪ್ರಯತ್ನಿಸಿದೆ. ಇದರೊಂದಿಗೆ ಆಡಂಬರದ ಮದುವೆಯಿಂದ ರೈತ ಕುಟುಂಬಗಳು ಅನುಭವಿಸುತ್ತಿದ್ದ ಆರ್ಥಿಕ ಸಂಕಷ್ಟವನ್ನು ತಪ್ಪಿಸಲು ರೈತಸಂಘಟನೆ ಮಾಡಿಸಿದ ಸಾವಿರಾರು ಸರಳ ಮದುವೆಯಲ್ಲಿಯೂ ಭಾಗವಹಿಸಿದೆ.

ರೈತ ಸಂಘಟನೆಯು ರೂಪಿಸಿದ ಅನೇಕ ಹೋರಾಟಗಳಲ್ಲಿ ನಾನು ಸಕ್ರಿಯವಾಗಿ ಭಾಗವಹಿಸಿದ್ದೇನೆ. 90 ರ ದಶಕದಲ್ಲಿ ಗ್ಯಾಟ್ ಒಪ್ಪಂದ, ಡಬ್ಲ್ಯೂಟಿಒ ಒಪ್ಪಂದಗಳ ವಿರುದ್ಧ ರೂಪಿಸಿದ ರಾಜ್ಯಮಟ್ಟದ ಹೋರಾಟದಲ್ಲಿ ನಾನು ಸಕ್ರಿಯವಾಗಿದ್ದೆ. ಬಿತ್ತನೆ ಬೀಜದ ಹೋರಾಟ, ಆಹಾರ ಭದ್ರತೆ ಹೋರಾಟದ ಜೊತೆಗೆ, ಕೆಎಫ್‌ಸಿ, ಮಾನ್ಸೋಂಟೋ, ಕಾರ್ಗಿಲ್ ನಂತಹ ಬಹುರಾಷ್ಟ್ರೀಯ ಕಂಪನಿಗಳ ವಿರುದ್ಧದ ಹೋರಾಟವಂತೂ ತೀವ್ರ ಸ್ವರೂಪ ಪಡೆದುಕೊಂಡು ಸರ್ಕಾರವನ್ನೇ ಬೆಚ್ಚಿ ಬೀಳಿಸುವಂತಿತ್ತು. ಅದರಲ್ಲೂ ಈ ಹೋರಾಟಗಳಲ್ಲಿ ಗಣನೀಯ ಸಂಖ್ಯೆಯಲ್ಲಿ ಮಹಿಳೆಯರು ಇದ್ದದ್ದು ಪ್ರಾಮುಖ್ಯ

ಪಡೆದುಕೊಂಡಿತ್ತು. ನಾನು ರೈತ ಚಳುವಳಿ ಜೊತೆಜೊತೆಗೇ ಎನ್.ಎ.ಪಿ.ಎಂ ನ ಸಂಚಾಲಕಳಾಗಿ, ಸ್ಪಂದನ ಮಹಿಳಾ ಸಂಘಟನೆಯ ಸಂಚಾಲಕಳಾಗಿ, ಮಂಡ್ಯ ಜಿಲ್ಲಾ ಪಂಚಾಯತ್‌ನ ಸದಸ್ಯಳಾಗಿ ಕಾರ್ಯನಿರ್ವಹಿಸಿದೆ. ರಾಜ್ಯಾದ್ಯಂತ ಎನ್.ಎಸ್.ಎಸ್ ಶಿಬಿರಾರ್ಥಿಗಳಿಗೆ ತರಬೇತಿ ಕಾರ್ಯಾಗಾರಗಳನ್ನು ನಡೆಸಿದೆ. ಇದರೊಂದಿಗೆ ಕಾವೇರಿ ನದಿನೀರು ಹಂಚಿಕೆ ಹೋರಾಟದಲ್ಲಿಯೂ ಭಾಗವಹಿಸಿದೆ. ಇವೆಲ್ಲವೂ ಈಗ ಚರಿತ್ರೆ.

ರೈತಚಳುವಳಿಯ ಅಭ್ಯರ್ಥಿಯಾಗಿ ಜಿಲ್ಲಾ ಪಂಚಾಯತ್ ಸದಸ್ಯಳಾದ ಸಂದರ್ಭದಲ್ಲಿ ಹೆಂಡ ಸಾರಾಯಿ ಅಂಗಡಿಯ ಬಾಗಿಲು ಹಾಕಿಸಿದ್ದು, ಶನಿಮಹಾತ್ಮ ದೇವರ ಹೆಸರಿನಲ್ಲಿ ನಡೆಯುತ್ತಿದ್ದ ಮೌಢ್ಯತೆಯನ್ನು ನಿಲ್ಲಿಸಿದ್ದು, ನೀರಿನ ಟ್ಯಾಂಕ್‌ನ ಮೇಲೆ ಸದಸ್ಯಳಾದ ನನ್ನ ಹೆಸರನ್ನು ತೆಗೆಸಿಹಾಕಿದ್ದು, ಶಾಲೆಯ ಆವರಣದಲ್ಲಿ ದೇವರ ಹೆಸರಿನಲ್ಲಿ ಮಾಡುತ್ತಿದ್ದ **'ಪರ'** (ಊಟದ ವ್ಯವಸ್ಥೆ) ನಿಲ್ಲಿಸಿದ್ದು, ಗೊಲ್ಲರದೊಡ್ಡಿಯಲ್ಲಿ ಮುಟ್ಟಾದ ಮತ್ತು ಬಾಣಂತಿ ಹೆಂಗಸರನ್ನು ಸಂಪ್ರದಾಯದ ಹೆಸರಲ್ಲಿ ಊರಿನಿಂದ ಹೊರಗೆ ಇರಿಸಿದ್ದುದನ್ನು ವಿರೋಧಿಸಿ ಅವರಿಗೆ ಅರಿವು ಮೂಡಿಸುವ ಕಾರ್ಯಕ್ರಮ ರೂಪಿಸಿದ್ದು, ಜಿಲ್ಲಾ ಪಂಚಾಯತ್ ಸಭೆಗಳಲ್ಲಿ ನಡೆಯುತ್ತಿದ್ದ ಅಸಮಾನತೆಗಳನ್ನು ಪ್ರಶ್ನಿಸಿ ಹೋರಾಟ ನಡೆಸಿದ್ದು ಹೀಗೇ ಹಲವಾರು ಅರ್ಥಪೂರ್ಣ ಚಟುವಟಿಕೆಗಳನ್ನು ರೂಪಿಸಿದೆ. ರೈತ ಚಳವಳಿಯ ರಾಜ್ಯಮಟ್ಟದ ಕಾರ್ಯಕರ್ತರು ನನ್ನಮೇಲೆ ತೋರಿಸಿದ ಅಪಾರ ಗೌರವವನ್ನು ನಾನೆಂದೂ ಮರೆಯಲಾರೆ. ಚಳವಳಿಯ ಭಾಗವಾಗಿ ಇಡೀ ರಾಜ್ಯದ ಹಳ್ಳಿಹಳ್ಳಿಗೆ ಪ್ರವಾಸ ಹೋಗಿ ಅಲ್ಲಿನ ರೈತರ ಶ್ರಮ, ಪ್ರಾಮಾಣಿಕತೆ, ಕರ್ತವ್ಯ, ಅತಿಥಿ ಸತ್ಕಾರ, ಪಶುಸಂಗೋಪನಾ ವಿಧಾನಗಳು, ರೈತ ಮಹಿಳೆಯರ ಶ್ರಮಕ್ಕೆ ಸಿಗದ ಮೌಲ್ಯ, ಇವೆಲ್ಲವನ್ನೂ ಕಣ್ಣಾರ ಕಂಡು ಅನುಭವಿಸಿದೆ. ಭೂಮಿಗೆ ಬಿತ್ತನೆ ಮಾಡುವುದರಿಂದ ಹಿಡಿದು ಬೆಳೆ ಕೈಗೆ ಬರುವವರೆಗೂ ಅವರು ತೋರುವ ಬೌದ್ಧಿಕ ಜ್ಞಾನ ಈ ಎಲ್ಲವನ್ನೂ ನನ್ನ ಎದೆಗಿಳಿಸಿಕೊಂಡೆ. ಈ ಎಲ್ಲ ಅನುಭವದೊಂದಿಗೆ 2010 ರಲ್ಲಿ ಮಲೇಶಿಯಾ ದೇಶಕ್ಕೆ ಹೋಗಿ ನನ್ನ ದೇಶದ ರೈತರ ಬೇಸಾಯದ ಬದುಕು ಮತ್ತು ರಾಸಾಯನಿಕ ವಸ್ತುಗಳಿಂದ ಆಗುತ್ತಿರುವ ಅನಾಹುತಗಳ ಬಗ್ಗೆ ಮಾತನಾಡಿದೆ.

ಹೀಗೇ ನನ್ನ ಇಡೀ ಜೀವನವನ್ನು ರೈತ ಚಳವಳಿ ರೂಪಿಸಿದೆ. ಮಹಿಳೆ–ವೈಚಾರಿಕತೆ–ಸರಳತೆ ಎಂಬುದು ನಾನು ರೈತ ಚಳವಳಿಯಿಂದ ಕಲಿತಿದ್ದು, ಇಂದಿಗೂ ನನ್ನ ಬದುಕು ಇವುಗಳೊಂದಿಗೇ ಸಾಗುತ್ತಿದೆ.

# ಮಾನವರ ವಿಕಾಸದ ಹಾದಿಯಲ್ಲಿ ಲಿಂಗಾಧಾರಿತ ತಾರತಮ್ಯದ ಇತಿಹಾಸ

**ಮಲ್ಲಿಗೆ ಸಿರಿಮನೆ**

ಮಾನವ ಜಗತ್ತು ಹುಟ್ಟಿದಾಗಿನಿಂದಲೇ ಲಿಂಗಾಧಾರಿತ ತಾರತಮ್ಯಗಳನ್ನೂ ಒಳಗೊಂಡಂತೆ ಭೇದಭಾವಗಳು ಚಾಲ್ತಿಗೆ ಬಂದುವೇ ಅಥವಾ ಅದು ಕಾಲಾಂತರದಲ್ಲಿ ಹುಟ್ಟಿಕೊಂಡದ್ದೇ ಎಂಬ ಬಗ್ಗೆ ಮುಗಿಯದ ವಾಗ್ವಾದಗಳು ನಡೆಯುತ್ತಾ ಬಂದಿವೆ. ಪ್ರಕೃತಿಯೇ ಹೆಣ್ಣು ಮತ್ತು ಗಂಡನ್ನು ಮೇಲುಕೀಳಾಗಿ ಸೃಷ್ಟಿಸಿದೆಯೆಂಬ ವಾದದಿಂದ ಹಿಡಿದು, ಇಂತಹ ತಾರತಮ್ಯ, ಶೋಷಣೆಗಳು ಒಂದು ಕೈಯ ಐದು ಬೆರಳುಗಳಂತೆ ವೈವಿಧ್ಯಕ್ಕಾಗಿ ಹುಟ್ಟಿಕೊಂಡವು ಎಂಬಲ್ಲಿಯವರೆಗೆ ಮನುಷ್ಯ ಕುಲದ ನಡುವೆಯೇ ಬೇರೂರಿಸಲಾಗಿರುವ ಅಸಮಾನತೆಗಳನ್ನು ಸಮರ್ಥಿಸುವ ವಾದಗಳನ್ನು ಪ್ರತಿದಿನವೆಂಬಂತೆ ಕೇಳುತ್ತಿರುತ್ತೇವೆ. ಇವುಗಳನ್ನು ಸಮರ್ಥವಾಗಿ ಎದುರಿಸಲು ನಮಗೆ ಸರಿಯಾದ ಇತಿಹಾಸದ ಮತ್ತು ವೈಜ್ಞಾನಿಕವಾದ ತಿಳುವಳಿಕೆಯ ಉಪಕರಣಗಳ ನೆರವು ಬೇಕಾಗುತ್ತದೆ. ಅಂತಹ ಉಪಕರಣಗಳನ್ನು ನಮ್ಮ ಹಿಂದಿನ ಅನೇಕ ಸ್ತ್ರೀವಾದಿ ಚಿಂತಕಿ–ಚಿಂತಕರು, ಹೋರಾಟಗಾರರು ಜೋಡಿಸಿಕೊಟ್ಟಿದ್ದಾರೆ. ಅವುಗಳ ಮೇಲೊಂದು ಪಕ್ಷಿನೋಟ ಬೀರುವುದು ಈ ಗೋಷ್ಠಿಯ ಉದ್ದೇಶ.

ಭೂಮಿ ಹೇಗೆ ಹುಟ್ಟಿತೆಂಬ ಬಗ್ಗೆ ಈವರೆಗಿನ ಹೆಚ್ಚಿನವರು ಒಪ್ಪಿರುವ ಸಿದ್ಧಾಂತ 'ಮಹಾಸ್ಫೋಟ ಸಿದ್ಧಾಂತ', (ಬಿಗ್ ಬ್ಯಾಂಗ್ ಥಿಯರಿ). ಅದರಂತೆ ಅಂದಾಜು 1370 ಕೋಟಿ ವರ್ಷಗಳ ಕೆಳಗೆ ಅಂತರಿಕ್ಷದಲ್ಲಿ ಸಂಭವಿಸಿದ ಮಹಾಸ್ಫೋಟವೇ ಭೂಮಿಯನ್ನೂ ಒಳಗೊಂಡಂತೆ ಎಲ್ಲಬಗೆಯ ಅಂತರಿಕ್ಷ ಕಾಯಗಳ ಹುಟ್ಟಿಗೆ ಕಾರಣವಾಯಿತು. ಈ ಭೂಗ್ರಹ ಹುಟ್ಟಿದ್ದು ಇಂದಿಗೆ 450 ಕೋಟಿ ವರ್ಷಗಳ ಹಿಂದೆ. 200 ಕೋಟಿ ವರ್ಷಗಳ ಹಿಂದೆ ಆರಂಭವಾಗಿ ಈಗಲೂ ಮುಂದುವರೆದಿರುವ ಖಂಡಾಂತರ ಚಲನೆಯು, ಬಗೆಬಗೆಯ ಬೆಟ್ಟ, ಕಣಿವೆಗಳು, ಸಮುದ್ರಗಳೇ ಮೊದಲಾದ ಭೂಪ್ರದೇಶಗಳ ನಿರ್ಮಾಣಕ್ಕೆ ಕಾರಣವಾಯಿತು. ಹೆಚ್ಚೂ ಕಡಿಮೆ ಅದೇ ಸಮಯದ ಹೊತ್ತಿಗೆ ಭೂಮಂಡಲದ ಮೇಲೆ ಮೊಟ್ಟಮೊದಲ ಜೀವ ಕಾಣಿಸಿಕೊಂಡದ್ದು. ಯೂಕ್ಯಾರಿಯಟ್‌ಗಳು

(ಏಕಕೋಶಜೀವಿಗಳು) ಕಾಣಿಸಿಕೊಂಡವು ಮತ್ತು ನಂತರ ಅವು 150 ಕೋಟಿ ವರ್ಷಗಳ ಹೊತ್ತಿಗಾಗಲೇ ಬಹುಕೋಶಜೀವಿಗಳು ಕಾಣಿಸಿಕೊಂಡವು. ನಿಧಾನವಾಗಿ ವಿಕಾಸಗೊಂಡ ಜೀವಜಗತ್ತಿನಲ್ಲಿ 50 ಕೋಟಿ ವರ್ಷಗಳಲ್ಲಿ ಜಲಚರಗಳೂ, 47 ಕೋಟಿ ವರ್ಷಗಳ ಹಿಂದೆ ನೆಲದ ಮೇಲಿನ ಸಸ್ಯಗಳೂ, 36 ಕೋಟಿ ವರ್ಷಗಳ ಹಿಂದೆ ಉಭಯವಾಸಿಗಳಾದ ಕಪ್ಪೆ, ಮೊಸಳೆ ಮೊದಲಾದ ಪ್ರಾಣಿಗಳು, 30 ಕೋಟಿ ವರ್ಷಗಳ ಹಿಂದೆ ಹಾವು, ಹಲ್ಲಿ, ಓತಿಕ್ಯಾತಗಳಂತಹ ಸರೀಸೃಪಗಳು, 20 ಕೋಟಿ ವರ್ಷಗಳ ಹಿಂದೆ ಸಸ್ತನಿಗಳು, 15 ಕೋಟಿ ವರ್ಷಗಳ ಹಿಂದೆ ಪಕ್ಷಿಗಳು ಹುಟ್ಟಿಕೊಂಡವು. 6.5 ಕೋಟಿ ವರ್ಷಗಳ ಹಿಂದೆ ಡೈನೋಸಾರ್‌ಗಳೆಂಬ ದೈತ್ಯ ಜೀವಿಗಳು ಒಂದಷ್ಟು ಕಾಲ ಭೂಮಿಯ ಮೇಲೆ ಅಸ್ತಿತ್ವದಲ್ಲಿದ್ದು ನಾಶವಾದವು. ಮೊತ್ತಮೊದಲ ಮನುಷ್ಯಜೀವಿಯ ಮೂಲವ್ಯಕ್ತಿಗಳು ಭೂಮಿಯ ಮೇಲೆ ಕಂಡರೆಂದು ಉತ್ಖನನಗಳ ಮೂಲಕ ಕಂಡುಹಿಡಿಯಲಾಗಿದೆ. ಆಫ್ರಿಕಾ ಖಂಡದಲ್ಲಿ ಕಂಡ ಈವರೆಗೆ ದೊರೆತಿರುವುದರಲ್ಲೇ ಅತಿಹಿಂದಿನ ಮನುಷ್ಯ ವ್ಯಕ್ತಿಯ ಅಸ್ತಿಪಂಜರವು ಒಂದು ಸ್ತ್ರೀದೇಹದ ಅಸ್ತಿಪಂಜರವಾಗಿದ್ದು ಅದನ್ನು 'ಲೂಸಿ' ಎಂದು ಕರೆಯಲಾಗಿದೆ. ಈಕೆಯನ್ನು ಇಡೀ ಮನುಷ್ಯಕುಲದ ಮೂಲಮಾತೆಯೆಂದು ವಿಜ್ಞಾನಿಗಳು ಕರೆದಿದ್ದಾರೆ.

ಈ ಇಡೀ ವಿಕಾಸದ ಚರಿತ್ರೆಯಲ್ಲಿ ಮುಖ್ಯವಾಗಿ ತಿಳಿಯುವ ವಿಷಯವೆಂದರೆ, ಇಂದು ನಾವು ಕಾಣುವ ಸಂಕೀರ್ಣ ಜೀವರಚನೆಗಳು ಮೂಲದಲ್ಲಿ ಬಹಳ ಸರಳವಾದ ಏಕಕೋಶ ಜೀವಿಗಳಿಂದ ಮೊದಲುಗೊಂಡು ಒಂದರಿಂದ ಒಂದಾಗಿ ರೂಪಾಂತರಗೊಳ್ಳುತ್ತಾ ವಿಕಾಸದ ಹಾದಿಯಲ್ಲಿ ಬೆಳವಣಿಗೆಗೊಂಡಂತಹವು. ಹಾಗೆಯೇ ಈವರೆಗಿನ ಅಧ್ಯಯನಗಳಿಂದ ತಿಳಿದುಬಂದಂತೆ, ಎಲ್ಲ ಮನುಷ್ಯಜೀವಿಗಳ ಮೂಲವೂ ಆಫ್ರಿಕಾ ಖಂಡದಲ್ಲಿ ಈಗ ಕೀನ್ಯಾ ದೇಶವಿರುವ ಪ್ರದೇಶ. ಅಂದರೆ, ಯಾವುದೋ ಶಕ್ತಿಯು ಮನುಷ್ಯರ ನಡುವೆಯೇ ಅಸಮಾನತೆಯಿರುವಂತೆ ಸೃಷ್ಟಿಸಿತೆಂಬುದು ಸತ್ಯವಲ್ಲವೆಂಬುದು ನಮಗೆ ತಿಳಿಯಿತು. ಹಲವು ಬಗೆಯ ಜೀವಿಗಳ ನಡುವಿರುವ ಭಿನ್ನತೆಗಳಾಗಲೀ, ಮನುಷ್ಯರಲ್ಲೇ ಹೆಣ್ಣು, ಗಂಡು ಹಾಗೂ ತೃತೀಯ ಲಿಂಗಿಗಳ ನಡುವಿರುವ ಭಿನ್ನತೆಗಳಾಗಲೀ ಅಸಮಾನತೆಯ ಕಾರಣಗಳಾಗಬೇಕಿಲ್ಲ, ಬದಲಿಗೆ ಅವು ವೈವಿಧ್ಯತೆಗೆ ಮೂಲವಾಗುತ್ತವಷ್ಟೇ ಎಂಬುದೂ ಕೂಡಾ ತಿಳಿಯುತ್ತದೆ.

ಮೊಟ್ಟಮೊದಲ ವಾನರ ಪ್ರಭೇಧದ ಮಾನವರ ಉಗಮದ ನಂತರ, ವಾನರರು ಮತ್ತು ಮಾನವರ ನಡುವೆ ಸಂಪೂರ್ಣವಾಗಿ ಗುರುತಿಸಬಹುದಾದಂತಹ ವ್ಯತ್ಯಾಸ ತೋರಿದ್ದು, ಬೆನ್ನುಮೂಳೆ, ಮೆದುಳು ಮತ್ತು ಕೈಗಳ ರಚನೆಯಲ್ಲಿ ಬಂದ ವ್ಯತ್ಯಾಸದಿಂದ. ಕೈಗಳನ್ನು ಬಳಸಿ ಮಾಡುವ ಭಿನ್ನಬಗೆಯ ಶ್ರಮದ ಕೆಲಸಗಳೇ ಇಂತಹ ದೈಹಿಕ ಭಿನ್ನತೆಗೂ ದಾರಿಮಾಡಿದವೆಂದು ವಿಕಾಸವಾದದ ಸಿದ್ಧಾಂತಿಗಳು ಹೇಳುತ್ತಾರೆ. ಅದರಂತೆಯೇ, ಹೀಗೆ ತಮಗೆ ಬೇಕಾದ ಶ್ರಮದ ಕೆಲಸಗಳಲ್ಲಿ ಅಗತ್ಯವಿದ್ದ ಸಮನ್ವಯದ ಕಾರಣವೇ ಭಾಷೆಗಳ ಉಗಮಕ್ಕೂ, ಆ ನಂತರದಲ್ಲಿ ಚಿಂತನೆಗಳು ಮತ್ತು

ಸಾಂಸ್ಕೃತಿಕವಾದಂತಹ ಸಂಗತಿಗಳ ಹುಟ್ಟಿಗೂ ಮೂಲವಾದವು. ಅಂದರೆ ದುಡಿಮೆಗೂ ಮನುಷ್ಯ ಜೀವಿಗಳ ವಿಕಾಸದ ಇತಿಹಾಸಕ್ಕೂ ಅವಿನಾಭಾವ ಸಂಬಂಧ.

ಹೀಗೆ ಬೆಳೆದ ಮನುಷ್ಯಕುಲದ ಭಿನ್ನ ಧಾರೆಗಳು ಅಸ್ತಿತ್ವದ ಕಾರಣಕ್ಕೆ ಅತ್ಯಂತ ಪ್ರಾಚೀನ ಕಾಲದಲ್ಲಿ ಬುಡಕಟ್ಟುಗಳಾಗಿ ರೂಪುತಳೆಯುತ್ತಾ ಹೋದವು. ಮೂಲದಲ್ಲಿ ಅರಣ್ಯಜನ್ಯ ವಸ್ತುಗಳನ್ನು ಆಧರಿಸಿ ಬದುಕುತ್ತಿದ್ದ ಈ ಬುಡಕಟ್ಟು ಮಾನವರು, ನಿಧಾನವಾಗಿ ತಮಗೆ ಬೇಕಾದದ್ದನ್ನು ಪಡೆದುಕೊಳ್ಳುವ ಕೌಶಲ್ಯಗಳನ್ನು ಗಳಿಸಿದರು. ಈ ಹಂತದಲ್ಲಿ ಮೂಲಭೂತವಾಗಿ ಈ ಬುಡಕಟ್ಟುಗಳನ್ನು ಕೃಷಿ ಆಧಾರಿತ ಮತ್ತು ಪಶು ಸಂಗೋಪನೆ ಆಧಾರಿತವೆಂದು ಎರಡು ಕ್ರಮಗಳಲ್ಲಿ ಗುರುತಿಸಲಾಗುತ್ತದೆ. ಇಲ್ಲಿಯವರೆಗೂ ಬುಡಕಟ್ಟುಗಳ ನಡುವೆ ಹೆಣ್ಣು ಗಂಡೆಂಬ ತಾರತಮ್ಯಗಳು ಕಂಡಿರಲಿಲ್ಲವೆಂಬುದನ್ನು ಚರಿತ್ರೆಕಾರರು ಗುರುತಿಸುತ್ತಾರೆ. ಹಾಗೆಯೇ, ಮೊಟ್ಟಮೊದಲು ಕೃಷಿಯನ್ನು ಕಂಡುಹಿಡಿದದ್ದು ಮಹಿಳೆಯರೇ ಆಗಿರುತ್ತಾರೆಂಬ ವಾದವನ್ನೂ ಬಹಳ ಬಲವಾಗಿ ಮುಂದಿಡುತ್ತಾರೆ.

ಆದರೆ, ಹೀಗೆ ತಮಗೆ ಬೇಕಿದ್ದ ವಸ್ತುಗಳನ್ನು ತಾವೇ ಗಳಿಸಿಕೊಳ್ಳುವ ಹಲವು ಬಗೆಯ ಕೌಶಲ್ಯಗಳನ್ನು ಕಲಿಯುತ್ತಾ ಹೋದಂತೆ, ತಮ್ಮ ಅಗತ್ಯಗಳನ್ನು ಪೂರೈಸಿದ ನಂತರವೂ ಉಳಿಯುವ ಇಂತಹ ವಸ್ತುಗಳ ಸಂಗ್ರಹ ದೊಡ್ಡದಾಗುತ್ತಾ ಹೋಯಿತು. ಅದು ಸಂಪತ್ತಿನ ರೂಪ ತಳೆಯಿತು. ಅದು ಧಾನ್ಯರೂಪದ ಸಂಪತ್ತಾಗಲೀ, ಪಶು-ಪ್ರಾಣಿಗಳ ರೂಪದ ಸಂಪತ್ತಾಗಲೀ ಅಥವಾ ಆಗಷ್ಟೇ ಆರಂಭವಾಗಿದ್ದ ಪ್ರಾಚೀನ ಗಣಿಗಾರಿಕೆಯಿಂದ ದೊರೆತ ಲೋಹಗಳ ರೂಪದ ಸಂಪತ್ತಾಗಲೀ-ಅದು ಬುಡಕಟ್ಟುಗಳಲ್ಲಿ ಸಂಗ್ರಹವಾಗುತ್ತಾ ಹೋಯಿತು. ಇವೆಲ್ಲವುಗಳ ಉಸ್ತುವಾರಿ ನೋಡಿಕೊಳ್ಳುವ ಆಳುವವರು ಮತ್ತು ಜನರಲ್ಲಿ ಪ್ರಕೃತಿಯ ವಿಚಿತ್ರ ಘಟನೆಗಳಿಂದಾಗಿ ಹುಟ್ಟಿದ್ದ ಭೀತಿಯನ್ನು ಬಳಸಿಕೊಂಡ ಪುರೋಹಿತ ವರ್ಗವು ಜಗತ್ತಿನ ಎಲ್ಲೆಡೆ ಹೆಚ್ಚೂ ಕಡಿಮೆ ಒಂದೇ ಅವಧಿಯಲ್ಲಿ ಕಾಣಿಸಿಕೊಂಡುದನ್ನೂ ಗುರುತಿಸಬಹುದು. ಇವು ಪ್ರಾಚೀನ ಬುಡಕಟ್ಟುಗಳಲ್ಲೂ ಇದ್ದ ಸರಳವಾದ ಕಾರ್ಯವಿಭಜನೆಯ ನಾಯಕಿ-ನಾಯಕರ, ಪೂಜಾರಿಗಳ ಪರಿಕಲ್ಪನೆಗಳಿಗಿಂತ ಬಹಳ ಭಿನ್ನವಾದ ಸ್ಥಾನಗಳಾಗಿದ್ದವು. ನಿಧಾನವಾಗಿ ಹೀಗೆ ಹುಟ್ಟಿಕೊಂಡ ಖಾಸಗಿ ಸಂಪತ್ತು ಮತ್ತು ಅದರ ಮೇಲೆ ಅಧಿಕಾರ ಹೊಂದಿದ್ದ ಆಳುವ ವರ್ಗವು ಬೆಳೆಯುತ್ತಾ ಹೋದಂತೆ ಊಳಿಗಮಾನ್ಯ ದೊರೆಗಳ ಹುಟ್ಟಿಗೆ ಕಾರಣವಾಯಿತು.

ಭಾರತದಲ್ಲೂ ಹೀಗೆ ಬುಡಕಟ್ಟು ವ್ಯವಸ್ಥೆಯಿಂದ ಊಳಿಗಮಾನ್ಯ ಒಡೆತನದ ಸಮಾಜ ವ್ಯವಸ್ಥೆ ರೂಪುಗೊಂಡಿತು ಮತ್ತು ಅದನ್ನು 'ಶೂದ್ರ ಒಡೆತನದ ಸಮಾಜ' ಎಂದು ಕರೆಯಲಾಗುತ್ತದೆ. ಈ ಸಾಮಾಜಿಕ ವ್ಯವಸ್ಥೆಯ ಮುಖ್ಯಾಂಶಗಳನ್ನು ಹೀಗೆ ಗುರುತಿಸಬಹುದು:

**ಕೃಷಿಯ ಬೆಳವಣಿಗೆಯ ಜೊತೆ ಹೆಚ್ಚುವರಿ ಉತ್ಪಾದನೆ.**

- ಉತ್ಪಾದಿಸುವವರು ಉತ್ಪಾದನೆಯನ್ನು ನಿರ್ವಹಣೆ ಮಾಡುವವರು.
- 3 ರೀತಿಯ ವಿಭಜನೆ: ಗಂಡು–ಹೆಣ್ಣು, ಬುಡಕಟ್ಟಿನೊಳಗೆ, ಬುಡಕಟ್ಟುಗಳ ನಡುವೆ.

– ಇತರೆ ಬುಡಕಟ್ಟುಗಳನ್ನು ನಾಶ ಮಾಡುವುದು, ಇತರೆ ಬುಡಕಟ್ಟುಗಳವರನ್ನು ಹಿಡಿದು ತಂದು ಗುಲಾಮ ಸಮಾಜವನ್ನು ರೂಪಿಸಿದ್ದು.

**ಉತ್ಪಾದನಾ ಶಕ್ತಿಗಳ, ಉತ್ಪಾದನಾ ಪದ್ಧತಿಯ ಅಭಿವೃದ್ಧಿ, ಹೊಸ ರೀತಿಯ ಉತ್ಪಾದನಾ ಹಾಗೂ ಸಾಮಾಜಿಕ ಸಂಬಂಧಗಳ ವಿಕಾಸ.**

- ದುಡಿಯುವ ವರ್ಗ–ದುಡಿಸಿಕೊಳ್ಳುವ ವರ್ಗ,
- ನಿರ್ಗತಿಕ ವರ್ಗ–ಸಂಪದ್ಭರಿತ ವರ್ಗ,
- ಹೆಣ್ಣು ಗಂಡಿನ ಅಡಿಯಾಳು ಇತ್ಯಾದಿ.

**ಹೊಸ ಸಾಮಾಜಿಕ ಮೌಲ್ಯ ಹಾಗೂ ಧಾರ್ಮಿಕ ಚಿಂತನೆಗಳ ಬೆಳವಣಿಗೆ.**

- ದುಡಿಮೆ ಕೀಳು, ಆಳ್ವಿಕೆ ಮೇಲು.
- ದೈಹಿಕ ಶ್ರಮಕ್ಕಿಂತ, ಮಾನಸಿಕ ಶ್ರಮ ಮೇಲು
- ದೇವರು ಅಥವ ಅಗೋಚರ ಶಕ್ತಿ ಎಂಬುದರ ಸ್ಥಾಪನೆ
- ಎಲ್ಲವೂ ವಿಧಿ ಲಿಖಿತ, ಪೂರ್ವಜನ್ಮದ ಕರ್ಮ ಇತ್ಯಾದಿಗಳನ್ನು ಬೋಧಿಸುವ ಕರ್ಮ ಸಿದ್ಧಾಂತ
- ಹಲವು ಬಗೆಯ ಧಾರ್ಮಿಕ ಸಂಸ್ಥೆಗಳ ಅಭಿವೃದ್ಧಿ.

ಈ ಅವಧಿಯಲ್ಲಿ ಮೊಟ್ಟಮೊದಲ ಬಾರಿಗೆ ಹೆಣ್ಣನ್ನು ಗಂಡಿನ ಅಡಿಯಾಳಾಗಿಸುವ ಸಾಮಾಜಿಕ ವ್ಯವಸ್ಥೆ ರೂಪುಗೊಂಡಿತು. ಅದಕ್ಕೆ ಕಾರಣ ಸಂತಾನೋತ್ಪತ್ತಿ ಮತ್ತು ಸಾಮಾಜಿಕ ಉತ್ಪಾದನೆ–ಎರಡರ ಮೇಲೂ ವರ್ಗಾಧಾರಿತವಾಗಿ ಹಿಡಿತ ಸಾಧಿಸಬೇಕಿದ್ದ ಆಳುವ ವರ್ಗದ ಪಟ್ಟಭದ್ರ ಚಿಂತನೆ. ಹೀಗಾಗಿ ಆವರೆಗೆ ಹೆಣ್ಣಿಗೆ ಸದಾ ಮುಕ್ತವಾಗಿದ್ದ ಸಂಗಾತಿಯ ಆಯ್ಕೆ, ಲೈಂಗಿಕ ಸಂಬಂಧದೊಳಗಿನ ಸ್ವಾತಂತ್ರ್ಯ ಮತ್ತು ಸಂತಾನದ ಮೇಲಿನ ಅಧಿಕಾರವು ನಿಧಾನವಾಗಿ ಪುರುಷ ಆಳುವವರ ಅಧೀನಕ್ಕೆ ಹೋದವು. ಹೀಗೆ ಮೊದಲ ಬಾರಿಗೆ ಮಹಿಳಾ ಸಮುದಾಯವು ಸಾಮಾಜಿಕ ಅಡಿಯಾಳುತನಕ್ಕೆ ಒಳಗಾಯಿತು. ಇದು ಪಿತೃಪ್ರಧಾನತೆಯ ಪ್ರಾಥಮಿಕ ರೂಪ. ಅಲ್ಲಿಂದೀಚೆಗೆ, ಅನೇಕ ಬಗೆಯ ಧಾರ್ಮಿಕ ಮತ್ತು ಸಾಮಾಜಿಕ ಸಂಸ್ಥೆಗಳ ಮೂಲಕ, ಧಾರ್ಮಿಕ –ಸಾಂಸ್ಕೃತಿಕ ಚಿಂತನೆಗಳ ಮೂಲಕ ಹೆಣ್ಣನ್ನು ಸಂಪೂರ್ಣವಾಗಿ ಎರಡನೇ ಹಂತಕ್ಕೆ ತಳ್ಳಲಾಗಿದೆ.

ಈ ವಿಷಯಗಳ ಬಗ್ಗೆ ಸಮಗ್ರವಾದ ಅರಿವು ಯಾಕೆ ಮುಖ್ಯವೆಂದರೆ, ಒಂದು ಕಾಲದಲ್ಲಿ ಇರದಿದ್ದ, ನಡುವಿನಲ್ಲಿ ಮಹಿಳೆಯರ ಮೇಲೆ ಹೇರಲಾದ ಈ ಪಿತೃಪ್ರಧಾನ ಚಿಂತನೆಯ ನೊಗವನ್ನು ಕಿತ್ತೊಗೆಯುವುದೂ ಸಾಧ್ಯವೆಂಬ ದೃಢ ವಿಶ್ವಾಸವನ್ನು ನಮ್ಮೊಳಗಡೆಯೇ ಮೂಡಿಸಿಕೊಳ್ಳುವುದಕ್ಕೋಸ್ಕರ.

ಆ ಬಗೆಯ ಹೋರಾಟವನ್ನೇ ಕಾಲಾನುಕಾಲದಿಂದ ಮಹಿಳಾ ಪರ ಚಿಂತನೆಯುಳ್ಳವರು, ಸಮಾನತೆಯ ಹರಿಕಾರರು, ಸ್ತ್ರೀವಾದಿಗಳು ನಡೆಸುತ್ತಾ ಬಂದಿರುವುದು. ಅಂತಹ ಹೋರಾಟದ ಪಂಜನ್ನು ಹಿಡಿದು ಮುನ್ನಡೆಯುವ ಅವಕಾಶವನ್ನು ಈಗ ನಾವು ಪಡೆದಿದ್ದೇವೆ, ಮಹಿಳಾ ವಿಮೋಚನೆ ಮತ್ತು ಸಮಾಜದ ವಿಮೋಚನೆಗಾಗಿ ನಮ್ಮ ಹಿಂದಿನ ಹೋರಾಟಗಾರ್ತಿಯರು, ಹೋರಾಟಗಾರರ ಆಶಯಗಳನ್ನು ಮುಂದಕ್ಕೊಯ್ಯೋಣ.

# ಮಹಿಳಾ ಕಾವ್ಯ

ಸಂಗ್ರಹ: **ಸಬಿತಾ ಬನ್ನಾಡಿ**

## ಅಕ್ಕಮಹಾದೇವಿ

1
ಎರದ ಮುಳ್ಳಿನಂತೆ ಪರಗಂಡರೇನವ್ವಾ,
ಸೋಂಕಲಮ್ಮೆ ಸುಳಿಯಲಮ್ಮೆ
ನಂಬಿ ನಚ್ಚಿ ಮಾತಾಡಲಮ್ಮೇನವ್ವಾ
ಚೆನ್ನಮಲ್ಲಿಕಾರ್ಜುನನಲ್ಲದ ಗಂಡರಿಗೆ
ಉರದಲ್ಲಿ ಮುಳ್ಳುಂಟೆಂದು ನಾನಪ್ಪಲಮ್ಮೆನವ್ವಾ

2
ಚೆನ್ನಕ್ಕರಿಸಿನವ ಚೆನ್ನಕ್ಕರಿಸಿನವ ಚೆನ್ನಕ್ಕರಿಸಿನವ ಕೊಳ್ಳಿರವ್ವಾ
ಎಮ್ಮ ನಲ್ಲನ ಮೈಯ ಹತ್ತುವ ಅರಿಶಿನವ ಕೊಳ್ಳಿರವ್ವಾ
ಚೆನ್ನಮಲ್ಲಿಕಾರ್ಜುನನ ಅಪ್ಪಿರವ್ವಾ

## ನೀಲಮ್ಮ

ಹಂದೆಯಲ್ಲ ನಾನು
ಹರುಷದ ಧೈರ್ಯವುಳ್ಳ ಹೆಣ್ಣು ನಾನು
ಕಾಮವನಳಿದವಳಾನಾದ ಕಾರಣ
ಬಸವನ ಹಂಗೆನಗಿಲ್ಲವಯ್ಯ
ಭ್ರಮೆಯಡಗಿ ಕಲೆನಷ್ಟವಾಗಿ ಮುಖವರತು
ಮನ ವಿಚಾರವ ಕಂಡೆನಯ್ಯಾ ಸಂಗಯ್ಯ

## ಬೆಳಗೆರೆ ಜಾನಕಮ್ಮ

### ಗಂಡ

ಗಂಡನೆಂದರೆ ಪ್ರಾಣಗಂಡ ಹೆಣ್ಣೆ ನೀ ಗಂಡನ ಕೂಡಿಕೊಂಡ್ಯ
ನೋಡು ಮಂಡೂಕ ಸರ್ಪದ ನೆಳಲಿಗೆ ಹೋದಂತೆ
ಬಂಡೀಗೆ ಬಸವನು ಶಿರಬಾಗಿ ಕೊಂಡಂತೆ
ಅಧಿಕಾರಿ ನಿನಗವನೊಬ್ಬ ನಿರುತ ದುಡಿದರೆ ಅಶನದ ಹಬ್ಬ
ತಪ್ಪಿ ಬೇನೆ ಬೇಸರವಾಗಿ ಉಶ್ಯೆನ್ನಲಬ್ಬಬ್ಬ
ಏನಾಯ್ತು ಎಂದು ಗಂಟ್ಹಾಕುವ ಹುಬ್ಬ.

ನಿರ್ಮಲವಾಗಿರಲಿ ಮನಸು ಪತಿಯ ಚಿತ್ತವ ನೀನನುಸರಿಸು
ಕರ್ಮಾನುಸಾರದಿ ಫಲವುಂಟು ಈ ಜಗದಿ
ಧರ್ಮವ ಬಿಡದಿರು ಎಂಬಳು ಜನಕಜೆ

### ಹೆಣ್ಣಾಟ

ಹೆಣ್ಣು ಗಂಡೆಂಬೆರಡು
ಗೊಂಬೆಗಳ ಆಟದೊಳು
ಎನ್ನೊಡಲು ಕುದಿಯುತಿದೆ
ಹೆಣ್ಣಾಟವ ಕಂಡು

ಹೆಣ್ಣಾದ ಕೆಲದಿನಕೆ
ಹಣ್ಣಾಗಿ ಪರಿಣಮಿಸಿ
ಕಣ್ಣು ತೆರೆಯದೆ ಬಂದು
ಗೂಡ ಸೇರುವುದು

ಗೂಡಿನೊಳಗೇನಿಹುದು
ಕಾಡ ಹಾಗಲಕಾಯಿ

ತಿರುಳಿಲ್ಲ ಸಿಹಿಯಿಲ್ಲ
ಸವಿಗಂಧವಿಲ್ಲ

ಕೋಗಿಲೆಯ ಕೂಗಿಲ್ಲ
ಪರವಳದ ಹುರುಪಿಲ್ಲ
ಆನಂದ ಸುಳಿವಿಲ್ಲ
ಸುಖ ಲೇಶವಿಲ್ಲ

ವಾಸನಾ ಬಲದಿಂದ
ಬೆಳೆದ ಪಾಶವ ನಂಬಿ
ಒಳಗೆ ನುಗ್ಗುವುದೊಮ್ಮೆ
ಎಳೆಗರುವಿನಂತೆ

ಕುಣಿಸಿದರೆ ಕುಣಿಯುವುದು
ನಲಿಸಿದರೆ ನಲಿಯುವುದು
ಮಣಿಯುವುದು ಜಗಕೆಲ್ಲ
ದಾಸಿ ತಾನಾಗಿ

ಕುದಿಯುವುದು ಒಳಗೊಳಗೆ
ಸ್ವಾತಂತ್ರ್ಯವಿಲ್ಲೆನುತ
ದುಡಿಯುವುದು ಹಗಲಿರುಳು
ಉಸಿರಿರುವ ತನಕ

ಅರಿತು ಅರಿವಿಲ್ಲದೆಯೆ
ಅನುಭವವನುಸಿರದೆಯೆ
ದೇವನನು ನೆರೆನಂಬಿ
ಮುಗಿಸುವುದು ಇರವ

ಮನಸ್ಸಿದ್ದು ಮತಿಯಿಲ್ಲ
ಕಣ್ಣಿದ್ದು ಕುರುಡೆಲ್ಲ
ಹೆಣ್ಣಾಟ ಜನಕಜೆಗೆ
ಏನು ಚೆನ್ನಿಲ್ಲ

**ಎನ್.ವಿ. ಭಾಗ್ಯಲಕ್ಷ್ಮಿ**

## ಪ್ರತಿಕ್ರಿಯೆ

ಹುಡುಗಿಯೊಬ್ಬಳು ಕಾಮದ ಬಗ್ಗೆ ಪದ್ಯ ಬರೆದರೆ
ಹುಡುಗರಿಗೆಲ್ಲ ಸೋಜಿಗ,
ಬದುಕಲ್ಲಿ ಸಾಕಾರವಾಗದ ಬಯಕೆಗಳ
ಇವಳು ಪೆನ್ನಲ್ಲಿಂಕು ತುಂಬಿ
ಕುಕ್ಕುತ್ತಿದ್ದಾಳೆಂಬ,
ಜೊತೆಗೆ
ಬರೆದದ್ದು ತಮ್ಮ ಬಗೆಗೇ
ಇರಬಹುದೆಂಬ
ಗುಟ್ಟಿನ ಗುಮಾನಿ
ಆಸೆ–ಇವರಿಗೆ.

ಹುಡುಗಿಯೊಬ್ಬಳು ಕಾಮದ ಬಗ್ಗೆ ಪದ್ಯ ಬರೆದರೆ
ಹುಡುಗಿಯರಿಗೆ ಕುತೂಹಲ
ಅವಳ ಕಣ್ಣಲ್ಲಿ ಊಹೆಯ ಹುಡುಗರನ್ನೆಲ್ಲ ಕಂಡು
ಪಟ್ಟಿಮಾಡುವ ಹುರುಪು
ತಮಗೆ ದಕ್ಕದ್ದೇನೋ
ಇವಳಿಗೆ ಸಿಕ್ಕಿದೆಯೆಂಬ ಗಂಭೀರ ಅನುಮಾನ–
ಅವ್ಯಕ್ತ ಮಾತ್ಸರ್ಯ.

ಬೆನ್ನ ಹಿಂದುಗಡೆ ವ್ಯಂಗ್ಯಬಾಣಗಳ
ದಿನಾಲೂ ಬೆಳಗೆ ಉಜ್ಜಿ ತೊಳೆಯುವ ಹಲ್ಲುಗಳ
ಕಿರಿತ ಗುಂಪಿನಲ್ಲಿ ಗುಸಗುಸ–
ನವೆಹಿಡಿದ ನಾಲಗೆಗಳ ಕೆರೆತ.

ಹುಡುಗಿಯೊಬ್ಬಳು ಕಾಮದ ಬಗ್ಗೆ ಪದ್ಯ ಬರೆದರೆ
ಮುದುಕರಿಗೆಲ್ಲಾ ಚಳಿಗೆ ಹೊತ್ತಿಸಿದ ಬೆಂಕಿ,
ತೀರದ ಬಯಕೆಗಳ ಕೊಳ್ಳಿ.
ಊಹೆಯ ಮಹಲನ್ನೆ ಕಟ್ಟಿ
ಗೋಪುರವೇರುತ್ತಾರೆ
ಮುದಿಚಪಲಕ್ಕೆ ಅಷ್ಟು ಕಳ್ಳನ್ನೂ ಕುಡಿಸಿ
ತೊಡೆ ತಟ್ಟಿ
ರಂಗುರಂಗಾದ ಕತೆ ಕಟ್ಟಿ
ಇಳಿಬೀಳುತ್ತಿರುವ ದವಡೆಗಳಿಗೆ
ಕಸರತ್ತು ನೀಡುತ್ತಾರೆ.

ಹುಡುಗಿಯೊಬ್ಬಳು ಕಾಮದ ಬಗ್ಗೆ ಪದ್ಯ ಬರೆದರೆ
ಮುದುಕಿಯರು ಕೆಂಡ ಉಗುಳುತ್ತಾರೆ
ಮುಚ್ಚಿಟ್ಟದ್ದು ತೆರೆದು
ಬಟಾಬಯಲುಮಾಡಿ
ಹೆಣ್ಣಿನ ಸ್ಥಾನ ಮಾನ
ಹ್ವಾ!
ಸಂಸ್ಕೃತಿ ಕಳೆವಳಲ್ಲಾ
ಎಂದು ಹಲುಬಿ,
ಹುಡುಗಿಯರೇ ಹೀಗಾದರೆ
ಹುಡುಗರದೇನು
ಎಂದು ವೇದಾಂತದುಸಿರು
ಬಿಡುತ್ತಾರೆ.

ಹುಡುಗಿ,
ಕಾಮದ ಬಗ್ಗೆ ಪದ್ಯ ಬರೆಯುತ್ತಾಳೆ.

**ಪ್ರತಿಭಾ ನಂದಕುಮಾರ್**

## ಅವರು ಪುರಾವೆಗಳನ್ನು ಕೇಳುತ್ತಾರೆ.

ಅವರು ಎಲ್ಲದಕ್ಕೂ ಪುರಾವೆಗಳನ್ನು ಕೇಳುತ್ತಾರೆ
ನಾನವನ ಹೆಂಡತಿ ಎಂದರೆ ಕೊರಳು ನೋಡುತ್ತಾರೆ

ಉತ್ಕಟ ಕಲಾವಿದೆ ಎಂದರೆ ವಿನ್ಯಾಸ ಹುಡುಕುತ್ತಾರೆ
ಈಗ ಉಂಡೆನೆಂದರೆ ತೊಳೆದ ತಟ್ಟೆ ತೋರೆನ್ನುತ್ತಾರೆ

ನಾನು ನರ್ತಿಸದ ನರ್ತಕಿ
ಹಾಡು ಮೂಡಿಸದ ಗಾಯಕಿ
ಆಗಿಲ್ಲದ ಗಾಯಗಳಿಗೆ
ಅದೃಶ್ಯ ಮುಲಾಮು ಹಚ್ಚುವ ದಾದಿ
ಕಂಬಿಗಳಿಲ್ಲದ ಪಂಜರದಲ್ಲಿ ಬಂದಿ
ಹಡೆಯದೆಯೇ ತಾಯಿ

ಗೋಡೆಗಳಿಲ್ಲದ ಮನೆಯಲ್ಲಿ
ಹಾರದ ಹಕ್ಕಿಗಳನ್ನೆಲ್ಲ ಅವನು
ಕಟ್ಟಿ ಹಾಕಿದ್ದಾನೆ

ಅವಿತಿಟ್ಟ ಅಪ್ಪುಗೆಗಳಲ್ಲಿ ಬೆಚ್ಚಗಾಗುತ್ತಾನೆ
ಬಿರಿದ ತುಟಿಗಳಲ್ಲಿ ಮೂಡದ ಮುತ್ತುಗಳಲ್ಲಿ
ನಮ್ಮ ಪ್ರೀತಿಯ ವ್ಯಾಖ್ಯಾನ

ಅಂದರೆ ಅವರು ನಗುತ್ತಾರೆ
ಮಾತು ಬೇಡದ ಮೌನಕ್ಕೆ
ಕಣ್ಣೀರಿಳಿಯದ ಅಳುವಿಗೆ ಕೊಸರುತ್ತಾರೆ.

ನಾನು ಎಲ್ಲ ಮೀರಿದೆನೆಂದು
ಸ್ವಲ್ಪ ಜಾರಿದೆನೆಂದು
ಎಲ್ಲ ಮರೆತಿದ್ದಕ್ಕೆ
ಪ್ರೀತಿ ಸತ್ತಿದ್ದಕ್ಕೆ
ಅವನೂ ಮತ್ತೆ ಮತ್ತೆ
ಪುರಾವೆ ಕೇಳುತ್ತಿರುವಾಗ
ಪಲ್ಲಟದ ಆ ಗಳಿಗೆಗಳಲ್ಲಿ
ನಾನು ನಿಂತೇ ಹಾಡುತ್ತಿದ್ದೆ
ಅವನು ಬಯಲು ಬಯಲಾಗು
ಎನ್ನುತ್ತ ಹುದುಗಿದ ಆಲಯದೊಳಗೆ

## ಅಡುಗೆ ಮಾಡುತ್ತಿದ್ದೇನೆ-2

ಅಡುಗೆ ಮಾಡುವುದೆಂದರೆ ಬಹಳ ಇಷ್ಟ ನನಗೆ
ಹೊರದಾರಿ ಅದು ನನ್ನೆಲ್ಲ ಆಕ್ರೋಶಗಳಿಗೆ
ತೊಳೆದು ಸಿಪ್ಪೆ ಸುಲಿದು ಕತ್ತರಿಗೆ ಜಜ್ಜಿ ಕುಟ್ಟಿ
ಹುರಿದು ಅರೆದು ರುಬ್ಬಿ ಸುರಿದು ಬಾಡಿಸಿ
ಬೇಯಿಸಿ ಹಿಚಿಕಿ ಮಸೆದು ಕೊಚ್ಚಿ ಕಲೆಸಿ
ಗಸಗಸನೆ ಕಡೆದು ಎತ್ತಿ ಹಾಕಿದರೆ ತಟ್ಟೆಗೆ
ರುಚಿ ರುಚಿ ಅಂತ ತಿನ್ನುತ್ತಾರೆ!

**ಸ. ಉಷಾ**

## ಅಮ್ಮನಿಗೆ

ಬೇಡಮ್ಮ ಬೇಡ
ಆಕಾಶದಗಲಕ್ಕೂ ನಿನ್ನ ಸೆರಗು ನೆರಿ ಹರಡಿ
ಬಿಸಿಲ ಮರೆಸಿ ಬದುಕಿನ ಹಸಿರ ಬಿಳಿಚಿಸಬೇಡ
ವರುಷ ಹದಿನೇಳಾಯ್ತು ಸೆರಗು ಹಾರಿಸಿ ಅಲೆದು
ಕಂಡಕಂಡವರಿಗೆಲ್ಲ ಕಣ್ಣು ಹೊಡೆಯಬೇಡ
ಗಾಳಿಗುದುರೆ ಹತ್ತಿ ಗಂಡುಬೀರಿಯಾಗಬೇಡೆಂದು
ನಿನ್ನಮ್ಮ ಅವಳಮ್ಮ ಅವಳಮ್ಮ
ಲಾಗಾಯ್ತಿನಿಂದ ನನ್ನಂಥ ಪಡ್ಡೆಗಳ
ಕಿವಿಯಲ್ಲೂದಿದ ಪುಂಗಿ ನೀನೂ
ಊದಬೇಡ
ಈಗ ತಾನೆ ಹೆಡೆಯಾಡಿಸುತ್ತಿದ್ದೇನೆ
ಯಾರನ್ನಾದರೂ ಕಚ್ಚಿ ವಿಷವಿಳಿಸಿಕೊಳ್ಳುತ್ತೇನೆ
ನನಗೆ ದಾರಿ ಬಿಡು
ಅಂಗಳದ ಗಿಡವ ಪ್ರದಕ್ಷಿಸಿ
ರಂಗೋಲಿ ಬರೆದು ಕೈಲಾಸ ಕಾಣಲು
ಗಾಳಿ ಬೆಳಕಿಲ್ಲದೆ ಹೆಣವಾಗಲು
ನಿನ್ನ ದಮ್ಮಯ್ಯ ನನ್ನ ಕೈಲಾಗೋದಿಲ್ಲ
ನೀ ಹಾಕಿರುವ ಅಣೆಕಟ್ಟೆ
ಒಡೆದು ಬಿರುಮಳೆಗೆ ಸೊಕ್ಕಿ
ಭೋರ್ಗರೆದು ನುಗ್ಗಿ
ನಿನ್ನಂತಾಗದೆ ಬದುಕುತ್ತೇನೆ
ನನಗೆ ದಾರಿ ಬಿಡು

**ದು. ಸರಸ್ವತಿ**

## ಕಿತ್ತು ಬಿಸಾಡಿರುತ್ತಿದ್ದೆ ಎಂದೋ

ಕಿತ್ತು ಬಿಸಾಡಿರುತ್ತಿದ್ದೆ ಎಂದೊ
ಮೊಲೆಯೋನಿತೊಗಲಮೆತ್ತೆಗಳ

ಕಟ್ಟಿದ್ದ ನೆತ್ತರ ಮೆತ್ತೆ ಕಿತ್ತು ಬರುವ
ಜೀವಾ ಹೊತ್ತ ಸತ್ತೆ ಬರುವ
ಸ್ಖಲನ ಹರಿಬಿಟ್ಟ
ಮಿಲಿಯಾಂತರ ಜೊಳ್ಳು ಬಿತ್ತಗಳು
ಹೊತ್ತು ತರುವ ಏಕೈಕ ಬಸುರಿ ಬಿತ್ತ ಬರುವ
ನರನಾಡಿಗಳೆಲ್ಲೆಡೆ ಅಡಗಿರುವ
ನವಿರುಗಳ ಮೆಲುಕಂಪನದ ಬಿಂದುವಾಗುವ
ದಾರಿಯಾಗಿರದಿದ್ದರೆ

ಕಣಕಣಗಳ ಕಿಣಿಕಿಣಿಸುವ
ಪುಳಕಗಳಿಗೆ ನಿಮಿರಿ ನಿಲ್ಲುವ ಕಣಕಗಳು
ಹಸಿ ಕೂಸಿನ ಹಸಿವು ನೀಗಿಸಿ
ಕಸುವಾಗಿಸುವ
ಹಾಲಬುಗ್ಗೆಗಳಾಗಿರದಿದ್ದರೆ

ತೊಗಲ ದೇಗುಲದ
ಒಳಗಿನ ಮೂಲ ಬೆಳಕಿನ ಸೆಲೆಗೆ
ಆಗಿರದಿದ್ದರೆ ನೆಲೆ

ನಿನ್ನ ಉದ್ರೇಕವನು
ಏರಿಸಿ ಇಳಿಸುವ

ಮೊಲೆಯೋನಿತೊಗಲಮೆತ್ತೆಗಳ
ಎಂದೋ ಕೆತ್ತಿ ಬಿಸಾಡಿರುತ್ತಿದ್ದೆ
ಇತ್ತೆಂಬ ಗುರುತಿಲ್ಲದಂತೆ.

## ಲಲಿತಾ ಸಿದ್ದಬಸವಯ್ಯ

### ಸ್ವಂತೋಪಮೆ

ಒಂದೊಂದು ದಿನ
ಎದ್ದು ಅದಾವ ಪಾಕಶಾಸನನ
ಮೊಖ ನೋಡಿರುತ್ತೇವೋ
ಹಾಲು ನೀರು ಸೈತ ಕೆಟ್ಟುಬಿಟ್ಟಿರುತ್ತವೆ
ಅಂಥಾ ಫ್ರಿಜ್ಜೊಳಗಿದ್ದೂ ಇವು ಬೆಮರ್ತರೆ
ದೂರುವುದು ಯಾವ ಬ್ಯಾಟರಾಯನಿಗೆ

ನೀರು ಲೀಟರಿಗೆ ಹದಿನೆಂಟು
ಹಾಲು ಮುವ್ವತ್ತೆರಡು, ಅದೂ ಅಚ್ಚಕನ್ನಡ ಗೋವಿನದ್ದು
ಸೋನಾಮಸೂರಿ ಅರವತ್ತೊ್ಮರು
ತೊಗರಿಬೇಳೆ ನೂರಹದಿನೆಂಟು
ಕೈ ಬರುತ್ತಾ ತುಸಕೆಟ್ಟ ಮಾತ್ರಕ್ಕೆ
ಸ್ಕ್ರಾಪ್ ಅಕೌಂಟಿಗೆ ಒಟ್ಟಕ್ಕೆ.

ಕೆಡುತ್ತಿರಲಿಲ್ಲವಂತೆ
ವರ್ಷವಿಟ್ಟರು ನಳ ಅಟ್ಟಅಡುಗೆ
ಬಾರಪ್ಪ ಜುಗಾರೀ ವೀರ ಬಾ, ಆ ಬಾಹುಕ ಮೂತಿಯನ್ನೂ ಸಹಿಸಿಕೊಂಡೇವು
ಇನ್ ಎಮರ್ಜೆನ್ಸಿ ಲುಂಗಿಗೆ ಕಂಚಿಸೀರೆಯನ್ನೆ ಚರ್ರನೇ ಹರಿದುಕೊಟ್ಟೇವು
ಬೇಕೂಫ ನೀನು ನಿಯತ್ತಿಂದ ಟ್ರೇಡ್ ಸೀಕ್ರೆಡ್ ಕಲಿಸಿಕೊಡಬೇಕು
ಅಷ್ಟೇ ತಂದೆ

2

ಇನ್ನೆಲ್ಲ ಹೋಗಲಿ
ಆ ಬೇಳೆ ಪದಾರ್ಥವಾದರೂ ಉಳಿಯಲಿ
ಅಂತ ತುರ್ತು ಕಾರ್ಯಾಚರಣೆ ಕೈಗೊಂಡು
ಕುದಿಸಿದರೆ ಕೊತಕೊತ, ಅದು ನೊರೆಯೆದ್ದು ಬುದಬುದ
ಕೆಳಗಿನ ಮನೆ ಸದ್ಗೃಹಸ್ಥರಿಗೆ
ಉಚಿತ ಕಳ್ಳಭಟ್ಟೀ ಪರಿಮಳ
ಆ ಬುರುಗು ತೆಗೆದುತೆಗೆದೂ ಸಿಂಕಿಗೆ ಸುರಿದು ಸುರಿದೂ

ಅಯ್ಯೋ ತೆಗಿರ್ರೀ
ಮುದಿ ಗಂಡಿಗೆ ಅದೆ ಇಲ್ಲದ ಮೇಲೆ
ಹೂವಿನ ಮಂಚವಾದರೇನು ಬಂತು
ಬೆಳಿಗ್ಗೆ ಅವನಿಗೆ ಪೇನ್‌ಕಿಲ್ಲರ್ರು, ಹುಡುಗಿಗೆ ಚಿಕ್ಕನಾಯಕನಹಳ್ಳಿ ಷೀಲ್ಡು
ಹಳಸಿದ ಸಾರಿನ ರಿಪೇರಿಯೂ ಅಷ್ಟೆ
ಫೇಸ್‌ಬುಕ್ಕಲ್ಲಿ ಮೀನಾಕುಮಾರಿಯ ಪೋಟೋಕ್ಕೆ ನನ್ನ ಅಕೌಂಟು

3

ಇದೆಲ್ಲ
ಗೋವಾ ಸಮುದ್ರದ ಮುಂದೆ ಮ್ಯಾಚಾಗದ ಸೀರೆಕುಬುಸದ
ಹಾಗೆ
ಆಂಟಿಕ್ ಪೀಸುಗಳು ನಾವು ಗಂಡಹೆಂಡಿರು
ನಿಂತಿದ್ದ ಸುಮುಹೂರ್ತದಲ್ಲಿ ಕಣ್ಣಿಗೆ ಕಟ್ಟಿದ ಹಾಗೆ
ಮರುಪ್ರಸಾರವಾಯ್ತು.

ಥೂ ಹೋಗತ್ತಾ
ಇಂಥ ಘನ ಶರಧಿಯುಬ್ಬರ ಬುಧ್ಬುಧವ
ಹೋಲಿಸುತ್ತೀಯಾ ಹಳಸಿದ ಸಾರಿನ ಬುರುಗಿಗೆ
ಉಪಮಾದರಿದ್ರೆ ಬಾಯ್ಮುಚ್ಚಿಕೊಂಡು ಸುಮ್ಮನಿರೆ

ಅಂತ ಅಂತರಾತ್ಮವ ಒನಕೆಯಲ್ಲದುಮಿದರೂ
ಕರ್ಮ ನೋಡಿ ಅಂಬುಧಿಯ ಮುಂದೆ
ಅದೇ ಕೆಟ್ಟಡುಗೆ ನೆನಪು

ಭೂವಮ್ಮಾ
ಇಕ್ಕಿದ್ದೀಯೆನಮ್ಮಾ ಒಲೆಗೆ ಕಾಡಿಗೆ ಕಾಡೇ ತರಿದು
ಕುದ್ದೂಕುದ್ದೂ ನಿನ್ನೀಕೊಪ್ಪರಿಗೆ ಮೇಲೋಗರ
ನೊರೆಯೆದ್ದೂ ಎದ್ದೂ ಹಳಸುಕ್ಷಾರ
ಮನ್ವಂತರ ಕುಂತರು ನೀನು ಒಲೆ ಮುಂದೆ
ಅದು ನೆಟ್ಟಗಾಗಲ್ಲ, ಒಂತೊಟ್ಟು ಬಾಯಿಗೆ ಬಿಡಂಗಿಲ್ಲ
ಏಳುತಾಯೇ
ರತ್ನಗರ್ಭಾ ವಸುಂಧರೇ, ಒಲೆಯಾರಿಸು
ದುರ್ಪಾಕದ ರಿಪೇರಿ ನಿಲಿಸು

4
ಕ್ಷಮಿಸಿ
ಸಾಗರೋ ಸಾಗರೋಪಮಮ್ ತತ್ವ ಕುಲಗೆಡಿಸಿದ್ದಕ್ಕೆ
ಲೇಡಿಕವಿ ಸಮುದ್ರ ಹೊಕ್ಕರೂ
ಸ್ವಂತದ್ದೆ ಉಪಮೆ!

**ಅನಸೂಯ ಕಾಂಬಳೆ**

## ವಿಕಲಾಂಗ ಪುರುಷನ ಶಿಶ್ನ ಪುರಾಣ

ಬಿರುಬಿಸಿಲಲ್ಲಿ ವಸಂತ ಬಂದ
ಹೂವು ಅರಳಲೇ ಇಲ್ಲ
ಜೋತಾಡಿದವು ಹೆಣ ಮಾವಿನ ಮರದಲಿ
ಕೋಗಿಲೆಗೆ ಕಂಠವೇ ಇಲ್ಲ ವಸಂತನಿಗೆ ಮುಖವೇ ಇಲ್ಲ

ಅನಂಗನ ಸಂಗದಲಿ
ಮಧುರ ಮಿಲನವೊಂದು ಸಾಧ್ಯವೇ?

ಸುಳ್ಳು ಸೃಷ್ಟಿ ಪೊಳ್ಳು ಪುರಾಣಗಳ ಪಹರೆಯಲಿ
ಮೈಯೆಂಬ ಮೈಯೆಲ್ಲ ಯೋನಿಯಾಗಿ
ಯೋನಿಯೇ ಕಣ್ಣಾಗಿ ಕಲ್ಲಾಗಿ ಶಾಪಗ್ರಸ್ತ ಶಿಶ್ನ ಚರಿತೆಗೆ
ಮುಳ್ಳುಗಳ ಸಾಲು

ಎಲ್ಲಿ ನೋಡಿದಲ್ಲಿ ಮುಖವಿಲ್ಲದ ಮನುಷ್ಯರು
ವಿಕಲಾಂಗ ಪುರುಷರ ಶಿಶ್ನಗಳು ಚೀರುತ್ತಿವೆ
'ನಿಮ್ಮ ಅಂಗಗಳು ನಮ್ಮ ಪ್ರಚೋದಿಸುತ್ತಿವೆ'
ಪಾಪ! ಗೊತ್ತಿಲ್ಲ ಅವರಿಗೆ, ಕ್ಷಮೆ ಇರಲಿ ಶಿವನೆ!!
ಅನಂಗರ ಶಿಶ್ನಗಳು ಅಸಹ್ಯ ಹುಟ್ಟಿಸುತ್ತಿವೆ
'ಲಿಂಗವನು ಭಂಗ ಮಾಡುವ' ಹತಾರುಗಳ ಮಸೆಯುತ್ತಿವೆ
ಅಯ್ಯೋ, ಅನಾರೋಗ್ಯಕರ ಪರಿಸರವೊಂದು ಹುಟ್ಟದಿರಲಿ

ಹಣ್ಣು-ಹೆಣ್ಣುಗಳ ಮನುಷ್ಯತ್ವದ ಮೀಮಾಂಸೆ
ಅರಿಯದ ಚರಿತೆಗೆ ಅನಾಗರಿಕ ಸೋಂಕು
ಮನಸ್ಸಿನ ಮಾತು ಮನಸುಳ್ಳವರ ಅಂತರಾಳ
ಮನಸು ಒಲಿಸಿಕೊಳುವುದು ಕಲಾಚಾರ
ಹೆಣ್ಣಿನ ಮನಸ ಒಲಿಸಿಕೊಳಲಾರದ
ಗಂಡಿನ ದೌರ್ಬಲ್ಯದ ಅಭಿವ್ಯಕ್ತಿಯೇ ಅತ್ಯಾಚಾರ,
ಥೆ! ಕವಿತೆ ವಾಚ್ಯವಾಯಿತೆ?
ಅತ್ಯಾಚಾರಕ್ಕೆ ಇನ್ನೆಂಥ ಧ್ವನಿ ಹೊರಡುತ್ತೆ?
ಅದು ಮಾಧುರ್ಯದಿಂದ ಹೊರತಾದುದು.

ಅಂದು..
ಧನ ಕನಕ ಕೊಟ್ಟರೆ ಹೆಂಡಿರೊಲಿವರೆ?

ಪ್ರಶ್ನಿಸಿದ್ದಳು ದ್ರೌಪದಿ
ಇಂದು..
ಮಣಿಪುರದ ಮಹಿಳೆಯರ ಬಹಿರಂಗ ಆಹ್ವಾನಕ್ಕೆ
ದಕ್ಕಿಲ್ಲ ಇನ್ನೂ ಉತ್ತರ!
ಶಿಶ್ನಕ್ಕೆ ಕಣ್ಣಿಲ್ಲ, ಮನಸಿಲ್ಲ ಅದು ಪೂರ್ಣ ದೇಹವಲ್ಲ
ಮುಖವಿಲ್ಲದವರು ಮುಖಾಮುಖಿಯಾಗುವುದಿಲ್ಲ

ಏಕಾಂತದ ಮಿಲನೋತ್ಸವದಲಿ
ಬಿತ್ತುವ ಗರ್ವ ರಸದ ಭಯದಲಿ
ತಂಡುಗಟ್ಟಿ ಎರಗುತ್ತಾರೆ
ಮನಸಿಲ್ಲದ ಮಿಲನಕ್ಕೆ ಯಾವ ಅರ್ಥವುಂಟು?
ನೂರುನೂರು ಕಣ್ಣುಗಳಲಿ ಬಣ್ಣಬಣ್ಣಗಳ ತುಂಬಿ
ಗರಿಬಿಚ್ಚಿ ಕುಣಿವ ನವಿಲಿನ ಗುಟ್ಟು
ಈ ನೆಲದ ಹಾಡಾಗಬೇಕು..

# 'ಶ್ರಮಜೀವಿ ವರ್ಗದ ಅಸ್ತ್ರ ಮಾರ್ಕ್ಸ್‌ವಾದ'

**ಸಿದ್ಧನಗೌಡ ಪಾಟೀಲ**

ಸಂಗಾತಿಗಳೆ, ಮಾರ್ಕ್ಸ್‌ವಾದವನ್ನು ಸರಳವಾದ ಪರಿಭಾಷೆಯಲ್ಲಿ ಹೇಳಬೇಕು ಎಂದು ನೀವು ಕೇಳಿದ್ದೀರಿ. ನಿಮ್ಮ ನಿರೀಕ್ಷೆ ಸಹಜವಾದದ್ದು. ಏಕೆಂದರೆ ಮಾರ್ಕ್ಸ್‌ವಾದ ಎನ್ನುವುದು ಮನುಷ್ಯ ಬದುಕಿನ ಎಲ್ಲ ಆಯಾಮಗಳನ್ನು ನಿಸರ್ಗ ತತ್ವದೊಂದಿಗೆ ವೈಜ್ಞಾನಿಕವಾಗಿ ಪ್ರಸ್ತುತ ಪಡಿಸಿ, ಶ್ರಮಜೀವಿ ವರ್ಗದ ವಿಮೋಚನೆಗೆ ರೂಪಿಸಲಾದ ಒಂದು ಸಿದ್ಧಾಂತ. ಶ್ರಮಜೀವಿ ವರ್ಗ ತಾನು ಸಂಘಟನೆಯಾಗಿ ಮಾರ್ಕ್ಸ್‌ವಾದವನ್ನು ಒಂದು ಅಸ್ತ್ರವನ್ನಾಗಿ ಬಳಸಿ, ಸಾಮಾಜಿಕ ಬದಲಾವಣೆಗೆ, ಶೋಷಣಾಮುಕ್ತ ಸಮಾಜ ನಿರ್ಮಾಣಕ್ಕೆ ಕಾರಣವಾಗುತ್ತದೆ. ಅದು ಇಂದಿನ ಬಂಡವಾಳಶಾಹಿ, ಸಾಮ್ರಾಜ್ಯಶಾಹಿ ವರ್ಗಗಳಿಗೆದುರಾಗಿ ಹೋರಾಡಿ ಸಮಾಜವಾದಿ, ಕಮ್ಯುನಿಸ್ಟ ಸಮಾಜ ನಿರ್ಮಿಸಲು ಒಂದು ಮಾಧ್ಯಮವಾಗುತ್ತದೆ ಎಂಬುದು ಕಾರ್ಲ್‌ಮಾರ್ಕ್ಸ್ ಅವರ ಚಿಂತನೆಯ ಸಾರ. ಇದನ್ನು ಮಾರ್ಕ್ಸ್‌ವಾದ ಎನ್ನುತ್ತೇವಾದರೂ ಅದು ಕಾರ್ಲ್‌ಮಾರ್ಕ್ಸ್‌ರಿಂದ ಆರಂಭವಾಗಿ ಫ್ರೆಡ್ರಿಕ್ ಏಂಗೆಲ್ಸ್, ಲೆನಿನ್ ಮುಂತಾದ ಚಿಂತಕರ, ಹೋರಾಟಗಾರರ ಅನುಭವ, ಚಿಂತನಗೆಳ ಮೂಲಕ ರೂಪಗೊಂಡ ಒಂದು ಸಿದ್ಧಾಂತ. ದುಡಿವ ವರ್ಗದ ಶೋಷಣೆ ಒಂದು ದೇಶ, ಪ್ರದೇಶಕ್ಕೆ ಸೀಮಿತವಾದುದಲ್ಲ. ಅದು ವಿಶ್ವವ್ಯಾಪಿಯಾದದ್ದು, ಆ ಹಿನ್ನೆಲೆಯಲ್ಲಿ ಮಾರ್ಕ್ಸ್ ಮತ್ತು ಏಂಗೆಲ್ಸ್ ಮುಂಚೂಣಿಯಲ್ಲಿದ್ದು ಸಂಘಟಿಸಿದ್ದ ಕಮ್ಯುನಿಸ್ಟ್ ಲೀಗ್ 1847ರಲ್ಲಿ ಲಂಡನ್ನಿನಲ್ಲಿ ಆರಂಭವಾಯಿತು. ಆ ಸಂದರ್ಭಕ್ಕಾಗಲೇ ಯುರೋಪಿನ ಹಲವಾರು ದೇಶಗಳಲ್ಲಿ ವಿವಿಧ ರೀತಿಯ ಸಿದ್ಧಾಂತಗಳು ಶ್ರಮಿಕ ವರ್ಗವನ್ನು ಕುರಿತಾಗಿ ರೂಪಗೊಂಡಿದ್ದವು. ಸಮಾಜದಲ್ಲಿ ಒಂದೆಡೆ ಶೋಷಕ ವರ್ಗ ಇನ್ನೊಂದೆಡೆ ಶೋಷಿತ ವರ್ಗ ಸ್ಪಷ್ಟವಾಗಿ ವಿಂಗಡನೆಗೊಂಡು ಸಂಘರ್ಷಗಳು ಆರಂಭವಾಗಿದ್ದವು. ಇಂಥ ಸಂದರ್ಭದಲ್ಲಿ ಆದರ್ಶವಾದಿ ಚಿಂತನೆಗಳು, ಚಟುವಟಿಕೆಗಳು ಮುಖ್ಯವಾಗಿ ಪಶ್ಚಿಮ ಯುರೋಪ್‌ನಲ್ಲಿ ಆರಂಭವಾಗಿದ್ದವು. ಆ ಸಂದರ್ಭದಲ್ಲಿ ಕಾರ್ಲಮಾರ್ಕ್ಸ್ ಮತ್ತು ಏಂಗೆಲ್ಸ್ ಶ್ರಮಜೀವಿ ವರ್ಗಕ್ಕೆ ಒಂದು ವೈಜ್ಞಾನಿಕವಾದ ಕಾರ್ಯಕ್ರಮವನ್ನು ಕೊಟ್ಟರು. 1847 ಅಕ್ಟೋಬರ್ 29ರಂದು ಕಮ್ಯುನಿಸ್ಟ್ ಲೀಗ್‌ನ ದ್ವಿತಿಯ ಮಹಾಧಿವೇಶನ ಸಹ ಲಂಡನ್‌ನಲ್ಲಿ ಜರುಗಿತು. ದುಡಿವ ವರ್ಗದ ಶೋಷಣೆಯನ್ನು ನಿರ್ಮೂಲನೆ ಮಾಡಲು ಒಂದು ಕಾರ್ಯಕ್ರಮ ರೂಪಿಸಲು ಅಧಿವೇಶನ ನಿರ್ಧರಿಸಿತು. ಆಗ ಒಂದು ಪ್ರಣಾಳಿಕೆಯನ್ನು

ಸಿದ್ಧಪಡಿಸಲು ಕಾರ್ಲ್‌ಮಾರ್ಕ್ಸ್ ಮತ್ತು ಫ್ರೆಡ್ರಿಕ್ ಏಂಗೆಲ್ಸ್‌ರವರನ್ನು ಕೇಳಿಕೊಳ್ಳಲಾಯಿತು. ಜಗತ್ತಿನ ದುಡಿವ ವರ್ಗದ ಹೋರಾಟಕ್ಕೆ, ರಾಜಕೀಯ ಪ್ರಶ್ನೆಗೆ ಸಮಾಜವಾದಿ, ಕಮ್ಯುನಿಷ್ಟ್ ಸಮಾಜ ನಿರ್ಮಾಣಕ್ಕೆ ಮಾರ್ಗದರ್ಶಿಯಾಗಿ "ಕಮ್ಯುನಿಷ್ಟ್ ಪಾರ್ಟಿಯ ಪ್ರಣಾಳಿಕೆ" ಸಿದ್ಧವಾಯಿತು. ಇದನ್ನು ಮಾರ್ಕ್ಸ್ ಮತ್ತು ಏಂಗೆಲ್ಸ್‌ರು 1847 ಡಿಸೆಂಬರ್‌ನಿಂದ ಆರಂಭಿಸಿ 1848 ಜನವರಿಯ ಒಳಗೆ ಅಂದರೆ ಎರಡು ತಿಂಗಳಲ್ಲಿ ಬರೆದು ಮುಗಿಸಿದರು. ಇದು ಜಗತ್ತಿನಲ್ಲಿ ಅತಿ ಹೆಚ್ಚು ಜನರಿಗೆ ತಲುಪಿದ, ವಿಶ್ವದ ಎಲ್ಲ ಶ್ರಮಜೀವಿ ವರ್ಗದ ಹೋರಾಟಕ್ಕೆ ಮಾರ್ಗದರ್ಶನ ಮಾಡಿದ ಕೃತಿಯಾಗಿದೆ. ದುಡಿವ ವರ್ಗ ಒಂದಾಗಿ ವಿಶ್ವದಾದ್ಯಂತ ಬಂಡವಾಳಶಾಹಿ, ಜಮೀನ್ದಾರಿ ವ್ಯವಸ್ಥೆಯ ವಿರುದ್ಧ ಸಮರ ಸಾರಿ ಶ್ರಮಜೀವಿ ವರ್ಗವೇ ಆಡಳಿತ ವರ್ಗವಾಗಿ, ಶೋಷಣಾ ರಹಿತ ಸಮಾಜವಾದಿ, ಕಮ್ಯುನಿಷ್ಟ್ ಸಮಾಜ ನಿರ್ಮಿಸಲು ಈ ಕೃತಿ ವೈಜ್ಞಾನಿಕವಾದ ಚಿಂತನೆಗಳನ್ನು, ಕಾರ್ಯಕ್ರಮವನ್ನೂ ಕೊಡುತ್ತದೆ. 'ವಿಶ್ವದ ಕಾರ್ಮಿಕರೇ ಒಂದಾಗಿ' ಎಂದು ಕೊಡುವ ಕರೆ ಜಾತಿ, ಧರ್ಮ, ದೇಶ, ಖಂಡಗಳಾಚೆ ಬೆಳೆದು ಇಂದು ಮಾರ್ಕ್ಸ್‌ವಾದ, ಕಮ್ಯುನಿಸಂ ಎಂಬ ಸಿದ್ಧಾಂತವಾಗಿ ಬೆಳೆಯುತ್ತಲೇ ಇದೆ. ಇಂಥ ಒಂದು ಕೃತಿ ವಿಶ್ವದ ದುಡಿವ ವರ್ಗಕ್ಕೆ ಕೈಪಿಡಿ. 'ಕಮ್ಯುನಿಷ್ಟ್ ಪಾರ್ಟಿ ಪ್ರಣಾಳಿಕೆ' ವಿಶ್ವದ ದುಡಿವ ವರ್ಗದ ಕ್ರಾಂತಿಗೆ, ಸಮಾಜೋ–ರಾಜಕೀಯ ಬದಲಾವಣೆಗೆ ಒಂದು ಕ್ರಿಯಾ ಯೋಜನೆಯಾದರೆ, ಇದನ್ನು ಸಿದ್ಧಪಡಿಸಲು ಕಾರ್ಲ್‌ಮಾರ್ಕ್ಸ್ ನಡೆಸಿದ ಅಧ್ಯಯನ ಅಪಾರವಾದದ್ದು. ಅಂಥ ಆಳವಾದ ಅಧ್ಯಯನ ಮತ್ತು ಪರಿಶ್ರಮದಿಂದ ರೂಪಗೊಂಡ ಸಿದ್ಧಾಂತವೇ ಮಾರ್ಕ್ಸವಾದಿ ಸಿದ್ಧಾಂತ.

ಕಾರ್ಲ್‌ಮಾರ್ಕ್ಸ್ ಅವರು ತತ್ತ್ವಶಾಸ್ತ್ರ, ಇತಿಹಾಸ, ಅರ್ಥಶಾಸ್ತ್ರಕ್ಕೆ ಶ್ರಮಜೀವಿ ವರ್ಗ ದೃಷ್ಟಿಕೋನದಿಂದ ಕೊಟ್ಟ ಕೊಡುಗೆ ವಿಶ್ವದ ಚಿಂತನಾ ವಿಧಾನದ ಮೇಲೆಯೇ ಪರಿಣಾಮ ಮಾಡಿದೆ. ತತ್ತ್ವಶಾಸ್ತ್ರ ಕ್ಷೇತ್ರ ಆಧ್ಯಾತ್ಮ, ಕರ್ಮ, ಪರಲೋಕ, ಸ್ವರ್ಗ, ನರಕ, ಪುನರ್‌ಜನ್ಮ ಇಂಥ ವಿಷಯಗಳ ಸುತ್ತಲೇ ಸುತ್ತುತ್ತಿರುವಾಗ ಮಾರ್ಕ್ಸ್ 'ಭೌತವಾದಿ' ತತ್ತ್ವಶಾಸ್ತ್ರಕ್ಕೆ ವೈಜ್ಞಾನಿಕ, ನೈಸರ್ಗಿಕ ವಿಜ್ಞಾನದ ದೃಷ್ಟಿಕೋನ ಕೊಟ್ಟು, ಮನುಷ್ಯನ ಸಂಕಟ, ಸಂಕಷ್ಟಗಳಿಗೆ ಭೌತಿಕ, ಲೌಕಿಕ ಜಗತ್ತಿನ ವ್ಯವಹಾರ, ವಿದ್ಯಮಾನಗಳೇ ಕಾರಣ, ಯಾವುದೇ ಅಗೋಚರ ಶಕ್ತಿ ಅಲ್ಲ ಎಂದು ಸಾಬೀತು ಪಡಿಸುತ್ತಾರೆ. ನಿಸರ್ಗ ಮತ್ತು ಮನುಷ್ಯನ ನಡುವಿನ ಸಂಬಂಧ, ಆದಿಕಾಲದಿಂದ ಇಂದಿನವರೆಗೆ ಬೆಳದ ಸಮಾಜದ ವಿಕಾಸವನ್ನು ಜನಕೇಂದ್ರಿತವಾಗಿ ಗುರ್ತಿಸುತ್ತಾರೆ. ಸಮಾಜದ ವಿಕಾಸಕ್ಕೆ, ಬೆಳವಣಿಗೆಗೆ, ಚಲನಶೀಲತೆಗೆ 'ಶ್ರಮ' ಕಾರಣ ಎಂದು ಪ್ರತಿವಾದಿಸುತ್ತಾರೆ. ಇತಿಹಾಸದಲ್ಲಿ ಗುಂಪು ಜೀವನ, ಗುಲಾಮ–ಗುಲಾಮರೊಡೆಯ, ಜೀತಗಾರ–ಜಮೀನುದಾರ, ಬಂಡವಾಳಗಾರ–ಕಾರ್ಮಿಕ ಇಂಥ ವಿವಿಧ ಹಂತಗಳನ್ನು ವ್ಯವಸ್ಥಿತವಾಗಿ ಅಧ್ಯಯನ ಮಾಡಿ, ವರ್ಗರಹಿತ, ಆದಿಮಾನವ ಸಮಾಜದಿಂದ ವರ್ಗ ವಿಂಗಡಿತ ಸಮಾಜ ಬೆಳೆದುಬಂದ ರೀತಿಯನ್ನು ವಿಶ್ಲೇಷಿಸುತ್ತಾರೆ. ಭೌತವಾದಿ ತತ್ತ್ವಶಾಸ್ತ್ರ, ವಾಸ್ತವವಾದಿ ಇತಿಹಾಸ ಹಾಗೂ ರಾಜಕೀಯ ಅರ್ಥಶಾಸ್ತ್ರ ಕಾರ್ಲ್‌ಮಾರ್ಕ್ಸ್ ಅವರ ದುಡಿವ ವರ್ಗದ ಪರವಾಗಿ ಕೊಟ್ಟ ಅಮೋಘ ಕೊಡುಗೆಗಳು.

ಅರ್ಥಶಾಸ್ತ್ರವನ್ನು ಬಂಡವಾಳದ ನೋಟದಿಂದ ವಿಶ್ಲೇಷಿಸಲಾಗುತ್ತಿತ್ತು. ಮಾರ್ಕ್ಸ್ ಅದನ್ನು 'ಶ್ರಮದ' ನೋಟದಿಂದ ವಿಶ್ಲೇಷಿಸಿದ. ಸಂಪತ್ತಿನ ವೃದ್ಧಿಗೆ 'ಶ್ರಮ' ಮುಖ್ಯ ಎಂಬುದನ್ನು ಸಾಬೀತು ಮಾಡಿದ. 'ಶ್ರಮ'ದ ಪ್ರಾಮುಖ್ಯತೆಯನ್ನು ಐತಿಹಾಸಿಕ ವಾಸ್ತವವಾದದ ವಿಶ್ಲೇಷಣೆಯ ಮೂಲಕ ಸಾಬೀತು ಪಡಿಸಿದ. ಅಂದರೆ ಬೆತ್ತಲೆಯಾಗಿ, ಗುಂಪು ಜೀವನ, ಸಹಬಾಳ್ವೆ, ಬೇಟೆಯ ಉತ್ಪಾದನಾ ಪದ್ಧತಿಯಿಂದ ಉಗಮವಾದ ಮಾನವ ಸಮಾಜ ಇಂದಿನ ವರ್ಗ ವಿಂಗಡನೆಯ, ಮೇಲು-ಕೀಳಿನ, ಕೋಟ್ಯಧಿಪತಿ-ಬಡವರ ಸಮಾಜವಾಗಿ ಹೇಗೆ ಮತ್ತು ಏಕೆ ಬೆಳೆಯಿತು ಎಂಬುದನ್ನು ಮಾರ್ಕ್ಸ್ ವೈಜ್ಞಾನಿಕವಾಗಿ ವಿಶ್ಲೇಷಿಸಿದರು. ಉತ್ಪಾದನಾ ಸಾಧನ ಮತ್ತು ಉತ್ಪಾದನಾ ಸಂಬಂಧಗಳ ಕುರಿತ ಅವರ ವಿಶ್ಲೇಷಣೆಗೆ ಪರ್ಯಾಯ ಇಂದಿಗೂ ಇಲ್ಲ. ರಾಜ್ಯ (ಪ್ರಭುತ್ವ) ಸಂಸ್ಥೆಯನ್ನು ಹುಟ್ಟು ಹಾಕಿ ಶೋಷಕ ವರ್ಗ ರೂಪಿಸಿದ ವ್ಯವಸ್ಥೆ ಬಹುಸಂಖ್ಯಾತ ಶ್ರಮಜೀವಿ ವರ್ಗವನ್ನು ನಿಯಂತ್ರಣದಲ್ಲಿಟ್ಟುಕೊಂಡಿದೆ. ಅದಕ್ಕಾಗಿ ಆದಿಕಾಲದಿಂದ ಶೋಷಕ ವರ್ಗ ಪ್ರತಿಪಾದಿಸಿದ ತತ್ತ್ವಶಾಸ್ತ್ರ, ಇತಿಹಾಸ, ರಾಜಕೀಯ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರಗಳಿಗೆ ಪ್ರತಿಯಾಗಿ ಈ ಎಲ್ಲ ಕ್ಷೇತ್ರಗಳಲ್ಲಿ ಶ್ರಮಜೀವಿ ವರ್ಗದ ಪರವಾಗಿ ಸಿದ್ಧಾಂತಗಳನ್ನು ಪ್ರತಿಪಾದಿಸಿದ್ದು ಮಾರ್ಕ್ಸ್‌ವಾದ.

ಮಾರ್ಕ್ಸ್‌ವಾದ ಕೇವಲ ಶ್ರಮಜೀವಿ ವರ್ಗದ ವಿಮೋಚನೆಯ ಸಿದ್ಧಾಂತಗಳ ವಿಶ್ಲೇಷಣೆಗೆ ಸೀಮಿತವಾಗಲಿಲ್ಲ. ಶ್ರಮಜೀವಿ ವರ್ಗ ವಿಶ್ವ ಮಟ್ಟದಲ್ಲಿ ಸಂಘಟನೆಯಾಗಿ, ಪ್ರಭುತ್ವವನ್ನು ಕೈಗೆತ್ತಿಕೊಂಡು ಸಮಾಜವಾದಿ ರಾಜಕೀಯ ಅರ್ಥಶಾಸ್ತ್ರದ ಜಾರಿಯ ಮೂಲಕ ಶೋಷಕ ವರ್ಗವಿಲ್ಲದ ಸಮಾಜ ನಿರ್ಮಾಣಕ್ಕೆ ಒಂದು ಕ್ರಿಯಾ ಯೋಜನೆಯನ್ನು ಕೊಡುತ್ತದೆ. ಅದೇ 'ಕಮ್ಯುನಿಷ್ಟ್ ಪಾರ್ಟಿ ಪ್ರಣಾಳಿಕೆ". ಗುಲಾಮ-ಗುಲಾಮರೊಡೆಯರ ಸಮಾಜ, ಸಾಮಂತಶಾಹಿ, ಜಮೀನ್ದಾರಿ ಸಮಾಜ ನಾಶವಾಗಲು ಶ್ರಮ ಜೀವಿ ವರ್ಗದ ಸಂಘರ್ಷಗಳೇ ಕಾರಣ ಎಂಬುದನ್ನು ವೈಜ್ಞಾನಿಕವಾಗಿ, ವಾಸ್ತವವಾದಿ ಇತಿಹಾಸದ ಹಿನ್ನೆಲೆಯಲ್ಲಿ ಸಾಬೀತು ಪಡಿಸಿದ ಮಾರ್ಕ್ಸ್‌ವಾದ, ಇಂದಿನ ಬಂಡವಾಳಶಾಹಿ, ಸಾಮ್ರಾಜ್ಯಶಾಹಿ, ನವಸಾಮ್ರಾಜ್ಯಶಾಹಿ ಶೋಷಕ ವ್ಯವಸ್ಥೆಯನ್ನೂ ಫ್ಯಾಸಿಸ್ಟ್ ನೀತಿಗಳನ್ನೂ ಸಂಘರ್ಷದ ಮೂಲಕವೇ ಶ್ರಮ ಜೀವಿ ವರ್ಗ ನಿರ್ನಾಮ ಮಾಡುತ್ತದೆ ಎಂದು ಹೇಳುತ್ತದೆ. ಮಾಲಿಕ-ದುಡಿಮೆಗಾರ, ಶೋಷಕ-ಶೋಷಿತ, ಗಂಡು-ಹೆಣ್ಣು, ಮೇಲು-ಕೀಳು ಇವೆಲ್ಲ ಭೇದಗಳು ಮೂಲದಲ್ಲಿ ವರ್ಗಸಮಾಜದ ಕೊಡುಗೆಗಳು. ಇವುಗಳ ನಿರ್ಮೂಲನೆಗೆ ವರ್ಗರಹಿತ ಸಮಾಜವೊಂದೇ ಪರಿಹಾರ ಎಂದು ಹೇಳುವ ಮಾರ್ಕ್ಸ್‌ವಾದ ಸಮಾಜ ವಿಕಾಸದ ಮುಂದಿನ ಹಂತವೇ ಸಮಾಜವಾದಿ-ಕಮ್ಯುನಿಸಂ ಎಂದು ಹೇಳುತ್ತದೆ. ಜನರೇ ಇತಿಹಾಸದ ನಿರ್ಮಾಪಕರು ಎನ್ನುವ ಮಾರ್ಕ್ಸ್‌ವಾದ, ಜನರಲ್ಲಿ ವರ್ಗ ಪ್ರಜ್ಞೆಯನ್ನು ಬೆಳೆಸುವ ಕೆಲಸವನ್ನು ಶ್ರಮಜೀವಿ ವರ್ಗದ ಸಂಘಟನೆಗಳು ಮಾಡಬೇಕು ಎಂದು ಹೇಳುತ್ತದೆ.

ಭಾರತದಂಥ ಜಾತಿ, ಧರ್ಮ, ಲಿಂಗ, ಭಾಷೆ, ಪ್ರಾಂತ, ಪ್ರದೇಶಗಳ ಹಿನ್ನೆಲೆಯಲ್ಲಿ ಶ್ರಮಜೀವಿಗಳನ್ನು ಅಸಂಘಟಿತರನ್ನಾಗಿಸಿದ ದೇಶದಲ್ಲಿ ಸಹ ಇವನ್ನೆಲ್ಲ ಮೀರಿ ಜನ ಒಂದಾಗಿ ಶೋಷಕ ವರ್ಗದ ವಿರುದ್ಧ ಹೋರಾಡಿದ ಉದಾಹರಣೆಗಳು ಸಾಕಷ್ಟಿವೆ. ರೈತ–ಕಾರ್ಮಿಕ, ದಲಿತ, ಯುವಜನ, ಮಹಿಳೆ ಇಂಥ ಶೋಷಿತ ವರ್ಗದ ಸಾಮಾನ್ಯ ಜನ ತಮ್ಮ ಶೋಷಣೆಯ ಹಿಂದಿನ ಶಕ್ತಿಗಳನ್ನು, ಅವರ ಪ್ರಭುತ್ವದ ಉದ್ದೇಶಗಳನ್ನು ಅರ್ಥ ಮಾಡಿಕೊಂಡಾಗ ಒಂದು ಸಾಮಾನ್ಯ ಐಕ್ಯತೆ, ಪ್ರತಿರೋಧ ಸಾಧನವಾಗುತ್ತದೆ. ಮಾರ್ಕ್ಸ್‌ವಾದ ಪ್ರತಿರೋಧವನ್ನು ಮಾತ್ರವಲ್ಲ ಪರ್ಯಾಯವನ್ನು ಹೇಳುತ್ತದೆ. ಭಾರತದ ನೆಲದಲ್ಲಿ ಸಮಾಜೋ–ಧಾರ್ಮಿಕ ಕ್ಷೇತ್ರದಲ್ಲಿ ಬುದ್ಧ–ಬಸವರ ಕಾಲದಿಂದ ಹಲವಾರು ಸುಧಾರಣಾ ಚಳುವಳಿಗಳು ನಡೆದಿವೆ. ಡಾ.ಬಿ.ಆರ್.ಅಂಬೇಡ್ಕರ್ ಅವರು ಉತ್ಪಾದನಾ ಕ್ಷೇತ್ರ ಸಾರ್ವಜನಿಕ ಒಡೆತನದಲ್ಲಿರಬೇಕು ಎಂದು ಪ್ರತಿಪಾದಿಸುತ್ತಾರೆ. ಬುದ್ಧನ ಸಂಘ, ಬಸವಣ್ಣನವರ ಕಾಯಕ–ದಾಸೋಹ ಸಂಪತ್ತಿನ ವಿಕೇಂದ್ರಿಕರಣವನ್ನೇ ಹೇಳುತ್ತವೆ. ಇಂದು ಬಹುತೇಕ ಪ್ರಭುತ್ವಗಳು ಕಾರ್ಪೋರೇಟ್ ಕಂಪನಿಗಳ ನಿಯಂತ್ರಣದಲ್ಲಿದ್ದು ಶ್ರಮಿಕ ವರ್ಗದ, ಜನಸಾಮಾನ್ಯರ ಶೋಷಣೆ ತೀವ್ರವಾಗಿದೆ. ಇದೇ ಸಂದರ್ಭದಲ್ಲಿ ಕಮ್ಯುನಿಷ್ಟ್ ಸಿದ್ಧಾಂತದ ಮಾರ್ಗದರ್ಶನದಲ್ಲಿ ನಡೆದ ಕೆಲವು ಪ್ರಯೋಗಗಳು ವಿಫಲವಾಗಿವೆ. ಆದರೂ ಮಾರ್ಕ್ಸ್‌ವಾದ ಪ್ರತಿಪಾದಿಸಿದ ಸಂಪತ್ತಿನ ಸಮಾಜೀಕರಣ ನೀತಿಯೆ ವಿಶ್ವದ ಶ್ರಮಜೀವಿ ವರ್ಗದ, ಜನಸಾಮಾನ್ಯರ ವಿಮೋಚನೆಗೆ ಪರಿಹಾರ ಎಂದು ಸಾಬೀತಾಗುತ್ತದೆ. ಆ ಕಾರಣಕ್ಕಾಗಿಯೇ ಬಂಡವಾಳಶಾಹಿ ಜಗತ್ತು, ಶೋಷಕ ವರ್ಗ 'ಮಾರ್ಕ್ಸ್‌ವಾದಿ' ಚಿಂತನೆಯ ವಿರುದ್ಧ, ಸಂಪತ್ತಿನ ಸಮಾಜೀಕರಣ ಪ್ರತಿಪಾದಿಸುವ ಎಲ್ಲ ಸುಧಾರಣವಾದಿ, ಕ್ರಾಂತಿಕಾರಿ ಸಿದ್ಧಾಂತಗಳ ವಿರುದ್ಧ ಅಪಪ್ರಚಾರ ಮಾಡುತ್ತಿದೆ. ಬಂಡವಾಳವಾದಕ್ಕೆ ಪರ್ಯಾಯವಿಲ್ಲ ಎಂದು ಹೇಳುತ್ತಲೇ ಇದ್ದರೂ ಮಾನವ ಸಮಾಜದ ಮೂಲಭೂತ ಸಮಸ್ಯೆಗಳಾದ ಹಸಿವು, ಬಡತನ, ನಿರುದ್ಯೋಗ, ಅನಾರೋಗ್ಯ, ಅಸಮಾನತೆಗಳನ್ನು ತೊಡೆದು ಹಾಕಲು ವಿಫಲವಾಗಿದೆ. ಪದೇ ಪದೇ ಆರ್ಥಿಕ ಮುಗ್ಗಟ್ಟಿಗೆ ವಿಶ್ವ ಬಲಿಯಾಗುತ್ತಿದೆ. ಮಾನವ ಸಮಾಜ ಇಂದು ಎದುರಿಸುತ್ತಿರುವ ಮೂಲಭೂತ ಸಮಸ್ಯೆಗಳ ಪರಿಹಾರಕ್ಕೆ ಸಂಪತ್ತಿನ ಸಮಾಜೀಕರಣವೇ ಪರಿಹಾರ. ಸಂಪತ್ತಿನ ಸಮಾಜೀಕರಣವಾಗಬೇಕಾದರೆ ಶೋಷಕ ವರ್ಗದ ಪ್ರಭುತ್ವವನ್ನು ಕಿತ್ತೊಗೆದು ದುಡಿವವರ್ಗ ಪ್ರಭುತ್ವವನ್ನು ವಶಪಡಿಸಿಕೊಳ್ಳಬೇಕೆಂದು ಮಾರ್ಕ್ಸ್‌ವಾದ ಪ್ರತಿಪಾದಿಸುತ್ತದೆ. 'ರಾಜ್ಯ' ವ್ಯವಸ್ಥೆಯನ್ನು ಬದಲಾಯಿಸದೇ ಶೋಷಕ ವರ್ಗದ ರಾಜಕೀಯ ಅರ್ಥಶಾಸ್ತ್ರಕ್ಕೆ ಪರ್ಯಾಯವಾಗಿ ಶೋಷಿತ ವರ್ಗದ ರಾಜಕೀಯ ಅರ್ಥಶಾಸ್ತ್ರವನ್ನು ಜಾರಿ ಮಾಡದೇ ಕೇವಲ ಪಕ್ಷಗಳನ್ನು ಬದಲಾಯಿಸುವ ಮೂಲಕ ಶೋಷಣೆ ನಿಲ್ಲದು. ನವ ಉದಾರೀಕರಣ, ನವ ಸಾಮ್ರಾಜ್ಯಶಾಹಿಯ ಆರ್ಥಿಕ ಶೋಷಣೆಗೆದುರಾಗಿ ವಿಶ್ವದ ಎಲ್ಲ ಸ್ಥಳೀಯ ಜನಪರ ಚಿಂತನೆಗಳನ್ನು ಅಳವಡಿಸಿಕೊಂಡು ಮಾರ್ಕ್ಸ್‌ವಾದ ಬೆಳೆಯಬೇಕಿದೆ.

# ಸ್ವರಾಜ್ ಎಂಬ ನಿಜವಾದ ಅಭಿವೃದ್ಧಿ

ಸುಮನಸ ಕೌಲಗಿ

ಅಭಿವೃದ್ಧಿ ಎಂಬ ಪದ ಇತ್ತೀಚಿನ ಕೆಲವು ವರ್ಷಗಳಲ್ಲಿ ಹೆಚ್ಚು ಚಾಲ್ತಿಗೆ ಬಂದ ಶಬ್ದ. ಹಳ್ಳಿಯಿಂದ ದಿಲ್ಲಿಯವರೆಗೂ ಇದು ಜನರ ಶಬ್ದ ಭಂಡಾರಕ್ಕೆ ಸೇರಿಹೋಗಿದೆ. ಸಾಮಾನ್ಯರ ಕಲ್ಪನೆಯಲ್ಲಿ ಒಳ್ಳೆಯ ಜೀವನದ ಕನಸೊಂದನ್ನು ನನಸಾಗಿಸುವ ವಿಧಾನವೇ 'ಡೆವಲಪ್' ಆಗುವುದಾಗಿದೆ. ಈ ಅಭಿವೃದ್ಧಿ ಎಂಬ ಕಲ್ಪನೆಯು ಒಬ್ಬ ವ್ಯಕ್ತಿಗೆ, ಸಮುದಾಯಕ್ಕೆ ಹಾಗು ದೇಶಕ್ಕೆ ದಿಕ್ಕನ್ನು ತೋರಿಸುವ ದಿಕ್ಸೂಚಿಯಂತೆ ಕೆಲಸ ಮಾಡತೊಡಗಿದೆ.

ಅಮೂರ್ತವಾಗಿರುವ ಈ ಅಭಿವೃದ್ಧಿ ಕಲ್ಪನೆ ಸಮಾಜದ ಎಲ್ಲಾ ಸ್ತರದವರಲ್ಲಿ ಹೆಚ್ಚು ಕಡಿಮೆ ಒಂದೇ ರೀತಿಯದಾಗಿದೆ. ಈ ಕಲ್ಪನೆ ನೂರಕ್ಕೆ ನೂರು ಭೌತಿಕ ಅಭಿವೃದ್ಧಿಯನ್ನು ತನ್ನ ಒಡಲಾಳದಲ್ಲಿ ಇಟ್ಟುಕೊಂಡಿದೆ. ಈ ಕಲ್ಪನೆಯಲ್ಲಿ ಹೆಚ್ಚಿನ ಭೌತಿಕ ವಸ್ತು ಸಂಗ್ರಹಣೆಯು ವ್ಯಕ್ತಿಯ, ಸಮುದಾಯದ ಅಥವಾ ದೇಶದ ಅಭಿವೃದ್ಧಿಯ ಸಂಕೇತವಾಗಿದೆ. ಜೀವನದಲ್ಲಿ ನೆಮ್ಮದಿ ಹಾಗು ಶಾಂತಿಯನ್ನು ಪಡೆವುದು ಈ 'ಡೆವಲಪ್' ಆಗುವುದರ ಹಿಂದಿನ ಬಯಕೆ ಎಂಬುದು ಯಾರೇ ಜನ ಸಾಮಾನ್ಯರೊಟ್ಟಿಗೆ ಮಾತನಾಡಿದರೆ ತಿಳಿಯುತ್ತದೆ. ಆದರೆ ನಾವು ನಂಬಿರುವ ಈ ವಸ್ತು ಕೇಂದ್ರಿತ ಅಭಿವೃದ್ಧಿ, ಎಷ್ಟರ ಮಟ್ಟಿಗೆ ಈ ಬಯಕೆಯನ್ನು ಈಡೇರಿಸಿದೆ ಎಂದು ಪರೀಕ್ಷಿಸಿಕೊಳ್ಳುವುದು ಇಂದಿಗೆ ಅತ್ಯಗತ್ಯ. ಈ ಪರಾಮರ್ಶೆಯಿಂದ ಒಂದು ನಾಗರಿಕತೆಯಾಗಿ ನಾವು ಸರಿಯಾದ ದಿಕ್ಕಿನೆಡೆಗೆ ಹೆಜ್ಜೆ ಇಡುತ್ತಿದ್ದೇವೆಯೆ ಅಥವಾ ಇಲ್ಲವೆ ಎಂಬುದು ತಿಳಿಯಬೇಕಿದೆ.

ಒಂದೆಡೆ, ವಸ್ತು ಕೇಂದ್ರಿತ ಅಭಿವೃದ್ಧಿಯಿಂದ ಪರಿಸರದ ಮೇಲೆ ಮಿತಿ ಮೀರಿದ ಒತ್ತಡ ಉಂಟಾಗಿ ನಾವು ಬದುಕಲೇ ಆಗದಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಇತ್ತೀಚೆಗಷ್ಟೆ, 'ಮೆಲ್‌ಬಾರ್ನ್‌ನ ಬ್ರೇಕ್‌ಥ್ರೂ ನ್ಯಾಶನಲ್ ಸೆಂಟರ್ ಫಾರ್ ಕ್ಲೈಮೇಟ್ ರೀಸ್ಟೋರೇಶನ್' ಸಂಸ್ಥೆ ಬಿಡುಗಡೆ ಮಾಡಿದ ವರದಿಯ ಪ್ರಕಾರ, ನಾವು ಅನುಸರಿಸುತ್ತಿರುವ ಅಭಿವೃದ್ಧಿ ಮಾದರಿಯು 2050 ನೇ ಇಸವಿಯ ವೇಳೆಗೆ ಮನುಷ್ಯನ ಮೂಲಭೂತ ಅಗತ್ಯಗಳಾದ ಒಳ್ಳೆಯ ಗಾಳಿ, ನೀರು, ಮಣ್ಣು ಸಿಗದಂತೆ ಮಾಡಿ ಮಾನವ ಕುಲವೇ ವಿನಾಶದ ಅಂಚಿಗೆ ತಲುಪುತ್ತದೆ ಎನ್ನುತ್ತದೆ. ಇಂಗ್ಲೆಂಡಿನ ಆಕ್ಸಫಾಮ್ ಸಂಸ್ಥೆಯ ವರದಿಯ ಪ್ರಕಾರ ಈ ಅಭಿವೃದ್ಧಿಯ ಮಾದರಿಯಿಂದಾಗಿ ಬಡವ ಬಲ್ಲಿದರ ನಡುವಿನ

ಅಂತರ ದಿನದಿಂದ ದಿನಕ್ಕೆ ದೊಡ್ಡದಾಗುತ್ತಾ ಹೋಗುತ್ತಿದೆ. ಭಾರತ ದೇಶದಶೇ 77 ರಷ್ಟು ಸಂಪತ್ತು ಕೇವಲ ಶೇ 10 ರಷ್ಟು ಜನರ ಬಳಿ ಸೇರಿದೆ. ವರ್ಷದಿಂದ ವರ್ಷಕ್ಕೆ ಶ್ರೀಮಂತರು ಶ್ರೀಮಂತರಾಗುತ್ತಿದ್ದಾರೆ, ಬಡವರು ಬಡವರಾಗುತ್ತಿದ್ದಾರೆ. ಇದಷ್ಟೇ ಅಲ್ಲದೆ ಜನರಿಗೆ ತಮ್ಮ ಜೀವನದ ಮೇಲಿನ ಹಿಡಿತ ಕಡಿಮೆಯಾಗಿ, ನೆಮ್ಮದಿ ಹಾಗು ಸಂತೋಷ ಕುಸಿಯುತ್ತಿದೆ. ಹಾಗಾಗಿ ಪರಿಸರ ಸುಸ್ಥಿರತೆ ಮತ್ತು ಸಾಮಾಜಿಕ ಆರ್ಥಿಕ ಸಮಾನತೆಯನ್ನು ಹೆಚ್ಚಿಸಿ, ಜನರಿಗೆ ತಮ್ಮ ಬದುಕಿನ ಮೇಲೆ ಹೆಚ್ಚಿನ ಹಿಡಿತವನ್ನು ನೀಡಬಲ್ಲ ಅಭಿವೃದ್ಧಿಯ ಕಲ್ಪನೆಯನ್ನು ನೀಡಬೇಕಿದೆ. ಇಂತಹ ಒಂದು ಅಭಿವೃದ್ಧಿ ಕಲ್ಪನೆಯು ಮಹಾತ್ಮಗಾಂಧಿ ಹಾಗು ಅವರ ಸಹಪಾಠಿ ಜೆ.ಸಿ ಕುಮಾರಪ್ಪ ನವರ ಚಿಂತನೆಯಲ್ಲಿ ಅಡಗಿದೆ. ಅದು ಸ್ವರಾಜ್ ಅಭಿವೃದ್ಧಿ ಕಲ್ಪನೆಯಾಗಿದೆ.

ಸ್ವರಾಜ್ ಎಂದರೆ ಒಬ್ಬ ವ್ಯಕ್ತಿಯು ಸಂಪೂರ್ಣವಾಗಿ ತನ್ನ ಜೀವನದ ಮೇಲೆ ಹಿಡಿತವನ್ನು ತಾನೇ ಹೊಂದಿರುವುದು ಎಂಬುದಾಗಿದೆ. ಸ್ವರಾಜ್ ಅಭಿವೃದ್ಧಿ ಕಲ್ಪನೆಯು ನ್ಯಾಚುರಲ್ ಆರ್ಡರ್ ಎಂಬ ಸಮಷ್ಟಿ ದೃಷ್ಟಿಯ ಮೇಲೆ ನಿಂತಿದೆ. ಈ ಸಮಷ್ಟಿ ನೋಟವು ಪರಿಸರದಲ್ಲಿ ಮಾನವನ ಸ್ಥಾನವನ್ನು ಗುರುತಿಸಿ, ಸತ್ಯ ಮತ್ತು ಅಹಿಂಸೆ ಎಂಬ ಮೂಲ ತತ್ವಗಳನ್ನು ಆಧಾರವಾಗಿ ಹೊಂದಿದೆ. ಸತ್ಯವೆಂದರೆ ಮನುಷ್ಯನನ್ನೂ ಒಳಗೊಂಡಂತೆ ವಿಶ್ವದಲ್ಲಿರುವ ಎಲ್ಲಾ ಜೀವ ಹಾಗು ನಿರ್ಜೀವ ವಸ್ತುಗಳ ನಡುವೆ ಒಂದು ಅವಿನಾಭಾವ ಸಂಬಂಧವಿದೆ ಎಂಬ ದೃಷ್ಟಿಕೋನ. ಒಬ್ಬ ವ್ಯಕ್ತಿಯ ಒಳಿತು ವಿಶ್ವದ ಒಳಿತಿನಲ್ಲಿದೆ ಎಂಬುದು ಈ ದೃಷ್ಟಿಕೋನದ ನೈತಿಕ ನಿಲುವು. ಹಾಗಾಗಿ ಸತ್ಯದ ಅರಿವಿನಲ್ಲಿ ಬದುಕಲು, ಅಹಿಂಸಾತ್ಮಕ ಜೀವನ ಅನಿವಾರ್ಯವಾಗುತ್ತದೆ. ಇಲ್ಲಿ ಕೇವಲ ಒಬ್ಬ ವ್ಯಕ್ತಿ ಮತ್ತೊಬ್ಬನನ್ನು ಶೋಷಿಸದೆ, ಪ್ರೀತಿಯಿಂದ ಬದುಕುವುದರೊಟ್ಟಿಗೆ, ಬೇರೊಬ್ಬನು ತನ್ನನ್ನು ಶೋಷಿಸದಂತೆ ತಡೆಯುವುದೂ ಕೂಡ ಅಹಿಂಸೆಯ ಭಾಗವಾಗಿದೆ. ಈ ರೀತಿಯ ಅಹಿಂಸಾತ್ಮಕ ಬದುಕನ್ನು ನಡೆಸಲು ಎಲ್ಲ ಮನುಷ್ಯರಿಗೂ ತಮ್ಮ ಮೂಲಭೂತ ಭೌತಿಕ ಅಗತ್ಯತೆಗಳಾದ ಆಹಾರ, ಬಟ್ಟೆ ಮತ್ತು ವಸತಿಯ ಪೂರೈಕೆಯಾಗುವುದು ಅತ್ಯಗತ್ಯ. ಈ ಮೂಲಭೂತ ಅಗತ್ಯಗಳಿಂದ ವಂಚಿತನಾದವನಿಗೆ, ತನ್ನ ದೈಹಿಕ ಬದುಕು ಮುಖ್ಯವಾಗಿ, ಸಮಾಜದ ಒಳಿತು ಹಿಂದಕ್ಕೆ ಸರಿಯುವ ಸಾಧ್ಯತೆ ಹೆಚ್ಚಾಗುತ್ತದೆ. ಆದ್ದರಿಂದ ಸ್ವರಾಜ್ ಕಲ್ಪನೆಯಲ್ಲಿ ಅಭಿವೃದ್ಧಿಯು ಮೂಲಭೂತ ಭೌತಿಕ ಅಗತ್ಯತೆಗಳನ್ನು ಪೂರೈಸಿದ ನಂತರ ನೈತಿಕತೆಯಕಡೆಗೆ ಮುಖಮಾಡುತ್ತದೆ. ಇದು ಒಬ್ಬ ವ್ಯಕ್ತಿತನ್ನ ಅಹಂ ಅನ್ನು ಕಳೆದುಕೊಂಡು ವಿಶ್ವದೊಟ್ಟಿಗೆ ಒಂದಾಗಿ ಬದುಕಲು ಪ್ರೇರೇಪಿಸುತ್ತದೆ. ಇದರ ಫಲವೇ ವ್ಯಕ್ತಿ ಜೀವನದಲ್ಲಿ ಹಾಗೂ ಸಮಾಜದಲ್ಲಿ ನೆಮ್ಮದಿ ಮತ್ತು ಶಾಂತಿನೆಲೆಗೊಳ್ಳುವಂತೆ ಮಾಡುತ್ತದೆ.

ಸ್ವರಾಜ್ ಅಭಿವೃದ್ಧಿಯು ಮೂಲಭೂತ ಭೌತಿಕ ಅಗತ್ಯತೆಗಳನ್ನು ಎಲ್ಲರು ಪೂರೈಸಿಕೊಳ್ಳುವಂತೆ ಮಾಡಲು ರಾಜಕೀಯ ವಿಕೇಂದ್ರೀಕರಣ ಹಾಗು ಸ್ವಾವಲಂಬಿ

ಆರ್ಥಿಕ ವ್ಯವಸ್ಥೆಯನ್ನು ಪ್ರತಿಪಾದಿಸುತ್ತದೆ. ರಾಜಕೀಯ ವಿಕೇಂದ್ರೀಕರಣವು ಎರಡು ಮುಖವನ್ನು ಹೊಂದಿದೆ. ಒಂದು, ಅಹಿಂಸಾತ್ಮಕ ಪ್ರಜಾಪ್ರಭುತ್ವ, ಮತ್ತೊಂದು ಸತ್ಯಾಗ್ರಹದ ಮೂಲಕ ಶೋಷಣೆಯ ವಿರುದ್ಧ ಅಹಿಂಸಾತ್ಮಕ ಹೋರಾಟ. ಅಹಿಂಸಾತ್ಮಕ ಪ್ರಜಾಪ್ರಭುತ್ವವು ಹೆಚ್ಚಿನ ರಾಜಕೀಯ ಅಧಿಕಾರವನ್ನು ಸಮುದಾಯಕ್ಕೆ ನೀಡಿ, ನಿರ್ಧಾರಗಳನ್ನು ಆದಷ್ಟು ಒಮ್ಮತದ ಮೇಲೆ ಮಾಡುವಂತೆ ಪ್ರೋತ್ಸಾಹಿಸುತ್ತದೆ. ಈ ವ್ಯವಸ್ಥೆಯು ಸಮುದಾಯದ ಭಾಗವಾಗಿರುವ ವ್ಯಕ್ತಿಗೆ ತನ್ನ ಜೀವನದ ಮೇಲೆ ಹೆಚ್ಚಿನ ಹಿಡಿತವನ್ನು ನೀಡಿ ರಾಜಕೀಯ ಶೋಷಣೆಯನ್ನು ಕಡಿಮೆಗೊಳಿಸುತ್ತದೆ. ಈ ರೀತಿಯ ಪ್ರಜಾಪ್ರಭುತ್ವವು, ಬೆಂಗಳೂರಿನಲ್ಲೋ ಅಥವ ದೆಹಲಿಯಲ್ಲೋ ಕುಳಿತು ಯಾವುದೋ ಒಂದು ಹಳ್ಳಿಗೆ ಅಲ್ಲಿಯ ಜನರನ್ನು ಗಮನಕ್ಕೇ ತೆಗೆದುಕೊಳ್ಳದೆ ಏನು ಬೇಕು ಏನು ಬೇಡ ಎಂದು ನಿರ್ಧರಿಸುವ ಇಂದಿನ ರಾಜಕೀಯ ವ್ಯವಸ್ಥೆಗೆ ತದ್ವಿರುದ್ಧವಾಗಿದೆ. ಮನುಷ್ಯನಿಗೆ ಪರಹಿತದ ಜೊತೆಗೆ ಸ್ವಹಿತಾಸಕ್ತಿಯ ಮುಖವೂ ಇರುವುದರಿಂದ ಅಹಿಂಸಾತ್ಮಕ ಪ್ರಜಾಪ್ರಭುತ್ವದಲ್ಲಿಯೂ ಶೋಷಣೆಯ ಸಾಧ್ಯತೆಗಳಿರುತ್ತದೆ. ಹಾಗಾಗಿ ಸತ್ಯಾಗ್ರಹ ಅಥವ ಪ್ರೀತಿಯ ಮೂಲಕ ಶೋಷಿತರು ಶೋಷಣೆ ಮಾಡುವರ ಮನಸ್ಸನ್ನು ಗೆದ್ದು ಶೋಷಣೆಯಿಂದ ಹೊರಬರುವುದು ಸ್ವರಾಜ್ ಅಭಿವೃದ್ಧಿಯಲ್ಲಿ ಬಹಳ ಮುಖ್ಯ ಪಾತ್ರವನ್ನು ವಹಿಸುತ್ತದೆ.

ರಾಜಕೀಯ ವಿಕೇಂದ್ರೀಕರಣಕ್ಕೆ, ಸ್ವಾವಲಂಬಿ ಆರ್ಥಿಕ ವ್ಯವಸ್ಥೆಯು ಅತ್ಯಗತ್ಯ. ಈ ವ್ಯವಸ್ಥೆಯು ಉತ್ಪತ್ತಿ ಹಾಗು ಕೊಳ್ಳುವಿಕೆಯು ಕೇವಲ ಭೌತಿಕ ವ್ಯವಹಾರವಲ್ಲದೆ, ನೈತಿಕ ವ್ಯವಹಾರ ಕೂಡ ಆಗಿದೆ ಎಂಬುದನ್ನು ಗುರುತಿಸುತ್ತದೆ. ಉದಾಹರಣೆಗೆ ಮಕ್ಕಳನ್ನು ಶೋಷಿಸಿ ತಯಾರಾದ ಒಂದು ವಸ್ತುವನ್ನು ಕೊಂಡ ವ್ಯಕ್ತಿಯೊಬ್ಬ ಪರೋಕ್ಷವಾಗಿ ಆ ಮಕ್ಕಳ ಶೋಷಣೆಗೆ ಕಾರಣನಾಗಿರುತ್ತಾನೆ. ಆದ್ದರಿಂದ ಒಬ್ಬ ವ್ಯಕ್ತಿಯು ಅಹಿಂಸಾತ್ಮಕ ಬದುಕನ್ನು ನಡೆಸಬೇಕಾದರೆ, ತಾನು ಕೊಂಡಿರುವ ವಸ್ತು ಹೇಗೆ ತಯಾರಾಗಿದೆ, ಅದರ ತಯಾರಿಕೆಯ ಹಿಂದಿನ ಕತೆಯೇನು ಎಂಬುದನ್ನು ಖುದ್ದು ತಿಳಿಯುವುದು ಬಹಳ ಮುಖ್ಯವಾಗುತ್ತದೆ. ಹಾಗಾಗಿ ಉತ್ಪಾದಕ ಮತ್ತು ಗ್ರಾಹಕರ ನಡುವಿನ ಅಂತರ ಕಡಿಮೆ ಇರುವಂತೆ ಸ್ವಾವಲಂಬಿ ಆರ್ಥಿಕ ವ್ಯವಸ್ಥೆಯು ಪ್ರೇರೇಪಿಸುತ್ತದೆ. ಈ ಅರ್ಥವ್ಯವಸ್ಥೆಯು ಮಾನವ ಶ್ರಮ ಆಧಾರಿತ ಉದ್ಯೋಗಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತದೆ. ಏಕೆಂದರೆ ಮಾನವ ಶ್ರಮವನ್ನು ಒಂದು ಶಕ್ತಿಯ ರೂಪವಾಗಿ ನೋಡಿದರೆ, ಅದರಷ್ಟು ಪರಿಸರ ಸ್ನೇಹಿಯಾದ ಶಕ್ತಿಯ ಮೂಲ ಮತ್ತೊಂದಿಲ್ಲ. ಹಣದ ಬಂಡವಾಳ ಕೇವಲ ಕೆಲವರ ಬಳಿ ಮಾತ್ರ ಇದೆ. ಶ್ರಮಕ್ಕೆ ಬೇಕಾದ ಶಕ್ತಿ ಎಲ್ಲರ ಬಳಿಯಲ್ಲೂ ಇದೆ. ಹಾಗಾಗಿ ಶ್ರಮಾಧಾರಿತ ವ್ಯವಸ್ಥೆ ಹೆಚ್ಚಿನ ಜನ ತಮ್ಮ ಕಾಲ ಮೇಲೆ ನಿಲ್ಲಲು ಸಾಧ್ಯಮಾಡಿಕೊಡುತ್ತದೆ. ಉದಾಹರಣೆಗೆ ಶ್ರಮಾಧಾರಿತ ಕೈಮಗ್ಗಕ್ಕೆ ಬೇಕಾದ ಬಂಡವಾಳವು ಕೇವಲ ಇಪ್ಪತ್ತು ಸಾವಿರ ರೂಪಾಯಿಗಳಾದರೆ, ಬಂಡವಾಳ ಆಧಾರಿತ ವಿದ್ಯುತ್ ಮಗ್ಗಕ್ಕೆ ಎರಡು ಲಕ್ಷ ರುಪಾಯಿಗಳಷ್ಟು ಬೇಕಾಗುತ್ತದೆ. ಕೈಮಗ್ಗದ ಸ್ಥಾಪನೆಗೆ ಬಂಡವಾಳ

ಕಡಿಮೆ ಇರುವುದರಿಂದ ಹೆಚ್ಚಿನ ಜನ ಸ್ವಂತ ಉದ್ಯೋಗವನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಇದರಿಂದ ಉತ್ಪಾದನೆಯ ಹಂತದಲ್ಲಿಯೇ ಸಂಪತ್ತು ಹಂಚಿಕೆಯಾಗಿ ಸಮಾಜದಲ್ಲಿ ಹೆಚ್ಚಿನ ಸಮಾನತೆ ಸಾಧ್ಯವಾಗುತ್ತದೆ. ಒಟ್ಟಾರೆಯಾಗಿ ಸ್ವರಾಜ್ ಅಭಿವೃದ್ಧಿಯತ್ತ ಹೊರಳುವುದು, ಮಾನವಕುಲದ ಉಳಿವಿಗೆ ಅನಿವಾರ್ಯವಾಗಿದೆ ಎಂಬುದು ದಿನದಿಂದ ದಿನಕ್ಕೆ ಸ್ಪಷ್ಟವಾಗುತ್ತಿದೆ.

# ಉಪನಿಷತ್ತುಗಳು ಮತ್ತು ಅದ್ವೈತ ತತ್ತ್ವ

**ರಾಜೇಶ್ವರಿ ಜೋಶಿ**

ಭಾರತೀಯ ತತ್ವಜ್ಞಾನ ಪರಂಪರೆಯಲ್ಲಿ ಆತ್ಯಂತಿಕ ವಾಸ್ತವ (ಸತ್ಯ)ದ ಕುರಿತ ಜಿಜ್ಞಾಸೆಯನ್ನು ನಾವು ಕಾಣುತ್ತೇವೆ. ಈ ಆತ್ಯಂತಿಕ ವಾಸ್ತವದ ಭಿನ್ನ ಭಿನ್ನ ವಿಮರ್ಶೆಗಳು ಭಿನ್ನ ಭಿನ್ನ ದರ್ಶನಗಳಿಗೆ ಕಾರಣವಾದವು. ವೇದಗಳನ್ನು ನಂಬುವ ಕಾರಣಕ್ಕೆ ಆಸ್ತಿಕ ಎನಿಸಿಕೊಂಡ ಷಡ್ ದರ್ಶನಗಳು, ವೇದಗಳನ್ನು ಅಲ್ಲಗಳೆಯುವ ಚಾರ್ವಾಕ ದರ್ಶನ ಇವುಗಳಲ್ಲಿ ಮುಖ್ಯವಾದವು. ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ಪೂರ್ವ ಮೀಮಾಂಸಾ ಮತ್ತು ಉತ್ತರ ಮೀಮಾಂಸಾ (ವೇದಾಂತ/ ಉಪನಿಷತ್ತುಗಳು) ಇವುಗಳನ್ನು ಷಡ್ ದರ್ಶನಗಳೆಂದು ಕರೆಯಲಾಗುತ್ತದೆ.

ನಾನಿಲ್ಲಿ ವೇದಾಂತ ಅಥವಾ ಉಪನಿಷತ್ತುಗಳಲ್ಲಿ ವಿಮರ್ಶಿಸಲಾಗಿರುವ ಆತ್ಯಂತಿಕ ವಾಸ್ತವ ಮತ್ತು ಈ ವಿಮರ್ಶೆ ನನ್ನ ಮೇಲೆ ಬೀರಿದ ಪ್ರಭಾವವನ್ನು ಕುರಿತು ನಿಮ್ಮೊಂದಿಗೆ ಸಂಕ್ಷಿಪ್ತವಾಗಿ ಹಂಚಿಕೊಳ್ಳಲು ಬಯಸುವೆ. ನಾವಿರುವ ಜಗತ್ತು ಅಸ್ತಿತ್ವದಲ್ಲಿ ಬಂದದ್ದು ಹೇಗೆ ಎಂಬುದರ ಕುರಿತು ಚಿಕ್ಕಂದಿನಿಂದಲೂ ನನ್ನಲ್ಲಿ ಕುತೂಹಲವಿತ್ತು. ಈ ಕುತೂಹಲವೇ ನನ್ನನ್ನು ತತ್ತ್ವಶಾಸ್ತ್ರ ಮತ್ತು ಸಂಸ್ಕೃತವನ್ನು ಕಲಿಯಲು ಪ್ರೇರೇಪಿಸಿದ್ದು. ಪದವಿ ಹಾಗೂ ಸ್ನಾತಕೋತ್ತರ ಪದವಿ ಪರೀಕ್ಷೆಗೆ ನಾನು ಸಂಸ್ಕೃತವನ್ನು (entire) ಆಯ್ಕೆ ಮಾಡಿಕೊಂಡೆ. [ಸ್ವಲ್ಪ ಅಪ್ರಸ್ತುತವೆನಿಸಿದರೂ ಒಂದು ವಿಷಯವನ್ನು ಇಲ್ಲಿ ಹಂಚಿಕೊಳ್ಳ ಬಯಸುತ್ತೇನೆ. ಇತ್ತೀಚಿನ ವರ್ಷಗಳಲ್ಲಿ ಈ entire ಪದ ತುಂಬ ಅಪಹಾಸ್ಯಕ್ಕೀಡಾದುದನ್ನು ನಾನು ಬಲ್ಲೆ. ಯಾವುದೇ ಒಂದು ವಿಷಯವನ್ನು ಕೊನೆಯ ವರ್ಷದ ಪದವಿ ಪರೀಕ್ಷೆಗೆ 600 ಮಾರ್ಕ್ಸಿಗೋ, ಸ್ನಾತಕೋತ್ತರ ಪದವಿಗೆ 800 ಮಾರ್ಕ್ಸಿಗೋ ಆಯ್ಕೆ ಮಾಡಿಕೊಂಡರೆ ಮುಂಬೈ ವಿಶ್ವವಿದ್ಯಾಲಯದಲ್ಲಿ ಅದಕ್ಕೆ entire ಎಂದು ಹೇಳಲಾಗುತ್ತದೆ. ಈ ವಿಶ್ವವಿದ್ಯಾಲಯದಲ್ಲಿ ನಮ್ಮ ಆಯ್ಕೆಯ ವಿಷಯದ ಜೊತೆಗೆ ಬೇರೆ ಕಡ್ಡಾಯ ವಿಷಯಗಳನ್ನು ಕಲಿಯಬೇಕೆಂಬ ನಿಯಮವಿಲ್ಲ.] ಈ ಅವಧಿಯಲ್ಲಿ ನನಗೆ ಕೆಲ ಉಪನಿಷತ್ತುಗಳು ಮತ್ತು ಬ್ರಹ್ಮ ಸೂತ್ರಕ್ಕೆ ಬರೆದ ನಾಲ್ಕು ಮಹತ್ವದ ಭಾಷ್ಯಗಳ ಕುರಿತು ಕಲಿಯಲು ಅವಕಾಶ ಸಿಕ್ಕಿತು. ಉಪನಿಷತ್ತುಗಳಲ್ಲಿ ಪ್ರಸ್ತಾಪಗೊಂಡ ವಿಚಾರಗಳನ್ನು ಬಾದರಾಯಣರು ಸೂತ್ರ ರೂಪದಲ್ಲಿ ಬರೆದರು. ಇದನ್ನೇ 'ಬ್ರಹ್ಮ ಸೂತ್ರ' ಎಂದು

ಹೇಳಲಾಗುತ್ತದೆ. ಈ ಬ್ರಹ್ಮ ಸೂತ್ರಗಳನ್ನು ವಿವರಿಸುತ್ತ ಶಂಕರಾಚಾರ್ಯರು ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದರೆ, ಮಧ್ವರು ದ್ವೈತ ಸಿದ್ಧಾಂತವನ್ನು ಮಂಡಿಸಿದರು. ರಾಮಾನುಜಾಚಾರ್ಯರು ವಿಶಿಷ್ಟಾದ್ವೈತವನ್ನೂ, ವಲ್ಲಭಾಚಾರ್ಯರು ಶುದ್ಧಾದ್ವೈತವನ್ನೂ ಪ್ರತಿಪಾದಿಸಿದರು.

ಶಂಕರಾಚಾರ್ಯರ ಅದ್ವೈತ ಸಿದ್ಧಾಂತ(Non Dualism ಅಥವಾ Monism)ದ ಪ್ರತಿಪಾದನೆ ನನಗೆ ಹೆಚ್ಚು ಇಷ್ಟವಾದದ್ದು. ಶಂಕರಾಚಾರ್ಯರ ವಿಮರ್ಶೆಯ ಪ್ರಕಾರ ಆತ್ಯಂತಿಕ ಸತ್ಯವು ಅ ದ್ವೈತವಾದದ್ದು. ಅದು ಒಂದೇ. ಅಲ್ಲಿ ಎರಡನೆಯ ಸತ್ಯ ಅಥವಾ ವಾಸ್ತವಕ್ಕೆ ಅವಕಾಶವೇ ಇಲ್ಲ. ಈ ಆತ್ಯಂತಿಕ ಸತ್ಯವೇ ಬ್ರಹ್ಮ ತತ್ವ. ಇದು ನಾಲ್ಕು ಮುಖಗಳ ಸೃಷ್ಟಿಕರ್ತ ಬ್ರಹ್ಮನಲ್ಲ. ಈ ಬ್ರಹ್ಮ ತತ್ತ್ವವು ತರ್ಕಕ್ಕೂ, ಶಬ್ದಕ್ಕೂ ಅಗೋಚರವಾದದ್ದು ಅಥವಾ ಶಬ್ದ, ತರ್ಕಗಳನ್ನು ಮೀರಿದ್ದು. ಯಾಕೆಂದರೆ ಇದು ಮಿತಿ ಇಲ್ಲದ್ದು. ಆದಿ ಮತ್ತು ಅಂತ್ಯವಿಲ್ಲದ್ದು. ಸಂಪೂರ್ಣವಾದದ್ದು. ಹಾಗಾಗಿ ಎಲ್ಲವನ್ನೂ ವ್ಯಾಪಿಸಿಕೊಂಡಿರುವಂಥದ್ದು. "ಪೂರ್ಣಮದಃ ಪೂರ್ಣಮಿದಂ, ಪೂರ್ಣಾತ್ ಪೂರ್ಣಮುದಚ್ಯತೇ, ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಶ್ಯತೇ" (ಅದು ಪೂರ್ಣವು, ಇದು ಪೂರ್ಣವು, ಪೂರ್ಣದಿಂದ ಪೂರ್ಣ ಹುಟ್ಟಿದೆ, ಪೂರ್ಣದಿಂದ ಪೂರ್ಣವನ್ನು ಕಳೆದರೆ ಪೂರ್ಣವೇ ಉಳಿಯುತ್ತದೆ) ಎಂದು ಹೇಳುತ್ತದೆ ಈಶಾವಾಸ್ಯೋಪನಿಷತ್ತಿನ ಶಾಂತಿ ಮಂತ್ರ.

ಎಲ್ಲವೂ ಬ್ರಹ್ಮ ತತ್ವವೇ ಆಗಿದ್ದರೆ, ಬ್ರಹ್ಮ ತತ್ವವನ್ನು ಬಿಟ್ಟು ಬೇರೆ ಯಾವುದೂ ಅಸ್ತಿತ್ವದಲ್ಲಿಯೇ ಇಲ್ಲ ಅಂತಾದರೆ ಜೀವ, ದೇಹಗಳು, ಭೌತಿಕ ಜಗತ್ತು ಇವುಗಳ ಸ್ಥಾನಮಾನವೇನು? ಎಂಬ ಪ್ರಶ್ನೆ ಸಹಜವಾಗಿಯೇ ಏಳುತ್ತದೆ. ಅದ್ವೈತ ಸಿದ್ಧಾಂತವು ಈ ಪ್ರಶ್ನೆಗೆ "ಬ್ರಹ್ಮ ಸತ್ಯಮ್, ಜಗನ್ಮಿಥ್ಯಾ, ಜೀವೋ ಬ್ರಹ್ಮೈವ ನಾಪರ:"(ಬ್ರಹ್ಮವೇ ಸತ್ಯ, ನಾವು ಕಾಣುವ ಜಗತ್ತು ಮಿಥ್ಯೆ, ಜೀವವು ಬ್ರಹ್ಮನಲ್ಲದೇ ಬೇರೇನೂ ಅಲ್ಲ)ಎಂದು ಉತ್ತರಿಸುತ್ತದೆ. ನಾವು ಅನುಭವಿಸುತ್ತಿರುವ ಈ ಜಗತ್ತು ಮಿಥ್ಯೆಯೇ? ಕಾಲ್ಪನಿಕವೇ? ಇದನ್ನು ಉತ್ತರಿಸಲು ಮಾಯಾವಾದವನ್ನು ತರುತ್ತಾರೆ ಶಂಕರಾಚಾರ್ಯರು. ಮಾಯೆ ಆತ್ಯಂತಿಕ ಸತ್ಯವನ್ನು ಆವರಿಸಿದ್ದು, ಆ ಸ್ಥಾನದಲ್ಲಿ ಆಕರ್ಷಕವಾದ ಭೌತಿಕ ಜಗತ್ತನ್ನು ತೋರಿಸುತ್ತದೆ ಎಂಬುದು ಅವರ ವಿವರಣೆ. ಉದಾಹರಣೆಗೆ ಹಗ್ಗ ಹಾವಿನಂತೆ ಕಂಡಹಾಗೆ. ಅದು ಹಾವು ಅಲ್ಲ ಎಂಬ ಅರಿವು ಬರುವವರೆಗೂ ಹಾವನ್ನು ಕಂಡಾಗ ನಮ್ಮ ಮನಸ್ಸಿನಲ್ಲಿ ಉಂಟಾಗುವ ಎಲ್ಲ ಭಾವನೆಗಳನ್ನೂ ಅನುಭವಿಸುವಂತೆ ಸತ್ಯದ ಅರಿವಾಗುವವರೆಗೂ ನಾವು ಈ ಜಗತ್ತನ್ನು ಅನುಭವಿಸುತ್ತೇವೆ. ನಾವು ಕಾಣುವ, ಅನುಭವಿಸುವ ಭೌತಿಕ ಜಗತ್ತಿನಲ್ಲಿ ದ್ವಂದ್ವವಿದೆ. ಸತ್ಯದ ಅರಿವು ಎಂದರೆ ಈ ದ್ವಂದ್ವವನ್ನು ಮೀರುವುದು. ತನ್ನನ್ನು ಎಲ್ಲರಲ್ಲಿಯೂ, ಎಲ್ಲವನ್ನು ತನ್ನಲ್ಲಿಯೂ ಕಾಣುವುದು. ಸರ್ವಮ್

ಖಲ್ವಿದಮ್ ಬ್ರಹ್ಮ, (ಇದೆಲ್ಲವೂ ನಿಸ್ಸಂಶಯವಾಗಿ ಬ್ರಹ್ಮವೇ) ಎಂದು ಛಾಂದೋಗ್ಯ ಉಪನಿಷತ್ತು ಸಾರಿದರೆ,

*"ಈಶಾವಾಸ್ಯಮಿದಮ್ ಸರ್ವಮ್ ಯತ್ ಕಿಂ ಚ ಜಗತ್ಯಾಂ ಜಗತ್,*
*ತೇನ ತ್ಯಕ್ತೇನ ಭುಂಜೀಥಾ: ಮಾ ಗೃಧ: ಕಸ್ಯಸ್ವಿದ್ ಧನಮ್"*

(ಈ ಜಗತ್ತೆಲ್ಲವೂ ಈಶನಿಂದ ಆವೃತವಾಗಿದೆ {ಇಲ್ಲಿ ಎಲ್ಲರಿಗೂ ಎಲ್ಲದರ ಹಕ್ಕಿದೆ}. ಆದ್ದರಿಂದ ತ್ಯಾಗ ಭಾವನೆಯಿಂದ ಜೀವಿಸು, ಬೇರೆಯವರಿಗೆ ಸಲ್ಲಬೇಕಾದ್ದನ್ನು ಕಸಿಯ ಬೇಡ") ಎಂದು ಹೇಳುತ್ತದೆ ಈಶಾವಾಸ್ಯ ಉಪನಿಷತ್ತು.

ಇದೆಲ್ಲ ಮಿಥ್ಯೆ ಎಂದು ಅದ್ವೈತ ತತ್ವ ಪ್ರತಿಪಾದಿಸುವ ಜಗತ್ತಿನಲ್ಲಿ ನಾವೆಲ್ಲ ಇದ್ದೇವೆ. ಈಗಿನ ನಮ್ಮ ಸ್ಥಿತಿಯಲ್ಲಿ ಇದು ಸತ್ಯವೋ, ಮಿಥ್ಯವೋ ನಮಗೆ ಗೊತ್ತಿಲ್ಲ. ಆಕರ್ಷಕ ಜಗತ್ತನ್ನು ಮುಂದೆಮಾಡಿ ಮಾಯೆ ಆವರಿಸಿರುವ ಆತ್ಯಂತಿಕ ಸತ್ಯದ ಅನುಭವ ನಮಗೆ ಆಗಲಿದೆಯೇ? ಗೊತ್ತಿಲ್ಲ. ಆದ್ರೆ ಇದೆಲ್ಲದರ ಹಿಂದಿನ ಆತ್ಯಂತಿಕ ಸತ್ಯ ಒಂದೇ ಎಂಬ ವಿಚಾರವನ್ನು ಒಪ್ಪಲು ಸಾಧ್ಯವೇ? ಈ ವಿಚಾರವನ್ನು ನಾವಿಂದು ಖಂಡಿತವಾಗಿಯೂ ಅಳವಡಿಸಿಕೊಳ್ಳಬೇಕಿದೆ. ನಾನು, ನೀನು, ಅದು, ಇದು ಎಲ್ಲವೂ ಒಂದೇ ಅಂತ ಆದರೆ ಹೆಚ್ಚು–ಕಮ್ಮಿ, ಮೇಲು–ಕೀಳಿನ ದ್ವಂದ್ವಕ್ಕೆ ಅಂತ್ಯ ಹಾಡಲು ಸಾಧ್ಯ. ತ್ಯಾಗ ಭಾವನೆಯನ್ನು ಬೆಳೆಸಿಕೊಳ್ಳಲು, ಪರರ ಹಕ್ಕನ್ನು ಗೌರವಿಸಲು ಸಾಧ್ಯ."ಜಗತ್ತು ಹೇಗೆ ಅಸ್ತಿತ್ವಕ್ಕೆ ಬಂದಿರಬಹುದು ?" ಎಂಬ ಕುತೂಹಲವನ್ನು ತಣಿಸಲು ಭಾರತೀಯ ತತ್ವಜ್ಞಾನವನ್ನು academic ಕ್ಷೇತ್ರದಲ್ಲಿ ಕಲಿಯಲು ಇಳಿದಾಗ ನನಗೆ ದಕ್ಕಿದ್ದು ಈ ವಿಚಾರ. ಎಲ್ಲರಿಗೂ ಇದು ಒಪ್ಪಿಗೆ ತಾನೇ? ಹಾಗಾದರೆ ಯೋಚಿಸುವುದೇಕೆ? ಬನ್ನಿ.

*"ಒಂದಾಗಿ ಬಾಳೋಣ, ಒಂದಾಗಿ ಹಾಡೋಣ*
*ಒಂದಾಗಿ ಎಲ್ಲರೂ ಕಾಯಕವ ಮಾಡೋಣ*
*ಸತ್ಯದಲಿ ಮುಗುಳುವುದು, ನಿಷ್ಠೆಯಲಿ ಅರಳುವುದು*
*ಪ್ರೇಮದಲಿ ಮಾಗುವುದು ಈ ಜೀವನ"*

(ದಿ. ಡಾ. ಕುಸುಮಾ ಸೊರಬ)

# ಸೂಫಿ - ದೇವರೊಡನೆ ಒಂದುತನ

**ಎಚ್. ಎಸ್. ಅನುಪಮಾ**

**ಸೂಫಿ ಎಂದರೇನು?**

ಬಹಳಷ್ಟು ಜನರಿಗೆ ಸೂಫಿ ಎಂದರೆ ಏನೋ ವಿಶಿಷ್ಟವಾದದ್ದು, ಒಳ್ಳೆಯದು, ಇಸ್ಲಾಮಿಗೆ ಸಂಬಂಧಪಟ್ಟದ್ದು ಎನ್ನುವುದಷ್ಟು ಗೊತ್ತಿದೆ. ಕೆಲವರಿಗೆ ಇಸ್ಲಾಮಿನ ರಾಜಕಾರಣರಹಿತ, ಶಾಂತಮುಖ ಸೂಫಿ ಎಂಬ ಭಾವನೆಯಿದೆ. ಇಸ್ಲಾಮಿನ ಜೊತೆಜೊತೆಯೇ ಜನ್ಮತಳೆದ ಸೂಫಿ ವಿಚಾರಧಾರೆ ಅಂದಿನಿಂದ ಇಂದಿನವರೆಗೂ ಹಲವು ನೆಲೆ–ನೆಲ–ಮತಧರ್ಮಗಳ ಜನರನ್ನು ತನ್ನತ್ತ ಸೆಳೆಯುತ್ತಲೇ ಇದೆ.

ಸೂಫಿಗಳದು ಒಂದು ಪಂಥವೆಂದೋ, ಅಧ್ಯಾತ್ಮಿಕ ಸಾಧಕರ ಗುಂಪು ಎಂದೋ, ಸೂಫ್ (ಉಣ್ಣೆ/ಉಣ್ಣೆಯ ಬಟ್ಟೆ) ಧರಿಸಿದವರೆಂದೋ, ಭಕ್ತಿಯ ನಶೆಯೇರಿದ ಕವಿಗಳ ಗುಚ್ಛವೆಂದೋ, ಇಸ್ಲಾಮಿ ಪಾಂಡಿತ್ಯವೆಂದೋ, ಹಾಡುನರ್ತನ ಕಲಾವಿದರೆಂದೋ ವ್ಯಾಖ್ಯಾನಿಸುವುದು ಕಷ್ಟ. ಏಕೆಂದರೆ ಏಕಕಾಲದಲ್ಲಿ ಅವರು ಇವೆಲ್ಲವೂ ಆಗಿದ್ದಾರೆ ಮತ್ತು ಅಷ್ಟು ಮಾತ್ರವೇ ಆಗಿರದೇ ಇದ್ದಾರೆ.

ಜನಸಾಮಾನ್ಯರ ಭಾವುಕ ಅಗತ್ಯಗಳಿಗೆ ಸೃಷ್ಟಿಯಾದ ಧರ್ಮ ಹೆಚ್ಚೆಚ್ಚು ಸಾಂಸ್ಥಿಕಗೊಳ್ಳುತ್ತ ಹೋದಂತೆ, ಪ್ರಭುತ್ವಕ್ಕೆ ಹೆಚ್ಚೆಚ್ಚು ಹತ್ತಿರವಾಗುತ್ತ, ಹೆಚ್ಚೆಚ್ಚು ಮೂಲಭೂತವಾಗುತ್ತದೆ. ಚೌಕಟ್ಟುಗಳನ್ನು ವಿಧಿಸುತ್ತದೆ. ವಿಧಿನಿಷೇಧಗಳನ್ನು ಹೇರುತ್ತದೆ. ಹಾಗೆ ಧರ್ಮ ಲೌಕಿಕಗೊಂಡು ಜಡಗೊಂಡಾಗಲೆಲ್ಲ ಅದನ್ನು ಪ್ರಶ್ನಿಸುವ ಅಧ್ಯಾತ್ಮಿಕ ವ್ಯಕ್ತಿ–ಪಂಥಗಳು ಹುಟ್ಟಿವೆ. ಅಂತರಂಗ–ಬಹಿರಂಗ ಶುದ್ಧಿಗೆ, ದೇವರೊಡನೆ ಒಂದುತನ ಸಾಧಿಸಲಿಕ್ಕೆ ಪುರೋಹಿತರೆಂಬ ಮಧ್ಯವರ್ತಿಗಳ ಅಗತ್ಯವಿಲ್ಲ. ಹಾಗೆಯೇ ಧರ್ಮಕ್ಕೆ ರಾಜಾಶ್ರಯಕ್ಕಿಂತ ಜನಾಶ್ರಯವೇ ಅಗತ್ಯ ಎಂದವರು ಪ್ರತಿಪಾದಿಸಿದ್ದಾರೆ. ಎಲ್ಲ ದೇಶಕಾಲಗಳಲ್ಲೂ ಇಂಥ ವ್ಯಕ್ತಿತ್ವಗಳು, ಪ್ರಯತ್ನಗಳು ಬಂದು ಹೋಗಿವೆ. ಅವು ಸಹಜವಾಗಿ ಪಟ್ಟಭದ್ರ ಧಾರ್ಮಿಕ ವ್ಯಕ್ತಿಗಳ ಕೆಂಗಣ್ಣಿಗೆ ಗುರಿಯಾಗಿವೆ.

ಹೀಗೆ ಇಸ್ಲಾಮನ್ನು ಚಲನಶೀಲಗೊಳಿಸುತ್ತ ಹುಟ್ಟಿದ್ದು ಸೂಫಿ. ಭಕ್ತನನ್ನು ಪ್ರೇಮಿಯಾಗಿಸಿ ದೇವರೆಡೆಗೆ ಒಯ್ದದ್ದು ಸೂಫಿ. ಕುರಾನನ್ನು ಜನಸಾಮಾನ್ಯರಿಗೂ ಅರ್ಥ ಮಾಡಿಸಿದ

ಅನುಭಾವಿ ಪರಂಪರೆ ಸೂಫಿ. ಸಿರಿಸಂಪತ್ತಿರುವಾಗಲೂ ಬಡತನವನ್ನನುಭವಿಸುವುದು; ಅಧಿಕಾರವಿದ್ದಾಗಲೂ ವಿನೀತ ಭಾವ ಹೊಂದಿರುವುದು, ಪ್ರಸಿದ್ಧರಾಗಿರುವಾಗಲೂ ಅನಾಮಿಕರಾಗುಳಿಯುವುದು ಸೂಫಿ ಗುಣಗಳು. 'ನಾನು ಯಾರಿಗೂ ಸೇರಿದ್ದಲ್ಲ, ಯಾವುದೂ ನನಗೆ ಸೇರಿಲ್ಲ. ನನಗಾಗಿ ನಾನು ಇಲ್ಲವಾಗಿ ದೇವರಿಗಾಗಿ ನಾನು ಆಗುವುದೇ' ಸೂಫಿಗಳ ಪರಮ ಉದ್ದೇಶ. ಪ್ರೇಮವೇ ಬದುಕಿಗೆ ಆಧಾರವಾಗಿರುವಾಗ ಮನುಷ್ಯರ ಕೆಟ್ಟತನಗಳಿಗೆ ಸೈತಾನ ಕಾರಣವಲ್ಲ, ಪ್ರೇಮರಾಹಿತ್ಯವೇ ಕಾರಣ ಎನ್ನುವುದು ಸೂಫಿಗಳ ಪ್ರತಿಪಾದನೆ. ಸಯ್ಯದ್ ಅಲಿ ಎಂಬ ಸೂಫಿ ಗುರುವಿನ ಪ್ರಕಾರ, 'ಮಾನವಸೇವೆಗೆ ಮುಡಿಪಾಗಿರುವವರು ಸೂಫಿಗಳು. ಅವರಿದ್ದಲ್ಲಿ ನೆಮ್ಮದಿಯಿರುತ್ತದೆ. ಅವರು ಶತ್ರು ಮಿತ್ರರನ್ನು, ನಂಬುವವರು–ನಂಬದಿರುವವರನ್ನು ಏಕಪ್ರಕಾರವಾಗಿ ಹರಸುತ್ತಾರೆ. ಪ್ರತೀಕಾರ ಸಾಧ್ಯವಿದ್ದಾಗಲೂ ಕ್ಷಮಿಸುವುದು, ಕೋಪ ಬಂದರೂ ತಾಳ್ಮೆ ವ್ಯಕ್ತಪಡಿಸುವುದು, ಶತ್ರುವಿಗೂ ಒಳ್ಳೆಯದು ಬಯಸುವುದು, ತನ್ನದಕ್ಕಿಂತ ಬೇರೆಯವರ ಅಗತ್ಯಗಳಿಗೆ ಮೊದಲ ಆದ್ಯತೆ ಕೊಡುವುದು ಅವರ ಮುಖ್ಯ ಗುಣಗಳು.'

*ನಿಲುವಂಗಿಯೊಳಗಿನ ಪರಮಸುಖದ ಗುಟ್ಟು ಬಿಟ್ಟು ಕೊಡದೆ/ಎದೆಯ ಕಸದ ಕೊನೆಯ ಧೂಳನ್ನೂ ತೊಡೆದು ಹಾಕಿರುವವರು/ಅವರು ಒಂದು ಬಟ್ಟಲು ಮದ್ಯ ಕುಡಿದಿರುವವರು/ಮತ್ತವರೀಗ ಕೊನೆಯದಾಗಿ ಸೂಫಿಗಳಾದರು' ಶಬ್‌ಸ್ತರಿ (ಅನು: ಸುನೈಫ್ ವಿಟ್ಲ)*

*ಪೂಜಿಸಲೆಂದು ಬಂದವರು/ಆಚರಣೆಯಲೇ ಮುಳುಗಿಹರು/ಒಳಗಿನ ಬೆಳಕು ಕಾಣಲಿಲ್ಲ/ಹಾಗಾಗಿ ಒಳಗೆ ಬಾರದೇ ಉಳಿದರು – ಯೂನುಸ್ ಎಮ್ರಿ (ಅನು: ಸುನೈಫ್ ವಿಟ್ಲ)*

*ನೀರಬಿಂದಿಗಿ ಹಾಂಗ ನೀನಾಗಬೇಕೊ ಮನುಜಾ/ನಮ ದೋಷ ನಾವರೀಬೇಕು ತೊಳದಂಗ ಕಸರ/ದೇವನಾಮದ ಜಲ ತುಂಬಬೇಕು ಅದರೊಳಗ/ನುಡಿಯೋಣ ಬನ್ನೀರೇ ಬಿಸಮಿಲ್ಲಾ ಯಾ ಅಲ್ಲಾ ಖ್ವಾಜಾ ಬಂದೇ ನವಾಜ್ (ಅನು: ಬೋಡೆ ರಿಯಾಜ್ ಅಹ್ಮದ್)*

ಮೇಲಿನ ಸೂಫಿ ಕಾವ್ಯದ ಸಾಲುಗಳು ಸೂಫಿ ಧಾರ್ಮಿಕತೆಯನ್ನು ಸೂಕ್ಷ್ಮವಾಗಿ ತಿಳಿಸಿಕೊಡುತ್ತವೆ. ಇವತ್ತು ಧರ್ಮಗಳು ಅಂತರಂಗದ ಅಗತ್ಯಕ್ಕಿಂತ ಬಾಹ್ಯ ಆಚರಣೆಗಳಾಗಿ, ಹೆಮ್ಮೆಯಾಗಿ ಉಳಿದುಕೊಂಡಿರುವಾಗ; ಧರ್ಮದ ಕುರುಹುಗಳನ್ನು ಬಿಟ್ಟರೆ ಅಧರ್ಮಿ ಎನಿಸಿಕೊಳ್ಳುವ ಆತಂಕ ಸಾಮಾನ್ಯರನ್ನು ಗುಂಪುಗಳೊಳಗೆ ಗುರುತಿಸಿಕೊಳ್ಳುವ ಧಾವಂತಕ್ಕೆ ದೂಡುತ್ತಿರುವಾಗ ನಿಜಧರ್ಮ ಯಾವುದು? ಅದರ ಗುರುತು ಏನು? ಎಂದು ತಮ್ಮನ್ನು ಪ್ರಶ್ನಿಸಿಕೊಂಡು, ಉತ್ತರ ಪಡೆದು, ಅವನ್ನು ಜನಸಾಮಾನ್ಯರಿಗೂ ತಿಳಿಸಿಕೊಟ್ಟ ಅನುಭಾವಿ ಪರಂಪರೆ ಸೂಫಿ ಇವತ್ತಿಗೆ ಅತ್ಯಂತ ಸೂಕ್ತ ಧಾರ್ಮಿಕ ಪ್ರತಿಪಾದನೆಯಾಗಿದೆ ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ.

## ಸೂಫಿ ಪಂಥ – ಉಗಮ, ಬೆಳವಣಿಗೆ

ಕುರಾನ್ ಮತ್ತು ಹದೀಸುಗಳ ಚಿಂತನೆಗಳನ್ನು ತಮ್ಮ ತಾತ್ತ್ವಿಕತೆಯ ಪ್ರಧಾನ ಆಕರವಾಗಿಟ್ಟುಕೊಂಡ ಪರಂಪರೆ ಸೂಫಿ. ಹೊರಗಣ ಬದುಕಿಗೆ ಷರಿಯವನ್ನೂ, ಒಳಗಣ ನಿಯಮವಾಗಿ ಮಾನವಪ್ರೇಮದ ತತ್ವಗಳನ್ನೂ ಅಳವಡಿಸಿಕೊಂಡು ಇಸ್ಲಾಂ ಹುಟ್ಟಿ ಎರಡು ಶತಮಾನ ಸರಿಯುವ ಹೊತ್ತಿಗೆ ಸೂಫಿ ಹುಟ್ಟಿತು. ಮೊದಲ ಸೂಫಿ ಸಂತ–ಕವಿಗಳು ಏಳು, ಎಂಟನೇ ಶತಮಾನದ ಹೊತ್ತಿಗೆ ಈಗಿನ ಇರಾಕಿನಲ್ಲಿ ಅಬ್ಬಾಸಿದ ಖಲೀಫರು ರಾಜ್ಯಭಾರ ಮಾಡುತ್ತಿದ್ದಾಗ ಬಗದಾದ್ ಮತ್ತು ಬಸ್ರಾ ಕೇಂದ್ರವಾಗಿ ಮುನ್ನೆಲೆಗೆ ಬಂದರು. ಇಸ್ಲಾಂ ಧರ್ಮವು ಹರಡುತ್ತ, ಇಸ್ಲಾಂ ಜಗತ್ತು ವಿಸ್ತಾರವಾಗುತ್ತ ಹೋದಂತೆ, ಧರ್ಮಶ್ರದ್ಧೆಯು ಅಂಧಶ್ರದ್ಧೆಯಾಗದಂತೆ, ಅಧ್ಯಾತ್ಮ ಶಕ್ತಿಯು ಅಧಿಕಾರ ಶಕ್ತಿಯೆದುರು ಕುಂದದಂತೆ ಕಾಯ್ದುಕೊಂಡಿದ್ದು ಸೂಫಿ. ನಂತರ ಇಸ್ಲಾಮಿಕ್ ಸಂಸ್ಕೃತಿಯ ಜೊತೆಗೆ ಸೂಫಿ ಪಂಥವೂ ಬೆಳೆಯಿತು. ಸೂಫಿ ಮತ್ತು ಇಸ್ಲಾಂ ಪರಸ್ಪರ ಪೂರಕವಾಗಿ ವಿಸ್ತಾರಗೊಂಡವು.

ಇಸ್ಲಾಮಿನ ಶಾಂತಿಯುತ ಪ್ರಚಾರಕ್ಕೆ, ವಿಸ್ತರಣೆಗೆ ಸೂಫಿ ಚಿಂತನೆಗಳು ಸಾಕಷ್ಟು ಸಹಾಯ ಮಾಡಿದವು. ಆಫ್ರಿಕಾ, ಏಷ್ಯಾಗಳಲ್ಲಿ ಪ್ರಧಾನವಾಗಿ ಇಸ್ಲಾಮಿಕ್ 'ನಾಗರಿಕತೆ' ಮತ್ತು ಸಂಸ್ಕೃತಿ ರೂಪುಗೊಂಡದ್ದರ ಹಿಂದೆ ಸೂಫಿ ಪ್ರಭಾವ ದಟ್ಟವಾಗಿದೆ. ಲಿಬಿಯಾ, ಸುಡಾನ್ ಸೇರಿದಂತೆ ಆಫ್ರಿಕಾದ ಹಲವು ಬುಡಕಟ್ಟುಗಳು ಸೂಫಿ ತತ್ತ್ವಗಳನ್ನು ಅನುಸರಿಸುವುದರ ಮೂಲಕ ಇಸ್ಲಾಮೀಕರಣಗೊಂಡವು. ರೂಮಿ, ಅತ್ತಾರ್, ಖೋಜಾರಂತಹ ಕೆಲವು ಮುಖ್ಯ ಕವಿ–ಚಿಂತಕರು ಮಧ್ಯ ಏಷ್ಯಾ, ದಕ್ಷಿಣ ಏಷ್ಯಾ, ಅನತೋಲಿಯಾ (ಏಷ್ಯಾ ಮೈನರ್ ಅಥವಾ ಈಗಿನ ಟರ್ಕಿ) ಗಳಲ್ಲಿ ಇಸ್ಲಾಮನ್ನು ಜನಪ್ರಿಯಗೊಳಿಸಿದರು.

ಗುರುವಿಗೆ ಸೂಫಿ ಪರಂಪರೆಯಲ್ಲಿ ಮಹತ್ವದ ಸ್ಥಾನವಿದೆ. ದೈವೀ ಬೆಳಕನ್ನು ದೇವರಿಂದ ಪಡೆದವರೇ ಗುರು. ಅವರು ದೈವಜ್ಞಾನದ ಜ್ಯೋತಿಯನ್ನು ಶಿಷ್ಯರಿಗೆ ದಾಟಿಸಬೇಕು. ಎಂದೇ ಪ್ರತಿ ಸೂಫಿ ಪಂಥವೂ ತಮ್ಮನ್ನು ತಮ್ಮ ಗುರು ಪರಂಪರೆಯ ಹಿಂದಿನವರೆಗೂ ಒಯ್ದು ಆ ಸಾಲಿನಲ್ಲಿ ತಮ್ಮನ್ನು ನಿಲ್ಲಿಸಿಕೊಂಡು ಸಂಪರ್ಕ ಕಲ್ಪಿಸಿಕೊಳ್ಳುತ್ತವೆ. ಪ್ರವಾದಿ ಮುಹಮ್ಮದರು ಎಲ್ಲ ಗುರುಗಳ ಪರಮಗುರು. ಆ ಪರಮಗುರುವಿನೊಡನೆ ತಂತಮ್ಮ ಗುರುಮುಖೇನ ಸೂಫಿಗಳು ಸಂಪರ್ಕವೇರ್ಪಡಿಸಿಕೊಳ್ಳುತ್ತಾರೆ. ಪ್ರವಾದಿ ಮುಹಮ್ಮದರನ್ನು ಅತ್ಯುಚ್ಚ ಮಾದರಿಯೆಂದೂ, ಅತ್ಯುತ್ಕೃಷ್ಟ ಮನುಷ್ಯರೂಪವೆಂದೂ, ಕರೆದವರಿಗೆ ಸದಾ ಓಗೊಡುವ ಚೇತನವೆಂದೂ, ದೇವರೆಡೆಗೆ ತಮ್ಮನ್ನು ಕರೆದೊಯ್ಯುವ ಪರಮ ಮಾರ್ಗದರ್ಶಕರೆಂದೂ ಗೌರವಿಸುತ್ತಾರೆ. ಇಸ್ಲಾಮಿನ ಎರಡು ಪ್ರಮುಖ ಧಾರೆಗಳಾದ ಸುನ್ನಿ ಮತ್ತು ಷಿಯಾ ಪಂಗಡಗಳಲ್ಲಿ ಸೂಫಿಗಳಿದ್ದಾರೆ.

ಸೂಫಿ ಪಂಥಗಳು ಹುಟ್ಟಿ ಬೆಳೆದ ಮೂರು ಅವಧಿಗಳನ್ನು ಗುರುತಿಸಲಾಗುತ್ತದೆ. ಅವು ಹೀಗಿವೆ:

**ಉಮಯ್ಯದ ಅವಧಿ** (ಕ್ರಿ. ಶ. 661–749, 7–8ನೇ ಶತಮಾನ): ಈ ಅವಧಿಯಲ್ಲಿ ವೈರಾಗ್ಯವೇ ಮೈವೆತ್ತ 'ಬೈರಾಗಿ'ಗಳು ಬಂದರು. ಕುರಾನಿನಲ್ಲಿ ಹೇಳಿರುವ ಪದಗಳನ್ನು, ಶ್ಲೋಕಗಳನ್ನು ನಿರಂತರ ಪಠಿಸುತ್ತಿದ್ದರು. ಸದಾ 'ಅಂತಿಮ ತೀರ್ಪಿನ ದಿನ'ದ ಕುರಿತೇ ದುಃಖಾರ್ತರಾಗಿ ಹಾಡುತ್ತಿದ್ದರು. ಜಗತ್ತು ಎಂದರೆ ದುಃಖದ ಮನೆ ಎಂದು ಭಾವಿಸಿದ್ದರು. ಕುರಾನಿನಲ್ಲಿ ಹೇಳಿದಂತೆ ಚಾಚೂ ತಪ್ಪದೆ ನಡೆಯುತ್ತ ರಾತ್ರಿಯ ಜಾವಗಳಲ್ಲೂ ಪ್ರಾರ್ಥಿಸುತ್ತಿದ್ದರು. ವಿಷಾದಭರಿತ ಭಕ್ತಿಯ ಪರಾಕಾಷ್ಠೆಯಲ್ಲಿರುತ್ತಿದ್ದ ಅವರನ್ನು 'ಅಳುವ ಸನ್ಯಾಸಿ'ಗಳೆಂದು ಕರೆಯಲಾಗುತ್ತಿತ್ತು.

**ಅನುಭಾವಿ ಅವಧಿ** (9–11ನೇ ಶತಮಾನ): ಈ ಅವಧಿಯಲ್ಲಿ ಭಕ್ತಿಯು ಪ್ರೇಮವಾಯಿತು, ವೈರಾಗ್ಯವು ಅನುಭಾವವಾಯಿತು. ಬಸ್ರಾದ ಮಹಿಳೆ ರಾಬಿಯಾ ದೇವರನ್ನು 'ಪ್ರೀತಿಸುವ' ಕುರಿತು ಹೇಳಿದ ಮೊದಲ ಸೂಫಿ. ಸ್ವರ್ಗದ ಆಸೆ, ನರಕದ ಭಯಗಳಿಗಿಂತ ಹೆಚ್ಚು ದೇವರ ಪ್ರೇಮವೇ ಸೂಫಿಗಳ ಮುಖ್ಯ ಗುರಿಯಾಯಿತು. ದೇವರ ಕುರಿತ ನಂಬಿಕೆ ಗಾಢವಾಯಿತು. ಕ್ರೈಸ್ತ ಅನುಭಾವಿಗಳೊಂದಿಗೆ ಕೊಡುಕೊಳ್ಳುವಿಕೆ ಏರ್ಪಟ್ಟಿತು. ಸ್ವಯಂನಿಗ್ರಹ ಮತ್ತು ಅಂತರ್ದೃಷ್ಟಿಯ ಬಗೆಗೆ ಸೂಫಿಗಳು ಯೋಚಿಸಿದರು. ಇರಾಕಿನ ಅಲ್ ಮುಹಾಸಿಬಿ ದೇವರ ಸಾಂಗತ್ಯಕ್ಕಾಗಿ ಆತ್ಮಶುದ್ಧಿ ಮಾಡಿಕೊಳ್ಳುವುದೇ ವೈರಾಗ್ಯ ಎಂದು ಕರೆದ. ಜುನೈದ್ ಬಾಗ್ದಾದಿಯೂ ಅದೇ ದಿಕ್ಕಿನಲ್ಲಿ ಚಿಂತನೆಗಳ ಮುಂದುವರೆಸಿದ. ಈಜಿಪ್ಟ್ ದೇಶದ ನುಬಿಯದ ಧುವಾಲ್ ನುನ್ ಅಂತರಂಗ ಜ್ಞಾನ ಕುರಿತು ಹೇಳುತ್ತಾ ದೇವರ ಸ್ತುತಿಸಲು ಸಮಸ್ತ ಪ್ರಕೃತಿಯನ್ನೂ ಬಳಸಿದ. ಅಹಂನಾಶ (ಫನಾ)ದ ಬಗೆಗೆ ಹೇಳಿದ ಮನ್ಸೂರ್ ಹಲ್ಲಜನನ್ನು 'ನಾನೇ ಸತ್ಯ' (ಅನ್ ಅಲ್ ಹಕ್) ಎಂದದ್ದಕ್ಕೆ ಕೊಲ್ಲಲಾಯಿತು. ಅದರ ಒಳಾರ್ಥ ಸರ್ವವೂ ದೇವಮಯ ಎಂದು. ಅದನ್ನು ಅಕ್ಷರಶಃ ವ್ಯಾಖ್ಯಾನಿಸಿದವರು ಆ ಮಾತಿನೊಳಗಿನ ಅದ್ವೈತ ಭಾವ ಅರಿಯದೆ ಧರ್ಮನಿಂದನೆ ಮಾಡಿದನೆಂದು ಮರಣದಂಡನೆ ವಿಧಿಸಿದರು. ಇಸ್ಲಾಂ ಹುಟ್ಟಿ 200 ವರ್ಷ ಕಳೆಯುವುದರೊಳಗೆ ಸೂಫಿ ಕವಿಯೊಬ್ಬ ಹುತಾತ್ಮನಾಗಿದ್ದ.

10ನೇ ಶತಮಾನದ ವೇಳೆಗೆ ಸೂಫಿ ತತ್ತ್ವಗಳ ಮೇಲೆ ಧರ್ಮಪಂಡಿತರಿಗೆ, ಆಳುವವರಿಗೆ ಅವು ಇಸ್ಲಾಂ ನಿಷ್ಠ ಹೌದೋ ಅಲ್ಲವೋ ಎಂಬ ಅನುಮಾನಗಳೆದ್ದವು. ಹಾಗಾಗಿ ಪ್ರತಿ ಸೂಫಿಯೂ ತಾನು ಅನುಸರಿಸುವ ರೀತಿನೀತಿಗಳ ಬಗೆಗೆ ಕೈಪಿಡಿಯೊಂದನ್ನು ಸಿದ್ಧಪಡಿಸಲೇಬೇಕಾಯ್ತು. ಬರೆಯುತ್ತ ಬರೆಯುತ್ತ ಕೆಲವರು ತಾವು ನಂಬಿದ್ದರ ಸಮರ್ಥನೆಗಿಳಿದರು, ತಾವು ನಂಬಿದ್ದೇ ಸರಿ ಎಂದು ಸೂಫಿ ಒಂದು ಸಂಪ್ರದಾಯವೆಂಬಂತೆ ಚಿತ್ರಿಸಿದರು. 11ನೇ ಶತಮಾನದ ವೇಳೆಗೆ ಸೂಫಿ ಪಂಥಗಳು ತಮ್ಮದೇ ಆದ ಬೋಧನೆ, ಪ್ರತಿಪಾದನೆ, ಆಚರಣೆಗಳೊಂದಿಗೆ ಗಟ್ಟಿಗೊಂಡವು.

**ಪಂಥಗಳ ಉಗಮದ ಹಂತ** (12–16ನೇ ಶತಮಾನ): 13ನೇ ಶತಮಾನದ ವೇಳೆಗೆ ಬಗದಾದಿನಲ್ಲಿ ಅಬ್ಬಾಸಿದ ಖಲೀಫರ ರಾಜ್ಯಭಾರ ಮುಗಿದಿತ್ತು. ಮಂಗೋಲರ ದಾಳಿ ಶುರುವಾಗಿತ್ತು. ರಾಜಕೀಯ ವಿಪ್ಲವದ ಈ ಕಾಲದಲ್ಲಿ ಸೂಫಿ ಸುವರ್ಣ ಯುಗ ಬಂತು. ಈ ಹಂತದಲ್ಲಿ ಒಬ್ಬ ಸ್ಥಾಪಕ ಮತ್ತವನ ಅನುಯಾಯಿಗಳ ಸೂಫಿ ಪಂಥಗಳು ರೂಪುಗೊಂಡವು. ಸೂಫಿ ಮಠಗಳು, ಸೂಫಿ ವಸತಿ ನಿಲಯಗಳು ಶುರುವಾದವು. ಅಬ್ದುಲ್ ಖಾದಿರ್ ಗಿಲಾನಿ (ಖಾದಿರಿಯ್ಯಾ), ಅಹ್ಮದ್ ಅಲ್ ರಿಫಾಯಿ (ರಿಫಾಯಿಯ್ಯಾ), ಮೊಯಿನುದ್ದೀನ್ ಚಿಸ್ತಿ (ಚಿಸ್ತಿಯ್ಯಾ), ಅಬ್ದುಲ್ ಹಸನ್ ಅಸ್ ಷಾದಿಲಿ (ಷಾದಿಲಿಯ್ಯಾ), ಸಯ್ಯಿದ್ ಅಲಿ ಹಮ್ದಾನಿ (ಹಮದಾನಿಯ್ಯಾ) ಬಹಾಉದ್ದೀನ್ ನಕ್ಷ್ ಬಂದ್ ಬುಖಾರಿ (ನಕ್ಷ್ ಬಂದಿಯ್ಯಾ) ಮೊದಲಾದ ಶೇಕರು ಪಂಥಗಳನ್ನು ಸ್ಥಾಪಿಸಿದರು. ಹೀಗೆ ಬಾ ಅಲವಿಯ್ಯಾ, ಬಡವಿಯ್ಯಾ, ಬೇಕ್ತಾಶಿ, ಬುರ್ಹಾನಿಯ್ಯಾ, ಚಿಸ್ತಿ, ಖಲ್ವಾಟಿ, ಮೌಲ್ವಿ, ನಕ್ಷ್‌ಬಂದಿ, ನಿಯಮತುಲ್ಲಾಹಿ, ಉವೈಸಿ, ಖಾದಿರಿಯಾ, ಖಲಂದರಿಯಾ, ರಿಫಾಯಿ, ಸರವರಿ, ಶಾದಿಲಿಯಾ, ಸುಹ್ರವರ್ದಿಯಾ, ಜಿಂದಾಶಾ ಮದರಿಯಾ ಮುಂತಾದ ಹಲವಾರು ಪಂಥಗಳು ಚಾಲ್ತಿಗೆ ಬಂದವು. ಪ್ರತಿ ಪಂಥವೂ ತನಗೊಬ್ಬ ಗುರು, ಚಿಹ್ನೆ, ಕೆಲವು ವಿಶಿಷ್ಟ ಆಚರಣೆ, ಕಟ್ಟುನಿಟ್ಟಾದ ನಿಯಮಗಳು, ಅನುಯಾಯಿಗಳ ಸಭೆಗಳನ್ನು ಹೊಂದಿತು. ಇಸ್ಲಾಂ ನೆಲದಲ್ಲಿ ಸೂಫಿಯೆಂಬ ಬೋಧಿಯು ಬೃಹತ್ ವೃಕ್ಷವಾಗಿ ಆಳಕ್ಕೆ, ಅಗಲಕ್ಕೆ ಹರಡಿಕೊಂಡಿತು. ಹಾಗೆಯೇ ಕೆಲವು ಪಂಥಗಳ ನಡುವೆ ಸ್ಪರ್ಧೆ, ವೈರವೂ ಏರ್ಪಟ್ಟಿತು.

**ಸೂಫಿ ತತ್ತ್ವ**

*ಜಗವ ಬೆಳಗುವ ದೀಪ ನೀನು/ತುಂಬಿಕೊಳುವ ಖಾಲಿ ಪಾತ್ರೆ ನಾನು*

– ಜಲಾಲುದ್ದೀನ್ ರೂಮಿ (ಅನು: ಎಚ್. ಎಸ್. ಅನುಪಮಾ)

ಸೂಫಿಗಳು ದೇವರನ್ನು ನಿರೂಪಿಸಿದರು. ದೇವರು–ಮನುಷ್ಯ ಸಂಬಂಧವನ್ನು ನಿರೂಪಿಸಿದರು. ದೇವರನ್ನು ಕಾಣುವ ಮಾರ್ಗ ಅರಸಿದರು. ಎಲ್ಲ ಮುಸ್ಲಿಮರೂ ತಾವು ಸ್ವರ್ಗದಲ್ಲಿರುವ ದೇವರೆಡೆಗೆ ಚಲಿಸುತ್ತಿರುವುದಾಗಿ, ಅದನ್ನು ಸಾಧ್ಯಗೊಳಿಸುವ ಅಂತಿಮ ತೀರ್ಪಿನ ದಿನಕ್ಕೆ ಕಾಯುತ್ತಿರುವುದಾಗಿ ಭಾವಿಸುತ್ತಾರೆ. ಆದರೆ ಮನುಷ್ಯರು ಈ ಭೂಮಿ ಮೇಲಿರುವಾಗಲೇ ದೇವರ ದಾರಿಯನ್ನು ಅನುಸರಿಸಿದರೆ, ತಮ್ಮೊಳಗಿನ ತಮ್ಮನ್ನು ಶುದ್ಧಗೊಳಿಸಿಕೊಳ್ಳುವ ಮೂಲಕ ದೇವರನ್ನು ಅನುನಯಿಸಿದರೆ, ದೇವರೆಡೆಗೆ ಸಾಗಬಹುದು ಎಂದು ಸೂಫಿಗಳು ಭಾವಿಸಿದರು. ವಿವಾಹ ವಿಧಿ, ನ್ಯಾಯ ನಿಯಮಗಳು, ಅಪರಾಧ ಕಾನೂನು ಮೊದಲಾದುವೆಲ್ಲ ಹೊರಗಣ ಕಾನೂನುಗಳಾದರೆ; ಪಶ್ಚಾತ್ತಾಪದ ಮೂಲಕ ಒಳಗಣ ಪಾಪ ತೊಳೆಯುವುದು, ದುರ್ಗುಣಗಳ ತ್ಯಜಿಸಿ ಸನ್ನಡತೆ ಬೆಳೆಸಿಕೊಳ್ಳುವುದು ಒಳಗಣ ಕಾನೂನು, ಅದನ್ನನುಸರಿಸುವುದು ಮುಖ್ಯ ಎಂದಿತು ಸೂಫಿ.

ಸೂಫಿಯ ಮೊದಲ ಕೆಲಸ ದೈವೀ ಪ್ರಭೆಯನ್ನು ಪ್ರತಿಫಲಿಸುವಂತೆ ಆತ್ಮದ ಕನ್ನಡಿಯನ್ನು ಉಜ್ಜಿಉಜ್ಜಿ ತಿಕ್ಕಿ, ಅಹಮಿಕೆಯ ತುಕ್ಕು ಹೋಗಿಸುವುದು. ನಂತರ ಕನ್ನಡಿಯನ್ನು ನಯಸಾಗಿಸಿ ಶುದ್ಧಬಿಂಬ ಮೂಡಲು ಸಾಧ್ಯಗೊಳಿಸುವುದು. ಕನ್ನಡಿಯನ್ನೂ, ಬಿಂಬವನ್ನೂ ಒಟ್ಟಿಗೇ ನೋಡಲಾಗದು. ಆದ್ದರಿಂದ ಕನ್ನಡಿಯೇ ಇಲ್ಲದಂತೆ ಸಂಪೂರ್ಣ ಬಿಂಬವೇ ಆಗಿ ತುಂಬಿಕೊಳ್ಳುವುದು. ಕನ್ನಡಿಯ ತುಂಬ ಬಿಂಬವೇ ಇರುವ, ಕನ್ನಡಿಯೇ ಇಲ್ಲವಾಗುವ ಕೊನೆಯ ಹಂತ ಅದು.

**ಸೂಫಿಗಳ ಪ್ರಕಾರ:**

ದೇವರೆಂದರೆ ಅಸೀಮ ಸೌಂದರ್ಯ, ಅಸೀಮ ಉತ್ತಮಿಕೆ. ಎಲ್ಲ ಸೃಷ್ಟಿಗೂ ಆದಿ. ದೇವರು ಅದೃಶ್ಯ, ನಿರಾಕಾರ. ದೇವರನ್ನು ತಿಳಿಯಲೆಂದೇ ಇಡೀ ಸೃಷ್ಟಿಯ ಚರಾಚರಗಳು ರೂಪುಗೊಂಡಿವೆ. ಅದೃಶ್ಯವಾಗಿದ್ದ ದೇವರು ಕಾಣುವಂತಾಗಿದ್ದು ಸೃಷ್ಟಿಯ ಮೂಲಕ. ಅದಕ್ಕೇ ದೇವರ ಚೆಲುವು ತಿಳಿಯಬೇಕೆಂದರೆ ಸೃಷ್ಟಿಯ ಎಲ್ಲವನ್ನು ಪ್ರೀತಿಸಬೇಕು. ಸೃಷ್ಟಿಯನ್ನು ಪ್ರೀತಿಸುವ ಮೂಲಕ ದೇವರನ್ನು ಪ್ರೀತಿಸಬೇಕು. ಸೃಷ್ಟಿಯಲ್ಲೇ ದೇವರನ್ನು ಕಾಣಬೇಕು. ಮನುಷ್ಯರನ್ನು ಪ್ರೀತಿಸುವುದು ದೇವರನ್ನು ಪ್ರೀತಿಸುವ ಒಂದು ಮಾರ್ಗ. ಆ ಮೂಲಕ ದೈವೀ ಪ್ರೇಮವನ್ನೂ, ಸೌಂದರ್ಯವನ್ನೂ ಅರಿಯಬಹುದು.

ಮಾನವರು ದ್ವಂದ್ವಮಯ ಜೀವಿಗಳು. ಒಳ್ಳೆಯ–ಕೆಟ್ಟ, ಸುರೂಪ–ಕುರೂಪ, ಉದಾರ–ಕ್ರೂರ, ಇದೆ–ಇಲ್ಲ, ಭ್ರಮೆ–ವಾಸ್ತವ ಮುಂತಾದ ವೇಷಗಳಲ್ಲಿ ವೈರುಧ್ಯಮಯವಾಗಿ ಜೀವಿಸುತ್ತಾರೆ. ಪ್ರೀತಿಯಿಂದ ಮಾತ್ರ ಅವರ ಅಹಂನಾಶ ಸಾಧ್ಯ. ಆದರೆ ಬರಿಯ ಪ್ರೀತಿಯೊಂದೇ ದೇವರೆಡೆಗೆ ಹೋಗಲು ಸಾಧ್ಯಮಾಡುವುದಿಲ್ಲ. ಅದು ಪ್ರಾಪಂಚಿಕ ಆಮಿಷಗಳಿಗೆ ಕಟ್ಟಿ ಹಾಕುತ್ತದೆ. ಕೇವಲ ಮನುಷ್ಯಪ್ರೇಮ ಒಂದು ಭ್ರಮೆ. ದೈವೀಪ್ರೇಮವೇ ಅಂತಿಮ ಸತ್ಯ. ಆದರೆ ದೇವರೆಡೆಗೆ ಚಲಿಸಲು, ದೇವರಲ್ಲಿ ಐಕ್ಯವಾಗಲು ಪ್ರೀತಿಯ ರೆಕ್ಕೆಗಳಲ್ಲೇ ಇರುವ ಕತ್ತಿ ಸರಿಯಾದ ಏಟು ಕೊಡಬೇಕು. ಪ್ರೇಮಿ ಅಂತಹ ಒಂದು ಹೊಡೆತಕ್ಕೆ ಕಾಯಬೇಕು. ಅಗಲಿಕೆಯ ಹೊಡೆತಗಳನ್ನು ಖುಷಿಯಿಂದ ಬರಮಾಡಿಕೊಳ್ಳಬೇಕು.

*ಹುಡುಕಲಿಕ್ಕೆ ಅವನೆಲ್ಲಿ ಹೋಗಿದ್ದಾನೆ? ನನ್ನೊಳಗೆ ನಾನೇ ಆಗಿ ಅವನಿದ್ದಾನೆ*
*ಲಿಪಿಕಾರನ ಲೇಖನಿ ನಾನು/ ನನ್ನಿಷ್ಟದಂತೆ ಇರಲು, ಇಲ್ಲದಿರಲು ಸಾಧ್ಯವೇನು?*
*ಎಳೆ ಗರಿಕೆ ಎಸಳೋ ಪುಟ್ಟ ಹೂವೋ/ನೀನು ಏನೋ ಅದರ ನೆರಳು ನಾನು*

– ಜಲಾಲುದ್ದೀನ್ ರೂಮಿ (ಅನು: ಎಚ್. ಎಸ್. ಅನುಪಮಾ)

*ಎಲ್ಲೆಲ್ಲೂ ಇರುವವನು ನೀನು/ಎಲ್ಲಿಯೂ ಇಲ್ಲದವನು ನೀನು/ನಾನಿಲ್ಲದಾಗ ಇಲ್ಲವೆನ್ನುವುದು ಇಲ್ಲವಾಗುವುದು/ನಾನಿಲ್ಲದಾಗ ಇರುತ್ತೀಯ ನೀನು*

– ಮನ್ಸೂರ್ ಅಲ್ ಹಲ್ಲಜ್ (ಅನು: ಓ ಎಲ್ ನಾಗಭೂಷಣ ಸ್ವಾಮಿ)

ಇದು ಸೂಫಿ ತತ್ತ್ವ. ಸೂಫಿ ಪ್ರೇಮತತ್ತ್ವ. ದೇವರನ್ನೂ, ಪ್ರೇಮಿಯನ್ನೂ ಹೃದಯ ಒಂದೇ ರೀತಿಯಲ್ಲಿ ಸ್ವೀಕರಿಸುತ್ತದೆ. ಎಂದೇ ಭಕ್ತಿ ಮತ್ತು ಪ್ರೇಮ ಈ ಎರಡರ ಪರಾಕಾಷ್ಠೆ ಒಂದೇ ಆಗಿದೆ ಎಂದು ನಂಬಿದವರು ಸೂಫಿಗಳು. 'ಪ್ರತಿಯೊಬ್ಬರಲ್ಲೂ ಪ್ರೇಮವಿದೆ; ಮತಧರ್ಮಗಳಾಚೆ ಪ್ರೇಮವೇ ಮನುಷ್ಯರನ್ನು ಬೆಸೆಯುತ್ತದೆ; ಪ್ರೇಮವೇ ದೇವರು ಮತ್ತು ಧರ್ಮವಾಗಿದೆ; ಮತ್ತೆಲ್ಲಿ ಕಾಣದಿದ್ದರೂ ಪ್ರೇಮಿಯ ಹೃದಯಲ್ಲಿ ದೇವರನ್ನು ಕಾಣಬಹುದಾಗಿದೆ' ಎಂದು ಸೂಫಿಗಳ ಪ್ರೀತಿಯ ನಿಯಮಗಳು ಸಾರುತ್ತವೆ. ಷರಿಯದ ಪ್ರಕಾರವೇ ಎಲ್ಲ ನಡೆಯಬೇಕೆಂದು ಧರ್ಮಗುರುಗಳು ಹೇಳುವಾಗ 'ಷರಿಯವೆಂದರೆ ದೀಪವಿದ್ದ ಹಾಗೆ, ಅದೇ ಮಾರ್ಗವಲ್ಲ. ಅದರ ಬೆಳಕಿನಲ್ಲಿ ನಿನ್ನ ದಾರಿ ನೀನೆ ಹುಡುಕಿಕೊ' ಎನ್ನುತ್ತಾರೆ ಸೂಫಿಗಳು.

ಜನಸಾಮಾನ್ಯರಿಗೆ ಹೀಗೆ ಸುಲಭದಲ್ಲಿ ಇಸ್ಲಾಮಿನ ಬೋಧನೆಗಳನ್ನು, ಕುರಾನು ಹದೀಸನ್ನು, ಧಿಕ್ರ್ (ಭಕ್ತಿ) ಅನ್ನು ಸೂಫಿಗಳು ಅರ್ಥ ಮಾಡಿಸಿದರು. ಭಕ್ತಿ, ಅನುಯಾಯಿತ್ವಗಳು ಪ್ರೇಮರೂಪದಲ್ಲಿರಬೇಕೆಂದು ತಿಳಿಸಿದರು. ಕಟ್ಟಾ ಧಾರ್ಮಿಕ ಪಂಡಿತರು ದೇವರೆಂದರೆ ಶಿಕ್ಷಿಸುವ, ಕ್ಷಮೆಯಿರದ ಶಕ್ತಿಯೆಂದು ಭಯಾನಕ ಚಿತ್ರಣ ನೀಡುತ್ತಿದ್ದರೆ ಸೂಫಿಗಳು ದೇವರು ಕರುಣಾಳು, ಪ್ರೇಮಮಯಿ ಎಂದರು.

ಅಧ್ಯಾತ್ಮದ ಹಾದಿಯಲ್ಲಿ ಸಾಗುತ್ತಾ ಸೂಫಿಯಾಗುವುದು ಸುಲಭವೇನಲ್ಲ. ಅದು ಸಂಪೂರ್ಣ 'ನನ್ನ'ನ್ನು ಕಳೆದುಕೊಂಡು ಫನಾ ಆಗುವುದನ್ನು ಬಯಸುತ್ತದೆ. ಅನುಭಾವಿಯಾಗಲು ನಾಲ್ಕು ಸ್ಥಳಗಳ ಆರೋಹಣ ಮಾಡಬೇಕು: 1. ಷರಿಯಾ: ಕಲ್ಮಾ, ನಮಾಜ್, ರೋಜಾ, ಜಕಾತ್, ಹಜ್ ಮೊದಲಾದ ಪವಿತ್ರ ನಿಯಮಗಳನ್ನನುಸರಿಸುವುದು, ಅಂತರಂಗ ಶುದ್ಧಿ, ಬಹಿರಂಗ ಶುದ್ಧಿಗಳ ಯತ್ನ. 2. ತರೀಖಾ: ಗುರುವನ್ನು ಸ್ವೀಕರಿಸಿ ಅವರೊಡನೆ ಆತ್ಮವಿಷಯ ಕುರಿತು ಚಿಂತನೆ ನಡೆಸುವುದು. ಪವಿತ್ರ ಮಾರ್ಗದಲ್ಲಿ ನಡೆಯುವುದು. 3. ಹಕೀಕಾ: ಸ್ವಸ್ವರೂಪ ಅರಿತು ಅಂತರಂಗದ ಸತ್ಯ ಅರಿಯುವುದು. 4. ಮಾಹಿಫಾ: ದೀಕ್ಷೆ ಪಡೆದು ಅಂತರ್ಮುಖಿಯಾಗಿ ಎಲ್ಲ ಕಡೆ ದೇವರನ್ನೇ ಕಾಣುವ ದಿವ್ಯದೃಷ್ಟಿಗಾಗಿ ಸಾಧನೆ ಮಾಡುವುದು, ದೈವೀಜ್ಞಾನ ಪಡೆಯುವುದು.

**ಭಾರತದ ಸೂಫಿಗಳು**

ಭಾರತದಲ್ಲಿ ಸೂಫಿಗಳಿಗೆ 1000 ವರ್ಷಗಳ ಇತಿಹಾಸವಿದೆ. 7–8ನೇ ಶತಮಾನದಲ್ಲಿ ಅರಬ್ ಮುಸ್ಲಿಮರು ವ್ಯಾಪಾರಕ್ಕಾಗಿ ಭಾರತದ ಕರಾವಳಿಗೆ ಬಂದರು. ಅವರ ಜೊತೆಗೇ ಬಂದದ್ದು ಇಸ್ಲಾಂ ಧರ್ಮ. ಅಬ್ಬಾಸಿದ ಖಲೀಫರ (750–1258) ಕಾಲದಲ್ಲಿ ಅರೇಬಿಯಾದ ಸೂಫಿಗಳು ಭಾರತಕ್ಕೆ ಬಂದರು. 11–12ನೇ ಶತಮಾನದ ವೇಳೆಗೆ ಇಡೀ ಇಸ್ಲಾಮಿ ಜಗತ್ತನ್ನು ಸೂಫಿ ಆವರಿಸಿತ್ತು. 11ನೇ ಶತಮಾನದ ವೇಳೆಗೆ ಘಜನಿಗಳು ದೆಹಲಿಯ ಸುಲ್ತಾನರಾಗಿ ಬಂದಾಗ ಬಗದಾದ್ ಮತ್ತು ಪರ್ಷಿಯಾಗಳಿಂದ ಸೂಫಿ

ಸಂತರು, ಅವರ ಕಾವ್ಯ–ಚಿಂತನೆಗಳು ಇಲ್ಲಿಗೆ ಬಂದವು. 12–13ನೇ ಶತಮಾನದ ಹೊತ್ತಿಗೆ ಸೂಫಿ ಪಂಗಡಗಳ ಮಠಗಳು ಸ್ಥಾಪನೆಯಾದವು. ಖಲೀಫರ ರಾಜ್ಯ ಪತನವಾಗಿ ಮಂಗೋಲರ ದಾಳಿ ನಡೆದಾಗ ಬೃಹತ್ ಸಂಖ್ಯೆಯ ಸೂಫಿ ಚಿಂತಕರು, ಕವಿಗಳು ವಿದ್ಯಾರ್ಥಿಗಳು, ಪಂಡಿತರು ಭಾರತಕ್ಕೆ ವಲಸೆ ಬಂದರು. ಜೊತೆಗೆ ಇರಾನ್, ಆಫ್ಘನಿಸ್ತಾನ, ಮಧ್ಯ ಏಷ್ಯಾದಿಂದಲೂ ವಲಸೆ ನಡೆಯಿತು.

ಒಂದು ಕಡೆ ಸಾಂಪ್ರದಾಯಿಕ ಇಸ್ಲಾಮನ್ನು ಬೋಧಿಸುವ ಷರಿಯಾ ಪಂಡಿತರು, ಮತ್ತೊಂದೆಡೆ ಅತ್ಯಂತ ಸರಳ ಭಾಷೆಯಲ್ಲಿ ಷರಿಯವನ್ನು ಜನರಿಗೆ ವಿವರಿಸುವ ಫಕೀರರು ದೆಹಲಿ ಮತ್ತು ಭಾರತದಾದ್ಯಂತ ಹರಡಿಕೊಂಡರು. ಮಹಮದ್ ಬಿನ್ ತುಘಲಕ್ ತನ್ನ ರಾಜಧಾನಿಯನ್ನು ದೆಹಲಿಯಿಂದ ಮಹಾರಾಷ್ಟ್ರದ ದೇವಗಿರಿಗೆ ಬದಲಿಸಿದಾಗ ಅವನೊಡನೆ ಚಿಸ್ತಿ ಪಂಥದ ನಿಜಾಮುದ್ದೀನ್ ಔಲಿಯಾ ಅವರ ಶಿಷ್ಯ, ಖ್ವಾಜಾ ಬಂದೇ ನವಾಜ್ ಕೂಡಾ ಬಂದರು. ನಂತರ ಗುಲ್ಬರ್ಗದಲ್ಲಿ ನೆಲೆಯಾದರು. ವಿಜಯಪುರದಲ್ಲಿ ಮೂವತ್ತಕ್ಕಿಂತ ಹೆಚ್ಚು ದರ್ಗಾಗಳಿರುವುದು ಸೂಫಿಸಂತರ ಪ್ರಭಾವಕ್ಕೆ ಸಾಕ್ಷಿಯಾಗಿದೆ. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಸಾಲಗುಂದದ ಖಾದರಿಪೀರಾ ಸೇರಿದಂತೆ ಅನೇಕ ಸೂಫಿ ಸಂತರು ಜನಮಾನಸದಲ್ಲಿ ಇವತ್ತಿಗೂ ಹಸಿರಾಗಿದ್ದಾರೆ.

ಮುಘಲ್ ದೊರೆಗಳು ಸೂಫಿಸಂತರಿಗೆ ಆಶ್ರಯ ನೀಡಿ ಗೌರವಿಸಿದರು. ಬಾಬರನು ಅದಕ್ಕೆ ಮೇಲ್ಮಂಕ್ತಿ ಹಾಕಿಕೊಟ್ಟಂತೆ ಇತರ ಮುಘಲ್ ದೊರೆಗಳೂ ಸೂಫಿಗಳ ಬಗೆಗೆ ಗೌರವಾದರ ಪ್ರದರ್ಶಿಸಿದರು. ಅಕ್ಬರ್ ವಿವಿಧ ಧರ್ಮಗಳ ಸಾರಸಂಗ್ರಹವಾದ 'ದೀನ್ ಇಲಾಹಿ' ಪಂಥ ಸ್ಥಾಪಿಸಿದ. ಅವನ ಮಗ ದಾರಾಶಿಕೋ ಧರ್ಮಗಳನ್ನು ಬೆಸೆಯುವ ಪ್ರಯತ್ನವಾಗಿ ಸೂಫಿ ತತ್ವ ಬಳಸಿದ.

ಸೂಫಿಗಳು ಜನಸಾಮಾನ್ಯರೊಡನೆ ಬೆರೆಯುತ್ತಿದ್ದರು. ಅವರ ಮಾನಸಿಕ ತಳಮಳ, ಸಮಸ್ಯೆಗಳನ್ನು ಕೇಳಿಸಿಕೊಂಡು ಪರಿಹಾರಾತ್ಮಕ ಸಲಹೆ ನೀಡುತ್ತಿದ್ದರು. ಸೂಫಿಗಳಿಗಾಗಿ ಮತ್ತು ಬಡವರಿಗಾಗಿ ದಾಸೋಹ ವ್ಯವಸ್ಥೆ ಕಲ್ಪಿಸುವ ಭೋಜನಾಲಯಗಳು, ಗ್ರಂಥಾಲಯಗಳು ಭಾರತದ ಹಲವೆಡೆ ಶುರುವಾದವು. ತೇಪೆ ಹಚ್ಚಿದ ನಿಲುವಂಗಿ ತೊಟ್ಟ, ಉಣ್ಣೆ ಕಂಬಳಿ ಹೊದ್ದ ಪೀರರು 'ಹಣ, ಟಂಕಾ ಸಂಗ್ರಹಿಸಲೆಂದಲ್ಲ, ಹೃದಯಗಳ ಸಂಗ್ರಹಿಸಲು' ದೇಶ ಸಂಚಾರ ಮಾಡುತ್ತಾ, ಹಾಡುಹಾಡುತ್ತಾ ತಿರುಗಿದರು. ಗುರುಗಳಾದ ಶೇಕರು, ಅವರ ಶಿಷ್ಯರು ಮತ್ತು ಅನುಯಾಯಿಗಳು ಒಂದೆಡೆ ಸೇರುವ, ಕಲೆಯುವ, ಉಣ್ಣುವ, ಚರ್ಚಿಸುವ ಸ್ಥಳಗಳಾಗಿ ಖಾನ್ಖಾಹಗಳು ಜನ್ಮತಳೆದವು. ಅವುಗಳನ್ನು ನಡೆಸಲು ಸಿರಿವಂತ ದಾನಿಗಳು ಮತ್ತು ರಾಜರು ವಕ್ಫ್ (ಅನುದಾನ) ನೀಡಿದರು. ಆ ಸ್ಥಳವು ಬಡವರನ್ನು, ಜನಸಾಮಾನ್ಯರನ್ನು, ಹಿಂದೂ ಕೆಳ ಜಾತಿಗಳ ಶ್ರಮಿಕರನ್ನು ಸೆಳೆಯಿತು. ಖಾನ್ಖಾಹಗಳಲ್ಲಿ ಎಲ್ಲರಿಗೂ ಶಾಂತಿ, ಪ್ರೀತಿ, ಮಾನವೀಯತೆಗಳನ್ನು ಬೋಧಿಸಲಾಗುತ್ತಿತ್ತು.

ತಾರತಮ್ಯವಿಲ್ಲದೇ ಎಲ್ಲರಿಗೂ ಊಟ, ಶಿಕ್ಷಣ ಸಿಗುತ್ತಿತ್ತು. ಪ್ರಾರ್ಥನೆ, ಪೂಜೆ, ಅಧ್ಯಯನ, ಓದು, ಚರ್ಚೆ ಮುಕ್ತವಾಗಿ ನಡೆಯುತ್ತಿದ್ದವು. ಎಲ್ಲವೂ ಎಲ್ಲರಿಗೂ ಮುಕ್ತ. ಎಲ್ಲರಿಗೂ ಸಮಾನ ಸ್ನೇಹ, ಉದಾರತೆ, ಉಚಿತ ಆಧ್ಯಾತ್ಮಿಕ ಮಾರ್ಗದರ್ಶನ, ಮಾನಸಿಕ ಬೆಂಬಲ ದೊರೆಯುತ್ತಿತ್ತು. ಹೀಗೆ ಸೂಫಿಗಳು ತೋರುತ್ತಿದ್ದ ಬೇಷರತ್ ಪ್ರೀತಿ, ಕಾಳಜಿಗೆ ಮನಸೋತ ತಳಸಮುದಾಯಗಳು ಐಚ್ಛಿಕವಾಗಿ ಬೃಹತ್ ಸಂಖ್ಯೆಯಲ್ಲಿ ಮತಾಂತರ ಹೊಂದಿದರು. ಭಾರತದಲ್ಲಿ ಇಸ್ಲಾಂ ವೇಗವಾಗಿ ಎಲ್ಲ ದಿಕ್ಕುಗಳಿಗೂ ಹರಡಲು ಸೂಫಿ ಪಂಥಗಳು, ಖಾನ್ಖಾಹಗಳು ಅಪಾರ ಕೊಡುಗೆ ನೀಡಿದವು.

ಅದು ಭಾರತದ ನಾನಾ ಭಾಗಗಳಲ್ಲಿ ಭಕ್ತಿ ಚಳುವಳಿಯ ಕಾವಿಗೆ ನೆಲ ಹದನುಗೊಂಡಿದ್ದ ಕಾಲ. ಭಾರತದ ನೆಲ ಸಮೃದ್ಧ ಅನುಭಾವಿ ಪಂಥಗಳ ಆಡುಂಬೊಲವಾಗಿತ್ತು. ಇಲ್ಲಾಗಲೇ ಸಿದ್ಧ, ನಾಥ, ಆರೂಢ, ಶರಣ, ಭಕ್ತ, ವಿರಕ್ತ ಮೊದಲಾದ ಪಂಥ, ಚಳುವಳಿಗಳು ಚಾಲ್ತಿಯಲ್ಲಿದ್ದವು. ಭಾರತದ ಬಹುತೇಕ ಭಾಷೆಗಳ ಸಂತಕವಿಗಳು ಜನರ ಆಡುನುಡಿಗಳಲ್ಲೇ ಹಾಡತೊಡಗಿದ್ದರು. ತತ್ವಪದಕಾರರು ಸಂಚರಿಸುತ್ತಿದ್ದರು. ಜನರನ್ನು ಎಚ್ಚರಿಸುತ್ತ ತಿಳಿ ಹೇಳುತ್ತಿದ್ದರು. ದೇವರ ನಂಬಿದ ಭಕ್ತ ತನ್ನನ್ನು ಹೆಣ್ಣಾಗಿಸಿಕೊಂಡು 'ಶರಣ ಸತಿ ಲಿಂಗ ಪತಿ' ಎನ್ನುವ ಹೋಲಿಕೆ ಸಾಮಾನ್ಯವಾಗಿತ್ತು. ಸೂಫಿಗಳು ತಮ್ಮ ಹಾಡು–ಚಿಂತನೆಗಳಲ್ಲಿಯೂ ಇದೇ ಭಾವ ವ್ಯಕ್ತಪಡಿಸಿದ್ದು ಜನಸಾಮಾನ್ಯರಿಗೆ ಪರಿಚಿತವಾಗುವಂತೆ ಮಾಡಿತು. ಭಕ್ತಿಸಾರದಿಂದ ಫಲವತ್ತುಗೊಂಡಿದ್ದ ಭಾರತದ ನೆಲ ಸೂಫಿ ಬೀಜಕ್ಕೆ ಉತ್ತಮ ನೆಲೆಯಾಯಿತು. ಎಷ್ಟೋ ಕಡೆ ಜಾತಿಧರ್ಮದ ಬೇಧ ಮರೆತು ಸೂಫಿಗಳು, ಯೋಗಿಗಳು, ಭಕ್ತಿಪಂಥದವರು ಒಟ್ಟೊಟ್ಟಿಗೆ ಇರತೊಡಗಿದರು. ಪರಸ್ಪರರಿಂದ ಪ್ರಭಾವಿತರಾಗಿ ಗುರು–ಶಿಷ್ಯ, ಸ್ನೇಹ ಸಂಬಂಧಗಳೂ ಏರ್ಪಟ್ಟವು.

ಸೂಫಿಸಂತರ ಬೋಧನೆಗಳನ್ನು ಕೇಳಲು ಜನ ನೆರೆಯುತ್ತಿದ್ದರು. ಸಂತರ ಗೋರಿಗಳಿರುವ ದರ್ಗಾ ಕೇಂದ್ರವಾಗಿ ಹಾಡು–ನರ್ತನ–ಚಿಂತನೆ–ಪ್ರಾರ್ಥನೆ–ಪರಿಹಾರ ಕ್ರಮಗಳ ಒಂದು ಹೊಸ ಸಾಂಸ್ಕೃತಿಕ ಜಗತ್ತೇ ರೂಪುಗೊಂಡಿತು. ಸೂಫಿಗಳು ಹಾಡುಗವಿತೆ ರಚಿಸಿ ಹಾಡುತ್ತ ಸಂಚರಿಸುತ್ತ ತತ್ವ ಪ್ರಚಾರ ಮಾಡಿದರು. ಅರೇಬಿಕ್, ಪರ್ಷಿಯನ್ ಅಲ್ಲದೆ ಉರ್ದು, ಸಿಂಧಿ, ಬಂಗಾಲಿ, ಬ್ರಜಭಾಷಾದಲ್ಲೂ ಬರೆಯುವ ಸೂಫಿ ಕವಿಗಳು ಬಂದರು. ಸೂಫಿ ಕವಿತೆಗಳು ಸ್ಥಳೀಯ ಭಾಷೆಯಲ್ಲಿ, ಸ್ಥಳೀಯ ಸಾಂಸ್ಕೃತಿಕ ಅಂಶಗಳನ್ನು ಒಳಗೊಂಡಂತೆ ರಚಿಸಲ್ಪಟ್ಟವು. ಉತ್ತರ ಭಾರತದಲ್ಲಿ ಖವ್ವಾಲಿ ಎಂಬ ಸಂಗೀತ ಪ್ರಕಾರ ಜನಪ್ರಿಯವಾಯಿತು. ಪರ್ಷಿಯ, ಅರೇಬಿಯಾ, ಟರ್ಕಿ ಮತ್ತು ಭಾರತದ ಸಂಗೀತ ಮಟ್ಟುಗಳನ್ನು ಸೇರಿಸಿ ಖವ್ವಾಲಿ ಸೃಷ್ಟಿಸಿದ ಕೀರ್ತಿ ಅಮೀರ್ ಖುಸ್ರೋಗೆ ಸಲ್ಲುತ್ತದೆ. ದರ್ಗಾದಂತಹ ಸಾರ್ವಜನಿಕ ಸ್ಥಳಗಳಲ್ಲದೆ ಖಾಸಗಿ ಸ್ಥಳಗಳಲ್ಲೂ ಮೆಹ್‌ಫಿಲ್–ಇ–ಸಮಾ ಎಂಬ ಖವ್ವಾಲಿ ಕಾರ್ಯಕ್ರಮಗಳು ನಡೆದವು. ಹಾಫಿಜ್, ಸಾದಿ ಶಿರಾಜಿ,

ರೂಮಿ, ಅಮೀರ್ ಖುಸ್ರೋ, ಕಬೀರ್, ಸುಲ್ತಾನ್ ಬಹು, ಬಾಬಾ ಬುಲ್ಲೇಶಾಹ್ ಮೊದಲಾದ ಸೂಫಿಗಳ ಕವಿತೆಗಳು ಸಂಗೀತವಾಗಿ, ನರ್ತನವಾಗಿ ಜನರ ತಲುಪಿದವು. ಕೇವಲ ಭಾರತವರ್ಷವೇ ಅಲ್ಲ, ಇಡಿಯ ದಕ್ಷಿಣ ಏಷ್ಯಾದಲ್ಲಿ ಖವ್ವಾಲಿ ಇವತ್ತಿಗೂ ಜನಪ್ರಿಯ ಸೂಫಿ ಕಲಾ ಪ್ರಕಾರವಾಗಿದೆ.

**ಸೂಫಿ – ಪ್ರಸ್ತುತತೆ**

ಸೂಫಿ ತಾತ್ವಿಕರು ದೇವರನ್ನು, ಇಸ್ಲಾಮನ್ನು ಮಾನವೀಯತೆಯ ಮಟ್ಟಕ್ಕೆ ಏರಿಸಿದರು. ಧರ್ಮರಾಜಕಾರಣವು ಹಿಂಸಾತ್ಮಕವಾಗುತ್ತಿರುವ, ಧರ್ಮವು ಮನುಷ್ಯರ ನಡುವಿನ ಗೋಡೆಯಾಗುತ್ತಿರುವ ಇವತ್ತಿಗೆ ಧರ್ಮ, ದೇವರು ಕುರಿತ ಸೂಫಿ ಗ್ರಹಿಕೆಗಳು ತುಂಬ ಮುಖ್ಯವಾಗಿದೆ. ಬೌದ್ಧ ಹೀನಾಯಾನ, ಹಿಂದೂ ವೇದಾಂತ, ಇಸ್ಲಾಮಿನ ಕುರಾನು–ಹದೀಸುಗಳ ಹದವರಿತ ಮಿಶ್ರಣವಾದ ಕಾಶ್ಮೀರದ ಋಷಿ ಸೂಫಿ ಪಂಥದ ಒಂದು ಐತಿಹ್ಯ ಅಡಕವಾಗಿ ಇದನ್ನು ಹೇಳುತ್ತದೆ:

ಹಿಮಾವೃತ ಬೆಟ್ಟಗಳ ಕಾಶ್ಮೀರದ ಅನಂತನಾಗ್ ಜಿಲ್ಲೆಯಲ್ಲಿ ಹುಟ್ಟಿದ ಒಂದು ಮಗು ತಾಯಿಯ ಎದೆ ಹಾಲು ಕುಡಿಯಲು ನಿರಾಕರಿಸುತ್ತಿತ್ತು. ಹಸಿದು ಬಸವಳಿದು ಕೂಗುತ್ತಿದ್ದ ಮಗುವಿನ ಬಳಿ ಯಾರೋ ಒಬ್ಬ ಹೆಣ್ಣುಮಗಳು ಬಂದಳು. 'ಹುಟ್ಟಿದ್ದಕ್ಕೆ ನಾಚಿಕೆಯಿಲ್ಲ, ನಿನಗೆ ಅಮ್ಮನ ಮೊಲೆಹಾಲು ಕುಡಿಯಲು ಎಂಥಾ ನಾಚಿಕೆ? ಆಧ್ಯಾತ್ಮಜ್ಞಾನದ ಹಾಲು ಕುಡಿಯದಿದ್ದರೆ ಆನಂದವೆಲ್ಲಿದೆ?' ಎಂದು ಅದರ ಕಿವಿಯಲ್ಲಿ ಪಿಸುಗುಟ್ಟಿದಳು. ಕೂಡಲೇ ಮಗು ಆಕೆಯ ಮೊಲೆ ಜಗಿಯಿತು. ನಂತರ ತನ್ನಮ್ಮನ ಹಾಲು ಕುಡಿಯಿತು. ಹಾಗೆ ಹಾಲು ಕುಡಿಸಿದವಳು ಲಲ್ಲೇಶ್ವರಿ. ಕುಡಿದವ ಮುಂದೆ ನಂದ ಋಷಿ ಎನಿಸಿಕೊಂಡ ಶೇಕ್ ನೂರುದ್ದೀನ್. ದೇಹದ ವಾಂಛೆಗಳಿಂದ ಮುಕ್ತಳಾಗಿ ನಗ್ನಳಾಗಿ ಓಡಾಡುತ್ತಿದ್ದ ಲಲ್ಲೇಶ್ವರಿ ಅಥವಾ ಲಲ್ಲಾ ಧೇಡ್ 14ನೇ ಶತಮಾನದ ಕಾಶ್ಮೀರದ ಭಕ್ತಕವಿ. ಅವಳು ಹುಟ್ಟುತ್ತ ಹಿಂದೂ. ಅವಳಿಗೆ ಸೂಫಿ ದೀಕ್ಷೆಯಿತ್ತ ಇಬ್ಬರು ಗುರುಗಳು ಮುಸ್ಲಿಮರು. ಲಲ್ಲಾ ದೇಹಾಂತವಾದಾಗ ಆಕೆ ಶೈವಸಂತಳೆಂದು ಹಿಂದೂಗಳೂ, ಸೂಫಿ ಸಂತಳೆಂದು ಮುಸ್ಲಿಮರೂ ಜಗಳವಾಡಿದರು. ಅಂತ್ಯಸಂಸ್ಕಾರವನ್ನು ಹೇಗೆ, ಯಾರು ಮಾಡುವುದೆಂಬ ವಿವಾದ ತಾರಕಕ್ಕೇರಿತು. ತಿಕ್ಕಾಡುತ್ತ ಎರಡೂ ಗುಂಪುಗಳು ಮೃತದೇಹದ ಮೇಲಿನ ಹೊದಿಕೆ ಎಳೆದರೆ ಅಲ್ಲಿ ದೇಹದ ಬದಲಾಗಿ ಹೂವಿನ ರಾಶಿಯಿತ್ತು! ಅದನ್ನೇ ಇಬ್ಬರೂ ಹಂಚಿಕೊಂಡು ತಂತಮ್ಮ ಸಂಪ್ರದಾಯದ ಹಾಗೆ ಅಂತ್ಯಸಂಸ್ಕಾರ ಮಾಡಿದರು. ಇದು ಅಂತೆಕಂತೆಯ ಪುರಾಣ ಎನಿಸಬಹುದು. ಆದರೆ ಕೋಮುವೈಷಮ್ಯದ ದಿನಗಳಲ್ಲಿ ಇದು ಹೇಳುವ ಪಾಠ ಅಮೂಲ್ಯವಾದುದು.

ಮನುಷ್ಯ ದೇಹದಲ್ಲಿ ರಕ್ತ ಹರಿಯುವ ಬದಲು ಜಾತಿ, ಮತಗಳು ಹರಿಯುತ್ತಿವೆ ಎಂದು ಜನರನ್ನು ನಂಬಿಸುತ್ತಿರುವ ಕಾಲವಿದು. 'ಎರಡೂ ಲೋಕದಲ್ಲಿ ಏನೆಲ್ಲಾ

ಇದೆಯೋ ಇರುತ್ತಾ ಇರಲಿ' ಎಂದು ಸಬ್ರ್ (ತಾಳ್ಮೆ) ಅನ್ನು, ಸಹಿಷ್ಣುತೆಯನ್ನು ಪ್ರತಿಪಾದಿಸುವ ಸೂಫಿ ಈ ಕಾಲಕ್ಕೆ ಅವಶ್ಯ ಬೇಕಿರುವ ಮದ್ದು. ಎಂದಿನಿಂದಲೂ ಧಾರ್ಮಿಕ ವಿಪ್ಲವಗಳ ಕಾಲದಲ್ಲಿ ಧರ್ಮಗಳ ನಡುವಿನ ಬೆಸುಗೆಯಾಗಿ, ಸಹಬಾಳ್ವೆಯ ಬೋಧಿಸುವ ಪಂಥವಾಗಿ, ಸೂಫಿಪಂಥ ಸೌಹಾರ್ದವನ್ನು ಕಾಪಾಡಿದೆ. ಈ ಕಾಲಕ್ಕೆ ಅದರ ಪ್ರಸ್ತುತತೆ ಹಿಂದೆಂದಿಗಿಂತ ಹೆಚ್ಚಿದೆ.

**ಮಾಹಿತಿ ಆಕರಗಳು:**


ಇಸ್ಲಾಮಿಕ್ ಮಿಸ್ಟಿಕಲ್ ಪೊಯೆಟ್ರಿ  ಮಹಮೂದ್ ಜಮಾಲ್, ಪೆಂಗ್ವಿನ್ ಕ್ಲಾಸಿಕ್ಸ್.

ರೂಮಿ: ಸ್ವಾಲೋಯಿಂಗ್ ದ ಸನ್ – ಫ್ರಾಂಕ್ಲಿನ್ ಡಿ. ಲೆವಿಸ್, ಒನ್‌ವರ್ಲ್ಡ್ ಪಬ್ಲಿಕೇಷನ್ಸ್

ಮಿಸ್ಟಿಕಲ್ ಪೊಯೆಮ್ಸ್ ಆಫ್ ರೂಮಿ: ಎ. ಜೆ. ಬೆರ್ರಿ


ಇನ್ ದ ಆರ್ಮ್ಸ್ ಆಫ್ ದ ಬಿಲವೆಡ್: ಜೊನಾಥನ್ ಸ್ಟಾರ್

ಅನೇಕ ಅಂತರ್ಜಾಲದ ಸೂಫಿ ಮತ್ತು ಕವಿತೆಯ ತಾಣಗಳು

# ವಿಚಾರ ಸಂಕೀರಣ

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ,
ಹೊರಾವರಣ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಮಂಡ್ಯ
ಮತ್ತು ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಮಂಡ್ಯ
ಸಹಯೋಗದಲ್ಲಿ

# ಮಹಿಳಾ ಬದುಕು ಪಲ್ಲಟಗಳು



ವಿಚಾರ ಸಂಕಿರಣ

ತ್ರಿವೇಣಿ ವೇದಿಕೆ
7 ಮಾರ್ಚ್ 2020, ಶನಿವಾರ
ಡಾ. ಬಿ.ಆರ್. ಅಂಬೇಡ್ಕರ್ ಸಭಾಂಗಣ,
ಸುಭಾಷ್ ನಗರ, ಮಂಡ್ಯ

ಉದ್ಘಾಟನಾ ಗೋಷ್ಠಿ: ಬೆಳಿಗ್ಗೆ 10.30–12.30

ಆಶಯ ಗೀತೆ : ಒಕ್ಕೂಟದ ಸಂಗಾತಿಗಳಿಂದ

ಅಧ್ಯಕ್ಷತೆ : ಮೀರಾ ಶಿವಲಿಂಗಯ್ಯ
ಕಾರ್ಯದರ್ಶಿಗಳು, ಮಾಂಡವ್ಯ ಸಮೂಹ ಶಿಕ್ಷಣ ಸಂಸ್ಥೆಗಳು, ಮಂಡ್ಯ.

ಸ್ವಾಗತ : ಡಾ. ಹೇಮಲತಾ ಎಚ್. ಎಂ
ವಿಶೇಷ ಅಧಿಕಾರಿಗಳು, ಹೊರಾವರಣ ಕೇಂದ್ರ, ಕ.ರಾ.ಅ.ಮ.ವಿ.ವಿ. ಮಂಡ್ಯ

ಚಾಲನೆ–ಸಂವಿಧಾನ ಪ್ರಸ್ತಾವನೆಯ ಓದು: ಸುನಂದಾ ಜಯರಾಂ, ಕರ್ನಾಟಕ ರಾಜ್ಯ ರೈತ ಸಂಘ

ಉದ್ಘಾಟನೆ,
'ಹೆಜ್ಜೋಟದ ಹೆಗ್ಗಳಿಕೆ' ಪುಸ್ತಕ ಬಿಡುಗಡೆ: ಪ್ರೊ. ಸಬಿಹಾ ಭೂಮಿಗೌಡ
ಕುಲಪತಿಗಳು, ಕ.ರಾ.ಅ.ಮ.ವಿ.ವಿ., ವಿಜಯಪುರ

ಪುಸ್ತಕ ಸಂಪಾದನಾ ತಂಡದ ಪರವಾಗಿ : ಶಾರದಾ ಗೋಪಾಲ, ಧಾರವಾಡ

ದಿಕ್ಸೂಚಿ ಮಾತು : ವೋಲ್ಗಾ, ಸ್ತ್ರೀವಾದಿ ಚಿಂತಕಿ ಮತ್ತು ಬರಹಗಾರ್ತಿ, ಹೈದರಾಬಾದ್

ಉಪಸ್ಥಿತಿ : ರಾಧಾಮಣಿ, ವಿಕಸನ, ಮೋಲಿ ಘುಡ್ತಾಡೋ,

ಸಂಯೋಜನೆ : ಶೋಭಾ, ಜನವಾದಿ ಮಹಿಳಾ ಸಂಘಟನೆ, ಮಂಡ್ಯ

# ಮಹಿಳಾ ಬದುಕು ಪಲ್ಲಟಗಳು

ವಿಚಾರ ಸಂಕಿರಣ

ಮಹಿಳಾ ಬದುಕು-ಪಲ್ಲಟಗಳು: ವಿಭಿನ್ನ ನೆಲೆಗಳಿಂದ

**ಗೋಷ್ಠಿ 1: ಮಧ್ಯಾಹ್ನ 12.45 – 1.30**

ಕೃಷಿ ನೆಲೆಯಿಂದ : ವಿ. ಗಾಯತ್ರಿ, ಸಂಪಾದಕರು, 'ಸಹಜ ಸಾಗುವಳಿ' ಪತ್ರಿಕೆ, ಬೆಂಗಳೂರು

ಸಂಯೋಜನೆ : ಪೂರ್ಣಿಮಾ, ಮಹಿಳಾ ಮುನ್ನಡೆ, ಮಂಡ್ಯ

---

ಊಟದ ವಿರಾಮ

---

**ಗೋಷ್ಠಿ 2: ಮ. 2.00–4.00**

ಕೌಟುಂಬಿಕ ನೆಲೆಯಿಂದ : ಬಾನು ಮುಷ್ತಾಕ್, ಲೇಖಕಿ ಮತ್ತು ನ್ಯಾಯವಾದಿಗಳು, ಹಾಸನ

ಸಾಮಾಜಿಕ ಮತ್ತು

ರಾಜಕೀಯ ನೆಲೆಯಿಂದ : ಡಾ. ಸಬಿತಾ ಬನ್ನಾಡಿ, ಲೇಖಕಿ, ತರೀಕೆರೆ

ಔದ್ಯೋಗಿಕ ನೆಲೆಯಿಂದ : ಸತ್ಯಾ, ಸಂವಹನ ಸಮಾಲೋಚಕರು, ಬೆಂಗಳೂರು

ಸಂಯೋಜನೆ : ಶ್ರೀಲತಾ, ಮಂಡ್ಯ

---

**ಗೋಷ್ಠಿ 3: ಸಂಜೆ 4. 15 ರಿಂದ 5.15**

---

ಮಂಡ್ಯದ ಅನುಭವ ಕಥನಗಳು

ರತ್ನಮ್ಮ, ಗಾರ್ಮೆಂಟ್ಸ್ ಮತ್ತು ಟೆಕ್ಸ್‌ಟೈಲ್ಸ್ ವರ್ಕರ್ಸ್ ಯೂನಿಯನ್ (ಗಾಟು), ಗೆಜ್ಜಲಗೆರೆ.

ಅರುಂಧತಿ, ಅಮರ ಸಾಧಕಿಯರ ಸಮಾಜಸೇವಾ ಸಂಘ, ಮಂಡ್ಯ

ಜನಾರ್ಧನ್, ವಿಮೋಚನಾ ಸಂಸ್ಥೆ, ಮಂಡ್ಯ.

ಕೆ. ಶಕುಂತಲಾ, ಗ್ರಾ.ಪಂ.ಸದಸ್ಯರು, ಮಾರಚಾಕನಹಳ್ಳಿ, ಮಂಡ್ಯ

ಸಂಯೋಜನೆ: ಮೇರಿ ಸ್ಟೆಲ್ಲಾ ಜೆ, ಓ.ಡಿ.ಪಿ. ಮಂಡ್ಯ.

## ಕಪ್ಪುಡುಗೆಯಲ್ಲಿ ಮಹಿಳೆಯರು

**ಮೌನ ಜಾಗೃತಿ ಕಾರ್ಯಕ್ರಮ**

**ಸರ್ವಜನಾಂಗದ ಶಾಂತಿಯ ದೇಶ**

ಸಮಯ: ಸಂಜೆ 6.00ರಿಂದ 7.30ರವರೆಗೆ

ಸ್ಥಳ: ಸಂಜಯ ವೃತ್ತ, ಬಸ್‌ಸ್ಟ್ಯಾಂಡ್ ಸಮೀಪ, ಮಂಡ್ಯ

'ಕಪ್ಪು ಉಡುಪಿನಲ್ಲಿ ಮಹಿಳೆಯರು'

ಹಿನ್ನೆಲೆ: ದು.ಸರಸ್ವತಿ

ಚಾಲನೆ: ಕಾರಿನ್ ಕುಮಾರ್, ವಿಮೋಚನಾ, ಬೆಂಗಳೂರು

ರಜಿಯಾ ಬೇಗಂ, ಬೀಡಿ ಕಾರ್ಮಿಕರ ಸಂಘ, ಸಿ.ಐ.ಟಿ.ಯು, ಮಂಡ್ಯ

# ಉದ್ಘಾಟನಾ ಭಾಷಣ

**ಸಬಿಹಾ ಭೂಮಿಗೌಡ**

ಎಲ್ಲರಿಗೂ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಹಾರ್ದಿಕ ಶುಭಾಶಯಗಳು.

ವಿಚಾರಸಂಕಿರಣದ ದಿಕ್ಸೂಚಿ ಭಾಷಣ ಮಾಡಲು ಬಂದಿರುವ ನಮ್ಮ ನಡುವಿನ ಮಹತ್ವದ ಸ್ತ್ರೀವಾದಿ ಚಿಂತಕಿ, ತೆಲುಗಿನ ಹಿರಿಯ ಲೇಖಕಿ, ಮಹಿಳಾ ಧ್ವನಿಗಳನ್ನು ಬೆಸೆದು ಹುರಿಗೊಳಿಸಿ ಸಶಕ್ತ ಧ್ವನಿಯನ್ನು ಮೂಡಿಸಲು ಸಂಘಟನಾತ್ಮಕ ನೆಲೆಯಲ್ಲಿ ವೇದಿಕೆಯನ್ನು ನಿರ್ಮಾಣ ಮಾಡಿರುವ ಹಾಗೂ ಮಾಡುತ್ತಿರುವ ಶ್ರೀಮತಿ ಲಲಿತಾ ಪೋಪುರಿ (ವೋಲ್ಗಾ) ಅವರೇ, ಅಧ್ಯಕ್ಷತೆ ವಹಿಸಿರುವ ಮಂಡ್ಯದ ಮಾಂಡವ್ಯ ಸಮೂಹ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿಗಳಾದ ಶ್ರೀಮತಿ ಮೀರಾ ಶಿವಲಿಂಗಯ್ಯ ಅವರೇ, ರೈತ ಸಂಘದ ಬೆನ್ನೆಲುಬಾದ ಶ್ರೀಮತಿ ಸುನಂದಾ ಜಯರಾಂ ಅವರೇ, ಧಾರವಾಡದ ಸಮಾವೇಶದ ಸ್ಮರಣ ಸಂಚಿಕೆಯ ಸಂಪಾದಕರಲ್ಲಿ ಓರ್ವರಾದ ಶ್ರೀಮತಿ ಶಾರದಾ ಗೋಪಾಲ್ ಅವರೇ, ವಿಕಸನದ ರಾಧಾಮಣಿ ಅವರೇ, ಮಂಡ್ಯ ಸ್ನಾತಕೋತ್ತರ ಕೇಂದ್ರದ ವಿಶೇಷಾಧಿಕಾರಿ ಪ್ರೊ. ಹೇಮಲತಾ ಎಚ್. ಎಂ. ಅವರೇ, ಪ್ರತಿವರ್ಷದ ಮಹಿಳಾ ಸಮಾವೇಶದ ಒಟ್ಟು ಕಾರ್ಯಕ್ರಮಗಳ ಸಂಯೋಜನೆಯನ್ನು ವ್ರತದಂತೆ ಮೈಮೇಲೆ ಹೇರಿಕೊಂಡು ದುಡಿಯುತ್ತಿರುವ ಗೆಳತಿಯರೂ ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಸ್ತಂಭಗಳಾದ ಡಾ. ಎಚ್. ಎಸ್. ಅನುಪಮಾ, ವಾಣಿ ಪೆರಿಯೋಡಿ, ದು. ಸರಸ್ವತಿ ಅವರೇ, ಮಂಡ್ಯದ ವಿವಿಧ ಸಂಘಟನೆಗಳ ಗೆಳತಿಯರೇ, ಒಕ್ಕೂಟದ ಎಲ್ಲ ಆತ್ಮೀಯರೇ, ಮಾಧ್ಯಮ ಮಿತ್ರರೇ, ಆಹ್ವಾನಿತರೇ ಹಾಗೂ ವಿದ್ಯಾರ್ಥಿಗಳೇ 'ಮಹಿಳಾ ಬದುಕು–ಪಲ್ಲಟಗಳು' ಎಂಬ ಈ ವಿಚಾರಸಂಕಿರಣವನ್ನು ಉದ್ಘಾಟನೆ ಮಾಡುವ ಅವಕಾಶ ಒದಗಿರುವುದು ನನಗೆ ಸಂತೋಷ ಮತ್ತು ಹೆಮ್ಮೆಯ ಸಂಗತಿ. ವೇದಿಕೆಯ ಮೇಲಿರುವ ನಾವೆಲ್ಲರೂ ನಿಮ್ಮ ಜೊತೆಗೂಡಿ ಈ ವಿಚಾರ ಸಂಕಿರಣವನ್ನು ಉದ್ಘಾಟಿಸಿದ್ದೇವೆ.

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯವು ಒಕ್ಕೂಟದ ಈ ಬಾರಿಯ ವಿಚಾರ ಸಂಕಿರಣವನ್ನು ಪ್ರಾಯೋಜಿಸಿರುವುದಕ್ಕೆ ಹೆಮ್ಮೆ ಪಡುತ್ತದೆ. ಈ ಹಿಂದೆ 2016 ರಲ್ಲಿ ವಿಜಯಪುರದಲ್ಲಿ ನಡೆದ ಒಕ್ಕೂಟದ ಸಮಾವೇಶದ ಸಂದರ್ಭದಲ್ಲೂ

ವಿಶ್ವವಿದ್ಯಾನಿಲಯವು ವಿಚಾರ ಸಂಕಿರಣವನ್ನು ಪ್ರಾಯೋಜಿಸಿತ್ತು. ಶೈಕ್ಷಣಿಕ ವಲಯದ ಅತ್ಯುನ್ನತ ತಾಣವೆನಿಸಿದ ವಿಶ್ವವಿದ್ಯಾನಿಲಯ ಮತ್ತು ತಳಹಂತದ ಜನರೊಂದಿಗೆ ಗುರುತಿಸಿಕೊಂಡು ಅವರ ಸಬಲೀಕರಣಕ್ಕೆ, ಘನತೆಯ ಬದುಕಿಗೆ ದುಡಿಯುವ ಮಹಿಳಾ ಸಂಘಟನೆಗಳು ಮತ್ತು ಮಹಿಳಾಪರ ಸಂಘಟನೆಗಳ ಇಂಥ ಜೊತೆಗೂಡುವಿಕೆ ಒಂದು ಬಗೆಯಲ್ಲಿ ಗಮನಾರ್ಹ ಬೆಳವಣಿಗೆ. ಮಹಿಳಾ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರವು ಇಂದಿನ ವಿಚಾರ ಸಂಕಿರಣದ ಜವಾಬ್ದಾರಿಯನ್ನು ಸಂತೋಷದಿಂದ ವಹಿಸಿಕೊಂಡಿದೆ. ಒಕ್ಕೂಟದ ಆರಂಭದ ದಿನಗಳಿಂದಲೂ ಜೊತೆಯಲ್ಲಿ ಇದ್ದವಳಾಗಿ ಕೆಲವು ಸಂಗತಿಗಳನ್ನು ಇಲ್ಲಿ ಪ್ರಸ್ತಾಪಿಸುವುದು ನನ್ನ ಕರ್ತವ್ಯ ಎಂದುಕೊಂಡಿದ್ದೇನೆ.

ಇಂದಿಗೆ ಸರಿಯಾಗಿ ಎಂಟು ವರ್ಷಗಳ ಹಿಂದೆ 'ಮಹಿಳೆಯರ ಮೇಲಿನ ದೌರ್ಜನ್ಯಗಳು–ಕಾರಣಗಳು ಮತ್ತು ಆಯಾಮಗಳು' ಎಂಬ ವಿಷಯದ ಕುರಿತು ಒಕ್ಕೂಟದ ಮೊದಲ ವಿಚಾರಸಂಕಿರಣವು ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ಜರುಗಿತು. ಅಲ್ಲಿಂದ ನಂತರ ಒಕ್ಕೂಟವು ಜಾಥಾ, ಸಮಾವೇಶ ಮತ್ತು ವಿಚಾರಸಂಕಿರಣವನ್ನು ತನ್ನ ಧ್ಯೇಯ ಮತ್ತು ಬದ್ಧತೆಯ ಪ್ರಸರಣದ ಎರಡು ನೆಲೆಗಳು ಎಂಬ ನಂಬಿಕೆಯಿಂದ ಮುಂದುವರಿಸಿಕೊಂಡು ಬರುತ್ತಿದೆ. 2012ರ ಡಿಸೆಂಬರ್‌ನಲ್ಲಿ ಜರುಗಿದ ನಿರ್ಭಯಾ ಪ್ರಕರಣ ಮತ್ತು ಅದಕ್ಕೂ ತುಸು ಹಿಂದೆ ಮಂಗಳೂರಿನ ಹೋಮ್‌ಸ್ಟೇ ಒಂದರ ಮೇಲೆ ಧಾಳಿ ಮಾಡಿ ಯುವತಿಯರನ್ನು ಹಿಗ್ಗಾಮುಗ್ಗಾ ಎಳೆದಾಡಿ ದೌರ್ಜನ್ಯ ಎಸಗಿದ್ದನ್ನು ವಿರೋಧಿಸಿ, ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆ (ಮಂಗಳೂರು) ಮತ್ತು ಒಕ್ಕೂಟವು ಹುಟ್ಟಿಕೊಂಡಿತು. ಈ ಎಂಟು ವರ್ಷಗಳಲ್ಲಿ ಒಕ್ಕೂಟವು ಮಂಗಳೂರು, ಮೈಸೂರು, ಬೆಂಗಳೂರು, ವಿಜಯಪುರ, ಕೊಪ್ಪಳ, ಶಿವಮೊಗ್ಗ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಕಾರ್ಯಕ್ರಮ ಹಮ್ಮಿಕೊಂಡಿದ್ದು ಈ ಬಾರಿ ಮಂಡ್ಯ ಜಿಲ್ಲೆಯಲ್ಲಿ ನಡೆಸುತ್ತಿದೆ. ಹಿರಿಯ ಮರಾಠಿ ಲೇಖಕಿ, ದಲಿತ ಹೋರಾಟಗಾರ್ತಿ ಶ್ರೀಮತಿ ಊರ್ಮಿಳಾ ಪವಾರ್, ವಿಮೋಚನಾ, ಬೆಂಗಳೂರು ಸಂಘದ ಸಂಸ್ಥಾಪಕರಾದ ಡಾ. ಕಾರಿನ್ ಕುಮಾರ್, ಮಹಿಳಾ ಮತ್ತು ದಲಿತ ಚಳವಳಿಯಲ್ಲಿ ದೀರ್ಘ ಕಾಲದಿಂದ ದುಡಿಯುತ್ತಿರುವ ಚೆನ್ನೈನ ಶ್ರೀಮತಿ ವಿ. ಗೀತಾ, ಜೆಎನ್‌ಯುನ ಸಂದರ್ಶಕ ಪ್ರಾಧ್ಯಾಪಕರಾದ ಪ್ರೊ. ಉಮಾ ಚಕ್ರವರ್ತಿ, ಸಹೇಲಿ ಮಹಿಳಾ ಸಂಘದ ಜೊತೆ ಕೆಲಸ ಮಾಡಿದ ಒರಿಸ್ಸಾದ ಶ್ರೀಮತಿ ರಂಜನಾ ಪಾಡಿ, ಮಹಾರಾಷ್ಟ್ರದ ಸಮಾಜವಾದಿ ಚಳವಳಿಯ ಹಿನ್ನೆಲೆಯವರಾದ ಶ್ರೀಮತಿ ಮನೀಷಾ ಗುಪ್ತೆ ಮತ್ತು ಸುಪ್ರಸಿದ್ಧ ಪತ್ರಕರ್ತೆಯೂ ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕರೂ ಆಗಿದ್ದ ಶ್ರೀಮತಿ ಮಣಿಮಾಲಾ ಅವರುಗಳು ಹಿಂದಿನ ವರ್ಷಗಳಲ್ಲಿ ವಿಚಾರಸಂಕಿರಣದ ದಿಕ್ಸೂಚಿ ಭಾಷಣಕಾರರಾಗಿದ್ದರು. ಈ ಬಾರಿ ಶ್ರೀಮತಿ ವೋಲ್ಗಾ ಅವರು ನೆರೆಯ ಆಂಧ್ರಪ್ರದೇಶದಿಂದ ಬಂದಿದ್ದಾರೆ. ಈ ವಿವರಗಳೇ ಒಕ್ಕೂಟದ ಆಶಯವನ್ನು ಸೂಚಿಸುತ್ತದೆ. ದೇಶದ ವಿವಿಧ ಭಾಗಗಳಲ್ಲಿ ಮಹಿಳೆಯರ ಹಾಗೂ

ಸಮಾಜದ ಅಂಚಿನಲ್ಲೇ ಉಳಿದವರ ಪರವಾಗಿ ದುಡಿಯುತ್ತಿರುವ ವಿಧ್ವಾಂಸರನ್ನು ಸ್ಥಳೀಯರಿಗೆ ಪರಿಚಯಿಸುವ, ಅಲ್ಲಿನ ವಿದ್ಯಮಾನವನ್ನು ಸ್ಥಳೀಯರಿಗೂ ಇಲ್ಲಿಯ ಚಟುವಟಿಕೆಗಳನ್ನು ಅವರಿಗೂ ಮುಟ್ಟಿಸುವ ಆಸ್ಥೆ ಇದರ ಹಿಂದಿದೆ.

ನಿರ್ಭಯಾ ಪ್ರಕರಣದ ಅಪರಾಧಿಗಳು ಇಂದಿಗೂ ಜೈಲಿನಲ್ಲಿ ಇದ್ದಾರೆ, ಅವರಿಗೆ ಇನ್ನೂ ಶಿಕ್ಷೆ ಊರ್ಜಿತಕ್ಕೆ ಬಂದಿಲ್ಲ ಎಂಬ ದುಗುಡಕ್ಕಿಂತಲೂ ಅವರಲ್ಲಿ ತಮ್ಮ ಕೃತ್ಯದ ಕುರಿತು ಒಂದಿನಿತೂ ಪಶ್ಚಾತ್ತಾಪವಿಲ್ಲ ಎಂಬುದು ನಮಗೆ ಅತ್ಯಂತ ನೋವಿನ ಮತ್ತು ದುಃಖದ ಸಂಗತಿ. ಇಂತಹ ಮನಃಸ್ಥಿತಿಗಳು ಹೆಚ್ಚುತ್ತಿರುವುದು, ಮಹಿಳೆಯನ್ನು ಭೋಗಸಂಸ್ಕೃತಿಯ ಸರಕಾಗಿ ಕಾಣುವ ಮನಃಸ್ಥಿತಿಗಳ ಹೆಚ್ಚಳ, ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳ ಜೊತೆಗೆ ಅವರ ಬದುಕುವ ಹಕ್ಕನ್ನೇ ಕಿತ್ತುಕೊಂಡು ವಿಕೃತವಾಗಿ ಕೊಲ್ಲುವ ಮನಃಸ್ಥಿತಿಗಳನ್ನು ಈ ಸಮಾಜ, ನ್ಯಾಯಾಲಯ ಒಟ್ಟಾಗಿ ಹೆಣ್ಣುಮಕ್ಕಳು ಹೇಗೆ ಪರಿಗ್ರಹಿಸಬೇಕು? ಹೇಗೆ ಪ್ರತಿಕ್ರಿಯಿಸಬೇಕು? ಮತ್ತು ಇಂಥ ಕಲುಷಿತ ವಾತಾವರಣವನ್ನು ಮಹಿಳಾಸ್ನೇಹಿಯಾಗಿ ಮಾಡುವ ಬಗೆ ಯಾವುದು ಎಂಬ ಹುಡುಕಾಟ, ನಿರಂತರ ಸಾಧ್ಯತೆಗಳ ಶೋಧ ನಮ್ಮದಾಗಿದೆ.

ಒಕ್ಕೂಟವು ನಡೆಸುವ ಇಂಥ ವಿಚಾರಸಂಕಿರಣಗಳಲ್ಲಿ ಈ ಸಮಾಜದ ಯುವಪೀಳಿಗೆ ಅಧಿಕ ಸಂಖ್ಯೆಯಲ್ಲಿ ಪಾಲ್ಗೊಳ್ಳುತ್ತಿದೆ, ಸ್ಪಂದಿಸುತ್ತಿದೆ ಎಂಬುದು ಆಶಾದಾಯಕ ಸಂಗತಿ. ಕರ್ನಾಟಕದ ಸಮಾನ ಮನಸ್ಕ ನೂರಾರು ಸಂಘಟನೆಗಳು ಒಕ್ಕೂಟದ ಈ ಕೆಲಸವನ್ನು ಮೆಚ್ಚಿ ಪ್ರತಿಬಾರಿ ಕೈಜೋಡಿಸುತ್ತಿರುವುದು ಹಾಗೂ ದುಡಿಮೆಯ ವರ್ಗದಿಂದ ಬೌದ್ಧಿಕ ವಲಯದ ಎಲ್ಲ ವರ್ಗ, ಜಾತಿ, ಪಂಗಡ, ಸಿದ್ಧಾಂತಗಳ ಹೆಣ್ಣು ಮಕ್ಕಳೂ ಈ ಚಿಂತನೆಗಳನ್ನು ಆಲಿಸಲು ಬರುತ್ತಿರುವುದು ಒಕ್ಕೂಟಕ್ಕೆ ದೊಡ್ಡ ಬೆಂಬಲ ಎಂಬುದನ್ನು ದಾಖಲಿಸಲು ಬಯಸುವೆ.

2013ರಿಂದ 2020ಕ್ಕೆ ಬರುವಾಗ ಕಾಲದ ಚಕ್ರ ಸ್ವಲ್ಪ ನಮ್ಮ ಪರವಾಗಿ ತಿರುಗಿದೆ. ಮೊದಲು ವಿಚಾರಸಂಕಿರಣಗಳನ್ನು ವಿಶ್ವವಿದ್ಯಾನಿಲಯಗಳಲ್ಲಿ ಆಯೋಜಿಸಲು ಅಲ್ಲಿನ ಮಹಿಳಾ ಅಧ್ಯಯನ ಕೇಂದ್ರ, ವಿವಿಧ ವಿಭಾಗಗಳ ನಿರ್ದೇಶಕರ ಹಾಗೂ ಕುಲಪತಿಗಳ ಮರ್ಜಿಯನ್ನು ಕಾಯಬೇಕಾಗಿತ್ತು. ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ ಅದರಲ್ಲೂ 'ದೌರ್ಜನ್ಯ ವಿರೋಧಿ' ಎಂಬ ಪದಪುಂಜವೇ ಶೈಕ್ಷಣಿಕ ವಲಯದ ಅಧಿಕಾರಿಗಳ ಗಂಟಲಿಗೆ ಕಡುಬು ತುರುಕಿದಂತಾಗುತ್ತಿತ್ತು. ಆದಾಗ್ಯೂ ಹಲವರು ಒಪ್ಪಿಗೆ ನೀಡಿ ಸಹಕರಿಸಿದ್ದರು. ಆಗಲೇ ಹೇಳಿದಂತೆ ವಿಶ್ವವಿದ್ಯಾನಿಲಯದ ಯುವತಲೆಮಾರು ಮಾತ್ರ ತುಂಬ ಆಪ್ತವಾಗಿ ಮತ್ತು ಮುಕ್ತವಾಗಿ ಒಕ್ಕೂಟವು ನಡೆಸಿದ ವಿಚಾರ ಸಂಕಿರಣದಲ್ಲಿ ಸ್ಪಂದಿಸಿತ್ತು. ತರಗತಿಯ ಒಳಗಡೆಯೂ ಇಂಥ ಚರ್ಚೆಗಳ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟಿದ್ದು ಮರೆಯುವಂತಿಲ್ಲ. ಕಾಲಚಕ್ರದ ಗತಿ ಈಗ ಸ್ವಲ್ಪ ತಿರುಗಿದೆ. ಮಹಿಳಾ

ದೌರ್ಜನ್ಯ ವಿರೋಧಿ ಒಕ್ಕೂಟದ ಹೆಸರು ಈಗ ಅಪಥ್ಯ ಆಗುತ್ತಿಲ್ಲ, ಮೇಲಧಿಕಾರಿಗಳನ್ನು ಓಲೈಸಬೇಕಾದ ಜಾಗದಲ್ಲಿದ್ದವರು ನಿರ್ಧಾರ ತೆಗೆದುಕೊಳ್ಳುವ ಜಾಗ ಸೇರಿದ್ದೇವೆ. ಈ ಬೆಳವಣಿಗೆ ಮುಂದುವರಿಯುತ್ತದೆ. ಇದನ್ನು ಸಾಧ್ಯವಾಗಿಸಿದ ಎಲ್ಲ ಗೆಳತಿಯರಿಗೂ ಹಾರ್ದಿಕ ಅಭಿನಂದನೆಗಳು.

ವಿಚಾರಸಂಕಿರಣದಲ್ಲಿ ಮಂಡಿತವಾಗುವ ವಿಷಯಗಳು ಸಾಮಾನ್ಯವಾಗಿ ಸಮಾವೇಶ ನಡೆಯುವ ಜಿಲ್ಲೆಯು ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳನ್ನು ಕೇಂದ್ರದಲ್ಲಿಟ್ಟು ಚರ್ಚಿಸುವ ವಿಷಯಕ್ಕೆ ಆದ್ಯತೆ ನೀಡಲಾಗುತ್ತದೆ. ಮಂಡ್ಯ ಜಿಲ್ಲೆ ಕಳೆದ ಕೆಲವು ವರ್ಷಗಳಿಂದ ಕೈಗಾರಿಕೀಕರಣದ ಹೊಡೆತಕ್ಕೆ ಸಿಲುಕಿ ನಲುಗುತ್ತಿದೆ. ಇಲ್ಲಿನ ಕೃಷಿ ವಲಯದ ಬಿಕ್ಕಟ್ಟುಗಳು ಹೆಚ್ಚಾಗಿವೆ, ಗಾರ್ಮೆಂಟ್ಸ್ ಉದ್ದಿಮೆಗಳ ಭರಾಟೆಯಲ್ಲಿ ಅಸಂಘಟಿತ ಮಹಿಳಾ ಕಾರ್ಮಿಕರ ಸಂಖ್ಯೆ ಹೆಚ್ಚಾಗಿದೆ, ಪುರುಷ ಪ್ರಧಾನ ಮತ್ತು ಊಳಿಗಮಾನ್ಯ ಚಿಂತನಾಕ್ರಮಗಳು ಇನ್ನೂ ಬೇರೂರಿರುವ ಈ ಪ್ರದೇಶದಲ್ಲಿ ಮಹಿಳೆಯರು ಸಾಮಾಜಿಕ, ಸಾಂಸ್ಕೃತಿಕ ನೆಲೆಯಲ್ಲಿ ಹಲವು ಸಮಸ್ಯೆಗಳನ್ನು ಎದುರುಗೊಂಡಿದ್ದಾರೆ. ಇವು ಇಂದಿನ ವಿಚಾರಸಂಕಿರಣದ ಪ್ರಬಂಧಗಳಲ್ಲಿ ಚರ್ಚಿತವಾಗಲಿವೆ.

ಧಾರವಾಡದ ಒಕ್ಕೂಟದ ಸಮಾವೇಶದ ಸ್ಮೃತಿಸಂಚಯ 'ಹೆಣ್ಣೋಟದ ಹೆಗ್ಗಳಿಕೆ'ಯನ್ನು ಪ್ರೀತಿಯಿಂದ ಬಿಡುಗಡೆ ಮಾಡಲಾಗಿದೆ. ಈ ಕೃತಿಯ ಸಂಪಾದಕರಾದ ಶ್ರೀಮತಿ ಶಾರದಾ ಗೋಪಾಲ್ ಮತ್ತು ಶ್ರೀಮತಿ ಸುನಂದಾ ಕಡಮೆ ಅವರಿಗೆ ಮತ್ತು ಅವರ ಶ್ರಮಕ್ಕೆ ಕೈಜೋಡಿಸಿದ ಎಲ್ಲರಿಗೂ ಅಭಿನಂದನೆಗಳು.

ಕೊನೆಯದಾಗಿ ಒಂದು ಮಾತು. ಜನರನ್ನು ಗಾಢವಾಗಿ ಪ್ರಭಾವಿಸಿದ, ಮಹಿಳೆಯ ಸಿದ್ಧ ಪಡಿಯಚ್ಚುಗಳು ನಿರ್ಮಾಣವಾಗುವುದಕ್ಕೆ ಕಾಣಿಕೆ ನೀಡಿದ, ಹೆಣ್ಣುಮಕ್ಕಳೆಲ್ಲ ಗೌರವಿಸುವ ಆದರೆ ಅವರದಲ್ಲದ ಪುರಾಣಗಳನ್ನು ಓದುವುದು, ಅರ್ಥಮಾಡಿಕೊಳ್ಳುವುದು, ವಿಮರ್ಶಿಸುವುದು ಮತ್ತು ಒಡೆದು ಪುನರ್‌ರಚಿಸುವುದರ ಸಾಧ್ಯತೆಗಳನ್ನು ಭಾರತೀಯ ಎಲ್ಲ ಭಾಷೆಗಳ ಲೇಖಕಿಯರು ಹುಡುಕಾಡಿದ್ದಾರೆ. ಕೆಲವರು ಪುರಾಣದ ಸ್ತ್ರೀಪಾತ್ರಗಳ ಅಸ್ತಿಪಂಜರಕ್ಕೆ ರಕ್ತಮಾಂಸ ತುಂಬುವ ಕೆಲಸ ಮಾಡಿದರೆ, ದೇಹಮೂಲದಿಂದ ಮಾತ್ರ ಕಾಣುತ್ತಿದ್ದ ಸ್ತ್ರೀಯರನ್ನು ಮನೋಮೂಲದಿಂದಲೂ ಕಾಣಿಸುವ ಕೆಲಸವನ್ನು ಇನ್ನು ಕೆಲವರು ಮಾಡಿದರು. ವೋಲ್ಗಾ ಅವರ 'ರಾಜಕೀಯ ಕಥೆಗಳು' ಪುರಾಣ ಜಗತ್ತಿನಲ್ಲಿ ಅಖಂಡ ಮಹಿಳಾ ಲೋಕವನ್ನು ತುಂಡರಿಸಿ ಅಪರಿಚಿತಗೊಳಿಸಿದ, ಪುರುಷ ರಾಜಕಾರಣದ ವ್ಯವಸ್ಥಿತ ಹುನ್ನಾರವನ್ನು ಬಯಲುಗೊಳಿಸಿವೆ, ಮುಂದುವರಿಕೆಯಾಗಿ ಖಂಡಿತ ಪುರಾಣ ಸ್ತ್ರೀ ಪಾತ್ರಗಳ ನಡುವೆ ಸಕಾರಣವಾದ ಸಂಬಂಧದ ಬೆಸುಗೆ ಹಾಕಲಾಗಿದೆ. ಇದು ಕಟ್ಟುವ ಕನಸಿನವರ 'ಕಸೂತಿ'ಯಾಗಿದೆ. ಇಂಥ ವೋಲ್ಗಾ ಅವರ ದಿಕ್ಸೂಚಿ ಭಾಷಣಕ್ಕೆ ನಾವೆಲ್ಲ ಕಿವಿಯಾಗೋಣ.

# ಈ ಬೀದಿಗಳೆಲ್ಲಾ ನಮ್ಮವು: ಹಗಲೂ-ಇರುಳೂ

**ಓಲ್ಗಾ**

ಅನುವಾದ: ಅಜಯ್ ವರ್ಮ ಅಲ್ಲೂರಿ

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ಹೊರಾವರಣ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಮಂಡ್ಯ – ಇವರ ಸಂಯುಕ್ತಾಶ್ರಯದಲ್ಲಿ ನಡೆಯುತ್ತಿರುವ ಈ ಸಮಾವೇಶಕ್ಕೆ ನನ್ನನ್ನು ಆಹ್ವಾನಿಸಿದ್ದು ನನಗೆ ಅತ್ಯಂತ ಸಂತೋಷದ ಸಂಗತಿಯಾಗಿದೆ. 'ಮಹಿಳಾ ಬದುಕು ಪಲ್ಲಟಗಳು' ಎಂಬ ಈ ಶೀರ್ಷಿಕೆಯು ಇಂದಿನ ದುರಿತ ಕಾಲದಲ್ಲಿ ಅತ್ಯಂತ ಅವಶ್ಯವಾದ ಶೀರ್ಷಿಕೆಯೂ, ಚರ್ಚಾಸ್ಪದ ವಿಷಯವೂ ಆಗಿದೆ. ನಾಳೆಯ ದಿನ, ಅಂದರೆ ಮಾರ್ಚ್ 8ರಂದು – ಮಹಿಳೆಯರೆಲ್ಲಾ ಸೇರಿ ಪ್ರಪಂಚದಾದ್ಯಂತ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸುತ್ತಾರೆ. ಆದರೆ ಈ ದಿನವನ್ನು ಆಚರಿಸುವುದರ ಹಿಂದೆ, ಇದನ್ನು ಸಾಧ್ಯವಾಗಿಸುವುದರ ಹಿಂದೆ ದೊಡ್ಡ ಹೋರಾಟವೇ ಇದ್ದದ್ದನ್ನು ನಾವು ಮರೆಯಬಾರದು. ಹಾಗಾಗಿ ಇದು ಬರೀ ಮಹಿಳಾ ದಿನಾಚರಣೆಯಷ್ಟೇ ಅಲ್ಲ; ಹೋರಾಟದ ದಿನಾಚರಣೆಯೂ ಹೌದು.

ಮಹಿಳೆಯರಿಗೆ ಸಂಬಂಧಿಸಿದಂತೆ, ಈ ಹಿಂದೆ 10–12 ತಾಸುಗಳಷ್ಟು ಇದ್ದ ದುಡಿಮೆಯ ಅವಧಿಯನ್ನು 8 ತಾಸುಗಳಿಗೆ ಇಳಿಸಿಕೊಳ್ಳುವುದರ ಹಿಂದೆ ದೊಡ್ಡ ಹೋರಾಟವೇ ಇದೆ. ಪುರುಷನಿಗೆ ಸಮಾನವಾಗಿ ಮಹಿಳೆಯೂ ಮತ ಚಾಲನೆಯ ಹಕ್ಕನ್ನು ಸಾಧಿಸಿಕೊಳ್ಳುವುದರ ಹಿಂದೆ ದೊಡ್ಡ ಹೋರಾಟವೇ ಇದೆ. ತಮಗೆ ತಿನ್ನಲು ಕಾಳು, ನೆಮ್ಮದಿಯ ಬಾಳು – ಎರಡೂ ಅತ್ಯವಶ್ಯಕ ಎನ್ನುತ್ತಾ 'ಬ್ರೆಡ್ ಅಂಡ್ ರೋಸೆಸ್' ಎಂಬ ಹೆಸರಿನಲ್ಲಿ ಅನೇಕ ಮಹಿಳೆಯರು ಹೋರಾಡಿದರು. ತಾವು ಹೋರಾಡಿ ಸಾಧಿಸಿದ ಇಂಥಾ ಹಲವಾರು ಹಕ್ಕುಗಳಿಗಾಗಿ, ಅವುಗಳನ್ನು ನೆನಪಿಡುವುದಕ್ಕಾಗಿ ಮಾರ್ಚ್ 8ನೇ ತಾರೀಖನ್ನು ಅಂತಾರಾಷ್ಟ್ರೀಯ ಮಹಿಳಾ ದಿನವನ್ನಾಗಿ ಕರೆದುಕೊಂಡರು. ಈ ಹೋರಾಟಗಳನ್ನೆಲ್ಲಾ ನೆನಪಿಟ್ಟುಕೊಂಡು ನಾವು ಈ ಮಹಿಳಾ ದಿನಾಚರಣೆಯನ್ನು ಆಚರಿಸುತ್ತಾ ಬಂದಿದ್ದೇವೆ.

ವಿಶ್ವಸಂಸ್ಥೆಯು 1975ರ ವರ್ಷವನ್ನು ಅಂತಾರಾಷ್ಟ್ರೀಯ ಮಹಿಳಾ ವರ್ಷವನ್ನಾಗಿ ಘೋಷಿಸಿದ ಸಂಗತಿ ನಮಗೆಲ್ಲಾ ಗೊತ್ತೇ ಇದೆ. ಆ ವರ್ಷವು ಭಾರತದ ಮಟ್ಟಿಗೆ ಮತ್ತೊಂದು ಕಾರಣಕ್ಕೆ ಮುಖ್ಯವಾದುದು. 1975ರಲ್ಲೇ ನಮ್ಮ ದೇಶದಲ್ಲಿ ತುರ್ತು ಪರಿಸ್ಥಿತಿಯನ್ನು ಘೋಷಿಸಲಾಗಿತ್ತು. ಆ ವರ್ಷವು ಮಹಿಳೆಯರ ಪಾಲಿಗೆ ಅನುಕೂಲಕರ ವರ್ಷವೆಂದೇ ಹೇಳಬೇಕು. ಮಹಿಳೆಯರು ಯಾವುದೇ ಪ್ರತಿಕೂಲ ಸ್ಥಿತಿಯನ್ನು ತಮಗೆ ಅನುಕೂಲಕರವಾಗಿ ಬದಲಿಸಿಕೊಳ್ಳುವ ಶಕ್ತಿಯನ್ನು ಉಳ್ಳವರು. ಈ ಹಿರಿಮೆ ಈಗಿನದ್ದಲ್ಲ. ಅಂತಹ ಶಕ್ತಿ ಸಾಮರ್ಥ್ಯವನ್ನು ಹೆಣ್ಣು ಅನಾದಿ ಕಾಲದಿಂದಲೂ ಹೊಂದಿದ್ದಾಳೆ. ಆಕೆಯನ್ನು ಎಷ್ಟು ಕಷ್ಟಕರ ಸನ್ನಿವೇಶಗಳಿಗಳಲ್ಲಿ ಸಿಲುಕಿಸಿದಾಗಲೂ ತಾನು ಆ ಘಟನೆಗಳಿಂದ ಮಾಗಿ ಗಟ್ಟಿಗೊಳ್ಳುವುದನ್ನು ರೂಢಿಸಿಕೊಂಡಿದ್ದಾಳೆ. ಉದಾಹರಣೆಗೆ ಮಹಿಳೆಯರಿಗೆ ಶಾಲೆಗೆ ಹೋಗುವ ಅವಕಾಶ ತುಂಬಾ ತಡವಾಗಿಯೇ ಸಿಕ್ಕಿತು. ಆದರೆ ಆ ಅವಕಾಶವನ್ನು ಏಕೆ ಕೊಟ್ಟರು? ಹೆಣ್ಣು ಶಾಲೆ ಕಲಿತರೆ ಕುಟುಂಬ ಉದ್ಧಾರವಾಗುತ್ತದೆ, ಹೆಣ್ಣು ಶಾಲೆ ಕಲಿತರೆ ಒಳ್ಳೆಯ ಹೆಂಡತಿಯಾಗುತ್ತಾಳೆ, ಒಳ್ಳೆಯ ತಾಯಿಯಾಗುತ್ತಾಳೆ ಎಂಬ ಇತ್ಯಾದಿ ಕಾರಣಗಳಿಗೆ ಹೆಣ್ಣಿಗೆ ಶಾಲೆಗೆ ಹೋಗುವ ಅವಕಾಶವನ್ನು ಕೊಟ್ಟರು. ಆದರೆ ನಾವು ಕೇವಲ ಒಳ್ಳೆಯ ಹೆಂಡತಿಯೋ, ಒಳ್ಳೆಯ ಗೃಹಿಣಿಯೋ, ಒಳ್ಳೆಯ ತಾಯಿಯೋ ಆಗಲು ಮಾತ್ರ ನಮ್ಮ ಶಿಕ್ಷಣವನ್ನು ಉಪಯೋಗಿಸಿಲ್ಲ, ಒಳ್ಳೆಯ ಮನುಷ್ಯಳಾಗಿ, ಮಾನವಿಯಾಗಿ, ಅನ್ಯಾಯದ ವಿರುದ್ಧ ಹೋರಾಡುವ ಮನೋಧರ್ಮವನ್ನು ಬೆಳೆಸಿಕೊಳ್ಳಲು ಸಹ ಅದನ್ನು ಉಪಯೋಗಿಸುತ್ತಾ ಬಂದಿದ್ದೇವೆ.

ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ವೃತ್ತಪತ್ರಿಕೆಗಳ ಮೇಲೆ ಹೆಚ್ಚಾಗಿ ಕತ್ತರಿ ಪ್ರಯೋಗವನ್ನು ಮಾಡಲಾಗುತ್ತಿತ್ತು. ಪತ್ರಿಕೆಗಳಲ್ಲಿ ಯಾವ ಸುದ್ದಿಯನ್ನು ಬರೆಯಬೇಕು, ಯಾವುದನ್ನು ಬರೆಯಬಾರದು ಎಂಬುದಾಗಿ ಸರ್ಕಾರವು ಅನೇಕ ನಿಯಮಗಳನ್ನು ವಿಧಿಸಿತು. ಇದರಿಂದಾಗಿ ಪತ್ರಿಕೆಗಳಲ್ಲಿ ಸಾಕಷ್ಟು 'ಸ್ಪೇಸ್' ಉಂಟಾಯಿತು. ಈ ಸ್ಪೇಸನ್ನು ಮಹಿಳೆಯರು ಆಗ ಚೆನ್ನಾಗಿ ಬಳಸಿಕೊಂಡರು. ಆ ಸ್ಪೇಸಿನಲ್ಲಿ ಮಹಿಳೆಯರ ಸ್ಥಿತಿಗತಿಗಳ ಬಗೆಗೆ ಹಲವಾರು ಲೇಖನಗಳನ್ನು, ವರದಿಗಳನ್ನು, ಸಂದರ್ಶನಗಳನ್ನು ಪ್ರಕಟಿಸಲಾಯಿತು. ಇದರಿಂದಾಗಿ ಹಲವಾರು ಮಹಿಳೆಯರು ಚೈತನ್ಯಶೀಲರಾದರು. ಅದಲ್ಲದೆ, ಅಂತಾರಾಷ್ಟ್ರೀಯ ಮಹಿಳಾ ವರ್ಷದ ಸಂದರ್ಭದಲ್ಲಿ ವಿಶ್ವಸಂಸ್ಥೆಯು ಆಯಾ ದೇಶಗಳಲ್ಲಿನ ಮಹಿಳೆಯ ಸ್ಥಾನಮಾನದ ಬಗೆಗೆ ವರದಿಯನ್ನು ನೀಡಲು ಎಲ್ಲಾ ದೇಶಗಳಿಗೂ ಕರೆಕೊಟ್ಟಿತು. ಈ ದಿಸೆಯಲ್ಲಿ, ಭಾರತ ಸರ್ಕಾರವು ಒಂದು ಸಮಿತಿಯನ್ನು ರಚಿಸಿತ್ತು. ವೀಣಾ ಮಜುಂದಾರ್, ಲೋಕಿತಾ ಸರ್ಕಾರ್ ಮುಂತಾದವರನ್ನು ಸದಸ್ಯರನ್ನಾಗಿ ಒಳಗೊಂಡಿದ್ದ ಈ ಸಮಿತಿಯು 'ಸ್ಟೇಟಸ್ ರಿಪೋರ್ಟ್ ಆಫ್ ವುಮನ್ ಇನ್ ಇಂಡಿಯಾ' ಎಂಬ ವರದಿಯನ್ನು ತಯಾರಿಸಿತು. ಆ ವರದಿಗೆ 'ಟುವರ್ಡ್ಸ್ ಇಕ್ವಾಲಿಟಿ' ಅಂದರೆ 'ಸಮಾನತೆಯೆಡೆಗೆ' ಎಂಬ ಶೀರ್ಷಿಕೆಯನ್ನು ನೀಡಲಾಗಿತ್ತು. ಆ ವರದಿಯಲ್ಲಿ ಹಲವಾರು

ಭಯಾನಕ ಸತ್ಯಾಂಶಗಳು ಹೊರಬಿದ್ದವು. ಮಹಿಳಾ ಸಾಕ್ಷರತೆ ತುಂಬಾ ಕಡಿಮೆಯಾಗಿತ್ತು, ಮಹಿಳಾ ಆರೋಗ್ಯ ಅಸ್ವಸ್ಥತೆಯ ಹಾದಿ ಹಿಡಿದಿತ್ತು. ಮಹಿಳಾ ಜನಸಂಖ್ಯೆಯ ಅನುಪಾತದಲ್ಲಿ ತುಂಬಾ ಅಂತರವಿತ್ತು. ಈ ಎಲ್ಲಾ ಅಂಶಗಳನ್ನು ಪರಿಶೀಲಿಸಿದ ಮೇಲೆ, ಭಾರತದಲ್ಲಿ ಮಹಿಳೆಯರ ಸ್ಥಿತಿಗತಿಯು ತೀರಾ ಕೆಳ ದರ್ಜೆಯಲ್ಲಿ ಇದೆಯೆಂದೂ, ದೇಶದ ಪ್ರಗತಿಯಲ್ಲಿ ಮಹಿಳಾ ಅಭಿವೃದ್ಧಿಯು ಸಹ ಅತ್ಯಗತ್ಯವೆಂದು ನಿರ್ಧರಿಸಲಾಯಿತು.

ಸುಶಿಕ್ಷಿತ ಮಹಿಳೆಯರು, ಮಹಿಳೆಯರ ಸ್ಥಿತಿಗತಿಗಳ ಬಗೆ ಆಳವಾದ ಅಧ್ಯಯನಗಳನ್ನು ನಡೆಸಲು ವಿಶ್ವವಿದ್ಯಾನಿಲಯಗಳಲ್ಲಿನ 'ಮಹಿಳಾ ಅಧ್ಯಯನ' ಎಂಬ ಹೊಸ ಜ್ಞಾನಶಾಖೆಯನ್ನು ಶುರು ಮಾಡಬೇಕಾಗಿ ಸರ್ಕಾರಕ್ಕೆ ಬೇಡಿಕೆಯನ್ನು ಸಲ್ಲಿಸಿ ಯಶಸ್ವಿಯಾದರು.

ಸರ್ಕಾರವು ಸಹ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಮಹಿಳಾ ಅಭಿವೃದ್ಧಿಗೆ ಕೈಜೋಡಿಸಲು ಬೃಹತ್ ರಾಜಕೀಯ ಪಕ್ಷಗಳನ್ನು ನೇಮಿಸಿತು. ಸಣ್ಣ ಪುಟ್ಟ ಮಹಿಳಾ ಸಂಘಗಳ ಮೇಲೆ ಸರ್ಕಾರಕ್ಕೆ ಯಾವ ನಂಬಿಕೆಯೂ ಇರಲಿಲ್ಲ. ಆದರೆ ಈ ಸಣ್ಣ ಪುಟ್ಟ ಮಹಿಳಾ ಸಂಘಗಳೇ ದೊಡ್ಡ ದೊಡ್ಡ ಕೆಲಸಗಳನ್ನು ಮಾಡಿದವು. ಆ ಕಾಲಘಟ್ಟದಲ್ಲಿ ಎರಡು–ಮೂರು ರೇಪ್ ಕೇಸ್‌ಗಳು ಇಡೀ ದೇಶವನ್ನೇ ಬೆಚ್ಚಿಬೀಳಿಸಿದ್ದವು. ಅತ್ಯಾಚಾರಕ್ಕೆ ಒಳಗಾಗಿದ್ದ ಮಾಯಾ ತ್ಯಾಗಿ, ರಮೀಜಾಬಿ, ಮಥುರಾ ಮುಂತಾದ ರೇಪ್ ಕೇಸ್‌ಗಳು ದೇಶದ ಉದ್ದಗಲಕ್ಕೂ ಚರ್ಚೆಯನ್ನೆಬ್ಬಿಸಿದವು. ಅತ್ಯಾಚಾರದ  ಕಾನೂನಿನಲ್ಲಿ ಶಿಕ್ಷೆಯ ಕ್ರಮಗಳನ್ನು ಮತ್ತಷ್ಟು ಕಠಿಣಗೊಳಿಸಬೇಕಾಗಿ ಮಹಿಳಾಪರ ಹೋರಾಟಗಳು ನಡೆದವು. ಇದಲ್ಲದೆ ಎಪ್ಪತ್ತು ಮತ್ತು ಎಂಬತ್ತರ ದಶಕಗಳಲ್ಲಿ ವರದಕ್ಷಿಣಾ ಹತ್ಯೆಗಳ ಬಗೆ ಹಲವಾರು ಸುದ್ದಿಗಳು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದವು. ಕೌಟುಂಬಿಕ ಹಿಂಸೆಯ ಮೂಲಕ ಮಹಿಳೆಯನ್ನು ವರದಕ್ಷಿಣೆಗಾಗಿ ಪೀಡಿಸಿ ಹತ್ಯೆಮಾಡುತ್ತಿರುವುದನ್ನು ಹಲವಾರು ಮಹಿಳಾ ಸಂಘಗಳು ಖಂಡಿಸಿದವು. ಆತ್ಮಹತ್ಯೆ ಎಂದು ಬಿಂಬಿಸಲಾಗುತ್ತಿದ್ದ ಅಂತಹ ಸಾವುಗಳನ್ನು 'ವರದಕ್ಷಿಣಾ ಹತ್ಯೆ' ಎಂಬ ಹೊಸ ಪದದಡಿಗೆ ಸೇರಿಸಿ 'ಡೌರಿ ಡೆಥ್' ಕಾನೂನಿನಲ್ಲಿ ಬದಲಾವಣೆಗಳನ್ನು ತಂದವು. ಜೊತೆಗೆ, ಹೆಣ್ಣಿನ ಗರ್ಭದಲ್ಲಿರುವ ಶಿಶು ಹೆಣ್ಣೋ, ಗಂಡೋ ಎಂದು ಮೊದಲೇ ತಿಳಿದುಕೊಳ್ಳುವ ಲಿಂಗ ನಿರ್ಧಾರಣೆಯ ಪರೀಕ್ಷೆಗಳನ್ನು ಆಸ್ಪತ್ರೆಗಳಲ್ಲಿ ನಿಲ್ಲಿಸಬೇಕಾಗಿಯೂ ಮಹಿಳಾ ಸಂಘಗಳು ಸರ್ಕಾರಕ್ಕೆ ಬೇಡಿಕೆ ಇಟ್ಟವು. ಆ ಮೂಲಕ ಭ್ರೂಣ ಹತ್ಯೆಗಳನ್ನು ತಡೆಗಟ್ಟುವ ದಿಸೆಯಲ್ಲಿ ಕೆಲಸಗಳನ್ನು ಮಾಡಿದವು.

ಈ ಮಹಿಳಾ ಸಂಘಗಳು ಕೇವಲ ನಗರ ಕೇಂದ್ರಿತ ಮಹಿಳೆಯರಿಗಷ್ಟೇ ಸೀಮಿತವಾಗದೆ, ಗ್ರಾಮೀಣ ಮಹಿಳೆಯರ ಉದ್ಧಾರವನ್ನೂ ಗಮನದಲ್ಲಿಟ್ಟುಕೊಂಡು ಅವರಿಗೆ ಸಣ್ಣ ಪುಟ್ಟ ವಿಷಯಗಳ ಬಗೆಗೆ ಜಾಗೃತಿಯನ್ನು ಮೂಡಿಸಲು ಮುಂದಾದವು. ಈ ನಿಟ್ಟಿನಲ್ಲಿ ಸರ್ಕಾರದ ವತಿಯಿಂದ ವಿವಿಧ ಕಾರ್ಯಾಚರಣೆಗಳನ್ನು ಜಾರಿಗೆ ತರುವಲ್ಲಿ ಈ ಸಂಘಗಳು

ಶ್ರಮಿಸಿದವು. ಆಂಧ್ರ ಪ್ರದೇಶದಲ್ಲಿನ ಉದಾಹರಣೆಯನ್ನೇ ಹೇಳುವುದಾದರೆ, ಗ್ರಾಮೀಣ ಮಹಿಳೆಯರು ಓದು-ಬರಹ ಕಲಿಯಬೇಕೆಂದು ಎಂಬತ್ತರ ದಶಕದ ಉತ್ತರಾರ್ಧದಲ್ಲಿ ಅವರಿಗಾಗಿ ರಾತ್ರಿ ಶಾಲೆಗಳನ್ನು ತೆರೆದರು. ಇವರಿಗಾಗಿಯೇ ವಿಶೇಷವಾದ ಪಠ್ಯಕ್ರಮವನ್ನೂ, ಶಿಕ್ಷಕರನ್ನೂ ನೇಮಿಸಿದರು. ಆ ಪಠ್ಯಕ್ರಮದಲ್ಲಿ – ಒಂದು ಹಳ್ಳಿಯ ಹೆಂಗಸರೆಲ್ಲಾ ಸೇರಿ ತಮ್ಮ ಹಳ್ಳಿಯಲ್ಲಿನ ಸರಾಯಿ ಅಂಗಡಿಯನ್ನು ಮುಚ್ಚಿಸಿದ ಕಥೆಯೊಂದು ಪಾಠವಾಗಿತ್ತು. ಅದನ್ನು ಕೇಳಿ ಆಂಧ್ರಪ್ರದೇಶದಲ್ಲಿನ ಅನೇಕ ಗ್ರಾಮೀಣ ಮಹಿಳೆಯರು ತಮ್ಮ ಹಳ್ಳಿಯಲ್ಲೂ ಇದ್ದ ಸರಾಯಿ ಅಂಗಡಿಗಳನ್ನು ಮುಚ್ಚಿಸಲು ಸ್ಫೂರ್ತಿಗೊಂಡರು. ಸರಾಯಿ ಅಂಗಡಿಗಳು ಇಲ್ಲವಾದರೆ ಕುಡಿದು ಬರುವ ಗಂಡನಿಂದ, ಮಕ್ಕಳಿಂದ ಹಿಂಸೆ ತಪ್ಪುತ್ತದೆಯೆಂದೂ, ದುಡಿದ ಹಣ ಪೋಲಾಗದೆ ಇರುತ್ತದೆಯೆಂದೂ, ತಮ್ಮ ನೆಮ್ಮದಿಯ ಬಾಳನ್ನು ಈ ಸರಾಯಿ ಕಸಿದುಕೊಳ್ಳುತ್ತಿದೆ ಎಂದೂ ಮನಗಂಡ ಗ್ರಾಮೀಣ ಮಹಿಳೆಯರು 'ಸರಾಯಿ ವಿರೋಧಿ ಚಳವಳಿ' ಎಂಬ ದೊಡ್ಡದೊಂದು ಹೋರಾಟವನ್ನೇ ನಡೆಸಿದರು. ನೆನಪಿಡಿ, ಈ ಹೋರಾಟವನ್ನು ಮಾಡಿದವರು ಸುಶಿಕ್ಷಿತ ಮಹಿಳೆಯರಲ್ಲ, ದೊಡ್ಡ ದೊಡ್ಡ ಸಂಘಗಳಲ್ಲಿರುವ ನಾಯಕರಲ್ಲ, ರಾಜಕೀಯ ಪಕ್ಷದವರಲ್ಲ, ಹಳ್ಳಿಗಳಲ್ಲಿ ದಿನಗೂಲಿ ಕೆಲಸ ಮಾಡುವ ಸಾಮಾನ್ಯ ದಲಿತ ಹೆಣ್ಣುಮಕ್ಕಳು.

ಈ ಹೋರಾಟದಿಂದ ದಲಿತ ಹೆಣ್ಣುಮಕ್ಕಳು ಸಾಕಷ್ಟು ವಿಷಯಗಳನ್ನು ಕಲಿತರು. ಏಕೆಂದರೆ ಹೋರಾಟ ಮಾಡಿದ ಇವರೆಲ್ಲಾ ಜೈಲು ಪಾಲಾದರು. ಕೆಲವು ದಿನಗಳ ಕಾಲ ಜೈಲಿನಲ್ಲಿ ಇದ್ದ ಇವರಿಗೆ, ಲಾಕ್ ಅಪ್ ಎಂದರೆ ಏನೆಂದು ತಿಳಿದು ಬಂತು, ಎಫ್.ಐ.ಆರ್ ಎಂದರೆ ಏನೆಂದು ತಿಳಿದು ಬಂತು. ಆ ಬಳಿಕ ಅವರೆಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳ ಬಳಿಗೆ ಹೋಗಿ ತಮ್ಮ ಹಳ್ಳಿಯಲ್ಲಿ ಸರಾಯಿ ಅಂಗಡಿ ಇರುವುದು ಬೇಡವೆಂದು ಬೇಡಿಕೊಂಡರು. ಇದರಿಂದಾಗಿ ಅವರಿಗೆ ಜಿಲ್ಲಾ ಮಟ್ಟದ ಅಧಿಕಾರಿಗಳು ಯಾರು, ಅವರು ಎಲ್ಲಿರುವರು, ಅವರ ಕೆಲಸ-ಕಾರ್ಯಗಳೇನು ಎಂಬುದು ತಿಳಿದು ಬಂತು. ಮುಂದೆ ಎಂ.ಎಲ್.ಎ ಬಳಿಗೆ ಹೋದರು, ಅಲ್ಲಿಯದನ್ನೆಲ್ಲಾ ತಿಳಿದುಕೊಂಡರು. ಬಳಿಕ ಮಂತ್ರಿಗಳ ಬಳಿಗೆ ಹೋದರು, ಅಲ್ಲಿಯದನ್ನೆಲ್ಲಾ ತಿಳಿದುಕೊಂಡರು. ಕೊನೆಗೆ ಮುಖ್ಯಮಂತ್ರಿ ಹಾಗೂ ರಾಜ್ಯಪಾಲರ ಬಳಿಗೂ ಹೋದರು. ಹೀಗೆ, ಇಡೀ ರಾಜಕೀಯ ಚಕ್ರವನ್ನೇ ಆ ಹೆಣ್ಣುಮಕ್ಕಳು ಅರಿತುಕೊಂಡರು. ರಾಜಕೀಯವಾಗಿ ತುಂಬಾ ಚೈತನ್ಯಶೀಲರಾದರು. ಇಂಥಾ ಚೈತನ್ಯಶೀಲ ಮಹಿಳೆಯರನ್ನು ಸರ್ಕಾರ ಸುಮ್ಮನೆ ನೋಡುತ್ತಾ ಕೂಡುವುದೇ? ಇಂಥವರೆಂದರೆ ಸರ್ಕಾರಕ್ಕೆ ಅಂದರೆ ರಾಜಕೀಯ ನಾಯಕರಿಗೆ ಭಯ. ಅವರ ದೃಷ್ಟಿಯಲ್ಲಿ ಈ ಮಹಿಳೆಯರು ಬರೀ ಮಹಿಳೆಯರಲ್ಲ, ತಮ್ಮ ವೋಟ್ ಬ್ಯಾಂಕುಗಳು. ರಾಜಕಾರಣಿಗಳು ಇವರಿಗೆ ಹೇಗಾದರೂ ಗಾಳ ಹಾಕಲು ನೋಡಿದರು. ಸರಾಯಿ ಅಂಗಡಿಗಳನ್ನು ಮುಚ್ಚುತ್ತೇವೆ ಎನ್ನುವ ಆಶ್ವಾಸನೆ ನೀಡಿದರು. ಮಹಿಳೆಯರೆಲ್ಲಾ ವೋಟು ಹಾಕಿದರು. ಸರಾಯಿ ವಿರೋಧಿ ಸರ್ಕಾರ ಬಂತು, ಅದರ

ಬೆನ್ನಲ್ಲೇ ಸರಾಯಿಯೂ ಬಂತು. ಅಂದರೆ, ಸರ್ಕಾರ ಮೋಸ ಮಾಡಿತು. ಮೋಸ ಹೋದ ಮಹಿಳೆಯರು ಮತ್ತೊಮ್ಮೆ ಹೋರಾಟಕ್ಕೆ ಧುಮುಕಿದರು. ಸರ್ಕಾರ ರಾತ್ರಿ ಶಾಲೆಗಳನ್ನೆಲ್ಲಾ ಮುಚ್ಚಿಬಿಟ್ಟಿತು. ಮತ್ತೊಮ್ಮೆ ಮೋಸ ಹೋದರು. ಮಹಿಳೆಯರು ಹೀಗೆ ಮೋಸಹೋಗುತ್ತಲೇ ಇದ್ದರು.

ಮುಂದೆ ಸರ್ಕಾರವು ಸರಾಯಿ ವಿರೋಧದ ಮುಖವಾಡವನ್ನು ಕಳಚಿಕೊಂಡು ಮಹಿಳೆಯರಿಗೆ ಕಡಿಮೆ ಬಡ್ಡಿಗೆ ಹಣವನ್ನು ಸಾಲಕ್ಕೆ ಕೊಡುವ ಹೊಸ ಮುಖವಾಡವನ್ನು ತೊಟ್ಟಿತು. ಇಪ್ಪತ್ತು–ಮೂವತ್ತು ಮಹಿಳೆಯರನ್ನು ಒಂದುಕಡೆ ಕಲೆಹಾಕಿ ಗುಂಪುಗಳನ್ನಾಗಿ ಮಾಡಿ ಅವರಿಗೆ ಬರೀ ಇಪ್ಪತ್ತೈದು ಪೈಸೆ ಬಡ್ಡಿಗೆ ಸಾಲ ಕೊಡುವ ಆಸೆ ತೋರಿಸಿತು. ಮಹಿಳೆಯರನ್ನು ರಾಜಕೀಯವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ ಇನ್ನೂ ಹೇಗೆಲ್ಲಾ ಸಾಧ್ಯವೋ ಹಾಗೆಲ್ಲಾ ವಿಂಗಡಿಸಿತು. ತಮ್ಮದೇ ಅಧಿಕಾರದ ವರ್ಗದಲ್ಲಿದ್ದ ಮಹಿಳೆಯರಿಗೆ ಹೆಚ್ಚಿನ ಆದ್ಯತೆ ನೀಡಿತು. ಇದೆಲ್ಲಾ ಎಷ್ಟು ದೊಡ್ಡ ಮೋಸವೆಂದರೆ, ನಾವೆಲ್ಲಾ ಒಂದೇ ಎಂದು ಐಕ್ಯವಾಗಿದ್ದ ಮಹಿಳೆಯರನ್ನು, ರಾಜಕೀಯ ಚೈತನ್ಯದತ್ತ ಮುಖಮಾಡುತ್ತಿದ್ದ ಮಹಿಳೆಯರನ್ನು ವಿಂಗಡಿಸಿ, ಅವರ ಹಾದಿಯನ್ನೇ ತಪ್ಪಿಸಿ, ನಿಮಗೆ ಓದು, ಜ್ಞಾನ ಬೇಡ – ನೀವು ಸಾಲ ತೆಗೆದುಕೊಳ್ಳಿ, ಬಡ್ಡಿ ಲೆಕ್ಕ ಬರೀತಾ ಕೂಡಿ, ಬ್ಯಾಂಕುಗಳ ಸುತ್ತ ಅಲೆಯುತ್ತಾ ಇರಿ ಎಂದು ಅವರನ್ನು ನಿಯಂತ್ರಣಗೊಳಿಸಿತು. ಹೀಗೆ ಮಹಿಳೆಯರನ್ನು ಅಭಿವೃದ್ಧಿಯ ಪಥದಿಂದ ಹತ್ತು–ಹದಿನೈದು ವರ್ಷಗಳಷ್ಟು ಹಿಂದಕ್ಕೆ ತಳ್ಳಿತು. ದೇಶದ ಹಲವಾರು ಕಡೆ ಹೀಗೆಯೇ ನಡೆಯಿತು. ಮಹಿಳಾ ಸಂಘಗಳ ಬಗೆಗೂ ವಿರೋಧಿ ಮನೋಭಾವವನ್ನು ತಳೆದಿದ್ದ ಸರ್ಕಾರವು– 'ಮಹಿಳಾ ಸಂಘಗಳು' ಮಾತನಾಡೋ ಮಾತುಗಳನ್ನೆಲ್ಲಾ ನಾವೇ ಮಾತಾಡ್ತೇವೆ, ಆ ಕೆಲಸಗಳನ್ನೆಲ್ಲಾ ನಾವೇ ಮಾಡ್ತೇವೆ ಎನ್ನುತ್ತಾ ಜೆಂಡರ್, ಜೆಂಡರ್, ಜೆಂಡರ್ ಎಂಬ ಒಣ ಕಿರುಚಾಟವನ್ನು ಶುರುಮಾಡಿತು.

ಇನ್ನು ಮಹಿಳೆಯರ ಮೇಲಿನ ಅತ್ಯಾಚಾರಗಳು ದಿನೇ ದಿನೇ ಬೆಳೆಯುತ್ತಿವೆಯೇ ವಿನಃ ಕಡಿಮೆಯಾಗುತ್ತಿಲ್ಲ. ಇದಕ್ಕೆಲ್ಲಾ ಪುರುಷರು, ಪುರುಷಾಧಿಪತ್ಯ, ಪಿತೃಸಂಸ್ಕೃತಿಯೇ ಕಾರಣವೆಂದು ನಾವಂದುಕೊಳ್ಳುತ್ತಿದ್ದೇವೆ. ಆದರೆ ನಮ್ಮ ಪರಿಪಾಲಕರು, ಮಂತ್ರಿಗಳು, ನಾಯಕರು ಮಹಿಳೆಯರ ಮೇಲಿನ ಹಲ್ಲೆಗಳಿಗೆ, ಅತ್ಯಾಚಾರಗಳಿಗೆ ಮಹಿಳೆಯರೇ ಕಾರಣ; ಮಹಿಳೆಯರು ಧರಿಸುವ ಬಟ್ಟೆಗಳೇ ಕಾರಣ; ವೇಳೆಯಲ್ಲದ ವೇಳೆಯಲ್ಲಿ ಮಹಿಳೆಯರು ಬೀದಿಗಳಲ್ಲಿ ನಡೆಯುವುದೇ ಕಾರಣ ಎಂದು ಹೇಳುತ್ತಿದ್ದಾರೆ. ಆದರೆ ಮಹಿಳೆಯರು ಆರೇಳು ಗಂಟೆಗೆಲ್ಲಾ ಮನೆ ಸೇರಬೇಕು, ಹೊರಬರಬಾರದು ಎಂದು ಹೇಳುವುದು ತುಂಬ ಅವಮಾನಕರ. ಇದೇನಿದು? ನಾವು ಎಂಥಾ ಬಟ್ಟೆಗಳನ್ನು ಧರಿಸಬೇಕೆಂದು ಇವರೇ ನಿರ್ಧರಿಸುತ್ತಾರೆ. ಯಾವ ಸಮಯದಲ್ಲಿ ಮನೆ ಸೇರಬೇಕೆಂದು ಇವರೇ ನಿರ್ಧರಿಸುತ್ತಾರೆ. ಅಂದರೆ ನಮಗೆ ನಮ್ಮದೇ ನಿರ್ಧಾರವನ್ನು ತೆಗೆದುಕೊಳ್ಳುವ ಅವಕಾಶವೇ ಇಲ್ಲವೇ? ಮಹಿಳೆಯರ ಮೇಲೆ ಅತ್ಯಾಚಾರ ನಡೆಸುವವರು ಪುರುಷರು.

ಅಂದರೆ ಪುರುಷರು ತಪ್ಪಿತಸ್ಥರು. ಹೀಗಾಗಿ ಬಂಧನಕ್ಕೆ ಒಳಗಾಗಬೇಕಾದವರು ತಪ್ಪುಮಾಡುವವರೇ ವಿನಃ, ತಪ್ಪು ಮಾಡದವರಲ್ಲ. ಅಂದರೆ ಆರೇಳು ಗಂಟೆ ದಾಟಿದ ಮೇಲೆ ಮನೆಯೊಳಗೆ ಇರಬೇಕಾದವರು ಪುರುಷರೇ ವಿನಃ, ಮಹಿಳೆಯರಲ್ಲ. ಮಹಿಳೆಯರು ರಾತ್ರಿಯ ವೇಳೆ ಬೀದಿಗಳಲ್ಲಿ ನಡೆದಾಡಿದರೆ ಯಾರನ್ನೂ ಹಿಂಸಿಸುವುದಿಲ್ಲ. ಯಾರ ಮೇಲೂ ಅತ್ಯಾಚಾರ ಮಾಡುವುದಿಲ್ಲ. ಹೀಗಾಗಿ, ಪುರುಷರೇ! ರಾತ್ರಿಯಾಗುತ್ತಲೇ ನೀವು ದಯವಿಟ್ಟು ಮನೆಯೊಳಗೆ ಇರಿ. ನಾವು ಬೀದಿಗಳ ಮೇಲೆ ನಡೆಯುತ್ತೇವೆ. 'ಈ ಬೀದಿಗಳಲ್ಲಾ ನಮ್ಮವು: ಹಗಲೂ-ಇರುಳೂ' ಎಂದು ಸಾರುತ್ತೇವೆ.

ಐವತ್ತು ದಾಟಿದ ಸುಶಿಕ್ಷಿತ ಮಹಿಳೆಯೊಬ್ಬರು ನಿನ್ನೆಯಷ್ಟೇ ನನ್ನೊಟ್ಟಿಗೆ ಹಂಚಿಕೊಂಡಿದ್ದ ತಮ್ಮ ವ್ಯಥೆಯನ್ನು ನಿಮ್ಮೊಂದಿಗೆ ಹೇಳಲು ಬಯಸುತ್ತೇನೆ. ಆಕೆ 18-19ರಷ್ಟು ಎಳೆಯ ವಯಸ್ಸಿನಲ್ಲಿ ಒಳ್ಳೊಳ್ಳೆಯ ಕಥೆಗಳನ್ನು ಬರೆಯುತ್ತಿದ್ದರಂತೆ. ಮುಂದೆ ಮದುವೆ ಮಾಡಿದರು. ಗಂಡನ ಮನೆಗೆ ಹೋದಮೇಲೆ ಬರವಣಿಗೆಗಿಂತ ಕುಟುಂಬವೇ ಮುಖ್ಯ ಎಂದು ಹೇಳಿ ಎಲ್ಲರೂ ಆಕೆಯನ್ನು ಬರವಣಿಗೆ ನಿಲ್ಲಿಸುವಂತೆ ಮಾಡಿದರು. ಆಕೆ ಪ್ರತಿನುಡಿಯಲಾಗದೆ, ತಮ್ಮ ಸೃಜನಶೀಲತೆಯನ್ನು ಅಡುಗೆಮನೆಯಲ್ಲಿ ವ್ಯಯಮಾಡಿದರು, ಕಕ್ಕಸು ಮನೆಯನ್ನು ತಿಕ್ಕಿ ತೊಳೆಯುವುದರಲ್ಲಿ ವ್ಯಯಮಾಡಿದರು, ಮನೆಯನ್ನು ಹೊಳೆಹೊಳೆಯುವಂತೆ ಮಾಡುವುದರಲ್ಲಿ ವ್ಯಯಮಾಡಿದರು, ಮನೆಯನ್ನು ತನಗೆ ಬಿಟ್ಟು ಉಳಿದೆಲ್ಲರಿಗೂ ಅನುಕೂಲವಾಗುವಂತೆ ಇಟ್ಟುಕೊಳ್ಳುವುದರಲ್ಲಿ ವ್ಯಯಮಾಡಿದರು. ಈಗ ಮಕ್ಕಳು ಬೆಳೆದು ಅವರದೇ ಜೀವನ ಕಟ್ಟಿಕೊಂಡ ಮೇಲೆ, ಸಮಯ ಸಿಕ್ಕಿದ್ದಕ್ಕೆ ಬರೆಯೋಣವೆಂದು ಕೂತರೆ ಅಕ್ಷರಗಳೇ ಬರುತ್ತಿಲ್ಲ, ಕಣ್ಣೀರು ಬಿಟ್ಟು. ಈ ಕಥೆ ಹೊಸದೇನೂ ಅಲ್ಲ, ಹಲವಾರು ವರ್ಷಗಳ ನಾವು ಕೇಳುತ್ತಾ ಬಂದಿರುವುದೇ ಈ ವ್ಯಥೆ. ಕೇವಲ ಆ ಒಬ್ಬ ಮಹಿಳೆಯದಷ್ಟೇ ಅಲ್ಲ, ಲೇಖಕಿಯಾಗಲು ಬಯಸುವ ಭಾರತದ ಹಲವಾರು ಮಹಿಳೆಯರ ವ್ಯಥೆಯಾಗಿದೆ. ಹೀಗಾಗಿ ನಾನು ನಿಮಗೆ ಹೇಳಬೇಕೆಂದುಕೊಂಡಿದ್ದು ಇಷ್ಟೇ, ನಿಮಗೆ ಇಷ್ಟವಿರುವ ಕೆಲಸಗಳನ್ನು ಮಾಡುವುದರಲ್ಲಿ ದಯವಿಟ್ಟು ಹಿಂದೇಟು ಹಾಕಬೇಡಿ. ಯಾವ ವಿಷಯದಲ್ಲಿ ನೀವು ಪ್ರತಿಭಾವಂತರಿದ್ದೀರೋ ಅದರಲ್ಲಿ ಮುಂದುವರೆಯಿರಿ. ನಿಮ್ಮೊಳಗಿನ ಕೌಶಲಗಳನ್ನು ಗುರುತಿಸಿಕೊಳ್ಳಿ.

ಸಮಾಜವು ಹೆಣ್ಣಿನ ಧ್ವನಿಯನ್ನು ಆಕೆಯ ಬಾಲ್ಯದಿಂದಲೂ ಅದುಮುತ್ತಾ ಬಂದಿದೆ. ಹೆಣ್ಣಿನ ತಂದೆ-ತಾಯಿಗಳಿಗೂ ಆಕೆಗೆ ಪದೇ ಪದೇ 'ಬಾಯಿ ಮುಚ್ಚು' ಎಂದು ಹೇಳುವುದು ಬಾಯಿಪಾಠವಾಗಿ ಬಿಟ್ಟಿದೆ. ಇದರ ಪರಿಣಾಮವಾಗಿ, ಹೆಣ್ಣು ಹೊರಗೆ ಕಾಣುವ ತನ್ನ ಬಾಯಿಯನ್ನಷ್ಟೇ ಅಲ್ಲ, ತನ್ನ ಮನದ ಬಾಯಿಯನ್ನೂ, ತನ್ನ ಹೃದಯದ ಬಾಯಿಯನ್ನೂ ಮುಚ್ಚಿಕೊಳ್ಳಬೇಕಾಯಿತು. ಆದರೆ, ಇತ್ತೀಚೆಗಷ್ಟೇ 'ಒಜಜ ಣಂಠ' ಚಳವಳಿ ನಡೆಯಿತು. ಅನೇಕ ಮಹಿಳೆಯರು ತಮಗಾದ ಅನ್ಯಾಯಗಳ ಬಗ್ಗೆ ಮನಬಿಚ್ಚಿ ಮಾತನಾಡಿದರು. ಹೀಗಾಗಿ, ದಯವಿಟ್ಟು ನಿಮಗಾದ ಅನ್ಯಾಯಗಳ ವಿರುದ್ಧ ನಿಮ್ಮ ದನಿಯನ್ನು ಎತ್ತಿ.

ನಮ್ಮಲ್ಲಿ ಅನೇಕರು ಪಿಎಚ್.ಡಿ ಗಳನ್ನು ಪಡೆದಿರಬಹುದು, ದೊಡ್ಡದೊಡ್ಡ ಹುದ್ದೆಗಳಲ್ಲಿ ಇದ್ದಿರಬಹುದು, ಆದರೆ ಈ ಸಮಾಜವು ಅತ್ಯಂತ ಯಾಂತ್ರಿಕವಾಗಿ ನಮ್ಮ ಬಾಯಿಗಳನ್ನು ಮುಚ್ಚಲು ಯತ್ನಿಸುತ್ತಿದೆ. ಈ ಹಿಂಸೆಯ ವಿರುದ್ಧ ನಾವೆಲ್ಲಾ ಹೋರಾಡಲೇಬೇಕು. ನಮಗೆ ಪ್ರತಿಕೂಲ ಸ್ಥಿತಿಯನ್ನು ಅನುಕೂಲ ಸ್ಥಿತಿಯನ್ನಾಗಿ ಬದಲಿಸಿಕೊಳ್ಳಬಲ್ಲ ಶಕ್ತಿಯೇನಿದೆ, ಅದನ್ನು ಚೆನ್ನಾಗಿ ಬಳಸಿಕೊಳ್ಳಬೇಕು. ಬಳಸಿಕೊಳ್ಳುತ್ತಿದ್ದೇವೆ ಕೂಡಾ. ಏಕೆಂದರೆ ಈಗ ಪ್ರತಿಯೊಂದು ಪಟ್ಟಣದಲ್ಲೂ ಮಹಿಳೆಯರು ಒಂದು ಕಡೆ ಸೇರುತ್ತಿದ್ದಾರೆ. ತಮ್ಮ ಸಮಸ್ಯೆಗಳನ್ನು ಚರ್ಚಿಸುತ್ತಿದ್ದಾರೆ. ಏನೋ ಮಾಡಲೆಂದು ಪ್ರಯತ್ನಿಸುತ್ತಿದ್ದಾರೆ. ಈ ಕಾರ್ಯಕ್ರಮವೂ ಆ ರೀತಿಯದ್ದೇ. ಇಂದು ಮಂಡ್ಯದಲ್ಲಿ ನಡೆಯುತ್ತಿರುವ ಈ ಕಾರ್ಯಕ್ರಮವು ಮುಂದೆ ಹೈದ್ರಾಬಾದಿನಲ್ಲಿ ನಡೆಯಬೇಕು, ನಿಜಾಮಾಬಾದಿನಲ್ಲಿ ನಡೆಯಬೇಕು, ಗುಂಟೂರಿನಲ್ಲಿ ನಡೆಯಬೇಕು, ವಿಜಯವಾಡದಲ್ಲಿ ನಡೆಯಬೇಕು, ನೀವೆಲ್ಲಾ ಅಲ್ಲಿಗೆ ಬರಬೇಕು, ಅಲ್ಲಿದ್ದವರು ಇಲ್ಲಿಗೆ ಬರಬೇಕು. ನಾವೆಲ್ಲರೂ ಒಂದೇ, ಮಹಿಳೆಯರೆಲ್ಲರೂ ಒಂದೇ.

ಆದರೆ, 'ಮಹಿಳೆಯರೆಲ್ಲಾ ಒಂದೇ' ಎಂಬುದು ಮೇಲ್ಪದರಿನ ಮಾತಷ್ಟೇ. ಆಳದಲ್ಲಿ ಒಂದಲ್ಲ ಜಾತಿ, ಮತ, ವರ್ಗ, ವರ್ಣಗಳು ಮಹಿಳೆಯರನ್ನು ಬೇರ್ಪಡಿಸಿವೆ. ಮೇಲ್ಜಾತಿ ಮಹಿಳೆಯರ ಸಮಸ್ಯೆಗಳೇ ಬೇರೆ, ಕೆಳಜಾತಿ ಮಹಿಳೆಯರ ಸಮಸ್ಯೆಗಳೇ ಬೇರೆ. ಮೇಲ್ಜಾತಿ ಮಹಿಳೆಯರು ಎದುರಿಸುವ ಹಿಂಸೆಯ ಸ್ವರೂಪವೇ ಬೇರೆ, ಕೆಳಜಾತಿ ಮಹಿಳೆಯರು ಎದುರಿಸುವ ಹಿಂಸೆಯ ಸ್ವರೂಪವೇ ಬೇರೆ. ಅಸ್ತಿತ್ವ ಚಳುವಳಿಗಳು, ದಲಿತ ಚಳುವಳಿಗಳು, ತಳಸಮುದಾಯದ ಚಳುವಳಿಗಳು, ಲೈಂಗಿಕ ಅಲ್ಪಸಂಖ್ಯಾತರ ಚಳುವಳಿಗಳು ಹೀಗೆ ಮುಂತಾದ ಚಳುವಳಿಗಳಿಂದಾಗಿ ಅಸ್ತಿತ್ವವಾದಗಳು ಗಟ್ಟಿಗೊಂಡಿವೆ, ಗಟ್ಟಿಗೊಳ್ಳಬೇಕು ಕೂಡ. ಆದರೆ ಈ ಎಲ್ಲಾ ಅಸ್ತಿತ್ವವಾದಗಳಲ್ಲಿ ಪಿತೃಸಂಸ್ಕೃತಿಯು ರಾಜ್ಯವಾಳುತ್ತಿರುವುದನ್ನು ನಾವೆಲ್ಲರೂ ನೆನಪಿಡಲೇಬೇಕು. ಸರ್ಕಾರ ಮಿಲಿಟರಿ ಆರ್ಥಿಕ ಕ್ಷೇತ್ರ, ರಾಜಕೀಯ ಕ್ಷೇತ್ರ ಹೀಗೆ ಎಲ್ಲಕಡೆಯೂ ಪಿತೃಸಂಸ್ಕೃತಿ ಇದೆ. ಸಮಾಜದೊಳಗಿನ ಎಲ್ಲ ಅಸಮಾನತೆಗಳ ಮೂಲವೇ ಪಿತೃಸಂಸ್ಕೃತಿ. ಕುಲ, ಜಾತಿ, ಲಿಂಗ, ವರ್ಣ ಇತ್ಯಾದಿ ಸಾಮಾಜಿಕ ಅಸಮಾನತೆಗಳನ್ನು ಬಳಸಿಕೊಂಡು ಪಿತೃಸಂಸ್ಕೃತಿಯು ಹೇಗೆ ದಿನೇದಿನೇ ಗಟ್ಟಿಗೊಳ್ಳುತ್ತಿದೆ ಎಂಬುದನ್ನು ಸೂಕ್ಷ್ಮವಾಗಿ ನೋಡಿದರೆ ಯಾರಿಗಾದರೂ ಇದು ಅರಿವಾಗುತ್ತದೆ. ಪಿತೃಸಂಸ್ಕೃತಿಯನ್ನು ಹಿಮ್ಮೆಟ್ಟಿಸುವ ಮನೋಭಾವವು ಈ ಭಿನ್ನ ಅಸ್ತಿತ್ವ ಸಮೂಹಗಳಲ್ಲಿ ಇರುವಂತಹ ಮಹಿಳೆಯರನ್ನು ಒಗ್ಗೂಡಿಸಬೇಕು. ಇದು ತುಂಬಾ ಮುಖ್ಯವಾದದ್ದು. ದಲಿತ ವರ್ಗಗಳಲ್ಲಿ, ತಳಸಮುದಾಯಗಳಲ್ಲಿ, ಲೈಂಗಿಕ ಅಲ್ಪಸಂಖ್ಯಾತರಲ್ಲಿ ಎಲ್ಲೆಲ್ಲಿಯೂ ಬೇರುಬಿಟ್ಟಿರುವಂತಹ ಪುರುಷಾಧಿಪತ್ಯವನ್ನು ಎದುರಿಸುವುದೇ ಎಲ್ಲ ಮಹಿಳೆಯರ ಸಾಮಾನ್ಯ ಗುರಿಯಾಗಬೇಕು. ಹೀಗೆ ಆದಾಗ ಮಾತ್ರ ಎಲ್ಲ ಜನಾಂಗದ ಮಹಿಳೆಯರೂ ಸೇರಿ ಪಿತೃಸಂಸ್ಕೃತಿಯ ವಿರುದ್ಧವಾಗಿ ಹೋರಾಡಲು ಸಾಧ್ಯವಾಗುತ್ತದೆ, ಪಿತೃಪ್ರಧಾನ

ವ್ಯವಸ್ಥೆಯ ಬೇರುಗಳನ್ನು ಕಿತ್ತೆಸೆಯಲು ಸಾಧ್ಯವಾಗುತ್ತದೆ. ಇಂತಹ ಪಿತೃಸಂಸ್ಕೃತಿಯ ವ್ಯವಸ್ಥೆಯನ್ನು ಹೊಡೆದುರುಳಿಸಲು ಸಾಧ್ಯವಾದಾಗಲೇ ಈ ಸಮಾಜ ಬದಲಾಗುತ್ತದೆ, ಈ ಸಮಾಜದೊಳಗಿನ ಅರ್ಥಹೀನ ಧೋರಣೆಗಳು ಬದಲಾಗುತ್ತವೆ. ಕುಲ, ಜಾತಿ, ಲಿಂಗ, ವರ್ಣ ಇತ್ಯಾದಿ ಅಸಮಾನತೆಗಳು ತೊಲಗುತ್ತವೆ. ಈ ಹಿನ್ನೆಲೆಯಲ್ಲಿ ನಮ್ಮ ಐಕ್ಯತೆಯು ತುಂಬಾ ಮುಖ್ಯ. ಪಿತೃಸಂಸ್ಕೃತಿಯ ವಿರೋಧಿ ಹೋರಾಟವನ್ನು ಹೇಗೆ ಕಟ್ಟಬೇಕು, ಹೇಗೆ ನಮ್ಮ ಶಕ್ತಿಯುಕ್ತಿಗಳನ್ನು ಬಳಸಬೇಕು, ಯಾವ್ಯಾವ ವ್ಯೂಹಗಳನ್ನು ರಚಿಸಬೇಕು ಎಂದು ಯೋಚಿಸೋಣ. ಇದಕ್ಕಾಗಿ ನಮ್ಮ ಸೃಜನಶೀಲತೆಯನ್ನು, ಬುದ್ಧಿಯನ್ನು, ಕೌಶಲಗಳನ್ನು ಬಳಸೋಣ. ಆಗಲೇ ಈ ಅಸಹಿಷ್ಣುತೆ, ಪರಸ್ಪರ ದ್ವೇಷ, ಹಿಂಸೆಗಳು ನೆಲಕಚ್ಚುತ್ತವೆ.

### ವ್ಯಕ್ತಿ ಪರಿಚಯ

ಓಲ್ಗಾ ಎಂಬ ಸಾಹಿತ್ಯ ನಾಮದಿಂದ ತೆಲುಗಿನಲ್ಲಿ ಬರೆಯುವ ಪಿ. ಲಲಿತಾ ಕುಮಾರಿ, ಕವಿ, ಕತೆಗಾರ್ತಿ ಮತ್ತು ಸ್ತ್ರೀವಾದಿ ಚಿಂತಕಿ. ಕನ್ನಡಿಗರಿಗೆ ಹಲವಾರು ವರುಷಗಳಿಂದ ಪರಿಚಿತರು. ಅವರ ಕತೆ, ಕವಿತೆ, ಸಂದರ್ಶನ, ಕಾದಂಬರಿಗಳು ಕನ್ನಡದಲ್ಲಿ ಪ್ರಕಟವಾಗಿವೆ. ಆಂಧ್ರಪ್ರದೇಶದ ಗುಂಟೂರಿನಲ್ಲಿ 1950ರಲ್ಲಿ ಜನಿಸಿದ ಅವರು, ಆಂಧ್ರ ವಿಶ್ವವಿದ್ಯಾಲಯದಿಂದ ತೆಲುಗು ಎಂಎ ಪದವಿ ಪಡೆದರು. ನಂತರ ತೆನಾಲಿಯ ಕಾಲೇಜುಗಳಲ್ಲಿ ಪ್ರಾಧ್ಯಾಪಕರಾಗಿ 13 ವರ್ಷ ಕೆಲಸ ಮಾಡಿ ನಂತರ 10 ವರ್ಷ ಕಾಲ ಉಷಾಕಿರಣ ಮೂವೀಸ್ ಸಂಸ್ಥೆಗಾಗಿ ಚಿತ್ರಕಥೆ ಬರೆದರು. ಆ ಅವಧಿಯಲ್ಲೇ ಮಹಿಳಾ ಹಕ್ಕುಗಳಿಗಾಗಿ ಹೋರಾಡುತ್ತಿದ್ದ ಅಸ್ಮಿತಾ ರಿಸೋರ್ಸ್ ಸೆಂಟರ್ ಎನ್ನುವ ಸರ್ಕಾರೇತರ ಸಂಸ್ಥೆಯನ್ನು ಸೇರಿದ ಅವರು ಈಗ ಅದರ ಚೇರ್‌ವುಮನ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅಸ್ಮಿತಾ ತರುವ ಸಾಹಿತ್ಯಿಕ ಪತ್ರಿಕೆ 'ವಂಟಿಂಟಿ ಮಸಿ'ಯ ಸಂಪಾದಕೀಯ ಮಂಡಳಿಯ ಸದಸ್ಯರೂ ಆಗಿದ್ದಾರೆ. ನ್ಯಾಷನಲ್ ಬುಕ್ ಟ್ರಸ್ಟಿನ ತೆಲುಗು ಸಲಹಾ ಮಂಡಳಿಯ ಸದಸ್ಯರೂ ಆಗಿದ್ದಾರೆ.

ಓಲ್ಗಾ ತಮ್ಮ ಕತೆ, ಕವಿತೆಗಳಿಗೆಷ್ಟೋ ಅಷ್ಟೇ ಸ್ತ್ರೀವಾದಿ ಚಿಂತನೆ ಮತ್ತು ಬರಹಗಳಿಗೂ ಪ್ರಸಿದ್ಧರು. ತಮ್ಮ ಸ್ಪಷ್ಟ, ನೇರ, ಖಚಿತ ಮಾತುಗಳಲ್ಲಿ ಅಭಿಪ್ರಾಯ ದಾಖಲಿಸುವ ಅವರು, ಮೊದಲು ವಿಮರ್ಶೆಯ ಮೂಲಕ ತಮ್ಮ ಬರಹದ ಬದುಕನ್ನು ಆರಂಭಿಸಿದರು. ಹಳೆಯ–ಹೊಸ ಬರವಣಿಗೆಗಳನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ನೋಡುವ ಹೊಸ ವಿಮರ್ಶಾ ವಿಧಾನವೊಂದನ್ನು ಗಟ್ಟಿಗೊಳಿಸಿದರು. ಅದಕ್ಕೆ ಪೂರಕವಾಗಿ ರಷಿಯನ್ ಕ್ರಾಂತಿಕಾರಿ ಹೋರಾಟಗಾರ್ತಿ ಅಲೆಕ್ಸಾಂಡ್ರಾ ಕೊಲ್ಲಂಟಾಯ್ ಬರೆದ ಸಣ್ಣಕಥೆಗಳ ಅನುವಾದವೂ ಸೇರಿದಂತೆ ಬೇರೆ ಭಾಷೆಯಿಂದ ತೆಲುಗಿಗೆ ಹಲವು ಪುಸ್ತಕಗಳನ್ನು

ಅನುವಾದಿಸಿ ಪ್ರಕಟಿಸಿದರು. ಈಜಿಪ್ಟಿನ ಖ್ಯಾತ ವೈದ್ಯೆ-ಸ್ತ್ರೀವಾದಿ ಚಿಂತಕಿ ನವಾಲ್ ಎಲ್ ಸಾದವಿಯ ಕಾದಂಬರಿಯನ್ನು ತೆಲುಗಿಗೆ ಅನುವಾದಿಸಿದರು. ಜೊತೆಗೆ ತೆಲುಗು ಓದುಗರಿಗೆ ಸ್ತ್ರೀವಾದ, ಅದರ ವಿವಿಧ ಧಾರೆಗಳು, ವಿವಿಧ ಸ್ತ್ರೀವಾದಿ ವ್ಯಕ್ತಿತ್ವಗಳನ್ನು ಪರಿಚಯಿಸಿದರು. ತಮ್ಮ ಕತೆ-ಕವಿತೆ-ಕಾದಂಬರಿಗಳಲ್ಲಿ ಆಧುನಿಕ, ಪ್ರಗತಿಪರ ಯೋಚನೆಯಿರುವ ಮಹಿಳಾ ಪಾತ್ರಗಳನ್ನು ಸೃಷ್ಟಿಸುವ ಓಲ್ಗಾ, ವಾಸ್ತವದ ಸಮಸ್ಯೆ, ಪರಿಹಾರದ ದಾರಿಗಳಿಗೆ ಹತ್ತಿರವಿರುವಂತೆ ಪಾತ್ರಗಳನ್ನು ಚಿತ್ರಿಸುವವರು. 1986ರಲ್ಲಿ ತಮ್ಮ ಮೊದಲ ಕಾದಂಬರಿ 'ಸಹಜಾ'ವನ್ನು ಪ್ರಕಟಿಸಿದರು. ಅದರ ಮರುವರ್ಷವೇ ಸ್ವೇಚ್ಛಾ ಕಾದಂಬರಿಯನ್ನು ಪ್ರಕಟಿಸಿದರು. ಮದುವೆಯು ಹೇಗೆ ಹೆಣ್ಣುಗಳನ್ನು ಕಟ್ಟಿ ಹಾಕುವುದೆಂದು ಅವರು ಈ ಕಾದಂಬರಿಗಳಲ್ಲಿ ಚಿತ್ರಿಸಿದ್ದರು. ಎರಡು ನಾಟಕಗಳನ್ನೂ ಬರೆದಿದ್ದಾರೆ, ಹಲವು ಪುಸ್ತಕಗಳನ್ನು ಸಂಪಾದಿಸಿದ್ದಾರೆ. ಹೀಗೆ ಇದುವರೆಗೆ 50ಕ್ಕಿಂತ ಹೆಚ್ಚು ಪುಸ್ತಕ ಪ್ರಕಟಿಸಿರುವ ಓಲ್ಗಾ ಅವರು ತಮ್ಮ 'ವಿಮುಕ್ತಾ' ಕತಾ ಸಂಕಲನಕ್ಕೆ 2015ರಲ್ಲಿ ಪಡೆದ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ ಸೇರಿದಂತೆ ಹಲವು ಮನ್ನಣೆ, ಗೌರವ ಪಡೆದಿದ್ದಾರೆ. ಅಜಯವರ್ಮಾ ಅಲ್ಲೂರಿ ತೆಲುಗಿನಿಂದ ಕನ್ನಡಕ್ಕೆ ಅನುವಾದಿಸಿರುವ 'ವಿಮುಕ್ತಾ' ಸೇರಿದಂತೆ ಅವರ ಹಲವಾರು ಪುಸ್ತಕಗಳು ಕನ್ನಡಕ್ಕೆ ಅನುವಾದಗೊಂಡಿವೆ.

# ಅಧ್ಯಕ್ಷೀಯ ಭಾಷಣ

**ಮೀರಾ ಶಿವಲಿಂಗಯ್ಯ**

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ಮತ್ತು ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಸಹಯೋಗದಿಂದ ಆಯೋಜನೆಗೊಂಡಿರುವ "ಮಹಿಳಾ ಬದುಕು ಪಲ್ಲಟಗಳು" ಎಂಬ ವಿಚಾರ ಸಂಕಿರಣದ ಉದ್ಘಾಟನೆಯನ್ನು ನಡೆಸಿಕೊಟ್ಟಂತ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಸಬಿಹಾ ಭೂಮಿಗೌಡರವರೆ, ಕರ್ನಾಟಕ ರಾಜ್ಯ ರೈತ ಹೋರಾಟಗಾರ್ತಿ ಎಂದೇ ಖ್ಯಾತಿ ಪಡೆದಿರುವ ಸುನಂದಾ–ಜಯರಾಂರವರೆ, ವೇದಿಕೆಯ ಮೇಲಿರುವ ಎಲ್ಲ ಗಣ್ಯರೆ ಹಾಗೂ ವಿಚಾರ ಸಂಕಿರಣದ ಮುಖ್ಯ ಭಾಷಣಕಾರರಾಗಿ ದಿಕ್ಸೂಚಿ ಭಾಷಣ ಮಾಡಲು ಇಲ್ಲಿಗೆ ಆಗಮಿಸಿರುವ ವೋಲ್ಗಾರವರೆ, ವೇದಿಕೆಯಲ್ಲಿರುವ ಗಣ್ಯರೇ, ಆಹ್ವಾನಿತರೇ ಮತ್ತು ಆತ್ಮೀಯರೇ, ವೋಲ್ಗಾರವರು ಮಂಡ್ಯಕ್ಕೆ ಬರುತ್ತಿದ್ದಾರೆ ಎಂಬುದನ್ನು ಕೇಳಿದಾಗ ಅವರ ಕುರಿತು ಆಸಕ್ತಿ ಮೂಡಿತು. ಆಂಧ್ರದವರಾದ ಲಲಿತಾ ಪೋಪರಿ ಅವರಿಗೆ ಅವರ ತಂದೆ ರಷ್ಯಾದ ನದಿಯ ಹೆಸರಾದ ವೋಲ್ಗಾ ಎಂಬ ಹೆಸರನ್ನು ಅಭಿಮಾನದಿಂದ ಇಟ್ಟಿದ್ದಾರೆ ಎಂದು ತಿಳಿದಾಗ ನನಗೆ ನಮ್ಮ ನೆಲದ ಕವೇರ ಋಷಿಯ ಮಗಳು ಕಾವೇರಿಯ ನೆನಪಾಯಿತು. ಆಕೆ ಒಬ್ಬರಿಗಷ್ಟೆ ಸಂತೋಷ, ಸೌಕರ್ಯ ನೀಡುವಲ್ಲಿ ತೃಪ್ತಿ ಪಡಲಿಲ್ಲ. ಆಕೆ ತನ್ನ ತಪಶ್ಯಕ್ತಿಯಿಂದ ಅಗಸ್ತ್ಯರ ಕಮಂಡಲದಿಂದ ನದಿಯಾಗಿ ಹರಿಯಲು ಪ್ರಾರಂಭಿಸಿ ಲಕ್ಷಾಂತರ ಮಂದಿಯ ಹಸಿವು, ನೀರಡಿಕೆಗಳನ್ನು ನೀಗಿಸಿ ಕವೇರ ಋಷಿಯ ಮಗಳು ಕಾವೇರಿಯಾದಳು. ಹಾಗೆಯೇ ಲಲಿತಾ ಪೋಪರಿರವರು ತಮ್ಮ ಸಂಸಾರಕ್ಕಷ್ಟೆ ದೀಪವಾಗದೆ ಇಡೀ ದೇಶಕ್ಕೆ ತಮ್ಮ ವಿಚಾರಧಾರೆಯನ್ನು ನೀಡುತ್ತಾ ಒಂದು ಹೊಸದೃಷ್ಟಿ ಕೋನವನ್ನು ಹೊಸ ಕನಸನ್ನು ಕೊಡುತ್ತಾ ಬಂದಿದ್ದಾರೆ. ಕೇವಲ ಒಬ್ಬನ ಮಗಳಾಗಿರುವ, ಒಬ್ಬನ ಪತ್ನಿಯಾಗುಳಿವ ಸ್ವೀಕೃತ ಸ್ತ್ರೀ ನೆಲೆಗೆ ಬದಲಾಗಿ ವಿಶ್ವಸಂಸಾರದ ಒಟ್ಟಾರೆ ಜನಜೀವನದ ಸಮೃದ್ಧಿಗೆ ಪೂರಕವಾಗಿ ಬದುಕುವ ವಿಶಾಲವೂ, ಸ್ವಾಯತ್ತವೂ ಆದ ಅಸ್ಮಿತೆಯನ್ನು ಕಟ್ಟಿಕೊಳ್ಳಬೇಕಿದೆ ಹಾಗೂ ಇಂತಹ ಜೀವನಕ್ಕೆ ವೋಲ್ಗಾ ಅವರೊಂದು ನಿದರ್ಶನ.

1857ರ ಮಾರ್ಚ್ 8ರಂದು ನ್ಯೂಯಾರ್ಕ್‌ನ ಹತ್ತಿ ಗಿರಣಿಯಲ್ಲಿ ಪ್ರಾರಂಭವಾದ

ಮಹಿಳಾ ಚಳುವಳಿಗಳ ಹೋರಾಟದ ಒಂದು ದ್ಯೋತಕವಾಗಿ ಮಾರ್ಚ್ 8ರಂದು ಅಂತರ್‌ರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ವಿಶ್ವಾದ್ಯಂತ ಆಚರಿಸುತ್ತಿದ್ದೇವೆ. 19ನೇ ಶತಮಾನದ ಆದಿಯಲ್ಲಿ ಜಗತ್ತಿನ ಕಣ್ಣಿಗೆ ಬಿದ್ದ ಈ ಚಳುವಳಿ ಭಾರತದಲ್ಲಿ 10ನೇ ಶತಮಾನದಲ್ಲಿ ಆರಂಭವಾಗಿತ್ತು ಎನ್ನುವುದು ಗುರುತರವಾದ ಸಂಗತಿ. 10ನೇ ಶತಮಾನದ ಅತ್ತಿಮಬ್ಬೆ, 12ನೇ ಶತಮಾನದಲ್ಲೇ ಅಕ್ಕಮಹಾದೇವಿ, ಸಂಚಿ ಹೊನ್ನಮ್ಮ, ಈಶ್ವರಚಂದ್ರ ವಿದ್ಯಾಸಾಗರ್, ಸಿಸ್ಟರ್ ನಿವೇದಿತಾ, ಕರ್ವೆ, ತಿರುಮಲಾಂಬ, ಕೊಡಗಿನ ಗೌರಮ್ಮ, ಇತ್ತೀಚೆಗಿನ ತ್ರಿವೇಣಿ, ವಾಣಿ, ಆರ್ಯಾಂಬ ಪಟ್ಟಾಭಿ. ಹೀಗೆ ಅನೇಕರು ಇತಿಹಾಸದ ಪುಟಗಳಲ್ಲಿ ಮಹಿಳೆಯರ ದುಃಖ ನೋವುಗಳನ್ನು ಶಮನಗೊಳಿಸುವಲ್ಲಿ ಸುಖ ಸಂತೋಷ ಸಮ್ಮಾನಗಳನ್ನು ಸೃಷ್ಟಿ ಮಾಡುವಲ್ಲಿ ದಿಟ್ಟನಡೆ, ಗಟ್ಟಿಧ್ವನಿಯಲ್ಲಿ ಘರ್ಜಿಸಿ ಭಾರತದ ಹೆಣ್ಣುಮಕ್ಕಳು ಘನತೆವೆತ್ತ ಬದುಕಿನೆಡೆಗೆ ಹೆಜ್ಜೆಯಿಡುವಲ್ಲಿ ಊರುಗೋಲಾಗಿದ್ದಾರೆ.

ವರ್ತಮಾನವೆಂಬುದು ಒಮ್ಮಿಂದೊಮ್ಮೆಲೇ ಹುಟ್ಟಿಕೊಳ್ಳುವುದಿಲ್ಲ. ಅದು ಭೂತಕಾಲದ ಗವಿಯೊಳಗಿಂದ ಪೊರೆಬಿಚ್ಚಿಕೊಂಡು ಬಂದುದಾಗಿರುತ್ತದೆ. ಭೂತಕಾಲದ ಪ್ರಭಾವ, ಪ್ರೇರಣೆ ಒಡಮೂಡಿರುತ್ತದೆ. ಹಾಗೆಯೇ ಇಂದಿನ ಆಶಯಗಳು, ಆದರ್ಶಗಳು ಭವಿಷ್ಯತ್‌ನಲ್ಲಿ ಕುಡಿಯೊಡೆದು ಬೆಳೆಯುತ್ತವೆ. ಭಾರತೀಯ ಸ್ತ್ರೀ ಸಂಸ್ಕೃತಿ ಹಲವಾರು ಪೀಳಿಗೆಗಳ ಆಸೆಗೆ ತಕ್ಕಂತೆ ಪುನರಚನೆಯಾಗುತ್ತ ಮುನ್ನಡೆಯುತ್ತಿದೆ. ವಾಸ್ತವದ ಅರಿವಿನ ಜೊತೆಗೆ ಆಯ್ಕೆಯ ದಾರಿಯನ್ನು ಹುಡುಕಿಕೊಳ್ಳಬೇಕಿದೆ.

ಮಹಿಳಾ ಸಬಲೀಕರಣ ಎಲ್ಲ ಕ್ಷೇತ್ರಗಳಲ್ಲೂ ನಿರಂತರವಾಗಿ ನಡೆಯುತ್ತಿದೆ. ಮಹಿಳೆ ವಿದ್ಯೆಯಲ್ಲಿ ಅದ್ವಿತೀಯಳಾಗಿ ಹೊಳೆಯುತ್ತಿದ್ದಾಳೆ. ವೋಲ್ಗಾರವರು ಹೇಳಿದಂತೆ ನಮ್ಮ ಸಮಾಜ ಮಹಿಳೆಯ ಶಿಕ್ಷಣಕ್ಕೆ ಪ್ರೋತ್ಸಾಹ ಕೊಟ್ಟದ್ದೂ ಒಂದು ಸ್ವಾರ್ಥದಿಂದಲೇ. ಆಧುನಿಕ ಸಂಸ್ಕೃತಿಯನ್ನು ವಿದ್ಯಾವಂತ ಮಹಿಳೆ ಮನೆಯೊಳಗೆ ತರಬಹುದು ಎಂದು ಮಹಿಳಾ ಶಿಕ್ಷಣವನ್ನು ಸಮಾಜ ಪ್ರೋತ್ಸಾಹಿಸಿತು. ಪ್ರತಿ ಕುಟುಂಬಕ್ಕೆ ಮಹಿಳಾ ಶಿಕ್ಷಣದಿಂದ ಪ್ರಯೋಜನವಿದೆ ಎಂದು ಭಾವಿಸಿತ್ತು. ಆದರೆ ಅಂತಹ ದೃಷ್ಟಿಕೋನಗಳನ್ನು ಮೀರಿ ಬೆಳೆದಳು ಭಾರತೀಯ ನಾರಿ. ಭಗವದ್ಗೀತೆಯಲ್ಲಿ ಕೃಷ್ಣ ಹೇಳಿದ ಜ್ಞಾನದ ಮಾತು 'ಸರ್ವಂ ಜ್ಞಾನ ಪ್ಲವೇನೈವ ವೃಜಿನಂ ಸಂತರಿಷ್ಯಸಿ' ಜ್ಞಾನವೆಂಬ ನೌಕೆಯಿಂದ ಮಾತ್ರವೇ ಈ ಸಂಸಾರ ಸಾಗರವನ್ನು ದಾಟಬಲ್ಲೆವು ಎಂಬ ನುಡಿಯನ್ನು ಮಹಿಳೆ ಸಾಧಿಸಿ ತೋರಿಸಿದ್ದಾಳೆ. ಎಂತಹ ಕಷ್ಟ ಕಾರ್ಪಣ್ಯಗಳಿಗೂ ಹೆದರದೆ ವಿದ್ಯೆಯಲ್ಲಿ, ದುಡಿಮೆಯಲ್ಲಿ ಬುದ್ಧಿವಂತಿಕೆಯನ್ನು, ಚಮತ್ಕಾರವನ್ನು ತೋರಿ ಜಗತ್ತಿಗೆ ಆದರ್ಶಗಳನ್ನು, ಮಾದರಿಗಳನ್ನು ನೀಡಿದ್ದಾಳೆ. ಇಡೀ ಮಾನವ ಕುಲವನ್ನು ಎತ್ತಿ ಹಿಡಿಯುವಲ್ಲಿ ಗುರುತರವಾದ ಪಾತ್ರ ವಹಿಸಿದ್ದಾಳೆ. ಸಮಾಜದ ವಿವಿಧ ಸ್ತರಗಳನ್ನು ಅರ್ಥ ಮಾಡಿಕೊಂಡು ಕಾಲಿಟ್ಟಲ್ಲಿ ಕಾಲುದಾರಿಯನ್ನು ಮಾಡಿಕೊಂಡು ಕೆಚ್ಚೆದೆಯಿಂದ ಮುಂದುವರಿಯುತ್ತಿದ್ದಾಳೆ. ಹರ್ಷ ಚಾವ್ಲಾ ಮದುವೆಯ ಪೌರೋಹಿತ್ಯವನ್ನು ನಡೆಸಿಕೊಡುತ್ತಿದ್ದಾರೆ. ವೋಲ್ಗಾರವರು

ಸಾರಾಯಿ ವಿರುದ್ಧ ಹೋರಾಡಿದ ಮಹಿಳೆಯರ ಬಗ್ಗೆ ಹೇಳಿದರು. ಸ್ವರ್ಣಭಟ್‌ರವರು ಗ್ರಾಮೀಣ ಕೂಲಿ ಕಾರ್ಮಿಕರ ಸಂಘವನ್ನು ಮುನ್ನಡೆಸುತ್ತಾ ಮಂಗಳೂರಿನಿಂದ 200 ಕಿ.ಮೀ. ನಡೆದು ಫ್ರೀಡಂ ಪಾರ್ಕನಲ್ಲಿ ಸರಾಯಿ ವಿರುದ್ಧ ಧರಣಿ ನಡೆಸಲು ಮಹಿಳೆಯರಿಗೆ ಸಾಕಷ್ಟು ಪ್ರೋತ್ಸಾಹ ಮಾರ್ಗದರ್ಶನ ನೀಡುತ್ತಿದ್ದಾರೆ.

ರಾಜಕೀಯದಲ್ಲಿ ಮಹಿಳೆ ಮುಂದುವರಿಯುತ್ತಿರುವುದು ಈ ಶತಮಾನದ ಮುಖ್ಯ ತಿರುವಾಗಿದೆ. ಹೆಂಡತಿಯನ್ನು ಪಂಚಾಯತಿ ಅಧ್ಯಕ್ಷೆಯನ್ನಾಗಿ ಮಾಡಿ ಗಂಡನೇ ಅಧಿಕಾರ ನಡೆಸುತ್ತಿದ್ದ ಸಂದರ್ಭಗಳು ತೆರೆಮರೆಗೆ ಸರಿದಿವೆ. ಹೆಣ್ಣು ತನ್ನ ಕರ್ತವ್ಯಗಳನ್ನ, ರಾಜಕೀಯ ವ್ಯವಹಾರಗಳನ್ನ ಸಂಪೂರ್ಣವಾಗಿ ಅರಿತು ಕಾರ್ಯ ನಿರ್ವಹಿಸುತ್ತಿದ್ದಾಳೆ ಎಂಬುದನ್ನು ವೋಲ್ಗಾರವರು ಮನವರಿಕೆ ಮಾಡಿಕೊಟ್ಟಿದ್ದಾರೆ. ಕೈಗಾರಿಕಾ ಕ್ಷೇತ್ರದಲ್ಲಿ, ರಾಜಕೀಯ ಕ್ಷೇತ್ರದಲ್ಲಿ ಹೇಗೆ ಮಹಿಳೆ ಹಂತಹಂತವಾಗಿ ವ್ಯವಸ್ಥೆಯನ್ನು ಬದಲಾಯಿಸಿಕೊಂಡು ಮೇಲೆದ್ದು ನಿಂತಿದ್ದಾಳೆ. ಬದುಕಿನ ಪಲ್ಲಟಗಳನ್ನು ಎದುರಿಸಿ ಆಕೆ ಗೆಲ್ಲುತ್ತಿರುವ ಬಗೆಯನ್ನು ವಿವರಿಸಿದ್ದಾರೆ.

ಇಷ್ಟೆಲ್ಲಾ ಮಹಿಳಾ ಸಬಲೀಕರಣವಾಗುತ್ತಿದ್ದರೂ ಮತ್ತೇಕೆ ಈ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ವಿಚಾರಗೋಷ್ಠಿ, ಚರ್ಚೆಗಳು, ಪರಿಸ್ಥಿತಿಯ ವಿಶ್ಲೇಷಣೆಗಳು ಬೇಕಿತ್ತು ಅನಿಸಬಹುದು. ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ ರಚಿತವಾದದ್ದು ನಿರ್ಭಯಾ ಪ್ರಕರಣ ನಡೆದ ನಂತರದ ದುಃಖ, ವಿಷಾದ, ನೋವಿನ ಜೊತೆಯಲ್ಲಿ ಅನ್ನುವುದು ಗಮನಾರ್ಹ. ಎಲ್ಲ ಮಹಿಳಾ ಅಭ್ಯುದಯ ಕಾರ್ಯಕ್ರಮಗಳ ನಡುವೆಯೂ ಪ್ರಪಂಚದಲ್ಲಿ 4.4 ಮಿಲಿಯನ್ ಹೆಣ್ಣು ಮಕ್ಕಳು ಸೆಕ್ಸ್ ಟ್ರೇಡ್‌ನಲ್ಲಿ ಬಂಧಿತರಾಗಿದ್ದಾರೆ. ವಿಶ್ವದ ಅತ್ಯುನ್ನತ ಕಂಪನಿಗಳೆನಿಸಿದ ಫಾರ್ಚೂನ್ 500 ಕಂಪನಿಗಳಲ್ಲಿ ಬರಿ 21 ಸಿ.ಇ.ಒಗಳು ಮಾತ್ರ ಮಹಿಳೆಯರಾಗಿದ್ದಾರೆ. ಇಡೀ ವಿಶ್ವದಲ್ಲಿ ಶೇಕಡ25ರಷ್ಟು ಸೀನಿಯರ್ ಎಕ್ಸಿಕ್ಯೂಟಿವ್ಸ್, ಶೇಕಡ 19ರಷ್ಟು ಕಂಪನಿ ಪ್ರೆಸಿಡೆಂಟ್‌ಗಳಿದ್ದಾರೆ. ಇನ್ನೂ ಅನೇಕ ದೇಶಗಳಲ್ಲಿ ಆಫ್ಘಾನಿಸ್ತಾನ ಮತ್ತು ಸ್ವೀಡನ್‌ಗಳಂತಹ ದೇಶಗಳಲ್ಲಿ ಇನ್ನೂ ತಮ್ಮ ಮೂಲಭೂತ ಹಕ್ಕುಗಳಿಗಾಗಿ ಮಹಿಳೆಯರು ಹೋರಾಡುತ್ತಲೇ ಇದ್ದಾರೆ.

ಸಬಿಹಾ ಭೂಮಿಗೌಡರು ಹೇಳಿದಂತೆ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳಿಗೆ ಪರಿಹಾರ ಏನೆಂದು ನಮ್ಮ ವಿಚಾರ ಗೋಷ್ಠಿಗಳಲ್ಲಿ ಶೋಧಿಸಿ ಈ ಸಮಾಜವನ್ನು ಮಹಿಳಾಸ್ನೇಹಿ ಮಾಡುವ ರೀತಿ ನೀತಿಗಳನ್ನು ಕಾರ್ಯಾನುಷ್ಠಾನ ಮಾಡಬೇಕಾಗಿದೆ. ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಆಗುತ್ತಿರುವ ಬದಲಾವಣೆಗಳನ್ನು ಮಹಿಳೆ ತನ್ನ ಮನೋದೃಢತೆಯಿಂದ ರೂಢಿಸಿಕೊಳ್ಳಬೇಕಾಗಿದೆ. ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ ಹಾಕಿಕೊಂಡಿರುವ ಈ ಅರಿವಿನ ಪಯಣ ಕಾರ್ಯಕ್ರಮ ಬಹಳ ಅದ್ಭುತವಾದದ್ದು. 'ಅರಿವಿನ ಪಯಣ'ದ ಒಂದು ವಿಶೇಷತೆಯೆಂದರೆ – ಈ ಕಾರ್ಯಕ್ರಮದ ಅಭಿಯಾನ

ಅದು ಮಂಡ್ಯದಲ್ಲಿ ಮಹಿಳಾ ಅಂತರಾಷ್ಟ್ರೀಯ ದಿನಾಚರಣೆಯ ಸ್ವರೂಪವನ್ನೆ ಬದಲಿಸಿಬಿಟ್ಟಿತು. ನಾವೆಲ್ಲಾ ಮಹಿಳಾ ದಿನಾಚರಣೆಯಂದು ನಾಲ್ಕಾರು ಸಭೆಗಳಲ್ಲಿ ಭಾಗವಹಿಸಿ ಭಾಷಣ ಮಾಡುತ್ತಿದ್ದೆವು. ಈ ಬಾರಿ ಇಲ್ಲಿ ಈ ವಿಚಾರ ಸಂಕಿರಣಕ್ಕೆ ಮೂರು ತಿಂಗಳು ಮುಂಚಿನಿಂದಲೆ ನಾವು ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಸದಸ್ಯರು ಸಣ್ಣ ಸಣ್ಣ ಗುಂಪುಗಳಾಗಿ ಅನೇಕ ಶಾಲಾಕಾಲೇಜುಗಳಲ್ಲಿ, ಸಂಸ್ಥೆಗಳಲ್ಲಿ ಹೆಣ್ಣು ಮಕ್ಕಳನ್ನ ಒಟ್ಟಾಗಿ ಸೇರಿಸಿ ಸ್ತ್ರೀವಿಮೋಚನೆಯ ಹಾದಿಯಲ್ಲಾಗುತ್ತಿರುವ ಬದುಕಿನ ಪಲ್ಲಟಗಳ ಬಗ್ಗೆ ಮಾತಾಡಿದ್ದೇವೆ. ಜಾಗೃತಗೊಳಿಸಿದ್ದೇವೆ. ಇಲ್ಲಿ ಸೇರಿರುವ ಸಾವಿರ ಮಂದಿಗೂ ಮುನ್ನ ಐದಾರು ಸಾವಿರ ಹೆಣ್ಣುಮಕ್ಕಳ ಮನಸ್ಸಿನ ಕದ ತಟ್ಟಿದ್ದೇವೆ ಎಂಬ ಸಾರ್ಥಕತೆ ಬಂದಿದೆ. 'ಕಪ್ಪು ಉಡಿಗೆಯಲ್ಲಿ ಮಹಿಳೆ' ಕಾರ್ಯಕ್ರಮ ಇಡೀ ರಾಜ್ಯದ ಗಮನ ಸೆಳೆಯಿತು.

ಸ್ವ ಸಹಾಯ ಸಂಘಗಳನ್ನು ಮಾಡಿದಾಗಲೂ ಸಮಾಜದಲ್ಲಿ ಪುರುಷ ಸ್ವಾರ್ಥ ಕಂಡುಬಂದಿದೆ. ಮಹಿಳೆಯರ ಸ್ವಸಹಾಯ ಸಂಘಗಳನ್ನು ರಾಜಕೀಯವಾಗಿ ದುರುಪಯೋಗಪಡಿಸಿಕೊಂಡು ವೋಟ್‌ಬ್ಯಾಂಕ್ ಮಾಡಿಕೊಂಡಿರುವುದನ್ನ ಕಂಡಿದ್ದೇವೆ. ಸೀರೆ, ಉಂಗುರ, ಮೂಗುಬೊಟ್ಟು, ಬೆಳ್ಳಿಕಾಸು ಕೊಡಲು ಹೋಗಿ ಹಿಂಸಾಚಾರ ಆದದ್ದನ್ನು ಕಂಡು ಮನಸ್ಸಿನಲ್ಲೆ ಮರುಗಿದ್ದೇವೆ. ಜೊತೆಗೆ ವೋಲ್ಗಾರವರು ಹೇಳಿದಂತೆ ಸ್ವಸಹಾಯ ಸಂಘಗಳಿಗೆ ಬ್ಯಾಂಕಿನಿಂದ ಉದ್ಯಮಕ್ಕಾಗಿ ಇರುವ ಸಾಲವನ್ನು ಉದ್ಯೋಗದ ಯೋಜನೆ ಇಲ್ಲದವರಿಗೂ ಕೊಟ್ಟು ಸಂಘಗಳಲ್ಲಿ ಲೇವಾದೇವಿ ಮಾಡುವ ಚಾಳಿಯನ್ನು ಬೆಳೆಸಿದ್ದಾರೆ. ಈ ಕೆಟ್ಟ ಪಿಡುಗುಗಳನ್ನ ಮಹಿಳೆಯರು ಮೀರಿ ನಿಲ್ಲಬೇಕಿದೆ. ಮಹಿಳಾ ಆಲೋಚನೆಗಳು, ಮಾನವೀಯ ಆಲೋಚನೆಗಳಾಗಬೇಕು. ಮಹಿಳೆಯರ ಸಮಾನತೆಗಾಗಿ ಮಾಡುವ ಹೋರಾಟ ಮಾನವೀಯ ಮೌಲ್ಯಗಳ ಬಗ್ಗೆ ಹೋರಾಟ ಎಂದು ಇಲ್ಲಿ ವೇದಿಕೆಯ ಮೇಲೆ ಅನೇಕರು ಪ್ರತಿಪಾದಿಸಿದ್ದಾರೆ. ಇದೆಂತಹ ಒಳ್ಳೆಯ ಮಾತು. ವೃತ್ತಿನಿರತ ಪ್ರತಿ ಹೆಣ್ಣು ಕೂಡ  ಸಂಸಾರ ಮತ್ತು ವೃತ್ತಿ ಕ್ಷೇತ್ರ ಎಲ್ಲವನ್ನು ನಿಭಾಯಿಸಬೇಕೆಂಬ ಛಲಹೊತ್ತು ಈಗ ಆಧುನಿಕ ನೆಲೆಯಲ್ಲಿ ಒಂದು ಬೇರೆ ರೀತಿಯ ಶೋಷಣೆಗೆ ಒಳಗಾಗುತ್ತಿದ್ದಾಳೆ. ಹೊರಗೆ ದುಡಿಯುವ ಹಾಗೂ ಸಂಸಾರದ ಹೊರಗೆ ಸಮಾಜಸೇವೆಗಳಲ್ಲಿ ನಿರತವಾಗಿರುವ ಮಹಿಳೆಯರಿಗೆ ಪ್ರತಿಯೊಂದು ಹೆಜ್ಜೆಯಲ್ಲೂ ಆತಂಕವಿದೆ. ಮಹಿಳೆಗೆ ಉದ್ಯೋಗಕ್ಷೇತ್ರದಲ್ಲಿ ಪುರುಷರಿಂದ ಸಿಕ್ಕಿರುವ ಸಹಕಾರ ಕುಟುಂಬದ ಕ್ಷೇತ್ರದಲ್ಲಿ ಸಿಗುತ್ತಿಲ್ಲ. ಮಕ್ಕಳನ್ನು ನೋಡಿಕೊಳ್ಳುವಲ್ಲಿ, ಮನೆಕೆಲಸ ಮಾಡುವಲ್ಲಿ ಗಂಡಸರು ಇನ್ನೂ ಹೆಚ್ಚಿನ ರೀತಿಯಲ್ಲಿ ಮಹಿಳೆಯರ ಸಮಸಮಕ್ಕೆ ಕೆಲಸ ಮಾಡಬೇಕಿದೆ. ಇಲ್ಲದಿದ್ದಲ್ಲಿ ಈಗಾಗಲೇ ಮಹಿಳೆಯರು ಹೆಚ್ಚು ರಕ್ತದೊತ್ತಡಕ್ಕೆ, ಹೃದಯದ ಕಾಯಿಲೆಗಳಿಗೆ, ಸಕ್ಕರೆಕಾಯಿಲೆಗೆ ತುತ್ತಾಗುತ್ತಿರುವ ಪರಿಸ್ಥಿತಿ ಮುಂದೆ ಇನ್ನೂ ಕ್ಲಿಷ್ಟವಾಗುತ್ತಾ ಹೋಗಿ ಸಮಾಜದ ಸ್ವಾಸ್ಥ್ಯವನ್ನು ಕದಡೀತು.

ಸಬಿಹಾ ಅವರು ಲೇಖಕಿಯರು ಪುರಾಣದ ಸ್ತ್ರೀ ಪಾತ್ರಗಳ ಅಸ್ಥಿಪಂಜರಕ್ಕೆ ರಕ್ತಮಾಂಸಗಳನ್ನು ತುಂಬಿ ಹೊಸ ದೃಷ್ಟಿಕೋನದಿಂದ ನಿರೂಪಿಸುತ್ತಿದ್ದಾರೆ ಎಂದಿದ್ದಾರೆ. ಇದು ಭಾರತೀಯ ಸ್ತ್ರೀ ಸಂಸ್ಕೃತಿಯಲ್ಲಿ ಆಗುತ್ತಿರುವ ಪುನರಚನೆಯ ಸಂಕೇತಗಳು.

ಒಬ್ಬ ಕವಿ ಹೇಳುತ್ತಾನೆ – "The song that I came to sing is unsung. I spent the time in stringing and unstringing the instrument". ನಾನು ಹಾಡಬೇಕೆಂದಿದ್ದ ಹಾಡನ್ನು ಹಾಡಲೇ ಇಲ್ಲ. ಬರಿ ತಂತಿಗಳನ್ನು ಸರಿಪಡಿಸುವಲ್ಲಿ ನನ್ನ ಸಮಯ ಮುಗಿದಿತ್ತು ಎಂದು. ಎಷ್ಟೇ ಎಡರು–ತೊಡರುಗಳಿದ್ದರೂ, ಗುರಿ ಇಟ್ಟುಕೊಂಡು ಬದುಕಬೇಕಿದೆ. ಮಹಿಳೆಗೆ ದೇವರು ಮಗುವೊಂದನ್ನು ಸೃಷ್ಟಿಮಾಡಿ ಭೂಮಿಗೆ ತರುವ ಅದ್ಭುತವಾದ ಕೆಲಸ ಕೊಟ್ಟಿದ್ದಾನೆ. ಆದ್ದರಿಂದ ಹೆಣ್ಣಿಗೆ ಸೃಷ್ಟಿಯ ಕಲೆ ಪ್ರಕೃತಿದತ್ತವಾಗಿ ಸಿದ್ಧಿಸಿದೆ. ಅದು ಕಲೆಯಲ್ಲಿರಬಹುದು, ವಿಜ್ಞಾನದ ಆವಿಷ್ಕಾರದಲ್ಲಿರಬಹುದು, ತೋಟಗಾರಿಕೆ, ವ್ಯವಸಾಯವಿರಬಹುದು, ಅದನ್ನು ಅವಳು ಮನಗಾಣಿಸಿಕೊಂಡು ಭುವಿಯನಾಳಬೇಕಿದೆ.

ಹಿಂದೆ, ನಾವು ಬಾಣಂತಿಯರಿದ್ದಾಗ ನಮ್ಮ ತಾಯಿ 'ಹೊಟ್ಟೆ ಕಟ್ಟಿ ತೊಟ್ಟಿಲು ಕಟ್ಟಬೇಕು' ಎಂಬ ಗಾದೆ ಮಾತಿದೆ ಎಂದು ಹೇಳುತ್ತಿದ್ದರು. ನಮಗೆ ಇದರ ಅರ್ಥ ಹೊಟ್ಟೆ ಕಟ್ಟುವುದು ಸಣ್ಣಗಾಗಲಿ ಎಂದಿರಬೇಕು ಎಂದು ತಿಳಿದಿದ್ದೆವು. ಆದರೆ ನಾವು ಬೆಳೆದಂತೆ ಅದರ ನಿಜದ ಅರ್ಥ ಮಗುವಾದ ಮೇಲೆ ನಮ್ಮ ಆಸೆ ಆಕಾಂಕ್ಷೆಗಳನ್ನು, ಗುರಿಗಳನ್ನು ಕಟ್ಟಿಟ್ಟು, ಮಕ್ಕಳು ಮತ್ತು ಮನೆಮಂದಿಗೆ ಅನುಸರಿಸಿಕೊಂಡು ಹೊಂದಿಕೊಂಡು ನಡೆಯಬೇಕು ಎನ್ನವುದು ತಿಳಿಯಿತು. ಆದರೆ ಇಂದು ಹೊಸತನದ ದೃಷ್ಟಿಕೋನ ಎಲ್ಲರ ಮನಸ್ಸಿನಲ್ಲಿದೆ.

*"ನವರೀತಿ ನವವಿಧಿಯ ನೋಡು ಹೊಸತನದಿಂದ.*
*ಗುರಿಯಿಟ್ಟು ಮನಸಿಟ್ಟು ಕಲಿ ಗಮನದಿಂದ*
*ಸುಗ್ಗಿ ಸಂಭ್ರಮ ಕಾಲ ಇಂದು ಈ ಯುಗಮಾನ*
*ತೆರೆದ ಮನ ಸಂಕ್ರಾಂತಿ ಮಂಕುತಿಮ್ಮ"* ಎಂದಿದ್ದಾರೆ ಡಿ.ವಿ.ಜಿ.

ವೋಲ್ಗಾರವರ ದಿಕ್ಸೂಚಿ ಭಾಷಣದ ಶೀರ್ಷಿಕೆ ಬಹಳ ಅರ್ಥವತ್ತಾಗಿದೆ. "ಈ ಬೀದಿಗಳೆಲ್ಲಾ ನಮ್ಮವು ಹಗಲೂ ಇರುಳೂ". ಈ ಶೀರ್ಷಿಕೆಯನ್ನು ಓದಿ ನನಗೆ ನಮ್ಮ ಮಂಡ್ಯದ ಮಂಗಲದಲ್ಲಿ ಇಂಗ್ಲೆಂಡಿನಿಂದ ಬಂದು ನೆಲೆಸಿದ್ದ ಮಂಗಲದ ಕೆಂಪಮ್ಮನೆಂದು ಹೆಸರಾಗಿದ್ದ ಮಹಿಳೆ ಹೇಳಿದ ಒಂದು ಘಟನೆ ನೆನಪಿಗೆ ಬಂತು. ಅವರು ಒಮ್ಮೆ ಅಂತಾರಾಷ್ಟ್ರಿಯ ಮಹಿಳಾ ದಿನಾಚರಣೆಯಲ್ಲಿ ಭಾಷಣ ಮಾಡುವಾಗ ಹೀಗೆ ಹೇಳಿದ್ದರು. ಎರಡನೆ ಮಹಾಯುದ್ದದ ಸಮಯದಲ್ಲಿ ಬ್ರಿಟನ್ ನಲ್ಲಿ ಆನೇಕ ಗಂಡಸರು ಯುದ್ಧದಲ್ಲಿ ಪಾಲ್ಗೊಳ್ಳಲು ಹೋಗಿದ್ದರು. ಆಗ ಅನೇಕ ಕಂಪನಿಗಳಲ್ಲಿ ಆಡಳಿತಾತ್ಮಕವಾಗಿ

ನೋಡಿಕೊಳ್ಳಲು ಯಾರೂ ಇರಲಿಲ್ಲ. ಆಗ ಬ್ರಿಟನ್ ಕಂಪನಿಗಳು ಅಲ್ಲಿದ್ದ ಮಹಿಳೆಯರಿಗೆ ಒಂದೊಂದು ಕೆಲಸ ಕೊಟ್ಟು ಸಂಸ್ಥೆಗೆ ತೆಗೆದುಕೊಂಡರು. ಯುದ್ಧ ಮುಗಿಸಿ ಗಂಡಸರೆಲ್ಲಾ ಹಿಂತಿರುಗಿ ಬಂದ ಮೇಲೆ ಕೆಲಸಕ್ಕೆ ತೆಗೆದುಕೊಂಡಿದ್ದ ಮಹಿಳೆಯರನ್ನು ಸಂಸ್ಥೆಗಳು ವಾಪಸ್ ಕಳಿಸಲು ನೋಡಿದವು. ಆದರೆ ಮಹಿಳೆಯರು 'ನಾವು ಈಗಾಗಲೆ ಆಫೀಸಿನ ಕೆಲಸ ಚೆನ್ನಾಗಿ ಅರಿತು ಮಾಡುತ್ತಿದ್ದೇವೆ. ನಮ್ಮನ್ನು ಸುಮ್ಮನೆ ನೀವು ಕೆಲಸದಿಂದ ತೆಗೆಯುವುದು ಸಾಧ್ಯವಿಲ್ಲ' ಎಂದು ನಿರಾಕರಿಸಿದರು. ಆಗ ಕಂಪನಿಗಳು ಅದನ್ನು ಒಪ್ಪಿಕೊಂಡು, 'ಹಾಗಾದರೆ ಯುದ್ಧದಿಂದ ಮರಳಿ ಬಂದ ಪುರುಷರು ಸ್ವಲ್ಪ ದಿನ ಮನೆಯಲ್ಲಿರಲಿ. ಅವರಿಗೆ ಬೇರೆ ಕೆಲಸ ಕೊಡುತ್ತೇವೆ' ಎಂದರು. ಹಾಗಾಗಿ ಐದಾರು ತಿಂಗಳು ಗಂಡಸರು ಮನೆಯಲ್ಲಿರಬೇಕಾಯಿತು. 'ಹೀಗೆ ಗಂಡಸರಿಗೆ ಮನೆಯಲ್ಲಿರಬೇಕಾದ ಪರಿಸ್ಥಿತಿ ಬಂದ ಕಾಲದಲ್ಲಿ ಮಿಕ್ಸಿ, ವಾಷಿಂಗ್ ಮಿಷನ್, ಪಾತ್ರೆ ತೊಳೆಯುವ ಮಿಷನ್, ಕಸ ಗುಡಿಸುವ ವಾಕ್ಯೂಮ್ ಕ್ಲೀನರ್ ಆವಿಷ್ಕಾರಗೊಂಡಿದ್ದು' ಎಂದು ಮಂಗಲದ ಕೆಂಪಮ್ಮರವರು ಹೇಳುತ್ತಾರೆ.

ಈ ಒಂದು ಉದಾಹರಣೆಯನ್ನು ತೆಗೆದುಕೊಂಡರೆ ವೋಲ್ಗಾರವರು ಹೇಳಿದಂತೆ ಗಂಡಸರು 6 ಗಂಟೆಗೆ ಮನೆಗೆ ಹಿಂದಿರುಗಿ ಮನೆಯಲ್ಲಿದ್ದು ಹೆಂಗಸರು 6 ಗಂಟೆಯ ಮೇಲೆ ಹೊರಗಿನ ಕೆಲಸಗಳಿಗೆ ಹೋದದ್ದೆ ಆದರೆ ಕರಾಳ ರಾತ್ರಿಯಲ್ಲಿ ನಡೆಯುವ ದುರಾಚಾರ, ದುಷ್ಕೃತ್ಯಗಳೆಲ್ಲ ನಿಂತು ಜಗತ್ತು ಸುಂದರ ತಾಣವಾಗಬಲ್ಲದು. "ನಾಮದಲ್ಲಿ ಹೆಂಗಸೆಂಬ ಹೆಸರಾದರೇನು, ಭಾವಿಸಲು ಗಂಡುರೂಪ ನಿಮ್ಮ ದಯದಿಂದ" ಎಂದಿದ್ದಾಳೆ ನಮ್ಮ ಅಕ್ಕಮಹಾದೇವಿ. ನಮ್ಮ ಮನೋಭಾವ ಬದಲಾಗಬೇಕು. ನಮ್ಮಲ್ಲಿ ಹೊಸ ಅರಿವಿಗೆ ಇಂಬು ಕೊಡಬೇಕು. ಮಹಿಳೆ ಎಂಬ ವಿನಾಯಿತಿಯ ಅಗತ್ಯವಿಲ್ಲದಷ್ಟು ಗಟ್ಟಿಯಾಗಿ ಬೆಳೆಯಬೇಕು. ಸಂಪ್ರದಾಯದ ಸರಪಳಿಯಲ್ಲಿ ಸಿಲುಕದೆ ಮೂಢನಂಬಿಕೆಗಳ ಕಪಿಮುಷ್ಠಿಯಿಂದ ಹೊರಬರಬೇಕು. ಮಹಿಳೆ ಜಗತ್ತಿನ ಒಳಿತಿನಲ್ಲಿ ತನ್ನಾತ್ಮದ ಒಳಿತನ್ನು ಕಂಡುಕೊಂಡು, ಗಂಡು-ಹೆಣ್ಣಿನ ನಡುವಿನ ಗೋಡೆಗಳು ಕರಗಿ ಅವರಿಬ್ಬರೂ ಪ್ರಬುದ್ಧವಾದ ಸಮಸ್ತರದ ಬದುಕು ನಡೆಸಬೇಕಾದ ಕಾಲಬಂದಿದೆ. ಡಿ.ವಿ.ಜಿ ರವರು ಹೇಳಿರುವಂತೆ.

*"ಒಲ್ಲೆನೆನ್ನದಿರು ಬಾಳನ್ ಒಲವಿದೇನೆನ್ನದಿರು*
*ಉಲ್ಲಾಸಕೆಡೆಮಾಡು ನಿನ್ನಿಂದಾದನಿತು,*
*ನಿಲ್ಲು ಕೆಚ್ಚೆದೆಯಿಂದಲನ್ಯಾಯಗಳನಳಿಸೆ*
*ಎಲ್ಲಕುಂ ಸಿದ್ಧನಿರು ಮಂಕುತಿಮ್ಮ".*

# ಕೃಷಿ ಮಹಿಳೆಯರ ಬದುಕಿನ ಪಲ್ಲಟಗಳು

ವಿ. ಗಾಯತ್ರಿ

**ಜೀವದ ವಿರುದ್ಧ ಕೈಗಾರಿಕಾ ಕೃಷಿ ಸಾರಿದ ಸಮರ**

ಎರಡು ವರ್ಷಗಳ ಹಿಂದೆ ನಮ್ಮ 'ಸಹಜ ಸಾಗುವಳಿ' ಪತ್ರಿಕೆಗೆ ಬಳ್ಳಾರಿ ಜಿಲ್ಲೆ ಕೊಟ್ಟೂರು ತಾಲೂಕಿನ ದೂಪದಹಳ್ಳಿ ಗ್ರಾಮದ ಭದ್ರಮ್ಮ ಎನ್ನುವ ಮಹಿಳೆಯ ಸಂದರ್ಶನವನ್ನು ರೆಕಾರ್ಡ್ ಮಾಡಲು ಹೋಗಿದ್ದೆವು. ಅಂದು ಅವರು ಎಂಟು ಜನರ ಟೀಂ ಮಾಡಿಕೊಂಡು ತಮ್ಮ ಜಮೀನಿನಲ್ಲಿ ಬಿತ್ತನೆ ಮಾಡುತ್ತಿದ್ದರು. ಮುಂದೆ ಎರಡು ಎತ್ತು, ಅದರ ಹಿಂದೆ ಕೂರಿಗೆ ಸಾಲು ಹೊಡೆಯವ ಒಬ್ಬ ರೈತ, ಅದರ ಹಿಂದೆ ಸೆಡ್ಡೆಯಲ್ಲಿ ಬೀಜ ಬಿತ್ತುವ ಮೂರು ಜನ ಮಹಿಳೆಯರು, ಅವರ ಹಿಂದೆ ಮತ್ತೆ ಸೆಡ್ಡೆಯಲ್ಲಿ ಗೊಬ್ಬರ ಹಾಕುವ ಮೂರು ಜನ ಮಹಿಳೆಯರು, ಇವರಿಗೆ ನೀರು ಮತ್ತು ಬೀಜ ಕೊಡಲು ಒಬ್ಬ ಹುಡುಗ. ಅವರು ಬಿತ್ತನೆ ಮುಗಿಸುವವರೆಗೂ ಕಾದು ನಂತರ ಅವರೊಂದಿಗೆ ಮಾತು ಪ್ರಾರಂಭಿಸಿದೆವು.

ಅಂದು ಭದ್ರಮ್ಮನವರು ಹೇಳಿದ ಎರಡು ಮಾತು ಎಲ್ಲವನ್ನೂ ವಿವರಿಸುವಂತಿತ್ತು. 'ನನಗೀಗ 70–75 ವರ್ಷ ಇರಬಹುದು. ನನಗೆ ಬಿತ್ತನೆಯಲ್ಲಿ ಅರವತ್ತು ವರ್ಷ ಅನುಭವ ಇದೆ. ಇವತ್ತಿಗೂ ಬಿತ್ತನೆ ಮಾಡುತ್ತಲೇ ಇದ್ದೇನೆ. ಈ ಅರವತ್ತು ವರ್ಷದಲ್ಲಿ ನಾನು ನನ್ನ ಜಮೀನಿಗೆ ಯಾವತ್ತೂ ಒಂದೇ ಬೀಜವನ್ನು ಬಿತ್ತಿಲ್ಲ; ಇದುವರೆಗೂ ನಾನು ನನ್ನ ಮನೆಗೆ ಯಾವುದೇ ದಿನಸಿಗಳನ್ನು ಅಂಗಡಿಯಿಂದ ಕೊಂಡು ತಂದು ಊಟ ಮಾಡಿಲ್ಲ'. ಹಾಗಾದರೆ ಅವರು ಎಷ್ಟು ಬೀಜ ಬಿತ್ತುತ್ತಿದ್ದರು? ಅವತ್ತು ಅವರು ಆ ಹೊಲಕ್ಕೆ ಹನ್ನೆರಡು ತರಹದ ಬೀಜಗಳನ್ನು ಬಿತ್ತುತ್ತಿದ್ದರು. ಮುಖ್ಯ ಬೆಳೆ ಸಾಲು, ಅಕ್ಕಡಿ ಬೆಳೆ ಸಾಲುಗಳು, ಅಂಚಿನ ಸಾಲುಗಳು, ಮಿಶ್ರ ಬೆಳೆ ಸಾಲುಗಳಲ್ಲಿ ಏಕದಳ, ದ್ವಿದಳ, ಎಣ್ಣೆ ಕಾಳುಗಳು, ಸಾಂಬಾರು ಪದಾರ್ಥಗಳು ಎಲ್ಲಾ ಸೇರಿ ಹನ್ನೆರಡು ಥರದ ಬೀಜಗಳು. ಮಾರುಕಟ್ಟೆಗೆ ಹೋಗುವ ಮುಖ್ಯ ಬೆಳೆಯ ಜೊತೆಗೆ ಮನೆ ಬಳಕೆಗೆ ಬೇಕಾದ ಪ್ರತಿಯೊಂದು ಪದಾರ್ಥಗಳು ಅಲ್ಲಿದ್ದವು. ಒಬ್ಬೊಬ್ಬ ಮಹಿಳೆ ಮೂರು, ಮೂರು ಮಡಿಲು ಕಟ್ಟಿಕೊಂಡಿದ್ದರು. ಮತ್ತೊಂದು ಗೌಪ್ಯವಾದ ಒಳಸೆರಗು! ಅದು ಯಾರಿಗೂ ಗೊತ್ತಾಗುತ್ತಿರಲಿಲ್ಲ. ಪ್ರಾಯಶಃ ಮನೆಯ ಗಂಡಸರಿಗೆ ಅಲ್ಲಿ ಇನ್ನೊಂದು

ಬೀಜ ಇಟ್ಟುಕೊಂಡಿರುವುದು ಗೊತ್ತಾಗದಿರಲಿ ಎಂದು ಗೌಪ್ಯವಾಗಿ ಕಟ್ಟಿಕೊಂಡಿದ್ದಿರಬೇಕು!

'ನಾವು ಯಾವಾಗಲೂ ಮೂರು ತಾಳಿನ ಕೂರಿಗೆಯನ್ನೇ ಉಪಯೋಗ ಮಾಡುವುದು' ಅಂದರು ಭದ್ರಮ್ಮ. 'ಯಾಕೆಂದರೆ ಮೂರು ತಾಳು ಬಿತ್ತನೆ ಮಾಡಿದರೂ ಅದರಲ್ಲಿ ರೈತರಿಗೆ ಸಿಗುವುದು ಒಂದೇ ತಾಳಿನ ಬೆಳೆ. ಉಳಿದ ಎರಡು ತಾಳಿನಲ್ಲಿ ಒಂದು ತಾಳಿನದು ಪ್ರಾಣಿ–ಪಕ್ಷಿಗಳಿಗೆ ಹೋಗುತ್ತದೆ, ಇನ್ನೊಂದು ನಮ್ಮ ಸುತ್ತಮುತ್ತಲಿನವರಿಗೆ ಹೋಗುತ್ತದೆ, ಒಂದು ತಾಳಿನದು ಮಾತ್ರ ರೈತನಿಗೆ ಉಳಿಯುತ್ತದೆ'. ಕೃಷಿ ಸಂಸ್ಕೃತಿಯ ತಿರುಳು ಅವರ ಈ ಮಾತಿನಲ್ಲಿ ಅಡಕವಾಗಿತ್ತು. 'ಎಲ್ಲಾ ಕೆಲಸಕ್ಕಿಂತ ಬಿತ್ತನೆ ಕೆಲಸ ನಮಗೆ ಗೌರವ ಕೊಡುತ್ತದೆ. ನಮ್ಮನ್ನು ಬೇರೆಯವರು ಬಿತ್ತನೆಗೆ ಕರೆದಿದ್ದಾರೆ ಎಂದರೆ ನಮಗೆ ಅದು ಒಂದು ಹೆಮ್ಮೆ'. ಹೀಗೆಂದವರು ಭದ್ರಮ್ಮನ ಟೀಂನಲ್ಲಿದ್ದ ಯುವ ಮಹಿಳೆ ಅನುಸೂಯ.

ಇನ್ನೊಬ್ಬರು ಪುಟ್ಟೀರಮ್ಮ. ಚಾಮರಾಜನಗರದ ಪಣ್ಯದಹುಂಡಿ ಗ್ರಾಮದ ರೈತ ಮಹಿಳೆ. ಅನೇಕ ದಿನ ಅವರೊಟ್ಟಿಗೆ ಇದ್ದು ಅವರ ಮಿಶ್ರ ಬೆಳೆ ಪದ್ಧತಿ ಮತ್ತು ಬೆರೆಕೆಸೊಪ್ಪಿನ (ಪುರಾಣ)ವನ್ನು ದಾಖಲಿಸುತ್ತಿದ್ದೆವು. ಭದ್ರಮ್ಮ ಕೂರಿಗೆ ಬಿತ್ತನೆ ನಿಪುಣೆಯಾದರೆ ಪುಟ್ಟೀರಮ್ಮ ಕೈಬಿತ್ತನೆ ಪ್ರವೀಣೆ. ಇವರು ಬಿತ್ತನೆ ಮಾಡಿದ ಮಾಡಿದ ಹೊಲ ವಿವಿಧ ಬಣ್ಣಗಳನ್ನು ಹಾಸುಹೊಕ್ಕಾಗಿ ಬೆಸೆದ ಕಲಾಕೃತಿಯಂತೆ ಕಾಣುತ್ತದೆ ಎಂದರೆ ಉತ್ಪ್ರೇಕ್ಷೆಯಾಗುವುದಿಲ್ಲ. 'ಒಂದೇ ಬೆಳೆ ಹಾಕಿದರೆ ನಮ್ಮ ಭೂಮಿಗೆ ರೂಪು ಬರೋದಿಲ್ಲ' ಅನ್ನುವುದು ಪುಟ್ಟೀರಮ್ಮನ ತರ್ಕ. ಅವರ 'ರೂಪು' ಅನ್ನುವ ಈ ಕಲ್ಪನೆ ಗೆಳತಿಯರು ಇಲ್ಲಿ ಸಿದ್ಧಪಡಿಸಿರುವ ಕೌದಿಗೆ ಹೋಲಿಸಬಹುದು. ವಿವಿಧ ಬಣ್ಣಗಳು, ವಿವಿಧ ವಿನ್ಯಾಸಗಳು, ವಿವಿಧ ಉದ್ದೇಶಗಳು ಇರುವ ಕೌದಿಯ ಹಾಗೆಯೇ ಮಿಶ್ರ ಬೆಳೆ ಹೊಲ ಕೂಡ. ಭೂಮಿಗೆ ರೂಪು ಬರುವುದು ಎಂದರೆ ಕಣ್ಣೋಟಕ್ಕೆ ಸುಂದರವಾಗಿರುವುದು ಎಂಬರ್ಥ ಮಾತ್ರವಲ್ಲ. ನಾವು ಬಿತ್ತುವ ಬೆಳೆಗಳಿಂದ ಮಣ್ಣು ಫಲವತ್ತಾಗಬೇಕು. ಮಣ್ಣಿನ ಫಲವತ್ತತೆ ಕಾಪಾಡಿಕೊಂಡು, ವಿವಿಧ ಬೆಳೆಗಳನ್ನು ಬೆಳೆದಾಗ ಮಾತ್ರ ನಮ್ಮ ಕುಟುಂಬಗಳನ್ನು ಕಾಪಾಡಬಹುದು ಎನ್ನುವುದು ಇವರ ಲೆಕ್ಕಾಚಾರ.

ಹೀಗೆ ಪುಟ್ಟೀರಮ್ಮನಂಥ ಮಹಿಳೆಯರು ಕಾಪಾಡಿಕೊಂಡು ಬಂದದ್ದು ಬೀಜ ಮತ್ತು ಕಳೆ. ಈ ಬೀಜ ಮತ್ತು ಕಳೆಗಳಿಂದ ಜನಾಂಗಗಳನ್ನೇ ಕಾಪಾಡಿದ ಧೀಮಂತರಿವರು. 'ಕಳೆ'ಯೆಂದರೆ ಹೊಲ ಮತ್ತು ಸುತ್ತಮುತ್ತಲೂ ಸಿಗುವಂತಹ ವನಸ್ಪತಿಗಳು. ಬೆರೆಕೆ ಸೊಪ್ಪು. ಬೆರೆಕೆ ಸೊಪ್ಪು ಎಂದರೆ ಕುಟುಂಬದ ಪೌಷ್ಟಿಕತೆ ಭದ್ರತೆ. ಹೊಲದಲ್ಲಿ ಕಳೆ ಕೀಳುವುದೆಂದರೆ ಮಹಿಳೆಯರಿಗೆ ಮನೆಗೆ ಪೌಷ್ಟಿಕ ವನಸ್ಪತಿಗಳನ್ನು ಸಂಗ್ರಹಿಸುವುದೂ ಹೌದು. ಸೊಪ್ಪಿನ ಬಗ್ಗೆ ಕೇಳಿದರೆ ಸಾಕು, ಮಹಾಭಾರತದ ಕಾಲಕ್ಕೆ ಹೋಗಿಬಿಡುವ, ಕಾಡಿನಲ್ಲಿದ್ದಾಗ ಕುಂತಿ ದೇವಿ ಕೊಯ್ಯುತ್ತಿದ್ದ ಸೊಪ್ಪುಗಳು, ಬಿತ್ತುತ್ತಿದ್ದ ಬೆಳೆಗಳನ್ನು

ಹಾಡಿನ ಮೂಲಕ ವಿವರಿಸುವ ಪುಟ್ಟೀರಮ್ಮನಂಥ ಮಹಿಳೆಯರು ಅದೆಷ್ಟು ಸಾವಿರ ವರ್ಷಗಳಿಂದ ಈ ಬಗೆಯ ಸಮಗ್ರ ಪದ್ಧತಿಗಳನ್ನು ಪಾಲಿಸಿಕೊಂಡು ಬಂದಿದ್ದಾರೋ ಬಲ್ಲವರಾರು. ಅವರು 'ಭೂಮಿ' ಅನ್ನುವುದನ್ನೇ ನಾನು ಕೇಳಿಲ್ಲ. ಯಾವಾಗಲೂ 'ಭೂಮ್ತಾಯಿ' ಅಂತಲೇ ಅನ್ನುತ್ತಾರೆ. ಅವರ ಹಾಡುಗಳಲ್ಲಿ ಆ ಭೂಮ್ತಾಯಿಯ ಸಿಂಗಾರ, ಬಸಿರು, ಬಯಕೆಗಳು, ಸೀಮಂತ, ಬಾಣಂತನ, ಮುಟ್ಟು ಎಲ್ಲವೂ ಸುತ್ತಿ ಸುತ್ತಿ ಬರುತ್ತವೆ.

**ಮೂಲೆಗೆ ಸರಿದ ಮಹಿಳೆಯರ ಲೋಕಜ್ಞಾನ**

ಮಹಿಳೆಯರ ಇಂತಹ ಬೆಲೆ ಸರಿಗಟ್ಟಲಾಗದ ಲೋಕಜ್ಞಾನ, ಪರಿಸರ ಮತ್ತು ಕುಟುಂಬದ ಕಾಪಾಡುವಿಕೆಯಲ್ಲಿ ಬೆಳೆಸಿಕೊಂಡು ಬಂದ ವಿವೇಕ ಕಳೆದ 50–60 ವರ್ಷದಲ್ಲಿ ಸಂಪೂರ್ಣ ಪಲ್ಲಟಗೊಂಡಿತು. ಸಾವಿರಾರು ವರ್ಷಗಳಿಂದ ನಮ್ಮ ಮಹಿಳೆಯರು ತಮ್ಮದಾಗಿಸಿಕೊಂಡಿದ್ದ ಜ್ಞಾನ– ವಿವೇಕಗಳು ಕೇವಲ 50–60 ವರ್ಷದಲ್ಲಿ ಮೂಲೆಗುಂಪಾದದ್ದು ಹೇಗೆ?

ನಾವಿಂದು ಮಂಡ್ಯದಲ್ಲಿ ಸೇರಿದ್ದೇವೆ. ಮಂಡ್ಯದ ಬಹುಭಾಗದಲ್ಲಿ ಜಲಾಶಯದ ನೀರಾವರಿಯಿಂದ ಕಬ್ಬು, ಭತ್ತಗಳನ್ನು ಬೆಳೆಯಲಾಗುತ್ತಿದೆ. ಸ್ವಲ್ಪ ರಾಗಿ, ತೆಂಗು ಮತ್ತಿತರ ಬೆಳೆಗಳೂ ಇವೆ. ಕಣ್ಣು ಹಾಯಿಸಿದಷ್ಟೂ ಕಬ್ಬಿನ ಗದ್ದೆಗಳು, ಭತ್ತದ ಗದ್ದೆಗಳು. ಎಲ್ಲೆಲ್ಲೂ ಏಕಬೆಳೆ. ವಂದನಾಶಿವ ಇದನ್ನು 'ಮಾನೋ ಕಲ್ಚರ್ ಆಫ್ ಮೈಂಡ್' ಅನ್ನುತ್ತಾರೆ. ಭೂಮಿಗೆ 'ರೂಪು' ಕೊಡುತ್ತಿದ್ದಂಥ ಬೆಳೆ ಪದ್ಧತಿಗಳು ಹೋಗಿ ಈ ಏಕತ್ರ ಸಂಸ್ಕೃತಿ, ಏಕ ಬೆಳೆ ಪದ್ಧತಿ ಬಂದಿದ್ದಾದರೂ ಹೇಗೆ?

**ಅಧಿಕ ಇಳುವರಿ ಬೀಜಗಳು**

ಸ್ವಾತಂತ್ರ್ಯ ನಂತರದಲ್ಲಿ ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಕೃಷಿಯನ್ನು ಪರಿಗಣಿಸಿಯೇ ಇರಲಿಲ್ಲ. ನಂತರದ ಪಂಚವಾರ್ಷಿಕ ಯೋಜನೆಯಲ್ಲಿ ಕೃಷಿಯಲ್ಲಿ 'ಉತ್ಪಾದನೆ ಹೆಚ್ಚಿಸುವುದು ಹೇಗೆ? ಎಂಬ ವಿಚಾರ ಬಂತು. ನಮ್ಮ ದೇಶದ ಜನ ಬಡತನದಿಂದ, ಹಸಿವಿನಿಂದ ನರಳುತ್ತಿದ್ದಾರೆ. ಇವರಿಗೆಲ್ಲಾ ಪೂರೈಸುವಷ್ಟು ಆಹಾರ ನಮ್ಮಲ್ಲಿಲ್ಲ, ನಮ್ಮ ಆಹಾರ ಉತ್ಪಾದನೆಯನ್ನು ಹೆಚ್ಚು ಮಾಡಬೇಕು ಎನ್ನುವ ವಿಚಾರ ಬಂತು. ಆಗ ಕಂಡು ಬಂದದ್ದೆಂದರೆ, ನಮ್ಮ ಮಹಿಳೆಯರು ಕಾಪಾಡಿಕೊಂಡು ಬಳಸುತ್ತಿರುವ ಏಕದಳ, ದ್ವಿದಳ, ಎಣ್ಣೆಕಾಳು, ಸಾಂಬಾರು ಪದಾರ್ಥಗಳ ಬೀಜಗಳು ಇಳುವರಿ ಕೊಡುವುದಿಲ್ಲ. ನಾವು ಅಧಿಕ ಇಳುವರಿ ಕೊಡುವ ಬೀಜಗಳನ್ನು ಅಭಿವೃದ್ಧಿ ಪಡಿಸಬೇಕು. ಹೆಚ್ಚು ನೀರು, ರಸಗೊಬ್ಬರ ಬಳಸಿ ಅಧಿಕ ಉತ್ಪಾದನೆ ಮಾಡಬೇಕು ಎಂದು ತೀರ್ಮಾನಿಸಲಾಯಿತು. ಆದರೆ ಅಂತಹ ಬೀಜಗಳನ್ನು ಅಭಿವೃದ್ಧಿ ಪಡಿಸುವ ತಂತ್ರಜ್ಞಾನ ನಮ್ಮ ವಿಜ್ಞಾನಿಗಳಲ್ಲಿ ಇರಲಿಲ್ಲ. ಆಗ ಅಮೇರಿಕಾದ 'ರಾಕ್ ಫೆಲ್ಲರ್

ಫೌಂಡೇಶನ್'ನಿಂದ ವಿಜ್ಞಾನಿಗಳನ್ನು ಕರೆಸಿಕೊಂಡು 60ರ ದಶಕದಲ್ಲಿ ನಮ್ಮ ಸರ್ಕಾರ ಅಧಿಕ ಉತ್ಪಾದನೆ ಮಾಡುವ ಬೀಜಗಳನ್ನು ಅಭಿವೃದ್ಧಿಪಡಿಸಲು ಪ್ರಾರಂಬಿಸಿತು. ಹೀಗೆ ಕೃಷಿ ಪರಂಪರೆ ಪಲ್ಲಟದ ಮೂಲದಲ್ಲೇ ಅಮೆರಿಕ ಪ್ರವೇಶವಾಯಿತು. ಇನ್ನು ಇಡೀ ದೇಶದ ರೈತರಿಗೆ ಈ ಬೀಜಗಳ ಹಂಚಿಕೆಯಾಗಬೇಕು. ಅದಕ್ಕಾಗಿ ಸಾರ್ವಜನಿಕ ವಲಯದ ಬೀಜ ನಿಗಮಗಳನ್ನು ಸ್ಥಾಪನೆ ಮಾಡಬೇಕು. ಇದಕ್ಕೂ ನಮ್ಮಲ್ಲಿ ಹಣವಿಲ್ಲ. ಕೊನೆಗೆ ವಿಶ್ವ ಬ್ಯಾಂಕಿನ ಹಣ ಸಹಾಯದಿಂದ ರಾಷ್ಟ್ರೀಯ ಬೀಜ ನಿಗಮ ಸ್ಥಾಪನೆ ಮಾಡಬೇಕಾಯಿತು.

ಈ 'ಹಸಿರು ಕ್ರಾಂತಿ' ನಮ್ಮ ಹೊಲಗಳನ್ನು ಪ್ರವೇಶಿಸಿತು. ಹತ್ತಾರು ಬೀಜಗಳು ಹಾಕುತ್ತಿದ್ದ ಹೊಲಕ್ಕೆ ಒಂದೇ ಬೀಜ ಹಾಕಬೇಕು ಅಂದಾಗ ಮಹಿಳೆಯರು ತಲ್ಲಣಗೊಂಡರು. ಅವರು ಬಿತ್ತುತ್ತಿದ್ದ ಬೀಜ, ಅವರ ತಿಳಿವಳಿಕೆ ಎಲ್ಲಾ ಒಂದೇ ಬೀಸಿಗೆ ತತ್ತರಿಸಿಹೋಗಿತ್ತು. ಅದಾದರೂ ಎಂತಹ ತಿಳುವಳಿಕೆ! ಇವತ್ತು ಮಳೆ ಬಿದ್ದಿದೆ, ಬಿತ್ತನೆ ಪ್ರಾರಂಭಿಸಬೇಕು ಅಂದಾಗ, ಬೀಜ ಹಾಕುವಷ್ಟು ಆಳ ಮಣ್ಣು ತೊಯ್ದಿದೆಯಾ ನೋಡಬೇಕು, ಯಾವ ಬೀಜ ಎಷ್ಟು ಆಳದಲ್ಲಿ ಹಾಕಬೇಕು, ಕೂರಿಗೆ ಬಿತ್ತನೆಯಲ್ಲಿ ಸೆಡ್ಡೆಯಲ್ಲಿ ಬೀಜ ಹಾಕುವಾಗ ಪಕ್ಕದಲ್ಲಿ ಇರುವವಳಿಗೆ ಏನಾದರೂ ಸೋರುಗೈ ಆಯ್ತಾ ಅನ್ನೋದನ್ನ ನೋಡ್ತಾ ಇರಬೇಕು. ಮುಂದೆ ಸಾಲು ಹೊಡೆಯುತ್ತಾ ಇರುವವನಿಗೆ ಮನಸ್ಸು ತಪ್ಪಿತಾ ಗಮನವಿಡಬೇಕು. ಇನ್ನು ಬಿತ್ತನೆ ಮಾಡುತ್ತಿರುವಂತೆ ಮೋಡ ಹಾಕಿಕೊಂಡರೆ ನಾಳೆಗೆ ಕಪ್ಪು ಭೂಮಿಯಲ್ಲಿ ಬಿತ್ತನೆ ಮಾಡಲು ಆಗುವುದಿಲ್ಲ, ಬೀಸುಗಾಲು ಹಾಕಿ ಇವತ್ತೇ ಬಿತ್ತನೆ ಮುಗಿಸಬೇಕು. ಇನ್ನು ಯಾವ ಬೀಜವನ್ನ ಯಾವ ಸಾಲಲ್ಲಿ ಹಾಕಬೇಕು, ಬೀಜದಿಂದ ಬೀಜಕ್ಕೆ ಎಷ್ಟು ಅಂತರ ಬರಬೇಕು ಅನ್ನುವುದಕ್ಕೆಲ್ಲಾ ಗಮನ ಕೊಡಬೇಕು. ನಮ್ಮ ಮಹಿಳೆಯರ ತಂತ್ರಗಾರಿಕೆ ಎಷ್ಟು ಅದ್ಭುತ ಎಂದರೆ, ಒಂದು ಹೆಜ್ಜೆ ಇಟ್ಟು ಕೈ ಚಿಮ್ಮಿದರೆ ಆ ಬೀಜಗಳು ಕರೆಕ್ಟಾಗಿ ಚೋಟಿಗೊಂದು, ಗೇಣಿಗೊಂದೇ ಬೀಳಬೇಕು.

ಹೀಗೆ ನಮ್ಮ ಮಹಿಳೆಯರು ಕರಗತ ಮಾಡಿಕೊಂಡಿದ್ದ ನೂರಾರು ತಂತ್ರಗಾರಿಕೆಗಳನ್ನ ಹಸಿರು ಕ್ರಾಂತಿ ಮೂಲೆಗುಂಪು ಮಾಡಿತು. ಆದರೂ ಆ ಸಂದರ್ಭದಲ್ಲಿ ಹೈಬ್ರಿಡ್ ಬೀಜಗಳ ಹಾವಳಿಯಾಗಲಿಲ್ಲ. ಆಗ ಬಂದದ್ದೆಲ್ಲಾ ಬಹುಪಾಲು ಅಧಿಕ ಇಳುವರಿ ಬೀಜಗಳೇ. ಅದನ್ನು 'ಓಪಿ' ಅಥವಾ 'ಮುಕ್ತ ಪರಾಗಸ್ಪರ್ಶಿ' ಬೀಜ ಅನ್ನುತ್ತಾರೆ. ಈ ಬೀಜಗಳನ್ನು ರೈತರು ತಾವೇ ಎತ್ತಿಟ್ಟುಕೊಂಡು ಮತ್ತೆ ಹಾಕಬಹುದಾಗಿತ್ತು. ಮಂಡ್ಯದಲ್ಲಿ ಬೆಳೆಯುತ್ತಿರುವ ಭತ್ತ, ರಾಗಿ ಎಲ್ಲಾ ಅಧಿಕ ಇಳುವರಿ ಬೀಜಗಳೇ. ಅರವತ್ತರ ದಶಕದಲ್ಲಿ ಪ್ರಾರಂಭವಾದ ಈ ಅಧಿಕ ಇಳುವರಿ ಬೀಜಗಳನ್ನು ಮುಂದೆ ನಮ್ಮ ವಿಶ್ವವಿದ್ಯಾಲಯಗಳು ಅಭಿವೃದ್ಧಿಪಡಿಸಿ ರೈತರಿಗೆ ಕೊಡುತ್ತಿದ್ದವು. ಬೀಜನಿಗಮದಿಂದಲೇ ಬೀಜ ತೆಗೆದುಕೊಳ್ಳಬೇಕು ಎಂದು ಶರತ್ತು ಹಾಕಿದರೂ ರೈತರು ತಾವೇ ಎತ್ತಿಟ್ಟುಕೊಂಡು ಹಾಕುತ್ತಿದ್ದರು. ಹೈಬ್ರಿಡ್

ಬೀಜಗಳ ಹಾವಳಿ ಆಗಿನ್ನೂ ಪ್ರಾರಂಭವಾಗಿರಲಿಲ್ಲ.

**ಜಾಗತೀಕರಣ– ಕಾರ್ಪೊರೇಟ್ ಪ್ರವೇಶ**

ಆದರೆ ಯಾವಾಗ ನಮ್ಮ ದೇಶ ಜಾಗತೀಕರಣಕ್ಕೆ ತೆರೆದುಕೊಂಡಿತೋ ಆಗ ಹೈಬ್ರಿಡ್ ಬೀಜಗಳು ನಮ್ಮ ಕೃಷಿಯನ್ನು ಆಕ್ರಮಿಸಿಕೊಳ್ಳತೊಡಗಿದವು. ಕ್ರಾಸ್ ಮಾಡಿದ ಹೈಬ್ರಿಡ್ ಬೀಜಗಳಲ್ಲಿ ತಂದೆ ತಾಯಿ(ಪೇರೆಂಟಲ್ ಲೈನ್) ಬೀಜಗಳನ್ನು ಬ್ರೀಡರ್ ತಾನೇ ಇಟ್ಟುಕೊಂಡಿರುತ್ತಾನೆ. ರೈತರೇನಾದರೂ ತಾವು ತಂದು ಹಾಕಿದ ಬೀಜವನ್ನು ಮುಂದಿನ ಬಿತ್ತನೆಗೆ ಹಾಕಿಬಿಟ್ಟರೆ ಆ ಹೊಲ ತಂದೆ ತಾಯಿ ಇಲ್ಲದ ಅನಾಥನಂತೆ ಕಾಣುತ್ತದೆ. ಗಿಡಗಳಲ್ಲಿ ಒಂದು ಎತ್ತರ, ಒಂದು ಕುಳ್ಳು, ಒಂದು ಚೀಕು, ಒಂದು ದಪ್ಪ ಹೀಗೆ.. ಪುಟ್ಟೀರಮ್ಮ ಹೇಳುವ ಹೊಲದ 'ರೂಪು' ಎನ್ನುವುದಕ್ಕೆ ತದ್ವಿರುದ್ಧವಾಗಿ ನಮ್ಮ ಹೊಲಗಳು ಕಾಣಿಸುತ್ತವೆ. 1990ರ ದಶಕದಲ್ಲಿ ನಾವು ಯಾವಾಗ ವಿಶ್ವ ಮಾರಾಟ ಸಂಸ್ಥೆ (ಡಬ್ಲ್ಯುಟಿಒ) ಯನ್ನು ಪ್ರವೇಶ ಮಾಡಿದೆವೋ ಆಗ ನಮ್ಮ ಕೃಷಿ ಸಂಪೂರ್ಣ ಮೊಗಚಿ ಹಾಕಿಕೊಂಡಿತು. ಕೃಷಿ ರಂಗಕ್ಕೆ ಬೃಹತ್ ಬಹುರಾಷ್ಟ್ರೀಯ ಕಂಪನಿಗಳ ಪ್ರವೇಶವಾದದ್ದು ಆಗಲೇ. 1990ರ ದಶಕದಲ್ಲಿ ನಮ್ಮ ದೇಶ ಜಾಗತೀಕರಣಕ್ಕೆ ತೆರೆದುಕೊಂಡಿತಾದರೂ ಇದಕ್ಕೆ ಮೊದಲೇ 1984ರಿಂದಲೇ 'ಉರುಗ್ವೆ ರೌಂಡ್' ಎಂಬ ಹೆಸರಿನಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ದೇಶ ದೇಶಗಳ ನಡುವೆ ಮಾಡಿಕೊಳ್ಳಬಹುದಾದ ಆಮದು ರಫ್ತು ಕುರಿತು ಮಾತುಕತೆಗಳು ನಡೆಯುತ್ತಿದ್ದವು. 1990ರ ದಶಕದ ಪ್ರಾರಂಭದಲ್ಲಿ ನಮ್ಮ ದೇಶ ಡಬ್ಲ್ಯು ಟಿಒ ಪ್ರವೇಶ ಮಾಡಿತು. 1994ರಲ್ಲಿ ಜಿಎಟಿಟಿ(ಗ್ಯಾಟ್) ಒಪ್ಪಂದಕ್ಕೆ ನಮ್ಮ ದೇಶ ಸಹಿ ಮಾಡಿತು. 'ಗ್ಯಾಟ್' ಅಂದರೆ ಮಾರಾಟ ಮತ್ತು ತೆರಿಗೆ ಮೇಲಿನ ಸಾಮಾನ್ಯ ಒಪ್ಪಂದಗಳು. ಪ್ರಪಂಚದ ವಿವಿಧ ದೇಶಗಳು ತಾವು ಹೆಚ್ಚಾಗಿ ಉತ್ಪಾದಿಸುವ ಪದಾರ್ಥಗಳನ್ನು ಇತರ ದೇಶಗಳಿಗೆ ರಫ್ತು ಮಾಡುವುದು ಮತ್ತು ತಮಗೆ ಅಗತ್ಯವಾದ ಪದಾರ್ಥಗಳನ್ನು ಇತರ ದೇಶಗಳಿಂದ ಆಮದು ಮಾಡಿಕೊಳ್ಳುವ ಸದುದ್ದೇಶ ಇಲ್ಲಿದೆ ಎನ್ನಲಾಯಿತು. ಆಗಲೇ ಕೃಷಿಯ ಮೇಲಿನ ಒಪ್ಪಂದಗಳ(ಅಗ್ರಿಮೆಂಟ್ ಆನ್ ಅಗ್ರಿಕಲ್ಚರ್) ಅಡಿಯಲ್ಲಿ ಭಾರತ ದೇಶವು ಅನೇಕ ದೇಶಗಳ ಜೊತೆ ಏಕಪಕ್ಷೀಯ, ದ್ವಿಪಕ್ಷೀಯ, ಬಹುಪಕ್ಷೀಯ ಒಪ್ಪಂದಗಳಿಗೆ ಸಹಿ ಹಾಕಲು ಪ್ರಾರಂಭಿಸಿತು.

**ಒಪ್ಪಂದ, ಕಾನೂನುಗಳನ್ನು ಪ್ರಭಾವಿಸುವ ಕಂಪನಿಗಳು**

ಪ್ರಪಂಚದ ಎಲ್ಲ ದೇಶಗಳು ಇವತ್ತು ನಡೆಯುತ್ತಿರುವುದೇ ದೈತ್ಯ ಕಂಪನಿಗಳ ಮರ್ಜಿಯಲ್ಲಿ ಎನ್ನುವುದು ಎಲ್ಲರಿಗೂ ತಿಳಿದ ವಿಚಾರ. ಈ ಕಂಪನಿಗಳ ಅಗಾಧತೆ ಹೇಗಿದೆಯೆಂದರೆ, ಪ್ರಪಂಚದ ಇಡೀ ಕೃಷಿ ಉದ್ಯಮವನ್ನು ಕೇವಲ ಹತ್ತು ಕಂಪನಿಗಳು ಆಳುತ್ತಿವೆ. ಕಾರ್ಗಿಲ್, ಮೊನ್ಸಾಂಟೊ(ಈಗ ಬಾಯರ್ ಜೊತೆ ವಿಲೀನ ಆಗಿದೆ), ಡ್ಯುಪ್ಯಾಂಟ್, ಸಿಂಜೆಂಟಾ, ಡೌ ಇಂತಹ ಕಂಪನಿಗಳ ಬಂಡವಾಳ ನೂರು

ಶತಕೋಟಿ(ಬಿಲಿಯನ್) ಡಾಲರ್ ಲೆಕ್ಕದಲ್ಲಿ ಬರುತ್ತದೆ. ನಮ್ಮ ಮಹಿಳೆಯರ ಬಂಡವಾಳ 5–10 ಸಾವಿರದಲ್ಲಿ ಮುಗಿದು ಹೋಗುವಾಗ ಇಂತಹ ತಿಮಿಂಗಿಲಗಳ ಮುಂದೆ ನಮ್ಮ ರೈತರು, ಅದರಲ್ಲೂ ಮಹಿಳೆಯರು ನಿಲ್ಲುವುದಾದರೂ ಸಾಧ್ಯವೇ? ಡಬ್ಲ್ಯುಟಿಒ ಸದಸ್ಯ ದೇಶಗಳು ಮಾಡಿಕೊಳ್ಳುವ ಎಲ್ಲಾ ಒಪ್ಪಂದಗಳನ್ನು ಈ ದೈತ್ಯ ಕಂಪನಿಗಳು ಪ್ರಭಾವಿಸುತ್ತವೆ. ಅಷ್ಟೇ ಅಲ್ಲ, ಆಯಾ ದೇಶಗಳ ಕಾಯಿದೆ, ಕಾನೂನುಗಳನ್ನು ಅವು ಪ್ರಭಾವಿಸುತ್ತವೆ. ಅಮೆರಿಕದ ದೈತ್ಯ ಅಗ್ರಿಬ್ಯುಸಿನೆಸ್ ಕಂಪನಿ 'ಮೊನ್ಸಂಟೋ' ನಮ್ಮ ದೇಶದ ಮೇಲೆ ಹೀಗೊಂದು ಶರತ್ತು ಹಾಕಿತು. 'ನೋಡಿ, ನಿಮ್ಮ ದೇಶದ ಮಹಿಳೆಯರಿಗೆ ಬೀಜಗಳನ್ನು ಹಿಡಿಯುವ, ಸಂರಕ್ಷಿಸಿಟ್ಟುಕೊಳ್ಳುವ, ವಿನಿಮಯ ಮಾಡಿಕೊಳ್ಳುವ, ಮಾರಾಟ ಮಾಡುವ ಒಂದು ಚಾಳಿ ಇದೆ. ನೀವು ಅವರಿಗೆ ಆ ಚಾಳಿ ಬಿಡಿಸಬೇಕು. ಯಾರೂ ನಿಮ್ಮ ದೇಶದಲ್ಲಿ ಬೀಜಗಳನ್ನು ಹಿಡಿಬಾರದು, ಸಂರಕ್ಷಣೆ, ವಿನಿಮಯ ಮಾಡಬಾರದು. ಇದಕ್ಕೆ ತಕ್ಕ ಒಂದು ಕಾನೂನು ತೆಗೆದುಕೊಂಡು ಬನ್ನಿ' ಎಂದು ಭಾರತಕ್ಕೆ ಆಜ್ಞಾಪಿಸಿತು. ಯಾರೂ ಊಹಿಸಲಾರದ ಇಂತಹ ಎಷ್ಟೋ ಶರತ್ತುಗಳನ್ನು ಬಲಾಢ್ಯ ದೇಶಗಳು, ಕಂಪನಿಗಳು ನಮ್ಮಂತಹ ಬಡ ದೇಶಗಳ ಮೇಲೆ ಹೇರುತ್ತಾ ಬಂದವು. ಇವರ ಮುಷ್ಟಿಯಲ್ಲಿ ಸಿಕ್ಕಿಕೊಂಡ ನಮ್ಮ ಸರ್ಕಾರ 2004ರಲ್ಲಿ ಒಂದು ಹೊಸ ಬೀಜ ಕಾಯಿದೆಯನ್ನು ತಂದಿತು. ಆ ಕಾಯಿದೆಯಲ್ಲಿ ರೈತರು ಬೀಜಗಳನ್ನು ಸಂರಕ್ಷಿಸುವ, ವಿನಿಮಯ ಮಾಡುವ, ಮಾರಾಟ ಮಾಡುವ, ಮರುಬಿತ್ತನೆ ಮಾಡುವ ಹಾಗಿಲ್ಲ' ಎಂದು ಸ್ಪಷ್ಟವಾಗಿ ಹೇಳಲಾಗಿತ್ತು. ಆನರ ಉಗ್ರ ಹೋರಾಟದಿಂದ ಆ ಕಾಯಿದೆಯನ್ನು ಅಲ್ಲಿಗೇ ನಿಲ್ಲಿಸಬೇಕಾಯಿತು. ಅದು ಮತ್ತೆ 2011ರಲ್ಲಿ ತಲೆಯೆತ್ತಿತು. ಆಗಲೂ ಹೀಗೆಯೇ ನಿಂತಿತು. ಮತ್ತೆ 2019ರಲ್ಲಿ ಮತ್ತಷ್ಟು ಹೊಸ ರೂಪ ಪಡೆದು ಬಂದದ್ದು ಇನ್ನೂ ತೂಗುಗತ್ತಿಯಾಗಿ ತೂಗುತ್ತಲೇ ಇದೆ.

ಹೊಸ ಬೀಜ ಕಾಯಿದೆ ಜಾರಿಗೆ ಬರದಿದ್ದರೂ ಕಾಲಕಾಲಕ್ಕೆ ಮಾಡಿಕೊಂಡ ಒಪ್ಪಂದಗಳು ಮತ್ತು ಜಾರಿಗೆ ತಂದ ಕಾನೂನುಗಳಿಂದಾಗಿ ಕಂಪನಿಗಳಿಗೆ ಬೀಜ ಕ್ಷೇತ್ರದ ಮೇಲೆ ಆಕ್ರಮಣ ಮಾಡಲು ಅವಕಾಶವಾಯಿತು. ಹೀಗಾಗಿ ಹಸಿರು ಕ್ರಾಂತಿಯ ನಂತರವೂ ನಮ್ಮ ಮಹಿಳೆಯರ ಕೈಯಲ್ಲೇ ಇದ್ದ 80%ರಷ್ಟು ಬೀಜ ಜಾಗತೀಕರಣಕ್ಕೆ ತೆರೆದುಕೊಂಡ ಮೇಲೆ ಸರ್ವನಾಶವಾದವು. ಮೊನ್ಸಾಂಟೊ ಕಂಪನಿ ಕುಲಾಂತರಿ ಬಿಟಿ ಹತ್ತಿ ಬೀಜ ಬಿಡುಗಡೆ ಮಾಡಿ ಪ್ರಪಂಚದಲ್ಲಿ ಬಹುತೇಕ ನೂರಕ್ಕೆ ನೂರು ಭಾಗ ಹತ್ತಿ ಬೀಜದಲ್ಲಿ ಏಕಸ್ವಾಮ್ಯ ಸ್ಥಾಪಿಸಿತು. ಅದರಿಂದ ನಮ್ಮಲ್ಲಿದ್ದ ಹತ್ತಾರು ಹತ್ತಿ ತಳಿಗಳು ಹೇಳ ಹೆಸರಿಲ್ಲದಂತೆ ಹೋಗಿಬಿಟ್ಟವು. ಹತ್ತಿಯನ್ನು ಸರ್ವನಾಶ ಮಾಡಿದ ಮೇಲೆ ಬದನೆಯನ್ನು ನಾಶಮಾಡಲು ಬಂದರು. ಯಾವ ದೇಶಕ್ಕೆ ಯಾವ ಬೆಳೆ ಮೂಲ ಬೆಳೆಯಾಗಿರುತ್ತೋ ಅದನ್ನು ಕುಲಾಂತರಿಗೊಳಿಸುವ ಹುನ್ನಾರ ಈ ಕಂಪನಿಗಳದ್ದು. ಬದನೆ ನಮ್ಮ ದೇಶದ ಬೆಳೆ. ಅದನ್ನು ಕುಲಾಂತರಿಗೊಳಿಸಿ ನಮ್ಮ ದೇಶದ ಬದನೆ ತಳಿ

ವೈವಿಧ್ಯತೆಯನ್ನು ನಾಶಮಾಡುವುದು ಮೊನ್ಸಂಟೋ ಕಂಪನಿಯ ಹುನ್ನಾರವಾಗಿತ್ತು. ಅದನ್ನು ಕೂಡ ಹೋರಾಟದ ಮೂಲಕ ನಿಲ್ಲಿಸಲಾಯಿತು.

**ಜೀವದ ವಿರುದ್ಧ ಸಮರ**

ನಮ್ಮ ಮಹಿಳೆಯರು ಯಾವ ಪರಿಸರವನ್ನು, ಜೀವವನ್ನು ಕಾಪಾಡುತ್ತಾ ಬಂದಿದ್ದಾರೋ ಅದರ ವಿರುದ್ಧ ಸಮರ ಸಾರುತ್ತದೆ ಈ ಕಾರ್ಪೊರೆಟ್ ಕೈಗಾರಿಕಾ ಕೃಷಿ. 'ಸಮರ' ಅನ್ನುವುದನ್ನು ನಾನು ಇಲ್ಲಿ ನೇರ ಅರ್ಥದಲ್ಲೇ ಹೇಳುತ್ತಿದ್ದೇನೆ. ಏಕೆಂದರೆ ಕೈಗಾರಿಕಾ ರಾಸಾಯನಿಕ ಕೃಷಿಯಲ್ಲಿ ಬಳಸುವಂತಹ ರಸಗೊಬ್ಬರಗಳು ಎರಡನೇ ಮಹಾಯುದ್ಧದ ಸಿಡಿಮದ್ದು ಕಾರ್ಖಾನೆಯಿಂದ ನಂತರ ಬಂದಂತಹದ್ದು. ನಾವು ಬಳಸುವ ವಿಷಕಾರೀ ಕೀಟ ನಾಶಕಗಳು ಹಿಟ್ಲರನ ಕಾಲದಲ್ಲಿ ವಿಷಾನಿಲ ಕೋಣೆಗಳಲ್ಲಿ ಜನರನ್ನ ತಳ್ಳಿ ಸಾಯಿಸುತ್ತಿದ್ದರಲ್ಲ, ಆ ವಿಷದಿಂದ ಬಂದಂಥವು. ಇನ್ನು ಇಡೀ ಕರ್ನಾಟಕದ ಕಳೆ ವೈವಿಧ್ಯತೆಯನ್ನು ಸರ್ವನಾಶ ಮಾಡುತ್ತಿರುವಂತಹ ಕಳೆ ನಾಶಕ 'ರೌಂಡಪ್' ಅನ್ನುವುದು ವಿಯಟ್ನಾಮ್ ಯುದ್ಧದ ಕೂಸು. ವಿಯಟ್ನಾಂ ಯುದ್ಧದ ಸಮಯದಲ್ಲಿ ಆ ಯೋಧರು ಕಾಡಿನಲ್ಲಿ ಅಡಗಿಕೊಂಡು ಯುದ್ಧ ತಂತ್ರ ರೂಪಿಸುತ್ತಿದ್ದರು. ಅವರನ್ನು ಅನಾವರಣ ಮಾಡಲು ಆ ಕಾಡಿನ ಹಸಿರನ್ನು ನಾಶ ಮಾಡಲು ಅಮೆರಿಕದ ಸೈನಿಕರು 'ಏಜೆಂಟ್ ಆರೆಂಜ್' ಎನ್ನುವ ಕಾರ್ಕೋಟಕ ವಿಷ ಬಳಸುತ್ತಿದ್ದರು. ಆ ಏಜೆಂಟ್ ಆರೆಂಜ್‌ನ ಮೊಮ್ಮೊಗುವೇ ಈ ರೌಂಡಪ್. ಈ ದೃಷ್ಟಿಯಿಂದ ಕೈಗಾರಿಕಾ ಕೃಷಿ ನಮ್ಮ ಜೀವ ಮತ್ತು ಪರಿಸರದ ಮೇಲೆ, ನಮ್ಮ ಮಹಿಳೆಯರ ಮೇಲೆ ಸಾರಿರುವ ಸಮರವೇ ಆಗಿದೆ.

ಹೀಗೆ ಕೃಷಿಯನ್ನು ನಂಬಿ ಅದರ ಮೇಲೆ ಹಿಡಿತ ಇಟ್ಟುಕೊಂಡಿದ್ದಂಥ ಮಹಿಳೆಯರನ್ನ ಕಳೆದ 50–60 ವರ್ಷಗಳಲ್ಲಿ ಸಂಪೂರ್ಣ ಹೊರ ತಳ್ಳಿದ್ದಾಯಿತು. ಈ ಕಂಪನಿಗಳ ಹಾವಳಿ ನಮ್ಮ ಕೃಷಿಯನ್ನ ಕೃಷಿಯಾಗಿ ಉಳಿಯಲು ಬಿಡುತ್ತಿಲ್ಲ. ಮಂಡ್ಯ ಮತ್ತು ದಕ್ಷಿಣ ಕರ್ನಾಟಕದ ಕೆಲ ಭಾಗಗಳಲ್ಲಿ ಹೈಬ್ರಿಡ್ ಬೀಜಗಳ ಹಾವಳಿ ಸ್ವಲ್ಪ ಕಡಿಮೆ ಇರಬಹುದು(ತರಕಾರಿಗಳನ್ನು ಹೊರತುಪಡಿಸಿ). ಉತ್ತರ ಕರ್ನಾಟಕದ ರೈತರು ರೈತರು ಬಿತ್ತುವ ಪ್ರತಿ ಬೀಜ ಮೊನ್ಸಾಂಟೋ(ಬಾಯರ್), ಸಿಜೆಂಟಾ, ಅಡ್ವಾಂಟ, ಪಯೋನಿಯರ್, ಪಿನಾಕಲ್ ಇಂತಹ ಕಂಪನಿಗಳ ಬೀಜಗಳೇ. ಹೇಳಬೇಕೆಂದರೆ, ನಮ್ಮಲ್ಲಿ ಮೊದಲು ರೈತರ ಆತ್ಮಹತ್ಯೆ ಎನ್ನುವುದು ಇರಲಿಲ್ಲ. ಅಲ್ಲೊಂದು–ಇಲ್ಲೊಂದು ಆತ್ಮಹತ್ಯೆ ಆಗುತ್ತಿತ್ತು, ಆದರೆ ಬೆಳಕಿಗೆ ಬರತಿರಲಿಲ್ಲ. ರೈತರ ಆತ್ಮಹತ್ಯೆ ಎನ್ನುವ ಪರಿಕಲ್ಪನೆ ಬಂದಿದ್ದೇ 90ರ ದಶಕದ ನಂತರದಲ್ಲಿ. ಯಾವಾಗ ಕಂಪನಿಗಳ ಹಿಡಿತಕ್ಕೆ ನಮ್ಮ ಕೃಷಿ ಸಿಕ್ಕಿಕೊಂಡಿತೋ ಆಗಲೇ ಆತ್ಮಹತ್ಯೆಗಳು ಪ್ರಾರಂಭವಾದವು. ಮಹಾರಾಷ್ಟ್ರದಲ್ಲಿ ಅತಿ ಹೆಚ್ಚು ಆತ್ಮಹತ್ಯೆ ಮಾಡಿಕೊಂಡವರು ಬಿಟಿ ಹತ್ತಿ ಬೆಳೆದ ರೈತರೇ.

ಬೆಂಗಳೂರಿನಲ್ಲಿ ಕಾರ್ಗಿಲ್ ಕಂಪನಿ ಮೇಲೆ ಪ್ರೊ. ನಂಜುಂಡಸ್ವಾಮಿಯವರ ನೇತೃತ್ವದಲ್ಲಿ ರೈತ ಸಂಘಟನೆ ದಾಳಿ ಮಾಡಿದಾಗ ಬಹಳ ದೊಡ್ಡ ಸುದ್ದಿಯಾಯಿತು. ಆದರೆ ನಮ್ಮ ಇಂತಹ ಹೋರಾಟಗಳು ಸಾಂಕೇತಿಕ ಹಂತಕ್ಕೇ ಸೀಮಿತಗೊಂಡವು. ಕೆಲವೇ ವರ್ಷದಲ್ಲಿ ಕಂಪನಿ ಬೀಜಗಳು ನಮ್ಮ ಕೃಷಿಯನ್ನು ಇಡಿಯಾಗಿ ಆಕ್ರಮಿಸುವ ಸ್ಥಿತಿ ಬಂದಿತು. ಇಲ್ಲೆಲ್ಲಾ ಅತೀ ಉತ್ಪಾದನೆಯದೇ ಜಾದೂ. ಉತ್ಪಾದನೆ ಬೇಕು. ಆದರೆ ಅದಕ್ಕೆ ತಕ್ಕ ಲಾಭ ಸಿಕ್ಕಾಗ ಮಾತ್ರ ಅದಕ್ಕೆ ಕಿಮ್ಮತ್ತು. ತೋಟಗಾರಿಕೆ ಸಂಶೋಧನಾ ಕೇಂದ್ರದವರು 'ಆರ್ಕ' ಅನ್ನುವ ಟೊಮಾಟೊ ಬೀಜ ಬಿಡುಗಡೆ ಮಾಡಿದರು. ಅದು ಎಕರೆಗೆ 40 ಟನ್ ಇಳುವರಿ ಕೊಟ್ಟಿತು. ರೈತರಿಗೆ ಸಿಕ್ಕಿದ್ದು ಕೆಜಿಗೆ 4 ಪೈಸೆ. ಇಡೀ ದೇಶಕ್ಕೆ ಭತ್ತ, ಗೋಧಿ ಬೆಳೆದು ಉಣಿಸುವ ಹಸಿರು ಕ್ರಾಂತಿಯ ತೊಟ್ಟಿಲು ಪಂಜಾಬ್ ರಾಜ್ಯದ ಸ್ಥಿತಿ ಏನಾಗಿದೆ? ಪಂಚನದಿಗಳ ಸ್ವರ್ಗವಾಗಿದ್ದ ಪಂಜಾಬಿನಿಂದ ಈಗ ಪ್ರತಿನಿತ್ಯ ಕ್ಯಾನ್ಸರ್ ರೈಲು ದೆಹಲಿಗೆ ಹೋಗುತ್ತಿದೆ. ಮನೆಮನೆಗೂ ಟ್ರಾಕ್ಟರ್ ಇಟ್ಟುಕೊಂಡಿರುವ ರೈತರು ಸಾಲದಲ್ಲಿ ಮುಳುಗಿದ್ದಾರೆ. ಆತ್ಮಹತ್ಯೆ ನಿತ್ಯದ ಆಗುಹೋಗಿನ ಭಾಗವಾಗಿದೆ. ಅತಿ ಉತ್ಪಾದನೆ ಎನ್ನುವುದು ವರಕ್ಕಿಂತ ಶಾಪವೇ ಸರಿ. ಒಂದೇ ಬೆಳೆಯನ್ನು ಏಕಬೆಳೆಯಾಗಿ ಕೈಗಾರಿಕಾ ಕೃಷಿಯಲ್ಲಿ ಬೆಳೆದ ದೇಶಗಳ ಪರಿಸ್ಥಿತಿ ಇದೇ. ಇತ್ತೀಚೆಗೆ ಅಮೆರಿಕದ ಅಧ್ಯಕ್ಷರು ಭಾರತಕ್ಕೆ ಬಂದಾಗ ಅವರು ಸ್ಪಷ್ಟವಾಗಿ ಇಟ್ಟುಕೊಂಡಿದ್ದ ಅಜೆಂಡಾ ಎಂದರೆ, ತಮ್ಮ ದೇಶದಲ್ಲಿ ಬೆಳೆದು ಪರ್ವತದೋಪಾದಿಯಲ್ಲಿ ರಾಶಿ ಬಿದ್ದಿರುವ ಮೆಕ್ಕೆ ಜೋಳ, ಸೋಯಾ ಅವರೆಗಳನ್ನು ಭಾರತಕ್ಕೆ ರಫ್ತು ಮಾಡಲು ಅಗತ್ಯವಾದ ಒಪ್ಪಂದಕ್ಕೆ ಸಹಿ ಮಾಡಿಸಿಕೊಳ್ಳುವುದು.

ಹೀಗಿದ್ದೂ ನಮ್ಮ ಮಹಿಳೆಯರು ನಮ್ಮ ಕೃಷಿಯನ್ನು ಕಂಪನಿಗಳ ಹಿಡಿತಕ್ಕೆ ಬಿಟ್ಟುಕೊಡದೆ ಸ್ವತಂತ್ರವಾಗಿ ಉಳಿಸಿಕೊಂಡು ಹೋಗಲು ಹೆಣಗಾಟ ನಡೆಸಿದ್ದಾರೆ. ಬೀಜ ಕಾಪಾಡುವುದನ್ನು, ಬಹು ಬೆಳೆ ಪದ್ಧತಿಯನ್ನು ಜೀವಂತವಾಗಿ ಉಳಿಸಿಕೊಂಡಿರುವ ಮಹಿಳೆಯರಲ್ಲಿ ಇವತ್ತಿಗೂ ಪ್ರತಿಯೊಂದು ಬೀಜಗಳೂ ಭದ್ರವಾಗಿವೆ. ಭದ್ರಮ್ಮನಂಥವರ, ಪುಟ್ಟೀರಮ್ಮನಂಥವರ ಸಂತತಿಗಳು ಅದನ್ನು ಇಂದಿಗೂ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ.

**ಆಸ್ತಿ ಹಕ್ಕು, ಸಮಾನ ಕೂಲಿ**

ಇನ್ನು ಮಹಿಳೆಯರ ಆಸ್ತಿಯ ವಿಷಯಕ್ಕೆ ಬಂದರೆ, 1956ರಲ್ಲಿ ಬಂದ ಆಸ್ತಿ ಹಕ್ಕಿನ ಕಾಯ್ದೆಗೆ 2004ರಲ್ಲಿ ತಿದ್ದುಪಡಿ ತಂದ ನಂತರ 17, 18 ಕೋಟಿ ಹೆಣ್ಣು ಮಕ್ಕಳಿಗೆ ಆಸ್ತಿ ಹಕ್ಕು ಸಿಕ್ಕಿತು. ಆದರೆ ಇವತ್ತಿಗೂ ಒಟ್ಟು ಕುಟುಂಬಗಳಲ್ಲಿ ಆಸ್ತಿ ಪಾಲಾಗಿ ಗಂಡನ ಹೆಸರಿಗೆ ಬಂದಿದ್ದರೆ ಮಾತ್ರ ಆ ಹೆಣ್ಣು ಮಕ್ಕಳಿಗೆ ಅವನ ನಂತರ ಆಸ್ತಿ ಹಕ್ಕು ಸಿಗುತ್ತದೆ. ಆದರೆ ಒಂಟಿಯಾಗಿ ಕುಟುಂಬಗಳನ್ನು ನಡೆಸಿಕೊಂಡು ಹೋಗುತ್ತಿರುವ ವಿಧವೆಯರಿಗೆ( ಅವರು ಆತ್ಮಹತ್ಯೆ ಮಾಡಿಕೊಂಡ ರೈತರ ವಿಧವೆಯರು ಮಾತ್ರವಲ್ಲ,

ಅವರು 2% ಇದ್ದರೆ, ಉಳಿದವರು 30% ಇದ್ದಾರೆ) ಆಸ್ತಿ ಹಕ್ಕು ಅನ್ನುವುದು ಕನಸಾಗಿದೆ.

ನಮ್ಮಲ್ಲಿ ಉದ್ಯೋಗ ಖಾತ್ರಿ ಬಿಟ್ಟರೆ ಬೇರೆ ಎಲ್ಲೂ ಮಹಿಳೆಯರಿಗೆ ಸಮಾನ ಕೂಲಿ ಅನ್ನುವುದಿಲ್ಲ. ವಿಪರ್ಯಾಸವೆಂದರೆ, ಉದ್ಯೋಗ ಖಾತ್ರಿ ಕಾಯಿದೆಯಡಿಯಲ್ಲಿ ನಮ್ಮ ಕೆಲಸದ ಹಕ್ಕನ್ನು ನಾವು ಹೋರಾಟ ಮಾಡಿ ಪಡೆಯಬೇಕಾಗಿದೆ.

**ಮಹಿಳೆಯರಿಗೆ ಭೂಮಿ ಗುತ್ತಿಗೆ?**

ಕೃಷಿ ಭೂಮಿಗಳು ಛಿದ್ರವಾಗುತ್ತಿವೆ, ತುಂಡು ಭೂಮಿಗಳು ಉತ್ಪಾದನಾಶೀಲವಾಗಿಲ್ಲ, ನೀವು ಭೂಮಿ ಬಿಟ್ಟು ಹೋಗಿ ಎಂದು ನಮ್ಮ ಸರ್ಕಾರಗಳು ಸಣ್ಣ ರೈತರಿಗೆ ಹೇಳುತ್ತಿವೆ. ಕೃಷಿ ಬಿಟ್ಟು ಮಹಿಳೆಯರು ಎಲ್ಲಿಗೆ ಹೋಗಬೇಕು? ಗಾರ್ಮೆಂಟ್ಸ್‌ಗಳಿಗೆ, ನಗರಗಳಲ್ಲಿ ಕಟ್ಟಡ ನಿರ್ಮಾಣ ಕೆಲಸಗಳಿಗೆ ಅಗ್ಗದ ಕೂಲಿಗೆ ತಮ್ಮ ಶ್ರಮವನ್ನು ಮಾರಿಕೊಳ್ಳಬೇಕಷ್ಟೆ. ಇಲ್ಲಿ ಇನ್ನೊಂದು ವಿಚಾರವೂ ಇದೆ. ಕರ್ನಾಟಕದಲ್ಲಿ 40 ಲಕ್ಷ ಎಕರೆ ಕೃಷಿ ಭೂಮಿಯನ್ನು ರೈತರು ಭೂಮಿ ಪಾಳು ಬಿಟ್ಟಿದ್ದಾರೆ ಎಂದು ಕೃಷಿ ಬೆಲೆ ಆಯೋಗದ ಒಂದು ಅಧ್ಯಯನ ಹೇಳುತ್ತದೆ. ಕೇವಲ ನೂರು ರೂಪಾಯಿಗೆ ದಿನವಿಡೀ ದುಡಿಯುವ ನಮ್ಮ ಮಹಿಳೆಯರಿಗೆ ಈ ಭೂಮಿಗಳನ್ನು ದೀರ್ಘ ಕಾಲಿಕ ಗುತ್ತಿಗೆಗೆ ಕೊಡುವಂತಹ ತೀರ್ಮಾನವನ್ನು ಸರ್ಕಾರ ಏಕೆ ತೆಗೆದುಕೊಳ್ಳಬಾರದು? ಅದನ್ನು ಮಹಿಳೆಯರು ವೈಯಕ್ತಿಕವಾಗಿಯೂ, ಗುಂಪು ಕೃಷಿಯಾಗಿಯೂ ಮಾಡುವ ಅವಕಾಶವನ್ನು ಏಕೆ ಒದಗಿಸಬಾರದು? ಇಂದು ರೈತರು ತಮ್ಮ ತಮ್ಮಲ್ಲೇ ಗುತ್ತಿಗೆಗೆ ಭೂಮಿ ಕೊಟ್ಟುಕೊಳ್ಳುತ್ತಾರೆಯೇ ಹೊರತು ಭೂ ರಹಿತರಿಗೆ, ಮಹಿಳೆಯರಿಗೆ ಕೊಡಲು ಒಪ್ಪುವುದಿಲ್ಲ. ಹೀಗಿರುವಾಗ 'ಕರ್ನಾಟಕ ಭೂ ಸುಧಾರಣಾ ಕಾಯಿದೆ'ಗೆ ಒಂದು ತಿದ್ದುಪಡಿ ತಂದು ಇದನ್ನು ಭೂ ರಹಿತ ಮಹಿಳೆಯರಿಗೆ, ತುಂಡು ಭೂಮಿ ಹೊಂದಿದ ಮಹಿಳೆಯರಿಗೆ ಗುತ್ತಿಗೆಗೆ ಕೊಡಲು ಕಾನೂನಿನ ಚೌಕಟ್ಟು ತರಬೇಕೆಂದು ನಾವು ಸರ್ಕಾರವನ್ನು ಕೇಳುತ್ತಲೇ ಇದ್ದೇವೆ. ಹೀಗಿರುವಾಗ ಕೇಂದ್ರ ಸರ್ಕಾರ ನೀತಿ ಆಯೋಗದ ಮೂಲಕ 'ಹೊಸ ಗುತ್ತಿಗೆ ಕಾಯಿದೆ–2016' ತಂದು ಕಾರ್ಪೊರೇಟ್ ಕಂಪನಿಗಳಿಗೆ ಭೂಮಿ ಗುತ್ತಿಗೆ ಕೊಡಲು ಹೊರಟಿದೆ!

ಇಂತಹ ವಿಷಮ ಸನ್ನಿವೇಶದಲ್ಲೇ ಕೆಲಸ ಮಾಡುತ್ತಾ, ನಾವು ನಮ್ಮ ಬೀಜವನ್ನು, ಕಳೆಯನ್ನು ನಮ್ಮ ಆಸ್ತಿಯಾಗಿ ಉಳಿಸಿಕೊಳ್ಳಬೇಕಾಗಿದೆ. ನೀವು ಒಕ್ಕೂಟದಿಂದ ಪ್ರತಿ ವರ್ಷ ಮಹಿಳೆಯರಿಗೆ ಬೀಜ ಕೊಡುವುದು ಉತ್ತಮ ಕಲ್ಪನೆ. ಒಂದು ಬೀಜ ನಮ್ಮ ಕೈಯಲ್ಲಿ ಇತ್ತೆಂದರೆ, ನಮ್ಮ ಚರಿತ್ರೆಯನ್ನು ಉಳಿಸಿಕೊಳ್ಳಲು ಸಾಧ್ಯ, ನಮ್ಮ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಸಾಧ್ಯ, ನಮ್ಮ ಕಲ್ಪನಾ ಶಕ್ತಿಯನ್ನು ಉಳಿಸಿಕೊಳ್ಳಲು ಸಾಧ್ಯ. ಪ್ರತಿಯೊಬ್ಬರೂ ಬೀಜ ಪಡೆದು ಪ್ರತಿ ಮನೆಯಲ್ಲಿ ಬಿತ್ತೋಣ. ಈ ಒಂದು ಬೀಜವೇ ನಮ್ಮನ್ನು ಸರ್ವನಾಶ ಮಾಡಲು ಹೊರಟಿರುವ ಬಹುರಾಷ್ಟ್ರೀಯ ಕಂಪನಿಗಳ ವಿರುದ್ಧ ಸಾರುವ ಸಮರವಾದೀತು. ನಮ್ಮ ಬೀಜವನ್ನು ಉಳಿಸಿಕೊಳ್ಳೋಣ. ಕಳೆಯನ್ನು ಉಳಿಸಿಕೊಳ್ಳೋಣ. ನಮಸ್ಕಾರ.

# ಮಹಿಳಾ ಬದುಕು: ಪಲ್ಲಟಗಳು- ಸಾಮಾಜಿಕ ಮತ್ತು ರಾಜಕೀಯ ನೆಲೆಯಿಂದ

**ಸಬಿತಾ ಬನ್ನಾಡಿ**

ಮಹಿಳಾ ಬದುಕಿನ ಪಲ್ಲಟಗಳು ಮಹಿಳೆಯ ನೆಲೆಯಿಂದಲೇ ಆಗುವುದು ಚರಿತ್ರೆಯಲ್ಲಿ ಬಹಳ ಅಪರೂಪ. ಅದು ಈಗಾಗಲೇ ಯಾರದೋ ಹಿಡಿತದಲ್ಲಿರುವ ಒಟ್ಟು ಜಾಗತಿಕ ವ್ಯವಸ್ಥೆಯ ಬದಲಾವಣೆಯ ಅಪ್ಪಳಿಸುವಿಕೆಯ ಅಲೆಯೊಂದಿಗೆ ತೇಲಿ ಇನ್ನೆಲ್ಲೋ ಬಂದು ನಿಲ್ಲುವುದೇ ಹೆಚ್ಚು. ಒಂದು ಉದಾಹರಣೆಯೊಂದಿಗೆ ಇದನ್ನು ವಿವರಿಸಿಕೊಳ್ಳಬಹುದು. ರಾಜಪ್ರಭುತ್ವವಿದ್ದಾಗ ಹೆಣ್ಣು ಹೆಚ್ಚೆಂದರೆ ರಾಣಿಯಾಗಿ ಅವನ ಅಂತಃಪುರದಲ್ಲಿ ಇರುವುದು ಅವಳಿಗೆ ಕೊಡಮಾಡಿದ ಅತಿ ಉಚ್ಚಸ್ಥಾನ. ಆದರೆ ಎಂದೂ ಅವಳಿಗೆ ರಾಣಿಯಾಗಿ ಸ್ವತಂತ್ರ ಆಡಳಿತ ಮಾಡುವ ಹಕ್ಕು ಇದ್ದಿರಲಿಲ್ಲ (ಆಕಸ್ಮಿಕವಾಗಿ ರಾಜ ಸತ್ತು, ಗಂಡು ಮಕ್ಕಳಿಲ್ಲದಾಗ ಅವಳು ರಾಣಿಯಾಗಿ ವ್ಯವಹರಿಸಿದ್ದಿದೆ). ಪ್ರಜಾಪ್ರಭುತ್ವ ಬಂದ ಮೇಲೂ ಜಗತ್ತಿನೆಲ್ಲೆಡೆ ಅರಂಭದಲ್ಲಿ ಹೆಣ್ಣಿಗೆ ಯಾವ ಪಾತ್ರವೂ ಇರಲಿಲ್ಲ. ಮಹಿಳಾ ಚಳುವಳಿ ಅಮೆರಿಕದಂತಹ ಮುಂದುವರಿದ ದೇಶಗಳಲ್ಲೂ ಮತದಾನದ ಹಕ್ಕಿಗಾಗಿ ಹೋರಾಡಬೇಕಾಯಿತು. ಗಮನಿಸಿ, ಚುನಾವಣೆಗೆ ನಿಲ್ಲುವ ಗಂಡಸರನ್ನು ಆಯ್ಕೆ ಮಾಡುವುದಕ್ಕಾಗಿ ಹಾಕುವ ಓಟಿನ ಹಕ್ಕನ್ನು ಕೇಳುವುದೂ ಆಗ ಕ್ರಾಂತಿಕಾರಕ ಸಂಗತಿ. ಇಲ್ಲೂ ಆಕೆ ಅದಾಗಲೇ ಇರುವ ವ್ಯವಸ್ಥೆಯೊಂದು ಹಲವು ಚಾರಿತ್ರಿಕ ಕಾರಣಗಳಿಗಾಗಿ ಬದಲಾದಾಗ, ಆ ಬದಲಾವಣೆಯ ಅಂಗವಾಗಿ ತನ್ನ ಪಾತ್ರವನ್ನು ತಾನೇ ಗುರುತಿಸಿಕೊಂಡು, ತನಗೆ ಈಗಾಗಲೇ ಇರುವ ಪಾತ್ರದ ಸ್ವರೂಪದಲ್ಲಿ ಬದಲಾವಣೆಯನ್ನು ಮಾಡಿಕೊಳ್ಳುತ್ತಾಳೆಯೇ ಹೊರತು ವ್ಯವಸ್ಥೆಯ ಬದಲಾವಣೆಯ ಸಂದರ್ಭದಲ್ಲಿ ಆ ಬದಲಾವಣೆಯ ಸ್ವರೂಪ ಹೇಗಿರಬೇಕು ಎಂದು ಹೆಣ್ಣನ್ನು ಕೇಳಿದ್ದೇ ಇಲ್ಲ. ಚರಿತ್ರೆಯಲ್ಲಿ ಆಗಿ ಹೋದ ಯಾವ್ಯಾವ ಆಂದೋಲನಗಳಲ್ಲಿ ಹೆಣ್ಣೂ ಸಮಾನವಾಗಿ ಭಾಗಿಯಾಗಲು ಸಾಧ್ಯವಾಗಿದೆಯೋ, ಅಲ್ಲೆಲ್ಲಾ ಅದು ಹೆಚ್ಚು ಮಾನವೀಯ ನೆಲೆಯ ಒಳಗೊಳ್ಳುವಿಕೆಯ ಮತ್ತು ಅಹಿಂಸೆಯಿಂದ ಮುಂಚಲನೆ ಪಡೆದುಕೊಳ್ಳಲು ಪೂರಕವಾದ ಚಲನೆಯಾಗಿ ಮುಂದಡಿ ಇಟ್ಟಿದ್ದನ್ನು ನೋಡಬಹುದು. ಅದು ಭಕ್ತಿ ಆಂದೋಲನವಿರಲಿ, ಸ್ವಾತಂತ್ರ್ಯ ಚಳುವಳಿಯಲ್ಲಿ ಗಾಂಧಿ ನಾಯಕತ್ವದ ಸಂದರ್ಭದಲ್ಲಿ ಹೆಣ್ಣುಮಕ್ಕಳ

ಭಾಗವಹಿಸುವಿಕೆ ಇರಬಹುದು, ದಲಿತರನ್ನು ಒಗ್ಗೂಡಿಸಿ ಹೊಸ ಎಚ್ಚರ ಮೂಡಿಸುವ ಅಂಬೇಡ್ಕರ್ ನಾಯಕತ್ವದ ಸಂದರ್ಭದ ಹೆಣ್ಣು ಮಕ್ಕಳ ಸಾವಿರ ಸಾವಿರ ಸಂಖ್ಯೆಯ ಭಾಗವಹಿಸುವಿಕೆ ಇರಬಹುದು. ಈ ಭಾಗವಹಿಸುವಿಕೆಯೂ ಕೂಡ ಅಂಬೇಡ್ಕರ್ ಹಿಂದೂ ಕೋಡ್ ಬಿಲ್‌ನಂತಹ ಸೂಕ್ಷ್ಮ ಮಹಿಳಾಪರ ಕಾಯ್ದೆ ರೂಪಿಸುವಲ್ಲಿ ಪೂರಕವಾಗಿ ಕೆಲಸ ಮಾಡಿರುತ್ತದೆ. ಅಂದರೆ ಮಹಿಳಾ ಬದುಕಿನ ಪಲ್ಲಟ ಎಂಬುದು ಹೆಣ್ಣು ಪೂರ್ಣಪ್ರಮಾಣದಲ್ಲಿ ಭಾಗಿಯಾದಾಗ ಆಗುವುದುಕ್ಕೂ, ಮಹಿಳೆಯನ್ನು ಮುಸುಕಿನಲ್ಲಿಟ್ಟು ಅವಳ ಪರವಾಗಿ ತಾನೇ, ಅವಳಿಗೆ ಬೇಕಾದ ಸವಲತ್ತುಗಳನ್ನು ಒದಗಿಸುತ್ತೇನೆ ಎಂಬ ಪುರುಷಪ್ರಧಾನ ಅಹಂಕಾರವು ತಂದು ಸುರಿಯುವ ಪಲ್ಲಟಕ್ಕೂ ಮೂಲಭೂತ ವ್ಯತ್ಯಾಸವಿದೆ. ಎರಡರಲ್ಲೂ ಪರಿಣಾಮ ಎದುರಿಸುವಳು ಹೆಣ್ಣೇ ಆದರೂ ಎರಡನೆಯದು ಹಿಂಸೆಯ ಹೊಸ ವಿಧಾನಗಳಾಗಿ ಮಾತ್ರ ಅವಳ ಬದುಕಿನಲ್ಲಿ ಬದಲಾವಣೆ ತರುತ್ತವೆ. ಮತ್ತು ಇದು ಅವಳ ಬದುಕಿನಲ್ಲಿ ಇತ್ಯಾತ್ಮಕವಾದ ನೆಲೆಯಿಂದ ಅಮೂಲಾಗ್ರ ಪಲ್ಲಟಗಳನ್ನು ಮಾಡಿರುವುದಿಲ್ಲ.

ಒಂದು ಅಂಶವನ್ನು ಗಮನಿಸಬೇಕು. ಹೆಣ್ಣಿನ ಬದುಕಿನ ನಿರಂತರ ಏಕತಾನತೆಯೆಂಬುದು ಎಂದಿಗೂ ಬದಲಾಗಿಲ್ಲ. ಅದು ಪ್ರತಿನಿತ್ಯವೂ ಬಡಿಯುವ ರೊಟ್ಟಿಯೇ ಆಗಿರಲಿ, ಕತ್ತು ಬಗ್ಗಿಸಿ ಹೊಲಿವ ಗಾರ್ಮೆಂಟ್ ಕೆಲಸವೇ ಆಗಿರಲಿ ಈ ಏಕತಾನತೆ ಎಂಬುದೇ ಅವಳ ಚೈತನ್ಯವನ್ನು ಕುಗ್ಗಿಸುವ ಅತಿ ಸುಲಭದ, ಕಣ್ಣಿಗೆ ಕಾಣಿಸದ ಜೀವಾವಧಿ ಶಿಕ್ಷೆಯಂಥದು. ಇದರ ನಡುವೆ ಆಕೆ ಚಿಂತನೆ ಮಾಡುವಂತೆ ಮಾಡುವ, ಮನಸ್ಸು ಅರಳಿಸಿಕೊಳ್ಳುವ ಅವಕಾಶವೇ ಬಹಳ ಕಡಿಮೆ ಇದ್ದಾಗಲೂ ಅವಳು ಆ ಪ್ರಯತ್ನಗಳನ್ನು ಮಾಡುತ್ತಲೇ ಬಂದಿದ್ದಾಳೆ. ಮತ್ತು ಇನ್ನೊಂದೆಡೆಯಿಂದ ಅವಳ ದಿಕ್ಕು ತಪ್ಪಿಸುವ, ಬಗ್ಗು ಬಡಿಯುವ ಪ್ರಯತ್ನವೂ ನಡೆಯುತ್ತಲೇ ಬಂದಿದೆ. ಇದುವರೆಗೂ ಅವಳ ಸಾಮಾಜಿಕ, ರಾಜಕೀಯ ಪಾಲ್ಗೊಳ್ಳುವಿಕೆ ಅದೃಷ್ಟ, ಅಭಯ ಮತ್ತು ಒತ್ತಾಯದ ಸ್ಥಿತಿಯಲ್ಲೇ ಇದೆ. ಅದು ಆ ಹಂತದಿಂದ ಸಹಜ, ಸಾಧ್ಯ ಮತ್ತು ಇಚ್ಛೆಯನುಸಾರ ಎಂದಾಗಿ ಬದಲಾಗಬೇಕಿದೆ.

ಮಹಿಳೆಯರ ಸಾಮಾಜಿಕ ಮತ್ತು ರಾಜಕೀಯ ಪಲ್ಲಟಗಳನ್ನು ಅವಲೋಕಿಸುವಾಗ ಗಮನಿಸಬೇಕಾದ ಸಂಗತಿಯೆಂದರೆ, ಇವೆರಡೂ ಪರಸ್ಪರ ಬೇರೆಯಲ್ಲ ಎಂಬುದು. ರಾಜಕೀಯ ನೋಟಕ್ರಮವೊಂದು ಸಾಮಾಜಿಕತೆಯನ್ನು ರೂಪಿಸುತ್ತದೆ. ಸಾಮಾಜಿಕತೆಯ ನೆಲೆಯೇ ಹೆಣ್ಣಿನ ರಾಜಕೀಯ ಪಾಲ್ಗೊಳ್ಳುವಿಕೆಯನ್ನು ನಿರ್ಧರಿಸುತ್ತದೆ. ಸದ್ಯದ ಸ್ಥಿತಿಯಲ್ಲಿ ಹೆಣ್ಣಿನ ರಾಜಕೀಯ ಪಾಲ್ಗೊಳ್ಳುವಿಕೆಯ ನಿರ್ವಾತ ಅಥವಾ ನಿರಾಶಾದಾಯಕ ಸ್ಥಿತಿಗೂ ಇನ್ನೂ ಖಚಿತ ರೂಪ ಪಡೆದು ಅನುಭವದ ಭಾಗವಾಗದ ಅವಳ ಸಾಮಾಜಿಕತೆಗೂ ಪರಸ್ಪರ ಸಂಬಂಧ ಇದೆ. ಅನುಭವದ ಭಾಗವಾಗದ ಸಾಮಾಜಿಕತೆ ಎಂದರೆ, ನಮ್ಮ ಪಠ್ಯಗಳಲ್ಲಿ, ಟಿ.ವಿ ಕಾರ್ಯಕ್ರಮಗಳಲ್ಲಿ, ಸಿನಿಮಾಗಳಲ್ಲಿ ರೂಪಿತವಾಗಿರುವ

ಸಾಮಾಜಿಕತೆಯು ಒಂದು ತೆಳು, ಟೊಳ್ಳು ಪದರಗಳಲ್ಲಿದ್ದು ಅವಳ ವಾಸ್ತವ ಚಿತ್ರಣ ಸರಿಯಾದ ರೀತಿಯಲ್ಲಿ ಪ್ರತಿನಿಧೀಕರಣಗೊಂಡಿಲ್ಲ ಅನ್ನುವುದು. ಎಷ್ಟೋ ಬಾರಿ ನಮ್ಮ ಕಿವಿಗಳಿಗೆ ಬೀಳುವ ಮಾತೆಂದರೆ, 'ಈಗೇನು, ಎಲ್ಲಾ ಅವಕಾಶಗಳೂ ಅವಳಿಗೆ ಸಮಾನವಾಗಿ ಸಿಗುತ್ತಿದೆ. ಅವಳೇ ಸರಿಯಾಗಿ ಉಪಯೋಗಿಸಿಕೊಳ್ಳಬೇಕು' ಎನ್ನುವುದು. ಮೇಲ್ನೋಟಕ್ಕೆ ಇದು ಹೌದು ಅಂತ ಅನ್ನಿಸಿಬಿಡಬಹುದು. ಆದರೆ ಎಚ್ಚೆತ್ತ ನೋಟದಲ್ಲಿ ನೋಡಿದಾಗ ಪರಿಸ್ಥಿತಿಯ ಇನ್ನೊಂದು ಮಗ್ಗುಲು ಕಾಣಿಸಿಕೊಳ್ಳುತ್ತದೆ. ಅದು ಹಲವು ಮರೆ ಮೋಸಗಳಲ್ಲಿ ಅಡಗಿಕೊಂಡಿರುವುದು ತೆರೆದುಕೊಳ್ಳುತ್ತದೆ. ಅವಳಿಗೆ ಸಿಕ್ಕುತ್ತಿರುವ ಹಲವು ಅವಕಾಶಗಳಲ್ಲಿ ಅವಳು ಬಿಡುವಿಲ್ಲದೆ ದುಡಿಯುತ್ತಿರುವುದೇನೋ ನಿಜ. ಆದರೆ ಅವಳ ದುಡಿಮೆಯನ್ನು ವ್ಯಯಿಸುವ, ಯೋಜಿಸುವ ಆಯ್ಕೆ ಅವಳಿಗಿರುವುದಿಲ್ಲ ಅಷ್ಟೆ.

ಕೆಲವು ಕಣ್ಣಿಗೆ ಕಾಣಿಸುವ ಸಂಗತಿಗಳನ್ನು ಮೊದಲು ಗಮನಿಸೋಣ. ಈಚಿನ ಮೂವತ್ತು ನಲವತ್ತು ವರ್ಷಗಳಲ್ಲಿ ಕೆಲವು ಅವಕಾಶಗಳು, ಸ್ಥಿತಿಗಳು ಖಂಡಿತಾ ಬದಲಾಗಿವೆ. ತಳವರ್ಗ, ಜಾತಿಯ ಹೆಣ್ಣುಮಕ್ಕಳ 'ದುಡಿಮೆಯ ಘನತೆ' (ಡಿಗ್ನಿಟಿ ಆಫ್ ಲೇಬರ್)ಯಲ್ಲಿ ಬದಲಾವಣೆ ಇದೆ. ಹಿಂದೆ ಇವರು ಮೇಲ್ಜಾತಿ ಜನರ ಒಕ್ಕಲುಗಳೋ, ಕೂಲಿಗಳೋ ಆಗಿದ್ದಾಗ 'ಯಜಮಾನ'ನ ಕಣ್ಣಿನ ಮೊನೆಗೆ ಸಿಕ್ಕದೇ ಮಾನ ಉಳಿಸಿಕೊಳ್ಳೋದೇ ಕಷ್ಟ ಇತ್ತು. ಈಗ ಕೆಲಸದ ಸ್ಥಳಗಳಲ್ಲಿ ಕೆಲವು ಆಯ್ಕೆ ಸಿಗುವುದರಿಂದ ಸ್ವಲ್ಪಮಟ್ಟಿಗೆ ಬಚಾವಾಗಿದ್ದಾರೆ. ಹಾಗೆಯೇ ಮೇಲ್ಜಾತಿ ಹೆಣ್ಣುಮಕ್ಕಳೂ ಒಂದು ಹಂತದ ನಿಟ್ಟುಸಿರು ಬಿಡುತ್ತಾರೆ.  ಹಿರಿಯ ಹೆಂಗಸರು ಕಿರಿಯರಿಗೆ, 'ನಿಮ್ಮ ಕಾಲವೇ ಚೆನ್ನಾಗಿದೆ. ನೀವೀಗ ಎಜುಕೇಶನ್ ಪಡೆದಿದ್ದೀರಿ, ದುಡಿತಿದೀರಿ, ಎಲ್ಲದಕ್ಕೂ ಗಂಡನ ಕೈ ಕಾಯ ಬೇಕಿಲ್ಲ' ಎಂದು ನಿಟ್ಟುಸಿರು ಬಿಡುತ್ತಾರೆ. ಹಾಗೆಯೇ ನಮ್ಮ ಟ್ರಾನ್ಸ್‌ಜೆಂಡರ್ ಸಹೋದರಿಯರಿಯರಿಗೆ ಸಣ್ಣದೊಂದು ಸ್ವೀಕಾರಭಾವ ಸಮಾಜದಲ್ಲಿ ಕಾಣಿಸುತ್ತಿದೆ. ಹಲವು ಸಾರ್ವಜನಿಕ ಕ್ಷೇತ್ರದಲ್ಲಿ ಹೆಂಗಸರ ಸ್ಥಿತಿ ಸುಧಾರಿಸಿದೆ. ಹಿಂದಿನ ಸಿನಿಮಾ ನಟಿಯರು ಮದುವೆ ಮರೆಮಾಚಬೇಕಿತ್ತು. ಪ್ರಸಿದ್ಧಿಯ ಉತ್ತುಂಗಕ್ಕೆ ಏರಿದ ಮೇಲೂ ಕೈಯಲ್ಲಿ ಕಾಸಿಲ್ಲದೆ, ವೈಯಕ್ತಿಕ ಬದುಕು ಮೂರಾಬಟ್ಟೆಯಾಗಿ ಆತ್ಮಹತ್ಯೆಗೆ ಶರಣಾಗುವುದಿತ್ತು. ಇಂದು ತಮ್ಮನ್ನು ನಿಭಾಯಿಸಿಕೊಳ್ಳುವ ವಿದ್ಯೆ ಕಲಿತಿದ್ದಾರೆ. ಹಾಗೆಯೇ ಇಂದು ಪೈಲಟ್‌ನಿಂದ ಹಿಡಿದು ಉಪಗ್ರಹ ಉಡಾವಣೆತನಕ ತನ್ನ ಆಸಕ್ತಿಯ ಕ್ಷೇತ್ರಕ್ಕೆ ನುಗ್ಗಬಹುದಾದ ಅವಕಾಶ ಕೆಲವರಿಗಾದರೂ ಇದೆ. ಇಂದು ಹೆಣ್ಣು ಒಬ್ಬಳೇ ದೇಶ ವಿದೇಶ ಸುತ್ತಬಹುದು. ಹೀಗೇ. ಇವೆಲ್ಲವೂ ಕೇಳುವುದಕ್ಕೆ ಬಹಳ ಖುಷಿ ಕೊಡುವ ಸಂಗತಿಗಳು. ಆದರೆ ನಮ್ಮ ಶಿಕ್ಷಣ, ಮನರಂಜನಾ ಮಾಧ್ಯಮ ಮುಂತಾದವುಗಳೆಲ್ಲ ಎಷ್ಟು ಚೆನ್ನಾಗಿ ಪಿತೃಪ್ರಧಾನತೆಯನ್ನು ನಮ್ಮ ಧಮನಿಗಳಲ್ಲಿ ತುಂಬಿದ್ದಾವೆಂದರೆ, ಈಗ ನಾವೇ ಅವರ ಏಜೆಂಟ್‌ಗಳಂತೆ ವರ್ತಿಸತೊಡಗಿದ್ದೀವಿ. ಇದು ಇಂದಿನ ಅತಿದೊಡ್ಡ ಸವಾಲು.

ತಮ್ಮ ಹಕ್ಕುಗಳಿಗಾಗಿ ಹೋರಾಡಿ, ಬಲಿದಾನ ಆದ ಮಹಿಳೆಯರಿಗಾಗಿ ಮಾಡುವ, ಮಾಡಬೇಕಾದ ಮಹಿಳಾ ದಿನಾಚರಣೆಯು ಇಂದು ಸೆಲೆಬ್ರೇಶನ್ ಆಗಿ ಬಂಡವಾಳಶಾಹಿಯ ಕೈವಶವಾಗಿ, ಜಿಲ್ಲಾಡಳಿತದ ಕಾರ್ಯಕ್ರಮಗಳ ಭಾಗವಾಗಿ ತಮ್ಮ ಹಿತಾಸಕ್ತಿಗಳನ್ನು ಪೂರೈಸಲು ಸಿಗುವ 'ಪ್ರೇಕ್ಷಕರ ತಂಗುದಾಣ'ವಾಗಿ ಬದಲಾಗಿದೆ. ಬಿಸಿಯೂಟ, ಅಂಗನವಾಡಿ, ಆಶಾ ಕಾರ್ಯಕರ್ತೆಯರ ಕನಿಷ್ಠ ಬೇಡಿಕೆಗಳಿಗೆ ಹಗಲೂ, ರಾತ್ರಿ ಹೋರಾಡಿ, ದೂಷಿಸಿಕೊಂಡು, ಹೊಡೆಸಿಕೊಂಡು, ಜೈಲುಸೇರಿ ಕೆಲಸ ಮಾಡುವವರು ಯಾರೋ. ತಮ್ಮ ಅಧಿಕಾರದ ಮೂಗಿನಡಿ ಮಾಡಿಸುವ ಕಾರ್ಯಕ್ರಮಗಳಿಗೆ ರಾಜಕೀಯ ಸಮಾವೇಶಗಳಿಗೆ– ತಾವೆಂದೂ ಅವರಿಗಾಗಿ ಕೆಲಸ ಮಾಡದೆಯೇ– ಅವರು ಕಡ್ಡಾಯವಾಗಿ ಮೆರವಣಿಗೆ ಸಭೆಗಳಿಗೆ 'ಸಂಖ್ಯೆ'ಗಳಾಗುವಂತೆ ಆದೇಶ ಮಾಡುವವರು ಯಾರೋ ಅನ್ನುವ ಸ್ಥಿತಿ ನಮ್ಮ ಕಣ್ಣ ಮುಂದಿದೆ. ಅಂದರೆ, ಈ 'ಬಳಸುವಿಕೆಗೆ' ಇವತ್ತಿಗೂ ಸುಲಭವಾಗಿ ಸಿಕ್ಕುತ್ತಿರುವವಳು ಮಹಿಳೆಯೇ.

ಹಾಗಾದರೆ ಸವಾಲು ಎಲ್ಲಿದೆ? ಸವಾಲು ನಾವು ಪ್ರಾತಿನಿಧ್ಯವನ್ನಷ್ಟೇ ಸಾಧನೆ ಎಂದು ಭಾವಿಸಿದ್ದರಲ್ಲಿದೆ. ನಾವೀಗ ಎಲ್ಲೆಡೆ ಇದ್ದೇವೆ. ವ್ಯೋಮಾಕಾಶಗಳಲ್ಲಿ, ರಸ್ತೆ ರಸ್ತೆಗಳಲ್ಲಿ ನಾವು ಗಾಡಿ ಚಲಾವಣೆ ಮಾಡುತ್ತಿದ್ದೇವೆ. ಆದರೆ ನಾವೀಗ ಗಂಡಿನ ಬದಲಿಗೆ, ಅವನ ಜಾಗದಲ್ಲಿ, ಅವನೇ ಹಾಕಿಕೊಟ್ಟ ಪಥದಲ್ಲಿ ಚಲಾವಣೆ ಮಾಡುತ್ತಿದ್ದೇವೆ. ಹೀಗೆ ಮಾಡುವಾಗ ನಮ್ಮತನವನ್ನು ಬಿಟ್ಟುಕೊಟ್ಟು, ಅವನತನಕ್ಕೇ ಒಪ್ಪಿಗೆ ಕೊಟ್ಟು ಮುನ್ನಡೆದಿದ್ದೇವೆ. ಇದನ್ನು ಉದಾಹರಣೆಯೊಂದಿಗೆ ಗಮನಿಸೋಣ. ಮಂಡ್ಯಕ್ಕೇ ನೇರ ಸಂಬಂಧ ಇರುವ ಎರಡು ಪ್ರಸಂಗಗಳನ್ನು ನೆನಪಿಸಿಕೊಳ್ಳೋಣ. ಒಂದನೆಯದು ಇಲ್ಲಿ ನಡೆದು ಹೋದ ಅವಮರ್ಯಾದಾ ಹತ್ಯೆಗೆ ಸಂಬಂಧಿಸಿದ್ದು. ಒಂದೆಡೆಯಿಂದ 'ನಾವೆಲ್ಲರೂ ಹಿಂದೂ ನಾವೆಲ್ಲರೂ ಒಂದು' ಎನ್ನುತ್ತಾ, ಅನ್ಯ ಕೋಮಿನ ವಿರುದ್ಧ ಹಿಂದೂಗಳನ್ನು ಧ್ರುವೀಕರಣ ಮಾಡಲಾಗುತ್ತದೆ. ಇನ್ನೊಂದೆಡೆಯಿಂದ ಹಿಂದೂ ಧರ್ಮಕ್ಕೆ ಸೇರಿರುವ ಬೇರೆ ಬೇರೆ ಜಾತಿಯ ಹುಡುಗಿಯನ್ನೋ, ಹುಡುಗನನ್ನೋ ನಮ್ಮ ಮಕ್ಕಳು ಪ್ರೀತಿಸಿ ಮದುವೆ ಆಗ್ತಾರೆ ಅಂದರೆ ಅವರನ್ನು ಹೊಡೆದು ಸಾಯಿಸುವ ಮಟ್ಟಕ್ಕೆ ಬಂದಿದೀವಿ. ಈ ಕ್ರೌರ್ಯ, ಅಮಾನುಷತೆ, ಮೇಲರಿಮೆ, ಗಂಡಾಳ್ವಿಕೆಯ ಕೊಡುಗೆಗಳು. ಇವುಗಳು ಮೌಲ್ಯವಾಗುವುದರ ವಿರುದ್ಧ ನೆಲೆಯಲ್ಲಿ ನಾವೀಗ ತುರ್ತಾಗಿ ತಾಯಿಗುಣವನ್ನು ಮುನ್ನೆಲೆಗೆ ತರಬೇಕಾಗಿದೆ. ಇದರ ಕೊರತೆಯಿಂದಾಗಿಯೇ ಈ ಐವತ್ತು ವರ್ಷಗಳಲ್ಲಿ ಅತ್ಯಾಚಾರ ಪ್ರಕರಣಗಳು– ಅದರಲ್ಲೂ ದಲಿತ/ ದಮನಿತರ ಮೇಲೆ ಅತಿಹೆಚ್ಚು ವೇಗ ಪಡೀತಿವೆ. ಈ ಪ್ರಕರಣಗಳ ಹಿಂದೆ–ಮುಂದೆ ಯಾರಿದ್ದಾರೆ ಎಂಬ ಆಧಾರದಲ್ಲಿ ಸುದ್ದಿ ಮಾಧ್ಯಮಗಳು ತಾರತಮ್ಯ ಮಾಡಿ ಪ್ರಸಾರ ಮಾಡತೊಡಗಿವೆಯೇ ಹೊರತು ಅತ್ಯಾಚಾರವೆಂಬ ಮನಸ್ಥಿತಿಯೇ ನಾಶವಾಗಬೇಕೆಂಬ ಚಿಂತನೆ ಮುನ್ನೆಲೆಗೆ ಬರುತ್ತಿಲ್ಲ. ಅಷ್ಟೇ ಅಲ್ಲ, ಹೆಣ್ಣುಮಕ್ಕಳೇ ಜಾಣ ಮೌನ, ಆಯ್ಕೆಗಳ ರಾಜಕಾರಣವನ್ನು ರೂಢಿಸಿಕೊಳ್ಳತೊಡಗಿದ್ದಾರೆ. ಅಂದರೆ,

ನಮ್ಮ ಕೈಗೇ ಬಡಿಗೆ ಕೊಟ್ಟು ನಮಗೇ ಹೊಡೆತ ಹಾಕುವಂತೆ ಮಾಡಲು ಗಂಡಾಳ್ವಿಕೆಯು ಯಶಸ್ಸು ಕಾಣತೊಡಗಿದೆ.

ಇನ್ನು ರಾಜಕೀಯ ಕ್ಷೇತ್ರವೂ ಅಷ್ಟೇ. ಇಲ್ಲಿ ಕೇವಲ ಪ್ರಾತಿನಿಧ್ಯ ಪಡೆಯುವುದೆಂದರೆ, ಅದು ಗಂಡಾಳ್ವಿಕೆಯ ವರ್ಗಾವಣೆಯಷ್ಟೇ ಆಗಿ ಉಳಿಯುತ್ತದೆ. ಹೀಗಾದಲ್ಲಿ ಹೋರಾಟಗಳು ನೆಲಕಚ್ಚಿ ಬಿಡುತ್ತವೆ. ಮಂಡ್ಯದಲ್ಲಿ ಸಂಸತ್ ಚುನಾವಣೆ ಸಂದರ್ಭದಲ್ಲಿ ಸುಮಲತಾ ಅವರು ಕಣಕ್ಕಿಳಿದ ಸಂದರ್ಭದಲ್ಲಿ ಹೇಗೆಲ್ಲಾ ನಾಲಿಗೆಯನ್ನು ಹರಿಬಿಡಲಾಯಿತು ಎಂಬುದನ್ನು ನೋಡಿದ್ದೀವಿ. ಆಕೆ ಹೆಣ್ಣು ಮಗಳೆಂಬ ಕಾರಣಕ್ಕೆ ಜಾತಿಯ ಪ್ರಶ್ನೆ, ಐಡೆಂಟಿಟಿಯ ಪ್ರಶ್ನೆ ಮುನ್ನೆಲೆಗೆ ಬಂತು. ಹೀಗೆಲ್ಲಾ ನಾಲಿಗೆ ಹರಿಬಿಟ್ಟವರದ್ದೇನೋ ಕೊಳಕು ಮನಸ್ಥಿತಿಯೆಂಬುದರಲ್ಲಿ ಸಂಶಯವಿಲ್ಲ. ಆದರೆ, ಆ ಮಾತುಗಳಿಗೆ ಉತ್ತರವಾಗಿ ಬಂದ ಮನಸ್ಥಿತಿ ಯಾವ ರೀತಿಯದು? ಮೇಲ್ನೋಟಕ್ಕೆ ಆಕೆಯ ಪರ ಎಂಬಂತೆ ಕಂಡರೂ, ಹೇಗೆ ತಿದ್ದಿತೀಡಿ ಇಟ್ಟ ಸಾಮಾಜಿಕತೆಯು ಹೆಣ್ಣನ್ನು ಅಧೀನ ಸ್ಥಿತಿಯಲ್ಲೇ ಪರಿಗಣಿಸುತ್ತದೆ ಎಂಬುದನ್ನು ಗಮನಿಸಬೇಕು. ಅದೂ ಈ ಸಂದರ್ಭದಲ್ಲಿ ಅತಿ ಜನಪ್ರಿಯರೆನಿಸಿದ ನಾಯಕ ನಟರು ಸುಮಲತಾ ಪರ ಪ್ರಚಾರ ಮಾಡಲು ಬಂದಿದ್ದರು. ಅವರಿಗೆ ತೋಚಿದ ಉತ್ತರ ಎಷ್ಟು ಅಸಹಾಯಕವಾಗಿದೆ ನೋಡಿ. 'ಹೆಣ್ಣು ಮದುವೆ ಆದ ಮೇಲೆ ಯಾರ ಜಾತಿಗೆ ಸೇರಿಕೊಳ್ತಾರಪ್ಪಾ?' ಎಂದು ಇವರು ಮರುಪ್ರಶ್ನಿಸಿದರೇ ಹೊರತು, ಮರು ಪ್ರಶ್ನೆಯ ಸ್ವರೂಪ ಬೇರೆಯಾಗಬಹುದಿತ್ತು ಎಂಬುದು ಯಾರಿಗೂ ಹೊಳೆಯಲಿಲ್ಲ. ಇದು ಹೆಣ್ಣಿನ ಸಾಮಾಜಿಕ ಸ್ಥಿತಿಯು ಇಂದಿಗೂ ಗಂಡಿನ ನೆರಳಿನಲ್ಲೇ ನಿರೂಪಿತವಾಗುವುದಕ್ಕೆ ನಿದರ್ಶನ. ನಮ್ಮ ಪ್ರಧಾನಿಗಳು ತಮ್ಮದಲ್ಲದ ವಾರಣಾಸಿಯಲ್ಲಿ ನಿಲ್ಲಬಹುದಾದರೆ, ನಮ್ಮ ಮಾಜಿ ಮುಖ್ಯಮಂತ್ರಿಗಳು ದೂರದ ಬಾದಾಮಿಯಲ್ಲಿ ನಿಲ್ಲಬಹುದಾದರೆ, ರಾಹುಲ್ ಗಾಂಧಿಯವರು ಕೇರಳದ ವಯನಾಡ್‌ನಲ್ಲಿ ಚುನಾವಣೆಗೆ ನಿಲ್ಲಬಹುದಾದರೆ, ಸುಮಲತಾ ಯಾಕೆ ಮಂಡ್ಯದಲ್ಲಿ ನಿಲ್ಲಬಾರದು? ಆಕೆಗೂ ಒಂದು ಸ್ವತಂತ್ರ ವ್ಯಕ್ತಿತ್ವ ಮತ್ತು ಭಾರತದಲ್ಲಿ ಎಲ್ಲಿಯಾದರೂ ಚುನಾವಣೆಗೆ ನಿಲ್ಲಬಹುದಾದ ಆಯ್ಕೆ ಮತ್ತು ಸ್ವಾತಂತ್ರ್ಯ ಇದೆ ಎಂಬುದನ್ನು ಜನರಿಗೆ ಮನಗಾಣಿಸಲು ಯಾಕೆ ಸಾಧ್ಯವಾಗದೇ ಹೋಯಿತು? ನಮಗೇ ಆ ಬಗ್ಗೆ ಒಂದು ನಂಬಿಕೆ ಇಲ್ಲದೇ ಹೋದರೆ ನಾವು ಉತ್ತರಿಸಲು ತಡವರಿಸುತ್ತೇವೆ.

ಹೆಣ್ಣು ರಾಜಕೀಯ ಕ್ಷೇತ್ರವಿರಲಿ, ಯಾವುದೇ ಕ್ಷೇತ್ರದಲ್ಲಿರುವುದೂ ಸಹಜ ಎಂಬ ಮನಸ್ಥಿತಿಗೆ ಪಲ್ಲಟವಾಗಬೇಕಿರುವುದು ಎಷ್ಟು ಮುಖ್ಯವೋ, ಅವಳು ಗಂಡಿನ ಜಾಗದಲ್ಲಿ ಕೂತುಕೊಳ್ಳುವುದಕ್ಕಿಂತಲೂ, ಅವಳದೇ ಆದ ಅಪೂರ್ವ ಲೋಕದೃಷ್ಟಿಯನ್ನು ಅವಳು ಹೊಂದಿದ್ದು ಅದನ್ನು ಒಟ್ಟು ಸಮಾಜದ ಲೋಕದೃಷ್ಟಿಯಾಗಿಸುವುದು ಅಷ್ಟೇ ಮುಖ್ಯ. ಈ ಹಿನ್ನೆಲೆಯಲ್ಲಿ ವಂದನಾಶಿವ ಹೇಳುವ, ಗ್ರ್ಯಾಂಡ್ ಮದರ್ಸ್ ಯುನಿವರ್ಸಿಟಿಯ ವಿಸ್ತೃತ ನೆಲೆಗಳ ಹುಡುಕಾಟ ಇಂದಿನ ತುರ್ತು. ಕೃಷಿ ಹೆಣ್ಣಿನ ಕೈಯಲ್ಲಿರುವತನಕವೂ

ಆಕೆ ಬೀಜ ಸಂರಕ್ಷಣೆ ಮಾಡುತ್ತಾ ಬಂದಿದ್ದಾಳೆ. ಮಾತ್ರವಲ್ಲ, ಅವಳ ಕೈಯಲ್ಲಿ ಕೃಷಿ ಇರುವತನಕವೂ ಯಾವುದೇ ರೈತರ ಆತ್ಮಹತ್ಯೆ ಆಗಿರಲಿಲ್ಲ, ಆಹಾರ ಹೆಣ್ಣಿನ ಕೈಯಲ್ಲಿ ಇರುವ ತನಕವೂ ಜಂಕ್ ಫುಡ್ ಇರಲಿಲ್ಲ ಅಂತ ಅವರು ಹೇಳುತ್ತಾರೆ. ಅಂದರೆ, ಆ ಮೂಲಕ ಹೆಣ್ಣು ಗಂಡನ್ನೂ ಕಾಪಾಡಿದ್ದಾಳೆ. ಗಂಡಿನ ಕೈಗೆ ಕೃಷಿ ಹೋಗುತ್ತಿದ್ದಂತೆಯೇ, ಅವನು ಅದನ್ನು ಕೃಷಿ ವಿಶ್ವವಿದ್ಯಾಲಯ ಮಾಡಿ, ಬಂಡವಾಳಶಾಹಿಯ ಕಂಪೆನಿ ಮಾಡಿ– ಭೂಮಿಯನ್ನೂ, ಕೃಷಿಯನ್ನೂ, ರೈತರನ್ನೂ ನಾಶಮಾಡ ಹೊರಟಿರುವುದು ನಮ್ಮೆಲ್ಲಾ ಸಾಮಾಜಿಕ, ರಾಜಕೀಯ ಪರಿಸ್ಥಿತಿಗಳ ರೂಪಕವಾಗಿದೆ. ಹೀಗಾಗಿ, ಆ ಆತ್ಮಹತ್ಯೆಯ ದಾರಿಯಲ್ಲಿ ನಮಗೆ ಪ್ರಾತಿನಿಧ್ಯ ಬೇಕಿಲ್ಲ. ಆ ಆತ್ಮಹತ್ಯೆಯ ಕ್ಯೂನಲ್ಲಿ ನಿಲ್ಲಲು ಜಗಳ ಬೇಕಿಲ್ಲ. ನಾವು ತೋರುವ ಹೊಸದಾರಿಯಲ್ಲಿ ನಮ್ಮ ನಾಯಕತ್ವ ಅತ್ಯಂತ ಸಹಜ ಸಂಗತಿ ಎಂಬ ಮನಸ್ಥಿತಿಯ ಪಲ್ಲಟ ಬೇಕಾಗಿದೆ. ಈ ಹೊಸದಾರಿ ಎಂದರೆ, ಮೊತ್ತಮೊದಲಿಗೆ ಭೂಮಿ ವಿಷರಹಿತವಾಗುವುದು, ರಾಜಕೀಯ ವಿಷರಹಿತವಾಗುವುದು, ಇವೆರಡರ ನಡುವೆ ಬದುಕುವ ಸಕಲ ಜೀವಿಗಳ ಸಾಮಾಜಿಕ ಬದುಕು ವಿಷರಹಿತವಾಗುವುದು. ಇದು ಹೆಣ್ಣು ರೂಪಿಸಿಕೊಂಡಿದ್ದ ದಾರಿ, ರೂಪಿಸಿಕೊಟ್ಟಿದ್ದ ದಾರಿ. ಮತ್ತು ಆ ದಾರಿಯನ್ನು ಮರು ಅನ್ವೇಷಣೆ ಮಾಡಿಕೊಂಡು ಸಾಮಾಜಿಕ, ರಾಜಕೀಯ ಪಲ್ಲಟ ಸಾಧಿಸುವುದು ನಮ್ಮ ಗುರಿ.

# ಮಹಿಳಾ ಬದುಕು: ಔದ್ಯೋಗಿಕ ಕ್ಷೇತ್ರದ ಪಲ್ಲಟಗಳು

**ಸತ್ಯಾ ಎಸ್.**

ಜಗತ್ತಿನ ಪ್ರಸಿದ್ಧ ಅರ್ಥಶಾಸ್ತ್ರಜ್ಞ ಮತ್ತು ನಮ್ಮೆಲ್ಲರ ನೆಚ್ಚಿನ ಅಮಾರ್ತ್ಯ ಸೇನ್ ಹೇಳ್ತಾರೆ, 'ಸ್ವಾತಂತ್ರ್ಯವೇ ಅಭಿವೃದ್ಧಿ' ಅಂತ. ಅಂದರೆ, ಎಲ್ಲಿ ಮನುಷ್ಯ ಸಮಸ್ಯೆಗಳ ಹೊರೆ ಇಲ್ಲದೆ, ಚಿಂತೆಗಳ ಭಾರವಿಲ್ಲದೆ ಸಂತೋಷವಾಗಿ, ಆರೋಗ್ಯವಾಗಿ ಇರುತ್ತಾರೋ ಅಲ್ಲಿ ನಿಜವಾದ ಅಭಿವೃದ್ಧಿ ಇರುತ್ತದೆ. ಸಮಸ್ಯೆಗಳಿಂದ ಮನುಷ್ಯರಿಗೆ ಮುಕ್ತಿ ಇಲ್ಲವಾದರೆ ಅಲ್ಲಿ ಅಭಿವೃದ್ಧಿ ಇಲ್ಲ ಎಂದು ಅರ್ಥ ಎನ್ನುತ್ತಾರೆ.

ಈ ಮಧ್ಯಾಹ್ನ ಇಲ್ಲಿ ಮಹಿಳೆಯರೆಲ್ಲ ತಮ್ಮ ಮೇಲಿರುವ ಭಾರಗಳನ್ನೆಲ್ಲ ಕ್ಷಣಕಾಲ ಮರೆತು ಹಾಡಿನ ದನಿಗೆ, ತಮ್ಮಟೆಯ ತಾಳಕ್ಕೆ ಹೆಜ್ಜೆ ಹಾಕಿ ಕುಣಿದಾಗ ಅಮರ್ತ್ಯ ಸೇನ್ ಅವರ ಈ ಮಾತು ನೆನಪಾಯಿತು. ನಮ್ಮ ಮಹಿಳೆಯರು ಹೀಗೆ ಸದಾ ಕಾಲವೂ ಹಗುರವಾಗಿ, ಯಾವ ಹೊರೆಯ ಭಾರವಿಲ್ಲದೆ ಸ್ವಾತಂತ್ರ್ಯವನ್ನು ಅನುಭವಿಸುವುದು ಯಾವಾಗ ಎಂಬ ಪ್ರಶ್ನೆ ಕಾಡಿತು. ಹೀಗೆ ಹಾಡಿನ ನಾದಕ್ಕೆ ಬಾಗುತ್ತಾ ಹೆಜ್ಜೆ ಹಾಕುವಂತಹ ಅಭಿವೃದ್ಧಿ ನಮಗಿಂದು ಬೇಕಿದೆ.

2020ರ ಮಹಿಳಾ ದಿನಕ್ಕೆ ವಿಶ್ವಸಂಸ್ಥೆ ನೀಡಿರುವ ಘೋಷಣೆ– 'ನಾನು ಸಮಾನತೆಯ ತಲೆಮಾರಿನವಳು' (ಐ ಯಾಮ್ ಜನರೇಷನ್ ಈಕ್ವಾಲಿಟಿ). ಅದೇ ರೀತಿ ವಿಶ್ವ ಆರ್ಥಿಕ ಸಂಸ್ಥೆಯ ಈ ವರ್ಷದ ಘೋಷಣೆ– 'ಸಮಾನತೆಗಾಗಿ ನಾವೆಲ್ಲರೂ' (ಈಚ್ ಫಾರ್ ಈಕ್ವಾಲಿಟಿ). ಅಂದರೆ 'ಸಮಾನತೆ' ಎನ್ನುವುದೇ ಇಂದಿನ ದಿನಮಾನದ, ಈ ವರ್ಷದ ಪ್ರಮುಖ ಪದಗುಚ್ಛವಾಗಿದೆ. ನಾವಿನ್ನೂ 'ಪ್ರಾತಿನಿಧ್ಯದ' ಕಾಲದಲ್ಲಿ ಇಲ್ಲ. 'ಸಬಲೀಕರಣದ' ಹಂತದಲ್ಲಿ ಇಲ್ಲ. ಅವು ಇಂದಿನ ಕಾಲಕ್ಕೆ ಹೊಂದುವ ಪರಿಕಲ್ಪನೆಗಳೇ ಅಲ್ಲ. ನಾವಿರೋದು ಸಮಾನತೆ ಮತ್ತು ಸಮತೆಯನ್ನು ಆಗುಮಾಡಬೇಕಾದ ಕಾಲಘಟ್ಟದಲ್ಲಿ.

ಆದರೆ, ಸಮತೆಯಿರಲಿ, ಸಮಾನತೆಯನ್ನೇ ಸಾಧಿಸಲು ನಮಗಿನ್ನೂ ಸಾಧ್ಯವಾಗಿಲ್ಲ. ಮಹಿಳೆ ಮತ್ತು ಪುರುಷರ ನಡುವಿನ ಕಂದರ ಇನ್ನೂ ಅಗಾಧವಾಗಿಯೇ ಉಳಿದುಕೊಂಡಿದೆ. ತಾರತಮ್ಯಗಳನ್ನು ನಿವಾರಿಸಿ, ಸಮಾನತೆತರಲು ಎಷ್ಟೇ ಕಾಯಿದೆ– ಕಾನೂನುಗಳನ್ನು ಮಾಡಿದರು, ಯೋಜನೆಗಳನ್ನು ರೂಪಿಸಿದರೂ ನಿಜವಾದ ಸಮಾನತೆ

ದೂರದ ಮರೀಚಿಕೆಯಾಗಿಯೇ ಉಳಿದಿದೆ. ವಿಶ್ವ ಆರ್ಥಿಕಸಂಸ್ಥೆ ಮತ್ತು ಅಂತಾ ರಾಷ್ಟ್ರೀಯ ಕಾರ್ಮಿಕ ಸಂಘಟನೆಯ ವರದಿಗಳ ಪ್ರಕಾರ ಔದ್ಯೋಗಿಕ ಕ್ಷೇತ್ರದಲ್ಲಿ ನಿಜವಾದ ಸಮಾನತೆಯನ್ನು ಸಾಧಿಸಲು ಇನ್ನೂ ಕನಿಷ್ಠ 108 ವರ್ಷಗಳು ಬೇಕಂತೆ. ಯಾಕೆ ಅಷ್ಟು ದೀರ್ಘಕಾಲ ಬೇಕೆಂದರೆ, ಮಹಿಳೆಯರು ಮತ್ತು ಪುರುಷರ ಸ್ಥಿತಿಗತಿಗಳಲ್ಲಿನ ಅಂತರ ಅಷ್ಟೊಂದು ಅಗಾಧವಾಗಿದೆ ಎನ್ನುತ್ತವೆ ಆ ವರದಿಗಳು. ಅದನ್ನು ತುಂಬುವುದು ಸುಲಭ ಸಾಧ್ಯವಿಲ್ಲ. ಉದ್ಯೋಗಕ್ಷೇತ್ರದಲ್ಲಿ ಮುನ್ನಡೆ ಸಾಧಿಸಲು ಬೇಕಾದ ಶಿಕ್ಷಣ, ಕೌಶಲ್ಯ, ತರಬೇತಿ, ಅವಕಾಶ, ಅನುಕೂಲ, ಬೆಂಬಲ, ಮನ್ನಣೆಯ ಕೊರತೆಗಳು ಮಹಿಳೆಯರನ್ನು ಉದ್ಯೋಗಕ್ಷೇತ್ರದ ಅಂಚಿನಲ್ಲೇ ನಿಲ್ಲಿಸಿವೆ.

ಜಗತ್ತಿನ 197 ದೇಶಗಳ ಪೈಕಿ 187 ದೇಶಗಳು ಲಿಂಗತ್ವ ತಾರತಮ್ಯವನ್ನು ನಿವಾರಣೆ ಮಾಡಲು ಲಿಂಗತ್ವ ಅಂತರವನ್ನು ಕಡಿಮೆಮಾಡಲು ಅಗತ್ಯವಾದ ಕಾಯಿದೆ–ಕಾನೂನುಗಳನ್ನು ರಚನೆ ಮಾಡಿದ್ದರೂ, ಕಾರ್ಯಕ್ರಮಗಳ್ನು ರೂಪಿಸಿದ್ದರೂ ಕೂಡ ಈ ಅಂತರ ಕಿರಿದಾಗಿಲ್ಲ. ಈ ಪ್ರಯತ್ನಗಳು ದಕ್ಷಿಏಷ್ಯಾದ ರಾಷ್ಟ್ರಗಳಲ್ಲಿ ಶೇ.60ರಷ್ಟು ಸುಧಾರಣೆ ತಂದಿದ್ದರೆ ಭಾರತದಲ್ಲಿ ಕೇವಲ ಶೇ.25ರಷ್ಟು ಸುಧಾರಣೆ ಮಾತ್ರ ಕಂಡುಬಂದಿದೆ. ತಾರತಮ್ಯದ ಅಂತರ, ಕಂದರ ಇನ್ನೂ ಶೇ.75ರಷ್ಟು ಜೀವಂತವಾಗಿದೆ.

ಈ ಪ್ರಗತಿಯನ್ನು ಅಳೆಯಲು ಔದ್ಯೋಗಿಕ ಕ್ಷೇತ್ರದಲ್ಲಿ ಅವಕಾಶಗಳು ಮತ್ತು ಭಾಗವಹಿಸುವಿಕೆ, ಶೈಕ್ಷಣಿಕ ಪ್ರಗತಿ, ಆರೋಗ್ಯ ಮತ್ತು ಆಯಸ್ಸು ಹಾಗೂ ರಾಜಕೀಯ ಭಾಗವಹಿಸುವಿಕೆ ಎಂಬ ನಾಲ್ಕು ಅಳತೆಪಟ್ಟಿಗಳನ್ನು ಬಳಸಲಾಗುತ್ತದೆ. ನಾರ್ಡಿಕ್ ದೇಶಗಳು ಎಂದು ಹೆಸರಾದ ನಾರ್ವೆ, ಸ್ವೀಡನ್, ಡೆನ್ಮಾರ್ಕ್, ಫಿನ್‌ಲ್ಯಾಂಡ್ ಮತ್ತು ಐಸ್‌ಲ್ಯಾಂಡ್ ಸಮೂಹ ರಾಷ್ಟ್ರಗಳಲ್ಲಿ ಈ ಪ್ರಗತಿ ಶೇ. 76ರಷ್ಟಿದೆ. ಲಿಂಗತಾರತಮ್ಯದ ಈ ಕಂದರ ಕಿರಿದಾಗದೆ ಹಾಗೂ ಸಂಪೂರ್ಣವಾಗಿ ಮುಚ್ಚಿಹೋಗದೆ ನಿಜವಾದ ಪ್ರಗತಿ ಸಾಧ್ಯವಿಲ್ಲ.

ಹಾಗಾದರೆ, ಈ ಕಂದರ ಯಾಕೆ ಹಾಗೇ ಉಳಿದುಕೊಂಡು ಬಂದಿದೆ?

ಜಾಗತಿಕವಾಗಿ ಸಂಘಟಿತ ಔದ್ಯೋಗಿಕ ವಲಯದಲ್ಲಿ ಮಹಿಳೆಯ ಭಾಗವಹಿಸುವಿಕೆ 2018ರಲ್ಲಿ ಶೇ.48.5 ಮಾತ್ರ ಇದೆ. ಇದು 1990ರಲ್ಲಿ ಶೇ.51.5ರಷ್ಟಿತ್ತು. ಭಾರತದಲ್ಲಿ ಈ ಪ್ರಮಾಣ 1990ರಲ್ಲಿ ಶೇ.30.4 ಹಾಗೂ 2019ರಲ್ಲಿ ಶೇ.23.4. ಅಂದರೆ ಎರಡು ದಶಕಗಳಲ್ಲಿ ಶೇ.7ರಷ್ಟು ಕಡಿಮೆಯಾಗಿದೆ.

ಇವತ್ತಿಗೂ ಮಹಿಳೆಗೆ ಪ್ರವೇಶವೇ ಇಲ್ಲದಂತಹ ಅನೇಕ ಉದ್ಯೋಗಗಳು ಇವೆ. ಇದು ನಗರಕೇಂದ್ರಿತ ಅಂಕಿ ಸಂಖ್ಯೆಗಳಲ್ಲ. ದೊಡ್ಡ ಕಂಪೆನಿಗಳ ದೊಡ್ಡ ಹುದ್ದೆಗಳಿಗೆ ಸೀಮಿತವಾಗಿಯೂ ಇಲ್ಲ. ಗ್ರಾಮೀಣ, ಪಟ್ಟಣ ಪ್ರದೇಶಗಳ, ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸುವಂತಹ ಕ್ಷೇತ್ರವನ್ನೇ ಪ್ರಧಾನವಾಗಿಟ್ಟುಕೊಂಡು ನಾವು ಮಾತನಾಡುತ್ತಿದ್ದೇವೆ. ಮಹಿಳೆಗೆ ಪ್ರವೇಶ ಇದ್ದರೂ ಅಸಮಾನತೆ ಇರುವ, ಆಕೆಯ

ಇರವನ್ನು, ಆಕೆಯ ಕೊಡುಗೆಯನ್ನು ನಿರ್ಲಕ್ಷಿಸುವ, ಹೆಣ್ಣೆಂದು ಶೋಷಣೆ ಮಾಡುವ ನಡವಳಿಕೆಗಳು, ಅಭ್ಯಾಸಗಳು/ ಪರಂಪರೆ ಹಾಗೆಯೇ ಮುಂದುವರೆದಿವೆ. ಹಾಗಾಗಿ ಔದ್ಯೋಗಿಕ ಕ್ಷೇತ್ರದಲ್ಲಿ ಮಹಿಳೆಯರ ಸ್ಥಾನಪಲ್ಲಟ ಕುರಿತು ಮಾತನಾಡುವಾಗ ಹಲವು ಪ್ರಗತಿಗಳು ಆಗಿರುವುದು ನಿಜವಾದರೂ ಆ ಕುರಿತ ಮಾತು ಮತ್ತು ಚರ್ಚೆಗಳು ಇನ್ನೂ (ಆದ)ರೆ... ಗಳಿಂದಲೇ ನಿರ್ದೇಶಿತವಾಗಿವೆ.

ಮಹಿಳೆಯರು ವೇತನ ಸಹಿತ ಮತ್ತು ವೇತನರಹಿತ (ಶ್ರಮದಾಯಕವಾದ) ಉದ್ಯೋಗಗಳೆರನ್ನೂ ನಿರ್ವಹಿಸುತ್ತಾ ಬಂದಿದ್ದಾರೆ. ಮಹಿಳೆಯ ಕೆಲಸದ ಬಗ್ಗೆ ಮಾತನಾಡುವಾಗ ಈ ಎರಡನ್ನೂ ಗುರುತಿಸಬೇಕಾಗುತ್ತದೆ. ಉದಾಹರಣೆಗೆ ಮಕ್ಕಳನ್ನು, ಹಿರಿಯರನ್ನು, ರೋಗಿಗಳನ್ನು, ವಿಕಲಚೇತನರನ್ನು, ಪಾಲನೆ-ಪೋಷಣೆ ಮಾಡುವ ಕೆಲಸದಲ್ಲಿ ತೊಡಗಿರುವವರಲ್ಲಿ ಅತ್ಯಧಿಕ ಪ್ರಮಾಣ ಮಹಿಳೆಯರದು. ಅಂಗನವಾಡಿಯಿಂದ ಹಿಡಿದು, ಬಹುರಾಷ್ಟ್ರೀಯ ಕಂಪೆನಿಯ ಮಕ್ಕಳ ಪಾಲನೆ ಕೇಂದ್ರದ (ಕ್ರೆಷ್)ದವರೆಗೆ ಮಕ್ಕಳ ಪಾಲನೆಯ ಹೊಣೆ ಮಹಿಳೆಯರದ್ದೆ. ಇಂತಹ ಸೇವಾ ಕ್ಷೇತ್ರವು ಪ್ರತಿಯೊಂದು ಮಗುವನ್ನು ಉತ್ತಮ ಮನುಷ್ಯನನ್ನಾಗಿ, ಮಾನವೀಯವಾಗಿ ರೂಪಿಸುವ, ಬೆಳೆಸುವ ಕ್ಷೇತ್ರವಾಗಿದೆ. ಹಾಗಿರುವಾಗ ಇದು ಒಂದು ದೇಶದ, ಒಂದು ಸಮಾಜದ ಆರ್ಥಿಕ ಪ್ರಗತಿಗೆ, ಅಭಿವೃದ್ಧಿಗೆ ಕಾಣಿಕೆ ನೀಡುವಂತಹ ಕೆಲಸ ಅಲ್ಲವೇ? ಈ ಕೆಲಸಕ್ಕೆ ಯಾಕೆ ಮೌಲ್ಯವನ್ನು ನಿಗದಿಪಡಿಸುವುದಿಲ್ಲ? ಈ ಕೆಲಸಗಳಿಗೆ ಮೌಲ್ಯ ನಿಗದಿಪಡಿಸಿದಲ್ಲಿ ಮಹಿಳೆಯರ ಕೆಲಸದ ಮೌಲ್ಯ ಅರ್ಥ ಆಗುತ್ತದೆ. ಆಗ ಲಿಂಗತ್ವ ತಾರತಮ್ಯದ ಕಂದರವನ್ನು ಮತ್ತಷ್ಟು ಕಿರಿದು ಮಾಡಲು ಸಾಧ್ಯವಾಗುತ್ತದೆ ಎನ್ನುತ್ತವೆ ಆರ್ಥಿಕ ಸಂಸ್ಥೆಗಳು.

ಜಗತ್ತು ತಾಂತ್ರಿಕವಾಗಿ ಆಧುನಿಕತೆಯನ್ನು ಅಪ್ಪಿಕೊಂಡಂತೆಲ್ಲ ಸಾಮಾಜಿಕ ಮತ್ತು ಸಾಂಸ್ಕೃತಿಕವಾಗಿ ಸಾಂಪ್ರದಾಯಿಕತೆಯ ಕಡೆಗೆ ವಾಲುತ್ತಿದೆ. ಒಂದು ಕಡೆ ಪುರುಷ ಸಮುದಾಯ ಅಥವಾ ಪುರುಷಕೇಂದ್ರಿತ ಸಮಾಜ ಆಧುನಿಕವಾದರೂ ಅದರ ಮನೋಭಾವ, ಚಿಂತನೆ ನಡೆನುಡಿಗಳು ಸಾಂಪ್ರದಾಯಿಕವಾಗಿವೆ. ಹಾಗಾಗಿ, ಶಿಕ್ಷಣ-ಉದ್ಯೋಗದಲ್ಲಿ ಮಹಿಳೆಯರು ಪಡೆದಿರುವ ಅಲ್ಪಸ್ವಲ್ಪ ಅವಕಾಶಗಳೂ ಕೂಡ ಅವಳ ಬಿಡುಗಡೆಗೆ, ಸ್ವಾತಂತ್ರ್ಯಕ್ಕೆ, ಸಂತೋಷಕ್ಕೆ ದಾರಿಯಾಗುತ್ತಿಲ್ಲ. ಪಲ್ಲಟಗಳು ಆಗಿಯೇ ಇಲ್ಲ ಎಂದಲ್ಲ. ಆಗಿವೆ. ಆದರೆ, ಆ ಪಲ್ಲಟಗಳು ಮಹಿಳೆಯ ಬದುಕನ್ನು ಸ್ವಾತಂತ್ರ್ಯದ ಕಡೆಗೆ, ನೆಮ್ಮದಿಯ ಕಡೆಗೆ ನಡೆಸುತ್ತಿಲ್ಲ. ಯಾಕೆಂದರೆ ಈ ಪಲ್ಲಟಗಳ ಹಿಂದೆ ಅನೇಕ ಒತ್ತಡಗಳಿವೆ. ಇವು ಅವಳ ಆಯ್ಕೆಯ ಪಲ್ಲಟಗಳಲ್ಲ, ಬದಲಿಗೆ ಹೇರಿಕೆಯಾಗಿವೆ. ಇದು ಕೇವಲ ಭಾರತದ ಪರಿಸ್ಥಿತಿಯಲ್ಲ. ಜಾಗತಿಕವಾಗಿಯೂ ಈ ಪರಿಸ್ಥಿತಿಯನ್ನು ಕಾಣಬಹುದು.

ಜಾಗತೀಕರಣ, ಖಾಸಗೀಕರಣಗಳು ಮಹಿಳೆಯರಿಗೆ ಉದ್ಯೋಗಕ್ಷೇತ್ರದಲ್ಲಿ ಅಪಾರ

ಅವಕಾಶಗಳನ್ನು ತೆರೆದವು ಎನ್ನುವುದು ಸತ್ಯವಾದರೂ, ಯಾವ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಅಪಾರ ಸಾಧ್ಯತೆಗಳು ತೆರೆದುಕೊಂಡವು? ಮತ್ತದೇ ಸೇವಾ ಕ್ಷೇತ್ರ. ಬಾಲವಾಡಿ, ಪ್ರಾಥಮಿಕ ಶಾಲೆಗಳ ಶಿಕ್ಷಕರಾಗಿ, ರೋಗಿಗಳ ಸೇವೆ ಮಾಡುವ ಶುಶ್ರೂಶಕರಾಗಿ ಮಹಿಳೆಯರು ಉದ್ಯೋಗಕ್ಷೇತ್ರವನ್ನು ದೊಡ್ಡ ಸಂಖ್ಯೆಯಲ್ಲಿ ಪ್ರವೇಶಿಸಿದರು. ಇದು ಒಂದು ಆರಂಭ ಎಂದು ಭಾವಿಸಿದರೂ, ಮುಂದಿನ ವರ್ಷಗಳಲ್ಲಿ, ಅದರಲ್ಲೂ ಕಳೆದ 10–15 ವರ್ಷಗಳಲ್ಲಿ ಹೆಚ್ಚಾಗುತ್ತಿರುವ ಕೋಮುವಾದ, ಲೈಂಗಿಕ ದೌರ್ಜನ್ಯ ಮತ್ತು ಕೌಟುಂಬಿಕ ದೌರ್ಜನ್ಯಗಳು ಮಹಿಳೆಯರು ಮುಂದಿನ ಹಂತದ ಪ್ರಗತಿಗೆ ಸಾಗಲು ಆಗದಂತೆ, ಉದ್ಯೋಗದಲ್ಲಿ ಸಾಧನೆ ಮಾಡಲು ಆಗದಂತೆ ಕಟ್ಟಿಹಾಕುತ್ತಿವೆ. ಖಾಸಗೀಕರಣ ಮತ್ತು ಜಾಗತೀಕರಣದ ಹೊಡೆತಗಳನ್ನು ತಡೆದುಕೊಂಡು ಹೊರಗೆ ಔದ್ಯೋಗಿಕ ಕ್ಷೇತ್ರಕ್ಕೆ ಬಂದ ಮಹಿಳೆಯರಿಗೆ ಲೈಂಗಿಕ ದೌರ್ಜನ್ಯಗಳು ಬಹುದೊಡ್ಡ ತಡೆಯಾಗಿದೆ. ಪ್ರತಿನಿತ್ಯ ಜಾತಿಯ ಹೆಸರಲ್ಲಿ, ಧರ್ಮದ ಹೆಸರಲ್ಲಿ, ಮಹಿಳೆಯಾದ ಕಾರಣಕ್ಕೆ ನಡೆಯುತ್ತಿರುವ ಅತ್ಯಾಚಾರಗಳು, ಅದರಲ್ಲೂ ಸಾಮೂಹಿಕ ಅತ್ಯಾಚಾರಗಳು ಹಾಗೂ ಅವುಗಳನ್ನು ವಿಜೃಂಭಿಸುತ್ತಿರುವ ಮನಸ್ಸುಗಳು, ಮಾಧ್ಯಮಗಳು ಮಹಿಳೆಯರ ಮನೆಯಾಚೆಗಿನ ಬದುಕನ್ನು ಮತ್ತು ಮನೆಯೊಳಗಿನ ಬದುಕನ್ನು ಅಸಹನೀಯಗೊಳಿಸಿವೆ. ಸದಾ ಕಾಲ ಭೀತಿಯಿಂದ ಬದುಕುವಂತೆ ಮಾಡಿದೆ.

ಇಂತಹ ಸ್ಥಿತಿಯಲ್ಲೂ ಮಹಿಳೆಯರು ಉದ್ಯೋಗದಲ್ಲಿ ಮುಂದುವರೆದಿದ್ದೇ ಆದಲ್ಲಿ, ಅಲ್ಲಿಯೂ ಆಕೆಯ ಬದುಕು ಸುಲಭಸಾಧ್ಯವಿಲ್ಲ. ಅಲ್ಲಿಯೂ ಜಾತಿ, ಧರ್ಮ, ಪ್ರದೇಶದ ಆಧಾರದಲ್ಲಿ, ಮಹಿಳೆ ಎಂಬ ನೆಪದಲ್ಲಿ ಅವಳ ಮೇಲಿನ ದೌರ್ಜನ್ಯ ಮುಂದುವರೆಯುತ್ತದೆ. ಒಂದು ವೇಳೆ ಆಕೆ ಆ ಕುರಿತು ಮಾತನಾಡಿದ್ದೇ ಆದರೆ ಅವಳ ಮೇಲೆ ಮಾತಿನ ದಾಳಿ ನಡೆಸುವುದಲ್ಲದೆ, ಆಕೆ ಉದ್ಯೋಗವನ್ನೇ ಕಳೆದುಕೊಳ್ಳಬೇಕಾಗುತ್ತದೆ. ಇದು ಮಹಿಳೆ ಕೆಲಸ ಮಾಡುವ ಉತ್ಪಾದಕ ಮತ್ತು ಅನುತ್ಪಾದಕವಾದ ಎಲ್ಲ ಕ್ಷೇತ್ರಗಳಲ್ಲೂ ವ್ಯಾಪಕವಾಗಿ ನಡೆಯುತ್ತಿದೆ. ಹೊಲ–ಗದ್ದೆಯಲ್ಲಿ, ಗಾರ್ಮೆಂಟ್ ಫ್ಯಾಕ್ಟರಿಯಲ್ಲಿ, ಸರ್ಕಾರಿಕಚೇರಿಯಲ್ಲಿ, ಐಟಿ ಕಂಪೆನಿಯಲ್ಲಿ, ಸಿನಿಮಾ–ಟಿವಿ ಕ್ಷೇತ್ರದಲ್ಲಿ, ಸಮೂಹ ಮಾಧ್ಯಮದಲ್ಲಿ, ಶಿಕ್ಷಣ ಸಂಸ್ಥೆಗಳಲ್ಲಿ.. ಹೀಗೆ ಎಲ್ಲಕಡೆಯೂ ಇಂತಹುದು ನಡೆಯುತ್ತದೆ. ಉದಾಹರಣೆಗೆ ಇತ್ತೀಚೆಗೆ ನಡೆದ #ಮಿಟೂ ಚಳವಳಿಯನ್ನು ಗಮನಿಸಬಹುದು. ಬೇರೆ ಬೇರೆ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿದ್ದ ಮಹಿಳೆಯರು ತಮ್ಮ ಮೇಲಾದ ಲೈಂಗಿಕ ದೌರ್ಜನ್ಯ ಕುರಿತು ಮಾತನಾಡಿದಾಗ ಅನೇಕ ಚಿತ್ರತಾರೆಯರಿಗೆ ನಿರ್ದೇಶಕರು, ನಿರ್ಮಾಪಕರು ಕೆಲಸವನ್ನು ನೀಡದೆ ಮೂಲೆಗುಂಪು ಮಾಡಿದರು. ಅನೇಕ ಕಂಪೆನಿಗಳು ತಾವು ಇನ್ನು ಮುಂದಿನ ದಿನಗಳಲ್ಲಿ ಮಹಿಳೆಯರನ್ನು ಕೆಲಸಕ್ಕೆ ತೆಗೆದುಕೊಳ್ಳುವುದಿಲ್ಲ ಎಂದು ಬಹಿರಂಗವಾಗಿ ಘೋಷಿಸಿದವು.

ಸಾಂಪ್ರದಾಯಿಕತೆಯ ಹೆಸರಿನಲ್ಲಿ ಮಹಿಳೆಯ ಮೇಲೆ ನಡೆಯುತ್ತಿರುವ ದೌರ್ಜನ್ಯಗಳು

ಮತ್ತೊಂದು. ಉದಾಹರಣೆಗೆ ಮುಟ್ಟಿನ ವಿಷಯ. ಶತಶತಮಾನಗಳಿಂದ ಮಹಿಳೆಯರು ಮುಟ್ಟಿನ ಎಲ್ಲ ಏರುಪೇರುಗಳನ್ನು ಸಹಿಸಿಕೊಂಡು, ನುಂಗಿಕೊಂಡು, ಮರೆಮಾಚಿಕೊಂಡು ಬದುಕು ನಡೆಸುತ್ತಿದ್ದಾರೆ. ಮುಟ್ಟಿನ ದಿನಗಳ ತಮ್ಮ ಕಷ್ಟಗಳು ಏನಾದರೂ ಇರಲಿ ನಿತ್ಯದ ಬದುಕಿಗೆ ಯಾವುದೇ ತೊಂದರೆಯಾಗದಂತೆ ನಿಭಾಯಿಸುತ್ತಿದ್ದಾರೆ. ಇತ್ತೀಚೆಗೆ ಕೆಲವು ಕಂಪೆನಿಗಳು ಮುಟ್ಟಿನ ದಿನಗಳಲ್ಲಿ ಹೆಣ್ಣುಮಕ್ಕಳಿಗೆ ರಜೆ ನೀಡುವುದಾಗಿ ಪ್ರಕಟಿಸಿದವು. ಇದೊಂದು ಮಾನವೀಯ, ಸಮರ್ಥನೀಯ ನಡೆ.ಆದರೆ ಮತ್ತೊಂದು ಕಡೆಯಲ್ಲಿ ಉದ್ಯೋಗದ ಸ್ಥಳದಲ್ಲಿ ಇರುವ ಮಹಿಳೆಯರನ್ನು ಸಂಸ್ಕೃತಿಯ ರಕ್ಷಕರೆಂಬ ಹೆಸರಿನಲ್ಲಿ ಧಾರ್ಮಿಕ ಮತ್ತು ಆಧ್ಯಾತ್ಮಿಕ ವಿಚಾರಗಳ ಕಡೆಗೆ ಸೆಳೆಯುವ ವ್ಯವಸ್ಥಿತ ಸಂಚುಗಳು ನಡೆದಿವೆ. ಉದ್ಯೋಗದ ಸ್ಥಳದಲ್ಲಿಯೂ ದೇವರ ಪೂಜೆ, ಹಬ್ಬದ ಆಚರಣೆ, ಸಂಪ್ರದಾಯಗಳ ಆಚರಣೆ ಮೊದಲಾದವುಗಳನ್ನು ನಡೆಸುವಂತೆ ಮಹಿಳೆಯರನ್ನೇ ಮುಂದೆ ಮಾಡುವ ಮೂಲಕ ಆಕೆಯ ಗಮನವನ್ನು ಉದ್ಯೋಗದಿಂದ ಇತರೆ ಸಾಂಪ್ರದಾಯಿಕ ಚಟುವಟಿಕೆಗಳ ಕಡೆಗೆ ತಿರುಗಿಸಲಾಗುತ್ತಿದೆ. ಯಾವ ಸ್ಥಳಗಳು ಮತಧರ್ಮ ನಿರಪೇಕ್ಷ ಆಗಬೇಕಿತ್ತೋ ಅಲ್ಲೆಲ್ಲ ವ್ಯಾಪಕ ಧಾರ್ಮಿಕ ಚಟುವಟಿಕೆಗಳು ನಡೆಯುತ್ತಿದ್ದು, ಸಂಸ್ಕೃತಿಯ ಹೆಸರಿನಲ್ಲಿ ಸಾಂಪ್ರದಾಯಿಕತೆಯನ್ನು ಮಹಿಳೆಯರ ಮೇಲೆ ಹೇರುತ್ತಿದ್ದಾರೆ. ಹೀಗಾಗಿ ಮಹಿಳೆ ತನ್ನ ಔದ್ಯೋಗಿಕ ಪ್ರಗತಿಯ ಕುರಿತು ಚಿಂತಿಸುವ ಬದಲು ಉದ್ಯೋಗದ ಸ್ಥಳದಲ್ಲೂ ಸಂಸ್ಕೃತಿಯ ಕಟ್ಟಳೆಯಲ್ಲಿ ಬಂಧಿತಳಾಗುತ್ತಿದ್ದಾಳೆ. ಧಾರವಾಡದಲ್ಲಿ ನಡೆದ ಅಖಿಲ ಭಾರತ ಸಾಹಿತ್ಯ ಸಮ್ಮೇಳನದಲ್ಲಿ ಆಶಾ ಕಾರ್ಯಕರ್ತರನ್ನು ಮತ್ತು ಅಂಗನವಾಡಿ ಕಾರ್ಯಕರ್ತರನ್ನು ಸಾಹಿತ್ಯದ ಚರ್ಚೆ–ಸಂವಾದದಲ್ಲಿ ಭಾಗವಹಿಸುವಂತೆ ಮಾಡುವ ಬದಲು ಅವರಿಗೆ ಸಮವಸ್ತ್ರದ ಸೀರೆ ಉಡಿಸಿ, ತಲೆಯ ಮೇಲೆ ಕಳಸ ಹೊರಿಸಿ, ನಾಲ್ಕೈದು ಕಿಲೋಮೀಟರು ಮೆರವಣಿಗೆಯಲಿ ್ಲನಡೆಸಲಾಯಿತು. ಅವರನ್ನು ಉತ್ಸವಮೂರ್ತಿಗಳಂತೆ ಬಳಸಿಕೊಳ್ಳಲಾಯಿತು. ತಮ್ಮ ಆರ್ಥಿಕ ಸ್ವಾತಂತ್ರ್ಯಕ್ಕಾಗಿ, ವ್ಯಕ್ತಿತ್ವದ ಬೆಳವಣಿಗೆಗಾಗಿ ಉದ್ಯೋಗಕ್ಕೆ ಬರುವ ಮಹಿಳೆಯರನ್ನು ಹೀಗೆ ಸಂಸ್ಕೃತಿಯ ಹೆಸರಿನಲ್ಲಿ ಬಳಕೆ ಮಾಡಲಾಗುತ್ತಿದೆ.

ಇಂದು ದುಡಿಯುತ್ತಿರುವ ಐವರು ಮಹಿಳೆಯರಲ್ಲಿ ಇಬ್ಬರಿಗೆ ಮಾತ್ರ ದುಡಿಮೆಗೆ ತಕ್ಕ ವೇತನ ದೊರೆಯುತ್ತಿದೆ ಎನ್ನುತ್ತದೆ ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆ. ಉಳಿದವರಿಗೆ ದುಡಿಮೆಗೆ ತಕ್ಕ ಮೌಲ್ಯ ದೊರೆಯುತ್ತಿಲ್ಲ. ಅದು ಬಿಟ್ಟಿ ಕೆಲಸ ಆಗ್ತಾ ಇದೆ. ಇಂತಹ ಕಾರಣಗಳಿಂದಾಗಿ ದುಡಿಯುವ ಕ್ಷೇತ್ರದಲ್ಲಿ ಮಹಿಳೆಯರು ಕಾಣೆಯಾಗುತ್ತಿದ್ದಾರೆ. ಮಹಿಳೆಯರ ಜನಸಂಖ್ಯೆಗೆ ಅನುಗುಣವಾಗಿ ಔದ್ಯೋಗಿಕ ಕ್ಷೇತ್ರದಲ್ಲಿ ಇರುವ ಮಹಿಳೆಯರ ಪ್ರಮಾಣ ಹೆಚ್ಚುತ್ತಿಲ್ಲ. 2000ದ ದಶಕದಲ್ಲಿ ಔದ್ಯೋಗಿಕ ಕ್ಷೇತ್ರದಲ್ಲಿ ಇದ್ದ ಮಹಿಳೆಯರ ಪ್ರಮಾಣ 2010ರ ದಶಕದಲ್ಲಿ ಅರ್ಧದಷ್ಟು ಕಡಿಮೆಯಾಗಿದೆ ಎನ್ನುತ್ತದೆ ಅಂತಾರಾಷ್ಟ್ರೀಯ ಕಾರ್ಮಿಕರ ಸಂಘಟನೆಯ ವರದಿ.

ಕಾರ್ಮಿಕರ ಹಿತರಕ್ಷಣೆಯ ಕಾನೂನುಗಳೂ ಕೂಡ ಪುರುಷಕೇಂದ್ರಿತವಾಗಿದ್ದು ಅವು ಮಹಿಳೆಯರ ಹಿತವನ್ನು, ಅಗತ್ಯಗಳನ್ನು ಗಮನಿಸುವುದಿಲ್ಲ. ಮಹಿಳೆಯರು ಪೂರ್ಣಪ್ರಮಾಣದಲ್ಲಿ ದುಡಿಮೆಯಲ್ಲಿ ತೊಡಗಿಸಿಕೊಳ್ಳಲು ಬೇಕಾದ ಪರಿಸರವನ್ನು ನಿರ್ಮಿಸಲು ಈ ಕಾನೂನುಗಳು ಪೂರಕವಾಗಿಲ್ಲ. ಉದಾಹರಣೆಗೆ ಹೆರಿಗೆರಜೆಗೆ ಸಂಬಂಧಿಸಿದ ಕಾನೂನು ಗಮನಿಸಬಹುದು. ಪ್ರಸ್ತುತ ಹೆರಿಗೆಯಾದಾಗ ತಾಯಿಗೆ ಮೂರು ತಿಂಗಳು ವೇತನಸಹಿತ ರಜೆಕೊಡುವ ಕಾನೂನು ಚಾಲ್ತಿಯಲ್ಲಿದೆ. ಹಲವು ದೇಶಗಳಲ್ಲಿ ಇದನ್ನು ತಂದೆಗೂ ಅನ್ವಯಿಸಲಾಗುತ್ತದೆ. ಅವಳಿ–ಜವಳಿ ಮಕ್ಕಳಾದಾಗ ಹೆಚ್ಚಿನ ಅವಧಿಯ ರಜೆ ಬೇಕು ಎಂಬ ಬೇಡಿಕೆಯನ್ನು ಈಗ ಮಂಡಿಸಲಾಗಿದೆ. ಇದಕ್ಕೆ ಪ್ರತಿಕ್ರಿಯಿಸಿರುವ ಆಡಳಿತ ಮಂಡಲಿಗಳು ಹಾಗೂ ಕಾನೂನು ಇಲಾಖೆ, ಅವಳಿ–ಜವಳಿ ಮಕ್ಕಳನ್ನು ಎರಡು ಮಕ್ಕಳೆಂದು ಪರಿಗಣಿಸಿ ಕಾನೂನು ರೀತ್ಯಾ ಎರಡು ಹೆರಿಗೆ ರಜೆಗಳನ್ನು ನೀಡುತ್ತೇವೆ. ಆದರೆ ಮತ್ತೆ ಹೆರಿಗೆಯಾದಲ್ಲಿ ಆಗ ಪುನಃ ಹೆರಿಗೆರಜೆ ಅನ್ವಯಿಸುವುದಿಲ್ಲ ಎನ್ನುತ್ತಿವೆ. ಇದು ನಮ್ಮ ಸಮಾಜದ ಜೀವವಿರೋಧಿ ನಿಲುವನ್ನು ತೋರಿಸುತ್ತದೆ.

ಕುಟುಂಬವನ್ನು ಸಮಾಜದ ಮೂಲಘಟಕ ಎಂದು ಕರೆಯುತ್ತೇವೆ. ಈ ಮೂಲಘಟಕದಲ್ಲಿ ಸಮಾನತೆಯ ಪಾಠವನ್ನು ಸರಿಯಾಗಿ ಕಲಿಸದೇ ಹೋದಲ್ಲಿ ಪಾಲಿಸದೇ ಹೋದಲ್ಲಿ ಸಮಾಜದಲ್ಲಿ ಸಮಾನತೆಯನ್ನು ಕಾಣಲು ಸಾಧ್ಯವಿಲ್ಲ. ಹಾಗಾಗಿ ನಾವೆಲ್ಲರೂ ಸಮಾನತೆ ಮತ್ತು ಸಮತೆಯ ಪಾಠವನ್ನು ನಡವಳಿಕೆಯನ್ನು ನಮ್ಮ ನಮ್ಮ ಮನೆಗಳಲ್ಲಿ, ನೆರೆಹೊರೆಯವರಲ್ಲಿ, ಸ್ನೇಹಿತರಲ್ಲಿ, ಬಂಧುಗಳಲ್ಲಿ ಬಿತ್ತುತ್ತಾ ಹೋಗಬೇಕಿದೆ. ಅಲ್ಲಿ ಬದಲಾವಣೆಯಾಗದಿದ್ದಲ್ಲಿ ಎಷ್ಟು ಕಾನೂನು ಕಾಯಿದೆಗಳು ಬಂದರೂ ಅದರ ಅನುಷ್ಠಾನ ಮಾಡುವ ಮನಸ್ಸುಗಳು, ಶಕ್ತಿಗಳು ಅಸಮಾನತೆಯನ್ನೇ ಬಿತ್ತುತ್ತಾ ಹೋಗುತ್ತವೆ.

## ಸಂಪನ್ಮೂಲ ವ್ಯಕ್ತಿಗಳ ಕಿರು ಪರಿಚಯ

**ವಿ. ಗಾಯತ್ರಿ** ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲ್ಲೂಕಿನ ಮಂಡಗದ್ದೆ ಗ್ರಾಮ ವಿ. ಗಾಯತ್ರಿಯವರ ಹುಟ್ಟೂರು. ವಿಜ್ಞಾನದಲ್ಲಿ ಪದವಿ ಪಡೆದ ಇವರು ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ ಮತ್ತು ಪತ್ರಿಕೋದ್ಯಮದಲ್ಲಿ ಡಿಪ್ಲೊಮಾ ಪದವಿಯನ್ನು ಪಡೆದರು. ಲೇಖಕಿಯಾಗಿ, ಅನುವಾದಕಿಯಾಗಿ, ಪರ್ತಕರ್ತೆಯಾಗಿ ಹಾಗೂ ಕಾರ್ಯಕರ್ತೆಯಾಗಿ ಹಲವು ಕ್ಷೇತ್ರಗಳಲ್ಲಿ ಗಾಯತ್ರಿಯವರು ದುಡಿದಿದ್ದಾರೆ. 'ಸಹಜ ಸಾಗುವಳಿ' ಎಂಬ ದ್ವೈಮಾಸಿಕ ಪತ್ರಿಕೆಯು ನಿರಂತರ ಹದಿನೈದು ವರ್ಷಗಳಿಂದ ಇವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿದೆ.

*ಪ್ರಮುಖ ಪ್ರಕಟಿತ ಕೃತಿಗಳು*

ತುಂಗಾ ಮಕ್ಕಳ ಸೃಜನಶೀಲ ಕಲಿಕೆಯ ಸುತ್ತ ಹೆಣೆದ ಕಾದಂಬರಿ. ತೊತ್ತೋ ಚಾನ್– ವಿಶ್ವವಿಖ್ಯಾತ ಜಪಾನಿ ಕಾದಂಬರಿಯ ಕನ್ನಡ ಅನುವಾದ. ಡಿ.ಡಿ.ಭರಮಗೌಡ್ರ ಬದುಕು– ಬೇಸಾಯ. ಸಾವಯವ ಪರಂಪರೆಯ ಕಥನ ಭಾಗ 1, 2, 3 ಮತ್ತು 4 ಸಹಜ/ಸಾವಯವ ರೈತರ ಕೃಷಿ ಮತ್ತು ಬದುಕುಗಳು (28 ಕಥನಗಳ ಸಂಗ್ರಹ). ಪುಟ್ಟೀರಮ್ಮನ ಪುರಾಣ ಮಿಶ್ರಬೆಳೆ ಮತ್ತು ಬೆರೆಕೆಸೊಪ್ಪಿನ ವಿಸ್ಮಯ ಲೋಕ– ದಾಖಲಿಸಿ ನಿರೂಪಿಸಿದ ಕೃತಿ. ತೆರೆಮರೆಯ ಸತ್ಯಕಥೆ–ಕೃಷಿ ಮತ್ತು ಆಹಾರದಲ್ಲಿ ಕುಲಾಂತರಿಯ ಅಪಾಯ– ಅನುವಾದಿಸಿ ಸಂಪಾದಿಸಿದ ಪ್ರಮುಖ ಲೇಖನಗಳ ಸಂಗ್ರಹ. ಸಾವಯವ ಸಂಗತಿ – ಸುಭಾಷ್ ಶರ್ಮರ ಸಮಪಾತಳಿ ಸಹಜ ಕೃಷಿಯ ವಿಧಿ ವಿಧಾನಗಳು. ಸಾವಯವ ಕೃಷಿಗೆ ಸರಳ ಸೂತ್ರಗಳು–ಪ್ರಖ್ಯಾತ ರೈತ ಅನುಶೋಧಕ ಎಸ್. ಆರ್. ಸುಂದರ ರಾಮನ್ ಅವರ ಪ್ರಯೋಗಗಳ ಸಂಗ್ರಹ. ಸಾವಯವ ಕೃಷಿ, ಸ್ವಾವಲಂಬಿ ಬದುಕು.

ಮಳೆಯಾಧಾರಿತ ಕೃಷಿ ಬಿಕ್ಕಟ್ಟು ಉಳಿವಿನ ಕೀಲಿಕೈ ಮಹಿಳೆಯರ ಕೈಯಲ್ಲಿ.

*ಇತರೆ*

ಕೇಂದ್ರ ಪರಿಸರ ಮಂತ್ರಾಲಯದ 'ಪರಿಸರ ಶಿಕ್ಷಣ ಕೇಂದ್ರ'ಕ್ಕಾಗಿ 'ಪರಿಸರ ಶಿಕ್ಷಣದಲ್ಲಿ ಆಗತ್ಯ ಕಲಿಕೆಗಳು'. 'ಎಳೆಯರಿಗಾಗಿ ಪರಿಸರ' ಮುಂತಾದ ಮಹತ್ವದ ಕೃತಿಗಳ ಅನುವಾದ ಮತ್ತು ಸಂಪಾದನೆ. ಇದೇ ಕೇಂದ್ರದ ಪರಿಸರ ವಿಜ್ಞಾನದ ವಿಶ್ವಕೋಶಕ್ಕೆ ಪದ ಸಂಗ್ರಹಣೆ, ಪದಗಳ ಯಾದಿ, ಮಾಹಿತಿ ಸಂಗ್ರಹ, ಅನುವಾದ, ಸಂಪಾದನೆ. ಇನ್ನೂ ಹಲವಾರು ಅನುವಾದಿತ ಪುಸ್ತಿಕೆಗಳನ್ನು ವಿವಿಧ ಪ್ರಕಾಶಕರಿಂದ ಪ್ರಕಟ. ಪರ್ತಕರ್ತೆಯಾಗಿ 'ಮಾನಸ' ಪತ್ರಿಕೆಯನ್ನು ಸುಮಾರು ಹತ್ತು ವರ್ಷಗಳ ಕಾಲ ರೂಢಿಸಿ ಬೆಳೆಸುವಲ್ಲಿ ಇವರ ಶ್ರಮವಿದೆ. ಪ್ರಜಾವಾಣಿ ದಿನಪತ್ರಿಕೆಯಲ್ಲಿ ಅಲ್ಲದೆ ಪ್ರಮುಖ ಪತ್ರಿಕೆಗಳಲ್ಲಿ ಇವರ ಲೇಖನಗಳು ಪ್ರಕಟವಾಗಿವೆ. ಸಾಮಾಜಿಕ ಕಾರ್ಯಕರ್ತೆಯಾಗಿ ವಿದ್ಯಾರ್ಥಿದೆಸೆಯಿಂದಲೂ ಸ್ವಾಯತ್ತ ಮಹಿಳಾ ಚಳವಳಿಯಲ್ಲಿ ಭಾಗವಹಿಸಿದ್ದಾರೆ. ಬೆಂಗಳೂರಿನಲ್ಲಿ 1996ರಲ್ಲಿ ಆಯೋಜಿಸಿದ್ದ ವಿಶ್ವಸುಂದರಿ ಸ್ಪರ್ಧೆಯನ್ನು ವಿರೋಧಿಸಿ ಸೆರೆಮನೆಗೂ ಹೋಗಿ ಬಂದಿದ್ದಾರೆ. ಮಹಿಳಾ ಕಾರ್ಮಿಕ ಸಂಘಟನೆಗಳಲ್ಲಿ ಕೆಲಸ ಮಾಡಿದ್ದಾರೆ. ಸಾವಯವ ಕೃಷಿ ಕ್ಷೇತ್ರದಲ್ಲಿ ಅಪಾರ ಕೆಲಸ ಮಾಡಿರುವ ಇವರು ಕೃಷಿ ಮತ್ತು ಆಹಾರದಲ್ಲಿ ಕುಲಾಂತರಿಯನ್ನು ವಿರೋಧಿಸುವ, ಕೃಷಿಯ ಮೇಲೆ ಕಾರ್ಪೊರೇಟ್ ಪ್ರಹಾರವನ್ನು ಪ್ರತಿರೋಧಿಸುವ ಆಂದೋಲನಗಳಲ್ಲಿ ಸಕ್ರಿಯರಾಗಿದ್ದಾರೆ. ಪಿ. ಸಾಯಿನಾಥ್ ಸ್ಥಾಪಿಸಿರುವ 'ಕೌಂಟರ್ ಮೀಡಿಯಾ' ಪ್ರಶಸ್ತಿ ಇವರಿಗೆ ದೊರೆತಿದೆ. ಅಲ್ಲದೆ ಧಾರವಾಡ 'ಪರ್ಯಾಯ ಕೃಷಿ ಬರಹಗಾರ' ಪ್ರಶಸ್ತಿ, ಉತ್ತರ ಕರ್ನಾಟಕದ ಲೇಖಕಿಯರ ಸಂಘದ 'ಇನ್ಫೋಸಿಸ್ ಫೌಂಡೇಶನ್' ಪ್ರಶಸ್ತಿಗಳೂ

ಇವರಿಗೆ ಸಂದಿವೆ. ಇದರ ಜೊತೆಗೇ ಗ್ರೀನ್ ಫೌಂಡೇಷನ್, ಬೆಂಗಳೂರು; ಕೃಷಿ ತಂತ್ರಜ್ಞರ ಸಂಸ್ಥೆ, ಬೆಂಗಳೂರು; ಕ್ರೈಸ್ಟ್ ಕಾಲೇಜು, ಬೆಂಗಳೂರು; ಪ್ರೆಸಿಡೆನ್ಸಿ ವಿದ್ಯಾ ಸಂಸ್ಥೆ, ಸಿರಾ; ಗಾಂಧಿ ಸ್ಮಾರಕ ನಿಧಿ, ಬೆಂಗಳೂರು ಮುಂತಾದ ಹಲವಾರು ಸಂಘಸಂಸ್ಥೆಗಳ ಗೌರವ ಪುರಸ್ಕಾರಗಳೂ ಇವರಿಗೆ ದೊರಕಿವೆ.

**ಡಾ. ಸಬಿತಾ ಬನ್ನಾಡಿ** ಅವರ ಹುಟ್ಟೂರು ಉಡುಪಿ ಜಿಲ್ಲೆಯ ಬನ್ನಾಡಿ. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ 1988ರಲ್ಲಿ ಇವರು ಕನ್ನಡ ಎಂ.ಎ ಪದವಿಯನ್ನು ಪ್ರಥಮ ರ್‍ಯಾಂಕ್‌ನೊಂದಿಗೆ ಪಡೆದುಕೊಂಡರು. ಅನಂತರ 'ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಚರಿತ್ರೆ, ಸಮಾಜ ಮತ್ತು ಸಂಸ್ಕೃತಿ ಅಂತರ್ ಸಂಬಂಧಗಳು'ಎಂಬ ವಿಷಯದ ಕುರಿತು ಪ್ರೊ. ಹೆಚ್. ಜೆ. ಲಕ್ಕಪ್ಪಗೌಡರ ಮಾರ್ಗದರ್ಶನದಲ್ಲಿ ಕುವೆಂಪು ವಿಶ್ವವಿದ್ಯಾನಿಲಯದಿಂದ ಪಿಹೆಚ್.ಡಿ ಪದವಿಯನ್ನು ಪಡೆದರು. ವಿಮರ್ಶಕಿ, ಕವಯತ್ರಿ ಮತ್ತು ಅಂಕಣಗಾರ್ತಿಯಾಗಿ ಗುರುತಿಸಿಕೊಂಡಿರುವ ಡಾ. ಸಬಿತಾ ಬನ್ನಾಡಿ ಅವರು ಸದ್ಯ ತರೀಕೆರೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ವಿಭಾಗದದಲ್ಲಿ ಸಹ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಸಾಹಿತ್ಯ ನಿರೂಪಣೆಗಳು(2007) ಇವರ ವಿಮರ್ಶಾ ಸಂಕಲನ. ಆಲಯವು ಬಯಲಾಗಿ(2010) ಇವರ ಸಂಶೋಧನಾ ಮಹಾಪ್ರಬಂಧ. ನಿರಿಗೆ(2017) ಇವರ ಕವಿತಾ ಸಂಕಲನವಾಗಿದೆ. ಗೂಡು ಮತ್ತು ಆಕಾಶ (2017) ಅಂಕಣಬರಹಗಳ ಕೃತಿ. ಇವರು ಸಂವಾದ ಮತ್ತು ಪ್ರಜಾವಾಣಿ ಪತ್ರಿಕೆಗಳಿಗೆ ಅಂಕಣಗಳನ್ನು ಬರೆಯುತ್ತಿದ್ದಾರೆ. ಹಲವು ಸಂಪಾದನ ಕೃತಿಗಳನ್ನು ಹೊರತಂದಿದ್ದು ಅವುಗಳೆಂದರೆ ಅವಳ ಕವಿತೆ (2015–2016) ಹೆಣ್ಣುನೋಟ (ಸಬಾಲ್ಟ್ರನ್ ಸಂಪುಟ), ಭಾಷೆ–ಬಳಕೆ, ಸಾಹಿತ್ಯ ಸಂಕಥನ ಹಾಗೂ ಸಾಹಿತ್ಯ ಸಂಕಥನ ಇವು ಅವರ ಪಠ್ಯಪುಸ್ತಕ ಸಂಪಾದನೆಗಳು. ಕುವೆಂಪು ಭಾಷಾ ಪ್ರಾಧಿಕಾರಕ್ಕೆ ಪ್ರಾತಿನಿಧಿಕ ಮಹಿಳಾ ಸಾಹಿತ್ಯ ಮಾಲಿಕೆ ಎಂಬ ಕೃತಿಯ ಸಂಪಾದನೆಯಲ್ಲಿ ಇವರು ಕಾರ್ಯ ನಿರ್ವಹಿಸಿರುತ್ತಾರೆ.

ಇವರ ಗಾರ್ಮೆಂಟ್ ಹುಡುಗಿ, ಚಂದದ ಪೋಷಾಕು ಎಂಬ ಕವಿತೆ ಮಂಗಳೂರು ವಿಶ್ವವಿದ್ಯಾನಿಲಯ ದ್ವಿತೀಯ ಎಂ.ಎಸ್ಸಿ ಪಠ್ಯ ಪುಸ್ತಕದಲ್ಲಿ ಸೇರ್ಪಡೆಯಾಗಿದೆ. ಡಿ.ಎಸ್.ಕರ್ಕಿ ಕಾವ್ಯ ಪ್ರಶಸ್ತಿ ಮತ್ತು ಬೆಂಗಳೂರಿನ ಅತ್ತಿಮಬ್ಬೆ ಟ್ರಸ್ಟಿನ ಪುಸ್ತಕ ಪ್ರಶಸ್ತಿಗಳು ಇವರಿಗೆ ದೊರೆತಿವೆ. ಇದುವರೆಗೆ ಇವರ ಐವತ್ತಕ್ಕೂ ಹೆಚ್ಚು ಲೇಖನಗಳು ವಿವಿಧ ಪತ್ರಿಕೆ ಮತ್ತು ಸಂಕಲನಗಳಲ್ಲಿ ಪ್ರಕಟ ಆಗಿವೆ.

**ಸತ್ಯಾ.ಎಸ್** ಇವರು ತುಮಕೂರು ಜಿಲ್ಲೆಯವರು. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪತ್ರಿಕೋದ್ಯಮದಲ್ಲಿ ಸ್ನಾತಕಪದವಿಯನ್ನು ಪಡೆದು ಪತ್ರಕರ್ತರಾಗಿ ವೃತ್ತಿ ಜೀವನವನ್ನು ಆರಂಭಿಸಿದರು. ಬೆಂಗಳೂರಿನಲ್ಲಿ ಕನ್ನಡಪ್ರಭ ಪತ್ರಿಕೆಯಲ್ಲಿ ದೀರ್ಘಕಾಲ ದುಡಿದ ಇವರು ಅನಂತರದಲ್ಲಿ ಟೈಂಸ್ ಆಫ್ ಇಂಡಿಯಾ, ಜನವಾಹಿನಿ ಪತ್ರಿಕೆಗಳಲ್ಲಿ ಕಾರ್ಯ ನಿರ್ವಹಿಸದರು. ಜನವಾದಿ ಮಹಿಳಾ ಸಂಘಟನೆಯನ್ನು ಮಂಗಳೂರಿನಲ್ಲಿ ಹುಟ್ಟುಹಾಕಿ ಹಲವು ಹೋರಾಟಗಳನ್ನು ಮತ್ತು ವಿಚಾರ ಸಂಕಿರಣಗಳನ್ನು ನಡೆಸಿದರು.ಅನಂತರದಲ್ಲಿ ಮಹಿಳಾ ಬೀಡಿ ಕಾರ್ಮಿಕರ ಬದುಕಿನ ಅಧ್ಯಯನಕ್ಕಾಗಿ ನ್ಯಾಷನಲ್ ಫೌಂಡೇಶನ್ ಆಫ್ ಇಂಡಿಯಾದ ಫೆಲೋಶಿಪ್‌ಗೆ ಭಾಜನರಾದರು. ಸಾಂಪ್ರದಾಯಿಕ ಮೀನುಗಾರರ ಬದುಕಿನ ಮೇಲೆ ಜಾಗತಿಕ ವ್ಯಾಪಾರ ಒಪ್ಪಂದದ ಪರಿಣಾಮಗಳು ಎಂಬ ವಿಷಯದ ಕುರಿತ ಅಧ್ಯಯನಕ್ಕಾಗಿ ಆಕ್ಸಫ್ಯಾಮ್ ಫೆಲೋಶಿಪ್ ಪಡೆದಿದ್ದಾರೆ. ಗ್ರಾಮೀಣ ಅಭಿವೃದ್ಧಿ ಇಲಾಖೆ, ಶಿಕ್ಷಣ ಇಲಾಖೆ, ಆರೋಗ್ಯ ಇಲಾಖೆ, ಅಜೀಂ ಪ್ರೇಮ್‌ಜಿ ಫೌಂಡೇಶನ್ ಮೊದಲಾದ ಸಂಸ್ಥೆಗಳಲ್ಲಿ ಸಂವಹನ ಸಮಾಲೋಚಕಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಕಿರುಚಿತ್ರಗಳ ನಿರ್ಮಾಣದಲ್ಲೂ ಇವರು ಪರಿಶ್ರಮ ಹೊಂದಿದ್ದಾರೆ. ಸಾಮಾಜಿಕ ಮತ್ತು ರಾಜಕೀಯ ಕಾರ್ಯಕರ್ತರಾಗಿಯೂ ಇವರು ಪ್ರಸಿದ್ದರಾಗಿದ್ದಾರೆ. ಕಲಬುರ್ಗಿ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಉದ್ಯೋಗ ಖಾತ್ರಿ ಯೋಜನೆಯ ಅನುಷ್ಠಾನದ ವಿಸ್ತೃತ ದಾಖಲಾತಿಯನ್ನು ಇವರು ಮಾಡಿದ್ದಾರೆ.

ನೆಲದ ಸಿರಿ ಇವರ ಸಂಪಾದಿತ ಕೃತಿ. ಸಂವಿಧಾನದ ಕಾಲಾಳು ಎಂಬುದು ತೀಸ್ತಾ ಸೆತಲ್ವಾಡ್ ಅವರ ಕೃತಿಯ ಅನುವಾದವಾಗಿದೆ. ಇವರ ಕೆಲವು ಲೇಖನಗಳು ವಿವಿಧ ವಿಶ್ವವಿದ್ಯಾನಿಲಯಗಳ ಪದವಿ ವಿದ್ಯಾರ್ಥಿಗಳಿಗೆ ಪಠ್ಯವಾಗಿವೆ. ಪ್ರಸ್ತುತ ಕಿರು ಸಂಶೋಧನೆ ಮತ್ತು ಅನುವಾದ ಕಾರ್ಯಗಳಲ್ಲಿ ಸತ್ಯಾ ಅವರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

# ಅನುಭವ ಕಥನಗಳು

## ರತ್ನಮ್ಮ, ಗೆಜ್ಜಲಗೆರೆ, ಗಾಟು

## ಬದುಕು ಬದಲಿಸಿದ ಸಂಘ ಶಕ್ತಿ

ರತ್ನಮ್ಮ ಎಂಬ ಸಾಧಾರಣ ಹೆಣ್ಣುಮಗಳು ನಾನು. ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ಪ್ರಮುಖ ಗ್ರಾಮಗಳಲ್ಲಿ ಒಂದಾದ ಗೆಜ್ಜಲಗೆರೆ ನನ್ನ ಹುಟ್ಟೂರು. ನನ್ನ ಬದುಕಿನಲ್ಲಿ ಕಂಡುಂಡ ಅನುಭವಗಳನ್ನು ತಮ್ಮೊಂದಿಗೆ ಹಂಚಿಕೊಳ್ಳಬೇಕೆಂಬ ಬಯಕೆ. ಏಕೆಂದರೆ ಸಂಘಟನೆ ನೀಡಿದ ತಿಳುವಳಿಕೆ, ಧೈರ್ಯ ನನ್ನ ಬದುಕನ್ನೇ ಬದಲಿಸಿದೆ.ಆದ್ದರಿಂದ ಈ ನನ್ನ ಜೀವನದ ಅನುಭವ ನನ್ನಂತೆಯೇ ಕಷ್ಟದಲ್ಲಿರುವ ಹೆಣ್ಣುಮಕ್ಕಳಿಗೆ ಬದಲಾಗಲು ಸಹಾಯವಾಗುವುದಾದರೆ ಆಗಲಿ ಎಂದುಕೊಂಡಿದ್ದೇನೆ.

ಬಡತನದ ರೈತ ಕುಟುಂಬ ನಮ್ಮದು. ಅಮ್ಮ, ಅಪ್ಪ, ಅಕ್ಕಂದಿರು ಹಾಗೂ ತಮ್ಮಂದಿರು ಕುಟುಂಬದ ಸದಸ್ಯರುಗಳು.ಚಿಕ್ಕಂದಿನಲ್ಲಿ ಇವರೆಲ್ಲರೊಟ್ಟಿಗೆ ಯಾವುದೇ ನೋವಿನ ಅರಿವಿಲ್ಲದೆ, ಆಡಾಡುತ ಸಂತಸದಿಂದಲೇ ಕಾಲ ಕಳೆಯುತ್ತಿದ್ದೆ. ಆದರೆ ಅಪ್ಪ, ಅಮ್ಮ ನಮ್ಮನ್ನೆಲ್ಲಾ ಶಾಲೆಗೆ ಸೇರಿಸಿ ವಿದ್ಯಾವಂತರನ್ನಾಗಿಸುವ ಹಂಬಲ ಹೊಂದಿದ್ದರು.ಎಷ್ಟೇ ಕಷ್ಟಗಳಿದ್ದರೂ ತೋರಿಸಿಕೊಳ್ಳದೆ ನಮ್ಮನ್ನೆಲ್ಲಾ ವಿದ್ಯಾವಂತರನ್ನಾಗಿ ಮಾಡಿದರು. ಅಕ್ಕಂದಿರನ್ನು ಕೃಷಿ ಕುಟುಂಬದ ವ್ಯವಸಾಯಗಾರರಿಗೆ ಕೊಟ್ಟು ಮದುವೆ ಮಾಡಿದರು. ನಾನು ಎಸ್.ಎಸ್.ಎಲ್.ಸಿಯವರೆಗೆ ಮಾತ್ರ ಓದಲು ಸಾಧ್ಯವಾಯಿತು, ಹೆಚ್ಚೇನು ಓದಲು ಆಗಲಿಲ್ಲ. ಆದರೆ ನಾನು ಮದುವೆಯಾಗುವ ಗಂಡು ಕನಿಷ್ಟ ನನ್ನಂತೆಯೇ ಎಸ್.ಎಸ್.ಎಲ್.ಸಿ ಓದಿರಬೇಕು ಹಾಗೂ ಪ್ಯಾಂಟು ತೊಡುವವನೇ ಆಗಿರಬೇಕು ಎಂಬ ಆಸೆ ಇಟ್ಟುಕೊಂಡಿದ್ದೆ. ನನ್ನ ಮದುವೆಯ ಸರದಿಯೂ ಬಂತು. ನನ್ನ ಆಸೆಯಂತೆಯೇ ಪ್ಯಾಂಟು ತೊಡುವ ಹುಡುಗನ ಜೊತೆಯೇ ಮದುವೆ ಮಾಡಿದರು.

ಮದುವೆಯಾಗಿ ಒಂದು ಮಗು ಆಗುವತನಕ ತುಂಬಾ ಚೆನ್ನಾಗಿದ್ದೆವು. ಒಂದು ಮಗು ಆದ್ಮೇಲೆ ಶುರುವಾಯ್ತು ಗಂಡನ ಕಿರುಕುಳದ ಕಥೆ. ನನ್ನ ಗಂಡ ಫಿಲ್ಮ್ ನೋಡ್ಬೇಕು, ಚೆನ್ನಾಗಿ ಊಟ ಮಾಡ್ಬೇಕು, ಡ್ರಿಂಕ್ಸ್ ಮಾಡ್ಬೇಕು ಅನ್ನೋ ಚಟಕ್ಕೆ ಬಿದ್ದಿದ್ದರು. ಮಕ್ಕಳು, ಮಡದಿ, ಮನೆಯ ಯೋಚನೇನೆ ಮಾಡ್ತಿರ್ಲಿಲ್ಲ. ಬೆಳಿಗ್ಗೆ ಮನೆಯಿಂದ ಹೊರಗಡೆ ಹೋದ್ರೆ ಮಾರ್ನಿಂಗ್ ಷೋ, ನೂನ್ ಷೋ, ಸೆಕೆಂಡ್ ಷೋ, ಫಸ್ಟ್ ಷೋ ಅಂತ ದಿನಕ್ಕೆ ನಾಲ್ಕ್ ಫಿಲ್ಮ್ ನೋಡ್ಕೊಂಡು ರಾತ್ರಿ 10 ಗಂಟೆಗೆ ಕುಡ್ಕೊಂಡು ಬಂದು ಹೊಡೆಯೋರು, ತುಂಬಾ ಹಿಂಸೆ ಅನುಭವಿಸ್ತಿದ್ದೆ. ನನ್ನ ಕಷ್ಟನ ಸುನಂದಕ್ಕನತ್ರ ಹೋಗಿ ಹೇಳ್ಕೊತಾ ಇದ್ದೆ. ನಮ್ಮ ತಂದೆ ಸಾಧಾರಣ ರೈತ, ಸಾಲಕ್ಕೆ ಹೆದರಿ ಆತ್ಮಹತ್ಯೆ

ಮಾಡ್ಕೊಬಿಟ್ಟಿದ್ರು. ರೈತರು ಸಾಲ ಬಾಧೆ ತಾಳಲಾರದೆ ಆತ್ಮಹತ್ಯೆ ದಾರಿ ತುಳಿದಿದ್ದ ಸಮಯ ಅದು. ಇವರು ಯಾಕೆ. ಈ ರೀತಿ ಆತ್ಮಹತ್ಯೆ ಮಾಡ್ಕೊತ್ತಿದ್ದಾರೆ ಅನ್ನಿಸಿತ್ತು. ನಾನು 7ನೇ ಕ್ಲಾಸ್ ಓದ್ತಿದ್ದಾಗ ಸುನಂದಕ್ಕನ ಜೊತೆ ರಸ್ತೆ ತಡೆ, ರೈಲು ತಡೆ ಎಲ್ಲದಕ್ಕೂ ಭಾಗವಹಿಸುತ್ತಿದ್ದೆ. ಒಮ್ಮೆ ಜೈಲಿಗೂ ಕೂಡ ಹೋಗಿದ್ದೆ, ಅದೆಲ್ಲಾ ಆದ್ಮೇಲೆ ಹೋರಾಟ ಅಂತ ಒಂದು ನಾಟ್ಕನೂ ಮಾಡಿದ್ದೆ.ನಾಟ್ಕ ಆಡ್ಕೊಂಡು ಹಳ್ಳಿ ಹಳ್ಳಿಗೂ ಹೋಗ್ತಾ ಇದ್ವಿ. ಗಂಡುಬೀರಿ ತರಹ ಪ್ಯಾಂಟು ಶರ್ಟ್ ಹಾಕ್ಕೊಂಡು ನಾಟಕ ಮಾಡ್ತಾವ್ಳೆ ಯಾರಪ್ಪ ಇವಳನ್ನ ಮದ್ವೆ ಆಗ್ತಾರೆ ಅಂತ ಹೇಳ್ತಾ ಇದ್ರು. ನನಗೆ ಸುನಂದಕ್ಕನ ಬೆಂಬಲ ತುಂಬಾ ಇತ್ತು. ಧೈರ್ಯವಾಗಿರು ಯಾವುದಕ್ಕೂ ಹೆದ್ರುಕೋಬೇಡ ಅಂತ ಹೇಳ್ತಿದ್ರು . ಅದ್ರಿಂದ ನನಗೆ  ಧೈರ್ಯ ಬಂದಿತ್ತು. ನಾಟ್ಕ ಮಾಡೋಕೆ ಹಳ್ಳಿ ಹಳ್ಳಿಗೆಲ್ಲಾ ಹೋಗ್ತಿದ್ವಿ. ಭಾಷಣ ಮಾಡೋಕೆ ಕೊಡ್ತಿದ್ರು. ಅದನ್ನ ಒಂದು ಚೂರ್ ಹೇಳ್ತೀನಿ."ನೀನು ನಿಜವಾದ ರೈತನೇ ಆಗಿದ್ರೆ  ನಿನ್ನ ದೇಹದಲ್ಲಿ ಹರಿಯುತ್ತಿರೋದು ನಿಜವಾದ ರೈತನ ರಕ್ತವೇ ಆಗಿದ್ರೆ, ನೀವೂ ಕೂಡ ನಮ್ಮ ಹಾಗೆ ನಮ್ಮ ಜೊತೆಯಲ್ಲಿ ಹಸಿರು ರುಮಾಲು ಧರಿಸಿ ಬನ್ನಿ, ಈ ರೈತರಿಗೆ ಮೋಸ ಮಾಡುತ್ತಿರುವ ಈ ಸರ್ಕಾರದ ವಿರುದ್ದ ಪ್ರೊ. ನಂಜುಂಡಸ್ವಾಮಿಯವರ ನೇತೃತ್ವದಲ್ಲಿ ರೈತ ಚಳುವಳಿ ಕಟ್ಟೋಣ ಬನ್ನಿ"ಅಂತ ಗಟ್ಟಿ ಧ್ವನಿಯಲ್ಲಿ ಭಾಷಣ ಮಾಡ್ತಿದ್ದೆ. ಭಾಷಣದಲ್ಲಿ ಎಲ್ಲರೂ ಒನ್ಸ್ ಮೋರ್ ಹಾಕಿದ್ರು.ಆವಾಗ ಬಸ್‌ಸ್ಟ್ಯಾಂಡ್ ಹತ್ತಿರ ನಾಟ್ಕ ಮಾಡ್ತಿದ್ವಿ ಎಲ್ಲರೂ ಭಾಷಣ ಮಾಡಿ ಮನೆಗೆ ಹೋದರೆ, ನಮ್ಮ ದೊಡ್ಡಪ್ಪ ನಮ್ಮ ತಾಯಿಗೆ ಹೇಳ್ತಿದ್ರು.'ಇವಳನ್ನ ನಾಟಕ ಆಡೋಕೆ ಬೀದಿ ಬೀದಿಗೆಲ್ಲಾ ಬಿಟ್ಟಿದ್ದೀಯ. ಮೈನ್‌ರೋಡ್ ಮುಂದೆನೇ ಭಾಷಣ ಮಾಡಿ ಒನ್ಸ್‌ಮೋರ್ ಈಸ್ಕೋ ಬಂದ್ವಳೆ ನೋಡು' ಅಂತ ಆಡ್ಕೊಳ್ತಿದ್ರು. ನನಗೇನೂ ಅನಿಸಲಿಲ್ಲ. ಅನ್ಕೊಳ್ಳಿ ಬಿಡು ಅಂತ ಅವರ ಮಾತಿಗೆ ಸೊಪ್ಪುಹಾಕದೆ, ನನ್ನ ಪಾಡಿಗೆ ನಾನು, ನನ್ನ ಕೆಲಸ ಮಾಡ್ತಿದ್ದೆ.

ಅಷ್ಟರಲ್ಲಿ ಆಗಲೆ ನಮ್ಮ ತಂದೆ ತೀರಿಕೊಂಡಿದ್ದರು. ಆವಾಗ್ಲೆ ನನ್ನ ಗಂಡ ರಾತ್ರಿ ಆಯ್ತು ಅಂದ್ರೆ ಕುಡ್ಕೊಂಡು ಬಂದು  ಚೆನ್ನಾಗಿ ಹೊಡೆಯೋರು. ನಾನು ಬಡ್ಕೊಳ್ಳೋದು ತಲೆ ತೂತಾಗಿ ರಕ್ತ ಸುರಿಯೊದು, ಸುನಂದಕ್ಕ  ನ್ಯಾಯ ಹೇಳೋರು, ಇನ್ನೇನು ಸರಿಹೋಗ್ತದೆ ಅಂತ ಬರೋದು, ಆದ್ರೆ ಅದೇ ಪರಿಸ್ಥಿತಿ ಮುಂದುವರಿಯೋದು. ಎಷ್ಟೋ ದಿವಸ ಹೋಗಿ ಸುನಂದಕ್ಕನ ಮನೆಯಲ್ಲೇ ಮಲಗಿದ್ದು ಬಂದಿದ್ದೀವಿ. ನನ್ನ ಗಂಡನಿಗೆ ಕುಡಿದ ಮತ್ತು ಇಳಿಯೋತನಕ ಹೀಗೆ ರಾತ್ರಿಯೆಲ್ಲಾ  ಸುನಂದಕ್ಕಳ ಮನೆಯಲ್ಲೇ ಮಲಗಿದ್ದು ಬೆಳಿಗ್ಗೆ ಬರ್ತಾ ಇದ್ವಿ. ಆಗಾಗ ಮನೆಯಿಂದ ಆಚೆ ಹಾಕ್ಬಿಡೋರು, ಆಗೆಲ್ಲಾ ಟ್ಯಾಂಕ್ ಕೆಳಗೆ  ಮಲಗಿದ್ದು ಬೆಳಿಗ್ಗೆ ಅವರಿಗೆ ಮತ್ತು ಇಳಿದಾಗ ಮನೆಯೊಳಗೆ ಹೋಗ್ತಿದ್ವಿ. ಎಷ್ಟೋ ದಿನಗಳು ನಾಯಿಗೆ ಹಾಕೋ ಚೀಲ ಹಾಕ್ಕೊಂಡು ಟ್ಯಾಂಕ್ ಕೆಳಗೆ ಮಲಗಿದ್ದೀವಿ. ಈ ನಡುವೆ ನನಗೆ ಇನ್ನೊಂದು ಮಗು ಆಯ್ತು, ಆದ್ರೂ ನನ್ನ ಗಂಡ ಬದಲಾಗಲಿಲ್ಲ. ಆದ್ರೆ ಬರ್ತಾ ಬರ್ತಾ ನಂಗೆ ಜೀವನ ಸಾಗಿಸೋದು ಕಷ್ಟವಾಯ್ತು. ಆಗ

ಸುನಂದಕ್ಕ ಒಂದು ಉಪಾಯ ಹೇಳ್ಕೊಟ್ರು. 'ನಿಮ್ಮನೆಯವರು ಸೈಕಲ್ ಷಾಪ್ ಮಾಡ್ತಾರಲ್ಲ ಅದರಪಕ್ಕದಲ್ಲಿ ನೀನು ಜೊತೆಗೆ ಬಜ್ಜಿ, ಬೊಂಡಾ ಮಾಡು' ಅಂತ ಹೇಳಿದ್ರು. ಅದೇ ರೀತಿ ನಾನು ಬಜ್ಜಿ, ಬೋಂಡ, ಇಡ್ಲಿ, ವಡೆ, ಸಿಗರೇಟ್ ವ್ಯಾಪಾರ ಮಾಡ್ಕೋಂಡು ಹೋಗ್ತಾ ಇದ್ದೆ. ನಾನು ಅಂಗಡಿ ಹತ್ತಿರ ಹೋಗುವುದಕ್ಕೆ ಶುರುಮಾಡ್ದೆ. ನನ್ನನ್ನ ಅಂಗಡಿ ನೋಡ್ಕೊಳ್ಳೋಕೆ ಬಿಟ್ಟು, ಪೈನಾನ್ಸ್‌ನಲ್ಲಿ ಸಾಲ ತಕೊಂಡು ಖರ್ಚ್‌ಮಾಡ್ಕೊಳ್ಳೋರು. ಸಂಜೆ ಆಯ್ತಿದ್ದಂಗೆ ಪೈನಾನ್ಸ್‌ನವರು ಬುಕ್ಕು ಪೆನ್ನು ತಕೊಂಡು ಬಂದು ದುಡ್ಡು ಕಟ್ರಮ್ಮ ಅನ್ನೋರು. ನಾನು ಬೆಳಿಗ್ಗೆಯಿಂದ ಬಜ್ಜಿ, ಬೊಂಡಾ, ಬೀಡಿ, ಸಿಗರೇಟ್ ವ್ಯಾಪಾರ ಮಾಡಿದ್ದ ದುಡ್ಡಿನಲ್ಲಿಯೇ ಪೈನಾನ್ಸ್‌ನವರಿಗೆ ಕಟ್ಟುತ್ತಿದ್ದೆ. ನನ್ನ ಮಕ್ಕಳು ಸಹ ಸಂಜೆ ಸ್ಕೂಲ್‌ನಿಂದ ಬಂದು ತಟ್ಟೆ ತೊಳೆಯೊದು, ಪಂಚರ್ ಹಾಕೋದು ಮಾಡ್ತಿದ್ವು, ಬೆಳಿಗ್ಗೆ ಹೋಗೋದು  ಸಂಜೆ ಬಂದು ಲೆಕ್ಕ ಕೇಳೋದು. ಎಷ್ಟು ವ್ಯಾಪಾರ ಆಯ್ತು  ಅದರಲ್ಲಿ ಪೈನಾನ್ಸ್‌ಗೆ ಎಷ್ಟು  ಕಟ್ದೆ,ಇನ್ನು ಎಷ್ಟು ಉಳಿದಿದೆ ಅಂತ ಲೆಕ್ಕ ಹೇಳಿ, ಉಳಿದ ಹಣವನ್ನು ಗಂಡನ ಕೈಗೆ ಕೊಡಬೇಕಾಗಿತ್ತು. ಅರ್ಧ ಕೆ ಜಿ ಅಕ್ಕಿ ತಂದು ಕೊಟ್ರೆ ಅದನ್ನೇ ಎರಡು ದಿನ ಮಾಡ್ಬೇಕಿತ್ತು. ನನ್ನ ತಾಯಿ ಮನೆ ಒಂದೇ ಊರಲ್ಲಿ ಇದ್ರುನು ಅಲ್ಲಿಗೆ ಹೋಗ್ತಾ ಇರಲಿಲ್ಲ. ನಮ್ಮ ತಾಯಿ ಹೇಳ್ತಿದ್ರು,'ಎಷ್ಟೇ ಕಷ್ಟ ಬಂದ್ರು ತವರು ಮನೆಗೆ ಬರಬೇಡವ್ವ. ಮೊದಲೇ ನೀನು ಗಂಡುಬೀರಿ ಗಂಡನ ಹತ್ತಿರ ಬಾಳಲ್ಲ ಅಂತ ಹೇಳ್ತಾರೆ ಎಷ್ಟೇ ಕಷ್ಟ ಬಂದ್ರು ಅಲ್ಲೇ ಸಹಿಸಿಕೊಂಡು ಹೋಗು'ಅನ್ನೋರು.

ನನ್ನ ತಾಯಿ ಮಾತಿನಂತೆ ನಡ್ಕೊಂಡು ಬಂದೆ.ಎಲ್ಲಾ ಕಷ್ಟಾನು ಸಹಿಸಿಕೊಂಡು ಸಾಕಾಗಿ ಹೋದೆ ಈಯಪ್ಪ 5000 ರೂಪಾಯಿ ಪೈನಾನ್ಸ್‌ಲ್ಲಿ ಈಸ್ಕೊಂಡು ನನ್ನನ್ನ ಊರಲ್ಲೇ ಬಿಟ್ಟು  ಬೆಂಗಳೂರಿಗೆ ಕಡೆಗೆ ಹೊರಟೋದ್ರು. ಒಂದು ದಿನವೆಲ್ಲಾ ಅಳ್ತಾ ಮಲಗಿದ್ದೆ, ಆಮೇಲೆ ನಾನೇ ಧೈರ್ಯ ತಂದ್ಕೊಂಡೆ.ಇವರೇನೋ ಪೈನಾನ್ಸ್‌ನಲ್ಲಿ ಸಾಲ ತಕ್ಕೊಂಡು ಬೆಂಗಳೂರಿಗೆ ಹೋಗ್ಬಿಟ್ರು, ಸಾಲ ಕೊಟ್ಟೋರು ಸುಮ್ಮನೆ ಇರ್ತಾರ?ಸಾಲದ್ದಕ್ಕೆ ನಾನು ಅದೇ ಊರ ಹೆಣ್ಣುಮಗಳು. ಫೈನಾನ್ಸ್ ನವರು ಮನೆ ಹತ್ತಿರ ಬಂದು ಕೇಳುವಾಗ ನನಗೆ ಮರ್ಯಾದೆ ಇರ್ತದಾ ಅನ್ಕೊಂಡು, ಒಂದು ವರ್ಷ ಕಾಲ ಊರಲ್ಲೆ ಇದ್ದು ಫೈನಾನ್ಸ್ ಸಾಲ ತೀರಿಸ್ದೆ.

ಆಮೇಲೆ ಮಕ್ಕಳನ್ನ ತಾಯಿ ಮನೆಯಲ್ಲಿ ಬಿಟ್ಟು ಇವರನ್ನ ಹುಡುಕಿಕೊಂಡು ಬೆಂಗಳೂರಿಗೆ ಬಂದೆ.ತಂಗಿ ಮನೇಲಿ ಇದ್ದಾರೆ ಅಂತ ಗೊತ್ತಾಯ್ತು. ಅಲ್ಲಿಗೆ ಹೋದೆ. ನನ್ನ ಗಂಡ ಅವರ ತಂಗಿಯತ್ರ, ' ನನ್ನ ಹೆಂಡ್ತಿ ಸಾಲ ತಗೊಂಡು ತಾಯಿ ಮನೆಗೆ ಕೊಟ್ಟು, ಅದನ್ನ ತೀರಿಸಿಕೊಂಡು ಅಲ್ಲೆ ಊರಲ್ಲೆ ಇದ್ದಾಳೆ, ಅದಕ್ಕೆ ಬಿಟ್ಟು ಬಂದೆ' ಅಂತ ಹೇಳಿದ್ದಾರೆ. ಆದ್ರೆ ನನ್ನ ನಾದಿನಿಯರಿಗೆ ನನ್ನ ಬಗ್ಗೆ ಗೊತ್ತಿತ್ತು, ಅವರು ಅದನ್ನೆಲ್ಲಾ ನಂಬಲಿಲ್ಲ. ಆಮೇಲೆ ನಾನು ಬೆಂಗಳೂರಲ್ಲೇ ಗಾರ್ಮೆಂಟ್ಸ್‌ಗೆ ಸೇರ್ಕೊಂಡೆ.ಆಗ ನಾಯಿಂಡಹಳ್ಳೀಲಿ ಪಾಯ್ಸ್ ಗಾರ್ಮೆಂಟ್ಸ್ ಇತ್ತು. ತಿಂಗಳಿಗೆರೂ700 ಸಂಬಳ,

ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಡ್ಯೂಟಿಗೆ,ರೂ700 ಕೊಡ್ತಿದ್ರು,ರೂ 100 ಅಟೆಂಡೆನ್ಸ್‌ಗೆ ಒಟ್ಟು 800 ರೂಪಾಯಿ ತಂದು ನನ್ನ ಗಂಡನಿಗೆ ಕೊಡಬೇಕಿತ್ತು. ಪೂರ್ತಿ ಸಂಬಳ ಕೊಟ್ಟುಬಿಡುತ್ತಿದ್ದೆ, ಕೆಲಸ ಮಾಡೋದು ತುಂಬಾ ಕಷ್ಟವೇ ಇತ್ತು, ತುಂಬಾ ಟಾರ್ಚರ್ ಇತ್ತು. ಆದ್ರೂ ಕೆಲಸ ಮಾಡ್ಕೊಂಡು ಹೋಗ್ತಾ ಇದ್ದೆ.

ಒಂದು ದಿನ ಪ್ರತಿಭಾ, ಜಯರಾಮ್ ಇಬ್ಬರೂ ಫ್ಯಾಕ್ಟರಿ ಹತ್ರ ಗೇಟ್‌ನಲ್ಲಿ ಮೀಟಿಂಗ್ ಮಾಡ್ತಾ ಇದ್ರು. ನನಗೆ ಒಗ್ಗಟ್ಟಾಗೋದು ಸಂಘಗಳು ಅಂದ್ರೆ ತುಂಬಾ ಇಷ್ಟ. ಸರಿ ಏನಾದ್ರೂ ಹೆಲ್ಪ್ ಆಗ್ಬೋದು ಅಂತ ನಾನೂ ಹೋದೆ, ಅವರತ್ರ ಮಾತಾಡ್ದೆ. ಖಊಉ ವಿಷಯವಾಗಿ ಅರಿವು ಮೂಡಿಸಿದ್ರು.100 ರೂ ತಿಂಗಳಿಗೆ ಉಳಿತಾಯ ಮಾಡ್ಕೊಂಡು 20 ಜನರ ಒಂದು ಖಊಉ ಮಾಡಿದೆ.ಅವರು ಸಾಯಂಕಾಲ ಕೆಲಸ ಬಿಟ್ಟ ಮೇಲೆ ಯಾವುದಾದರೊಂದು ಮನೆಯಲ್ಲಿ ನಮ್ಮನ್ನು ಒಟ್ಟಿಗೆ ಸೇರಿಸೋರು.ನಾನು ಸಂಜೆ ಕೆಲಸ ಬಿಟ್ಟರೆ ಮನೆಗೆ ಹೋಗಬೇಕಿತ್ತು.ಆದ್ರೆ ನಾನು ಮೀಟಿಂಗ್‌ಗೆ ಹೋಗಬೇಕಲ್ಲ, ಅದಕ್ಕೆ ಮನೆಯವ್ರಿಗೆ 'ಒಂದು ಮನೆ ಕೆಲಸಕ್ಕೆ ಹೋಗ್ತಿದ್ದೀನಿ 50ರೂಪಾಯಿ ಕೊಡ್ತಾರೆ' ಅಂತ ಹೇಳಿ ಸಂಘಕ್ಕೆ ಹೋಗ್ತಿದ್ದೆ. ಮನೆ ಖರ್ಚಿಗೆ ಕೊಟ್ಟಿದ್ರಲ್ಲಿ ಕಾಸು 50ರೂ ಉಳಿಸಿ ಕೊಡ್ತಿದ್ದೆ. ಸಂಘಕ್ಕೆ ಹೋಗೋದು ಮನೆಯವರಿಗೆ ಇಷ್ಟವಿರಲಿಲ್ಲ. ಅವರಿಗೆ ಗೊತ್ತಿಲ್ಲದಂಗೆ ಸಂಘಕ್ಕೆ ಹೋಗ್ತಾ ಇದ್ದೆ. ಅದೇ ರೀತಿ ಮಾಡ್ಕೊಂಡು, ಮಾಡ್ಕೊಂಡು ಸಂಘದಲ್ಲಿ ತುಂಬಾ ಧೈರ್ಯ ಕೊಟ್ರು. ಪ್ರತಿಭಾ ಅಂತು ಪ್ರತಿಯೊಂದು ವಿಷಯದಲ್ಲೂ ನನಗೆ ಎಲ್ಲಾ ಹೇಳಿಕೊಟ್ರು,

ಒಂದು ದಿನ ನಾನು ಕೆಲಸಕ್ಕೆ ಹೋಗಿದ್ದೆ, ಮಕ್ಕಳನ್ನು ಅಲ್ಲೆ ಸ್ಕೂಲಿಗೆ ಹಾಕಿದ್ದೆ, ಸ್ಕೂಲಿಗೆ ಹೋಗಿದ್ರು. ಮನೆಯಲ್ಲಿದ್ದ ಗ್ಯಾಸ್, ಅಕ್ಕಿ ,ಬೇಳೆ ಅಂತ ಎಲ್ಲಾ ತಗೊಂಡೋಗಿ ಮಾರ್ಕೊಂಡು ಹೊರಟೋಗಿದ್ದಾರೆ. ನಾನು ಸಂಜೆ ಬಂದು ಬಾಗಿಲು ತೆಗೆತೀನಿ ಏನೂ ಇಲ್ಲ. ನನಗಂತೂ ಭಯ ಆಗೋಯ್ತು. ಅಳ್ತಾ ಕೂತಿದ್ದೆ, ಮಕ್ಕಳು ಬಂದ್ರು. ಏನಮ್ಮ ಅಂದ್ರು . ಈ ತರ ಅಂದೆ. ಮಗನದು SSLC ಮುಗಿದಿತ್ತು, ಗಾರ್ಮೆಂಟ್ಸ್‌ಗೆ ಸೇರಿಸಿದ್ದೆ. ಚಿಕ್ಕವನು SSLC ಓದ್ತಿದ್ದ, ಬಿಡಮ್ಮ ಹೇಗೋ ಮಾಡೋಣ ಅಂತ ಮಗ ಅಲ್ಲೇ ಇದ್ದ ಚೌಲ್ಟ್ರಿಗೆ ಹೋಗಿ ಊಟ ಮಾಡೋಣ ಅಂದ.ಈ ಕಷ್ಟವನ್ನೆಲ್ಲಾನೂ ಹೋಗಿ ಆಫೀಸಲ್ಲಿ ಹೇಳ್ಕೊಂಡೆ, ಅದಕ್ಕೆ ಅವರು,'ನೀನು ಇದೇ ರೀತಿ ಅನುಭವಿಸ್ತಾ ಹೋದ್ರೆ ನಿನ್ನ ಬಾಳೋಕೆ ಬಿಡಲ್ಲ. ನೀನು ಅವರಿಗೆ ಯಾವಾಗ ಎದುರುತ್ತರವಾಗಿ ನಿಂತ್ಕೊತಿಯ ಆಗಲೇ ಇದಕ್ಕೆ ಪರಿಹಾರ ಸಿಗೋದು' ಅಂದ್ರು. ನನಗೆ ಭಯ ಆಗ್ತಿತ್ತು. ಆದ್ರೂ ಧೈರ್ಯ ತಂದ್ಕೊಂಡೆ.ಈ ಸಂಘಟನೆಗೆ ಕೇಳ್ಕೊಂಡು ಬರೋ ಹೆಣ್ಣು ಮಕ್ಕಳಿಗೆ ಧೈರ್ಯ ಹೇಳಬೇಕಾಗುವ ನಾನೇ ಮನೆಲೀ ಗಂಡನ ಕಿರುಕುಳಕ್ಕೆ ಒಳಗಾಗಿದ್ದೀನಿ ಅಂತ ಗೊತ್ತಾಗಬಾರದು ಅಂತ ಏನೇ ಕಷ್ಟ ಕೊಟ್ಟಿರಲಿ ಏನೇ ನೋವಿರಲಿ ಬೆಳಿಗ್ಗೆ ಎದ್ದು ಚೆನ್ನಾಗಿ ರೆಡಿಯಾಗಿ ತಲೆಗೆ ಹೂ ಮುಡ್ಕೊಂಡು ಹೋಗ್ತಿದ್ದೆ. ಅದೇನೋ ಗಾದೆ ಹೇಳ್ತಾರಲ್ಲಾ ಹೊಟ್ಟೆಗೆ ಹಿಟ್ಟಿಲ್ಲದಿದ್ದರು

ಜುಟ್ಟಿಗೆ ಮಲ್ಲಿಗೆ ಹೂ ಅನ್ನೋತರಹ ದಿನಾ ಕನಕಾಂಬರ ಹೂ ಡೈಲಿ ಮುಡ್ಕೊಂಡು ಒಳ್ಳೆ ಬಟ್ಟೆ ಹಾಕ್ಕೊಂಡು ಕೆಲಸಕ್ಕೆ ಹೋಗ್ತಿದ್ದೆ. ಆಗ ಅಲ್ಲಿರೋ ಕಾರ್ಮಿಕರೆಲ್ಲಾ ರತ್ನಮ್ಮ ಚೆನ್ನಾಗಿದ್ದಾರೆ ಅಂತ ಅನ್ಕೊಂಡು ಯಾವುದೇ ಕಷ್ಟಗಳಿರಲಿ ಬಂದು ಹೇಳ್ಕೊಳೋರು. ಯಾವುದೇ ರೀತಿ ಫ್ಯಾಮಿಲಿ ಪ್ರಾಬ್ಲಮ್ ಇರಲಿ ಮಾತಾಡುತ್ತಿದ್ದೆ. ಯಾವ ಪೊಲೀಸ್‌ನವರೆ ಇರಲಿ ಮಾತಾಡುತ್ತಿದ್ದೆ. ಭಯ ಬೀಳ್ತಾ ಇರಲಿಲ್ಲ. ಆಗ ನಾನು ಏನಾದ್ರು ನನ್ನ ಮನೆ ಪರಿಸ್ಥಿತಿ ಈ ರೀತಿ ಅಂತ ನನ್ನ ಗಂಡ ಹೊಡ್ದ ಅಂದ್ರೆ ಯಾರೂ ಆ ಮೇಲೆ ನನ್ನತ್ರ ಕೇಸಿಗೆ ಬರದೇ ಹೋಯ್ತಾರಲ್ಲ ಅಂತ ನೀಟಾಗಿ ತಲೆ ಬಾಚಿಕೊಂಡು ಸ್ನಾನ ಮಾಡ್ಕೊಂಡು ಸಂಜೆ ಬರ್ತಾ ಇದ್ದೆ. ಕೇಸ್ ಹ್ಯಾಂಡಲ್ ಮಾಡ್ತಾ ಇದ್ದೆ . ಪೋಲೀಸ್ ಸ್ಟೇಷನ್‌ಗೆ ಹೋಗಿ ಮಾತಾಡುತ್ತಿದ್ದೆ. ಹೊಡೆದು ಬಡಿದಿದ್ರು ಹೊರಗೆ ತೋರಿಸಿಕೊಳ್ಳದೆ ರಕ್ತ ಬರೊದಕ್ಕೆ ಕಾಫಿಪುಡಿನೋ, ಅರಿಶಿಣ ಪುಡಿನೋ ಮೆತ್ಕೊಳ್ಳೋದು, ಮೇಲೆ ತಲೆಬಾಚಿಕೊಳ್ಳೋದು, ಕೆಲಸಕ್ಕೆ ನೀಟಾಗಿ ಹೋಗಿ ಬರ್ತಿದ್ದೆ.

ಒಂದು ದಿನ ಮನೆ ಓನರ್ ಬಾಡಿಗೆ ಕಟ್ಟಿಲ್ಲ ಅಂತ ಬಾಡಿಗೆ ಕೇಳೊಕೆ ಬಂದ್ರು. ಈ ನನ್ನ ಗಂಡ 7 ತಿಂಗಳ ಬಾಡಿಗೆ ಕಟ್ಟಿಲ್ಲ, ಓನರ್ ಬಾಡಿಗೆ ಕೇಳ್ತಾವ್ರೆ, ಇಲ್ಲದಿದ್ರೆ ಮನೆ ಖಾಲಿ ಮಾಡಿ ಪಾತ್ರೆಯಲ್ಲಾ ಹೊರಗೆ ಹಾಕ್ತೀನಿ ಅಂತ ಹೇಳ್ತಾವ್ರೆ. ನನ್ನ ಮರ್ಯಾದೆ ಏನಾಗಬೇಕು?, ದೊಡ್ಡ ಕುಟುಂಬದಲ್ಲಿ ಹುಟ್ಟಿದ್ದೀನಿ, ಬೆಂಗಳೂರಲ್ಲಿ ಬದುಕ್ತೀನಿ ಅಂತ ಬಂದ್ಬಿಟ್ಟಿದಿನಿ, ಈಗ ಏನ್ ಮಾಡೋದು ಅಂತ ತುಂಬಾ ಬೇಜಾರಾಯ್ತು. ಕೋಪ ಬಂತು ಕೇಳ್ದೆ. ಬಾಡಿಗೆ ಯಾಕೆ ಕಟ್ಟಿಲ್ಲಾ ಅಂತ ಕೇಳ್ದೆ, ಹೌದು ಕಟ್ಟಿಲ್ಲ ಅಂದ್ರು, ಇನ್ಮೇಲೆ ನಾನು ಸಂಬಳ ತಂದು ನಿನ್ನತ್ರ ಕೊಡಲ್ಲ, ನಾನೇ ವ್ಯವಹಾರ ನೋಡ್ಕೋತಿನಿ ಅಂದೆ. ಅದ್ಯಾಗಾಗುತ್ತೆ ಅಂತ ಕೂಗಾಡ್ದ. ಸಂಘದವರು ಕೊಟ್ಟ ಧೈರ್ಯ ಇತ್ತಲ್ಲ, ಹೌದು ಇನ್ಮೇಲೆ ನಾನೇ ಮನೆ ನೋಡ್ಕೊತೀನಿ ಅಂದೆ.ಮನೆ ಬಿಟ್ಟು ಹೋಗು ಅಂದ್ರು. ನಾನು ಯಾಕೋಗ್ಬೇಕು ಅಂತ ಎದುರು ಮಾತಾಡ್ದೆ. ಹೊಡೆಯಾಕೆ ಬಂದ್ರು. ಆಗ ನಾನು ಧೈರ್ಯ ತಂದ್ಕೊಂಡು ಸರಿಯಾಗಿ ಹಿಟ್ಟಿನ ದೊಣ್ಣೆ ತಗೊಂಡು ಹೊಡ್ದೆ ನೋಡ್ರಿ, ಸರಿಯಾಗಿ ಕೊಟ್ಟೆ. 'ನನ್ನ ಏನಕ್ಕೆ ಹೊಡಿತಿಯಾ? ನಾನು ಏನಾರ ತಪ್ಪು ದಾರಿಲಿ ಹೋಗಿದ್ರೆ ಹೊಡಿ, ನಿನ್ನ ಮದುವೆಯಾದಾಗಿನಿಂದ ಇದೆ ಅನುಭವಿಸ್ತಾ ಬಂದಿದ್ದೀನಿ. ಹುಟ್ಟೂರಲ್ಲಿದ್ರೆ ಜಂಭ ಆಡ್ತಿಯಾ ಅಂತ ಬೆಂಗಳೂರಿಗೆ ಬಂದು ಕೂಲಿನೋ ನಾಲಿನೋ ಮಾಡ್ಕೊಂಡು ಇದಿನಿ ತಾನೆ? ಇಲ್ಲೂ ಅದೇ ಪರಿಸ್ಥಿತಿ, ಎಷ್ಟು ದಿನ ನಿನ್ನತ್ರ ಸಹಿಸೋದು' ಅಂತ ಎರಡು ಕೊಟ್ಟೆ.'ನೀನು ಕಟ್ಟಿರೋ ತಾಳಿ ಒಂದ್ ಐತೆ ಅದು ಬೇಕಾ ತಕೋತಿಯಾ ತಗೊಂಡು ಹೋಗ್ತಾ ಇರು' ಅಂದೆ.ಅಷ್ಟರಲ್ಲಿ ಆಗಲೇ ಮಕ್ಕಳು ಸ್ವಲ್ಪ ಬೆಳೆದು ದೊಡ್ಡವರಾಗಿದ್ರು.ನನಗೆ ನನ್ನ ಮಕ್ಕಳು ಬೆಂಬಲವಾಗಿ ನಿಂತರು.

ಸಂಘಟನೆಯಿಂದ ನಾನು ತುಂಬಾ ಧೈರ್ಯ ಇರೋ ಹೆಣ್ಣುಮಗಳಾಗಿ ಬೆಳೆಯಲು ಸಾಧ್ಯವಾಯಿತು. ಮೀಟಿಂಗ್‌ಗಳಿಗಾಗಿ ಫಾರಿನ್‌ಗೂ ಹೋಗಿಬಂದೆ. ನನ್ನ ಮಕ್ಕಳು

ನನ್ನನ್ನು ಹೊರದೇಶ ಸಿಲೋನ್‌ಗೂ ಕಳುಹಿಸಿಕೊಟ್ರು. ಈಗಲೂ ಮಹಿಳಾ ದಿನಾಚರಣೆಯ ಸಲುವಾಗಿ ತಿಂಗಳಿಂದ ಮಂಡ್ಯದಲ್ಲಿದ್ದೀನಿ. ಮಕ್ಕಳು ಅಡಿಗೆ ಮಾಡ್ಕೊಂಡು ಬಟ್ಟೆ ಒಗೆದುಕೊಂಡು ಅವರೇ ಇದ್ದಾರೆ. ಈಗ ನನ್ನ ಸಂಸಾರ ಹಾಲುಜೇನು ತರಹ ತುಂಬಾ ಚೆನ್ನಾಗಿದೆ. ದೊಡ್ಡ ಮಗನಿಗೆ ಮದುವೆ ಮಾಡಿದ್ದೀವಿ? ಮೊಮ್ಮಗಳು ಆಗಿದ್ದಾಳೆ. ನನ್ನ ಗಂಡ ಮಕ್ಕಳನ್ನ ನಾಳೆ ಒಂದು ನಾಟಕ ಮಾಡ್ತಿನಿ ಬನ್ನಿ ದುರ್ಗಿ ನಾಟಕ ತುಂಬಾ ಚೆನ್ನಾಗಿದೆ ನೋಡುವಿರಂತೆ ಅಂತ ಕರೆದಿದ್ದೀನಿ. ನಾಟಕ ಮಾಡಿ ತೋರಸ್ತಿನಿ, ನಾನು ಧೈರ್ಯವಂತ ಹೆಣ್ಣು ಮಗಳಾಗಿ ಹೇಗೆ ಬೆಳೆದಿದ್ದೀನಿ ಅಂತ ಅವರಿಗೆ ತಿಳಿಸ್ತೀನಿ. ಇಷ್ಟೆಲ್ಲಾ ಹೇಳಲು ಅವಕಾಶ ಕೊಟ್ಟ ನಿಮ್ಮೆಲ್ಲರಿಗೂ ಧನ್ಯವಾದಗಳು.

## ಅರುಂಧತಿ

### ಅಮರ ಸಾಧಕಿಯರ ಸಮಾಜಸೇವಾ ಸಂಘ

ನನ್ನ ಹೆಸರು ಅರುಂಧತಿ. ನಾನು ಹುಟ್ಟಿದ್ದು ಮಂಗಳೂರಲ್ಲಿ, ಬೆಳೆದಿದ್ದು ಕೇರಳದಲ್ಲಿ. ಮೈಸೂರಿಗೆ ಬಂದು ಎಂ. ಎ ಪದವಿ ಮಾಡಿದೆ. ನಾನು ಈ ಸಮಾರಂಭಕ್ಕೆ ನನ್ನ ಸ್ನೇಹಿತರೊಂದಿಗೆ ಬಂದಾಗ ಕಾರ್ಯಕ್ರಮಕ್ಕೂ ಇವರಿಗೂ ಏನು ಸಂಬಂಧವೆಂದು ಎಲ್ಲರೂ ತಿರುಗಿ ನೋಡಿದರು. ಈ ಕಾರ್ಯಕ್ರಮಕ್ಕೆ ಬರಲಿಕ್ಕೆ ನಮಗೂ ಸ್ವಾತಂತ್ರ್ಯವಿದೆ. ನಾನು ರಾಜ್ಯದ ಮೂಲೆಮೂಲೆಯ ಕಾರ್ಯಕ್ರಮದಲ್ಲಿ ಭಾಗವಹಿಸಿ ಬರುತ್ತಿದ್ದೆ. ಆದರೆ ಮಂಡ್ಯ ಜಿಲ್ಲೆಯಲ್ಲಿ ಮಾತ್ರ ನನ್ನನ್ನು ಮಹಿಳೆಯೆಂದು ಪರಿಗಣಿಸಿರಲಿಲ್ಲ. ಆದರೆ ಈ ದಿನ ನನ್ನನ್ನು ಕರೆದು ಇಲ್ಲಿ ನಿಲ್ಲಿಸಿದ್ದಾರೆ. ಅದಕ್ಕೆ ನಾನು ಧನ್ಯವಾದಗಳನ್ನು ತಿಳಿಸುತ್ತೇನೆ.

2016ರಲ್ಲಿ ಮಂಡ್ಯದಲ್ಲಿ ಮಂಗಳಮುಖಿಯರಿಗೆ ಮೂಲಭೂತ ಹಕ್ಕುಗಳ ಬಗ್ಗೆ ಕೇಳಿದ ಸಂದರ್ಭ. ಗ್ರಾಮದ ಜನರು ಊರ ಗೌಡರನ್ನು ಕೇಳಿ ಅಂದಾಗ, ನಾನು ನಮ್ಮ ಸಮುದಾಯದವರೊಂದಿಗೆ ಹೋಗಿ ನಮಗೂ ನಮ್ಮ ಹಕ್ಕುಗಳನ್ನ ಕೊಡಬೇಕು ಅಂತ ಕೇಳಿದ್ದೆ. ಊರಿನ ಕೆಲವು ಗಣ್ಯವ್ಯಕ್ತಿಗಳು ನೀವು ಗ್ರಾಮದಲ್ಲಿ ಇರಬಾರದು ಅಂತ ಹೇಳಿ ಬಹಿಷ್ಕಾರ ಹಾಕಿದ್ರು. ನಮ್ಮ ಕೆಲವು ಸಮುದಾಯದ ಜನರಿಗೆ ಬಾಡಿಗೆ ಮನೆಗಳು ಸಿಗಲಿಲ್ಲ. ಒಂದು ಹೊತ್ತಿನ ಊಟಕ್ಕೆ ಕಷ್ಟ ಆಗಿತ್ತು. ಕರ್ನಾಟಕದ ಮೂಲೆಮೂಲೆಯಲ್ಲಿನ ಎಲ್ಲಾ ಸಂಘಟನೆಗಳಿಗೆ ತಿಳಿಸಿದೆವು, ಯಾರೂ ಸಹಾಯ ಮಾಡಲಿಲ್ಲ. ಮತ್ತೆ ಡೆಲ್ಲಿಯಿಂದ ಮಾಧ್ಯಮದವರು ಬಂದು ಡಾಕ್ಯುಮೆಂಟ್ರಿ ಮಾಡಿ ಅದನ್ನು ಮಂಡ್ಯ ಜಿಲ್ಲಾಧಿಕಾರಿಗಳಿಗೆ ನೀಡಿದರು ಮತ್ತು ಸೋಷಿಯಲ್ ಮೀಡಿಯಾದಲ್ಲಿ ಹಾಕಿದರು. ನಂತರ ಗ್ರಾಮಾಂತರ ಪೋಲಿಸ್ ಸ್ಟೇಷನ್‌ನಲ್ಲಿ ಮೀಟಿಂಗ್ ಮಾಡಲಾಯಿತು. ಕೆಲವು ಗ್ರಾಮದಲ್ಲಿ ಮಂಗಳಮುಖಿಯರಿಗೆ ವಾಸಿಸುವುದಕ್ಕೆ ಒಪ್ಪಿದರು, ಕೆಲವು ಗ್ರಾಮಗಳಲ್ಲಿ ಒಪ್ಪಲಿಲ್ಲ. ನಾವು ನಮ್ಮ ಸಮಸ್ಯೆಯನ್ನು ಯಾರಬಳಿ ಹೇಳುವುದು, ಎಲ್ಲಿ ಹೋಗುವುದು

ತಿಳಿದಿರಲಿಲ್ಲ. ಈವಾಗಿನ ಹಾಗೆ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ ಇದೆಯೆಂದು ಆಗ ತಿಳಿದಿದ್ದರೆ ನಮ್ಮ ಸಮಸ್ಯೆಗಳನ್ನು ತಿಳಿಸಿ ಅದಕ್ಕೆ ಒಂದು ಮಾರ್ಗ ಕಂಡುಹಿಡಿಯುತ್ತಿದ್ದೆವು. ಹಾಗೂ ಇವತ್ತಿನ ರಾಜಕೀಯ ಪಕ್ಷದಲ್ಲಿ ಸೇರಿ ಒಐಂ ಚುನಾವಣೆಗೆ ನಿಂತು ಸಮುದಾಯ ಮತ್ತು ಮಹಿಳೆಯರಿಗೋಸ್ಕರ ದುಡಿಯುತ್ತಿದ್ದೆ.

ಇದೇ ಗಂಡಸರು ಹಗಲು ಹೊತ್ತು ಛೀ. ಥೂ ಅಂತ ನಮ್ಮನ್ನು ಕಡೆಗಣಿಸುತ್ತಾರೆ, ಅದರೆ ರಾತ್ರಿ ಹೊತ್ತು ಇದೆ ಗಂಡಸರು ಬಂದು ನಿಮ್ಮ ರೇಟ್ ಎಷ್ಟು ಎಂದು ಕೇಳುತ್ತಾರೆ. ನೋಡಿ ನಾವು ಭಿಕ್ಷಾಟಣೆಗೆ ಮಾತ್ರ ಸೀಮಿತ ಅಲ್ಲ. ನಮಗೆ ಕೆಲಸ ಕೊಡಿ, ಸರಕಾರಿ ಉದ್ಯೋಗದಲ್ಲಿ ಗಂಡಸರಿಗೆ ಮೀಸಲಾತಿ ಮಹಿಳೆಯರಿಗೆ ಮೀಸಲಾತಿ ಪರಸೆಂಟ್ ಇದೆ ಮತ್ತು ಜಾತಿವಾರು SC, ST, OBC ಹೀಗೆ ಎಲ್ಲಾ ಕ್ಷೇತ್ರದಲ್ಲಿ ಮೀಸಲಾತಿ ಇದೆ, ಆದರೆ ಮಂಗಳಮುಖಿಯರಿಗೆ (ತೃತೀಯ ಲಿಂಗಿಗಳಿಗೆ) ಯಾವುದರಲ್ಲೂ ಮೀಸಲಾತಿ ಇಲ್ಲ. ಖಾಸಗಿ ಕಂಪನಿಗಳಲ್ಲಿ ಕಾರ್ಯಕ್ರಮಕ್ಕೆ, ಕೂಲಿಕೆಲಸಕ್ಕೆ ಹೋದ್ರೂ ಗಂಡಸರಿಗೆ ಹೆಣ್ಮಕ್ಕಳಿಗೆ ಕೂಲಿ ನಿಗದಿ ಮಾಡಿದ್ದಾರೆ. ಆದರೆ ನಮ್ಮನ್ನು ಯಾರೂ ಕೂಲಿ ಕೆಲಸಕ್ಕೂ ಕರೆಯುವುದಿಲ್ಲ.

ಗಾರ್ಮೆಂಟ್ಸ್‌ಗಳಲ್ಲಿ ಪುರುಷರಿಗೆ ಮತ್ತು ಮಹಿಳೆಯರಿಗೆ ಮಾತ್ರ ಕೆಲಸ ಕೊಡುತ್ತಾರೆ. ಆದ್ರೆ ನಮಗೆ ಅಲ್ಲೂ ಕೆಲಸ ಕೊಡಲ್ಲ ಯಾಕೆ? ಸಮಾಜದಲ್ಲಿ 'ನಿಮ್ಮವರು ತುಂಬಾ ತೊಂದ್ರೆ ಕೊಡ್ತಾರೆ ನೀವು ಸರಿ ಇಲ್ಲಾ' ಅಂತ ಹೇಳ್ತಾರೆ. ಆದರೆ ಸಮಾಜದಲ್ಲಿ ಒಳ್ಳೆಯವರು ಇರುವಂತೆ ಕೆಟ್ಟವರೂ ಇದ್ದಾರೆ. ಆದರೆ ನಮ್ಮನ್ನೆ ಯಾಕೆ ದ್ವೇಷ ಮಾಡ್ತೀರ? ನಮಗೂ ಬದುಕೋಕೆ ಒಂದು ಅವಕಾಶ ಕೊಡಿ. ನೀವುಗಳು ಅವಕಾಶ ಕೊಡದೆ ನಮ್ಮ ಮೇಲೆ ದೂರಿದರೆ ಎಷ್ಟರಮಟ್ಟಿಗೆ ಸರಿ?

ನಾನು ಒಂದು ಓಟರ್ ಐಡಿ ಕಾರ್ಡ್ ಮಾಡಿಕೊಡಿ ಅಂತ ಪಂಚಾಯಿತಿಗೆ ಪಿ.ಡಿ.ಓ ಹತ್ತಿರ ಕೇಳಿದಾಗ ಪಿ.ಡಿ.ಓ ಅವರು ಗ್ರಾಮದ ಅಧ್ಯಕ್ಷರು ಮತ್ತು ಸದಸ್ಯರನ್ನು ಕೇಳಿ ಅಂತ ಹೇಳಿದರು. ಆದರೆ ನಾವು ಸುಮ್ಮನೆ ಕುಳಿತುಕೊಳ್ಳಲಿಲ್ಲ. ಓಟರ್ ಐ.ಡಿ, ರೇಷನ್ ಕಾರ್ಡ್ ನಮಗೆ ಸಿಗಬೇಕೆಂದು ನಿರಂತರ ಎರಡು ವರ್ಷ ಹೋರಾಟ ಮಾಡಬೇಕಾಯಿತು. 2018 ರಲ್ಲಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದೆವು. 108 ಜನ ಮಂಗಳಮುಖಿಯರಿಗೆ ಮುಂಚಿನ ಚುನಾವಣೆ ವೇಳೆಯಲ್ಲಿ ನಮಗೆ ಓಟರ್ ಐ.ಡಿಗಳು ಸಿಕ್ಕು. ಪ್ರಥಮ ಬಾರಿಗೆ ಮಂಗಳಮುಖಿಯರನ್ನು ಚುನಾವಣಾ ಡಾಕ್ಯುಮೆಂಟರಿಯಲ್ಲಿ ಮಾತಾಡುವ ಅವಕಾಶ ಕಲ್ಪಿಸಿಕೊಟ್ಟರು. ಆದರೂ ಇನ್ನೂ ಎಷ್ಟೋ ಮಂಗಳಮುಖಿಯರು ಗ್ರಾಮಪ್ರದೇಶದಲ್ಲಿ ಇದ್ದಾರೆ. ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವುದು, ಅವರಿಗೆ ಎಲ್ಲ ರೀತಿಯ ಸೌಲತ್ತುಗಳನ್ನು ಕೊಡಿಸಬೇಕೆಂದು ಅಮರ ಸಾಧಕಿಯರ ಸಮಾಜಸೇವಾ ಸಂಘಟನೆ ಸ್ಥಾಪಿಸಲಾಯಿತು.

ಸಂಘಟನೆ ಇಂದು ಎಷ್ಟೋ ಮಂಗಳಮುಖಿಯರಿಗೆ ಮಾದರಿಯ ಜೀವನ ನಡೆಸುವಂತೆ ಮಾರ್ಗಸೂಚಿಯಾಗಿದೆ. ಸಮಾಜದ ಮುಂದೆ ನಾವು ಸೋಲಬಾರದು. ಗಟ್ಟಿದನಿ, ದಿಟ್ಟನಡೆ ಹಾಗೂ ಘನತೆವೆತ್ತ ಬದುಕನ್ನು ಸಾಗಿಸಬೇಕೆಂಬುದು ನಮ್ಮ ಗುರಿಯಾಗಿದೆ. ಆ ಕಾರಣದಿಂದ ನಮ್ಮ ಸಂಸ್ಥೆ ಅಡಿಯಲ್ಲಿ ಟೇಲರಿಂಗ್ ಹಾಗೂ ಹೈನುಗಾರಿಕೆ, ಕೋಳಿಸಾಕಾಣಿಕೆ, ಕುರಿಸಾಕಾಣಿಕೆ ಉಪಕಸುಬುಗಳನ್ನು ಮಾಡುತ್ತಾ ಇದ್ದೇವೆ. ಈ ದಿಟ್ಟ ನಡಿಗೆಗೆ ನಿಮ್ಮೆಲ್ಲರ ಸಹಕಾರ ಇರಲಿ ಎಂದು ಕೋರುತ್ತೇನೆ.

### ಜನಾರ್ಧನ ಹೂತಗೆರೆ, ವಿಮೋಚನ

### ಹಲವಾರು ಅರಳುವ ಮೊಗ್ಗನ್ನು ತಾಯಿಯ ಗರ್ಭದಲ್ಲೇ ಚಿವುಟದಿರಿ

ಹಲವಾರು ವರ್ಷಗಳಿಂದ ಹೆಣ್ಣುಸಂಕುಲದ ಮೇಲೆ ನಿರಂತರವಾಗಿ ದೌರ್ಜನ್ಯ, ದಬ್ಬಾಳಿಕೆಗಳು ನಡೆದಿವೆ. ಗಂಡು ಶ್ರೇಷ್ಠ, ಹೆಣ್ಣು ಕನಿಷ್ಠ ಎಂಬ ಕಾರಣದಿಂದ ನಿಸರ್ಗದ ನಿಯಮವನ್ನು ಮೀರಿ ಮಂಡ್ಯ ಜಿಲ್ಲೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಹೆಣ್ಣುಮಕ್ಕಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತಿದೆ. ಇದಕ್ಕೆ ಪ್ರಮುಖ ಕಾರಣ ಲಿಂಗ ಆಯ್ಕೆ ಮತ್ತು ಹೆಣ್ಣು ಭ್ರೂಣಹತ್ಯೆಗಳು. 2011ರ ಜನಗಣತಿ ಪ್ರಕಾರ ಮಂಡ್ಯ ಜಿಲ್ಲೆಯಲ್ಲಿ ಸರಾಸರಿ 1000 ಗಂಡುಮಕ್ಕಳಿಗೆ 939 ಹೆಣ್ಣುಮಕ್ಕಳಿದ್ದರೂ, 2001 ರ ಜನಗಣತಿ ಪ್ರಕಾರ ಮದ್ದೂರು ತಾಲ್ಲೂಕಿನ ಅವ್ವೆರಹಳ್ಳಿಯಲ್ಲಿ ಆ ಸಂಖ್ಯೆ 512, ಮಾರಂಗೆರೆಯಲ್ಲಿ 518 ಹೆಣ್ಣುಮಕ್ಕಳಿದ್ದು ಇವು ರಾಷ್ಟ್ರ ಮಟ್ಟದಲ್ಲಿ ಕುಖ್ಯಾತಿಗೆ ಒಳಗಾದ ಹಳ್ಳಿಗಳಾಗಿದ್ದವು, ನೀರಾವರಿ ಬೆಳೆದಂತೆ ಇಲ್ಲಿನ ಜನರ ಮನಃಸ್ಥಿತಿಯೂ ಹಂತ ಹಂತವಾಗಿ ಬದಲಾಗುತ್ತಾ ಸಾಗಿತ್ತು. ಪುರುಷಪ್ರಧಾನ ವ್ಯವಸ್ಥೆಯು ಆಳವಾಗಿ ಬೇರೂರಿದ ಪರಿಣಾಮ ಹೆಣ್ಣು ಮಕ್ಕಳನ್ನು ನೋಡುವ ದೃಷ್ಟಿಕೋನ ಬದಲಾದಂತೆ, ಲಿಂಗಾನುಪಾತದಲ್ಲಿ ಇಳಿಮುಖವಾಗುತ್ತಾ ಬಂದಿದೆ. ಸಾಮಾಜಿಕ ಬದುಕಿನಲ್ಲಿ ತಮಗಿದ್ದ ಪಾತ್ರ ಮತ್ತು ಮನ್ನಣೆ ಎರಡನ್ನೂ ಮಹಿಳಾ ಸಂಕುಲ ಕಳೆದುಕೊಳ್ಳುತ್ತಾ ಬಂದಿದೆ.

ಮಂಡ್ಯದಲ್ಲಿ ವಿಮೋಚನ ಮಹಿಳಾ ಸಂಘಟನೆಯ ವತಿಯಿಂದ 2004 ರ ಜೂನ್ ತಿಂಗಳಿನಲ್ಲಿ ಹೆಣ್ಣುಮಕ್ಕಳ ಸ್ಥಿತಿ ಬಹಳ ಶೋಚನೀಯ ಸ್ಥಿತಿಯಲ್ಲಿ ಇತ್ತು. ಲಿಂಗ ಆಯ್ಕೆಗಳು ಮತ್ತು ಹೆಣ್ಣು ಭ್ರೂಣಹತ್ಯೆ ಜೊತೆಗೆ ಶಿಶುಹತ್ಯೆಗಳು ನಿರಂತರವಾಗಿ ನಡೆಯುತ್ತಿದ್ದವು. ಖಾಸಗಿ ಸ್ಕ್ಯಾನಿಂಗ್ ಸೆಂಟರ್‌ಗಳ ಪಕ್ಕದಲ್ಲಿ ಇರುವ ಮೋರಿ ಮತ್ತು ಒಬ್ಬೆಗಳಲ್ಲಿ ಹೆಣ್ಣು ಭ್ರೂಣಗಳು ಸಿಕ್ಕು ಅವುಗಳನ್ನು ನಾಯಿಗಳು ಬೀದಿಗಳಲ್ಲಿ ಎಳೆದು ತಿನ್ನುತ್ತಿದ್ದವು. ಕೆಲವು ವೈದ್ಯರು ಇಂತಿಷ್ಟು ಹಣ ಕೊಟ್ಟರೆ ಲಿಂಗ ಪತ್ತೆ ಮಾಡಿ ಭ್ರೂಣಹತ್ಯೆ ಮಾಡುತ್ತೇವೆ ಅಂತ ಒಪ್ಪಿಕೊಂಡಿದ್ದರೂ, ಜಿಲ್ಲೆಯಲ್ಲಿ ಪಿಸಿ & ಪಿಎನ್ಡಿಟಿ ಕಾಯ್ದೆ ಸರ್ಮಪಕವಾಗಿ ಅನುಷ್ಠಾನ ಮತ್ತು ಜಾರಿಗೆ ತರುವಲ್ಲಿ ಜಿಲ್ಲಾಡಳಿತ ವಿಫಲವಾಗಿತ್ತು.

ಪ್ರಾಣಿ ಪಕ್ಷಿಗಳಲ್ಲಿ ಕಾಣಸಿಗದ ಲಿಂಗ ಆದ್ಯತೆ, ಲಿಂಗ ಆಯ್ಕೆ ಮನುಷ್ಯರಲ್ಲಿ ಮಾತ್ರ ಇನ್ನೂ ಜೀವಂತವಾಗಿತ್ತು. ನಮ್ಮ ಹೋರಾಟ ಸಮುದಾಯದ ಜನರ ಜೊತೆ ಪ್ರಾರಂಭವಾದಾಗ ಜಿಲ್ಲೆಯ ಜನರ ಮನಃಸ್ಥಿತಿ ಹೇಗಿತ್ತೆಂದರೆ, ಪುರುಷ ಪ್ರಧಾನ ವ್ಯವಸ್ಥೆ ಆಳವಾಗಿ ಬೇರೂರಿತ್ತು. ಗಂಡು ಶ್ರೇಷ್ಠ, ಹೆಣ್ಣು ಕನಿಷ್ಠ. ವಂಶೋದ್ಧಾರಕ ಬೇಕೆನ್ನುವ ಹಠ, ಹೆಣ್ಣು ಮಕ್ಕಳು ಹೊರೆ, ಭಾರ, ವರದಕ್ಷಿಣೆ ಕೊಟ್ಟು ಮದುವೆ ಮಾಡಬೇಕೆಂಬ ಭಾವನೆಯಿಂದ ಹೆಣ್ಣು ಮಕ್ಕಳು ಹುಟ್ಟಿದರೆ ಶಾಪ ಅಂತ ತಿಳಿದಿದ್ದರು. ಇದು ಯಾವುದೇ ಜಾತಿಯ ವರ್ಗದ ಜನರಿಗೆ ಸೀಮಿತವಾಗದೆ, ತಳಮಟ್ಟದಲ್ಲಿ ಬೇರೂರಿತ್ತು. ಪರಿಣಾಮ ನಮ್ಮ ಜಿಲ್ಲೆಯಲ್ಲಿ ಈಗಲೂ ಕೂಡ ಲಿಂಗಆಯ್ಕೆ ಮತ್ತು ಹೆಣ್ಣು ಭ್ರೂಣಹತ್ಯೆಗಳು ನಿಂತಿಲ್ಲ ಅನ್ನುವುದಕ್ಕೆ ಇತ್ತೀಚಿನ ಆರೋಗ್ಯ ಇಲಾಖೆಯ ಊಒಖಖ ವರದಿ ಪ್ರಕಾರ ಜನವರಿ 2020 ರಿಂದ ಆಗಸ್ಟ್ 2020ರವರೆಗೆ ಜನಿಸಿದ ಲಿಂಗಾನುಪಾತದಲ್ಲಿ 882 ಹೆಣ್ಣು ಮಕ್ಕಳಿರುವುದೇ ಸಾಕ್ಷಿ.


ಜಿಲ್ಲೆಯಲ್ಲಿ ಕಾನೂನು ಅನುಷ್ಠಾನ, ಜಾಗೃತಿ ಕಾರ್ಯಗಳು, ನಿರಂತರವಾಗಿ ಹೋರಾಟಗಳು ನಡೆಯುತ್ತಿದ್ದರೂ, ನಮ್ಮ ಜಿಲ್ಲೆಯನ್ನು ಬಿಟ್ಟು ಪಕ್ಕದ ಜಿಲ್ಲೆಗಳಿಗೆ ತೆರಳಿ ಅಲ್ಲಿ ಲಿಂಗ ಪರೀಕ್ಷೆ ಮಾಡಿಸಿಕೊಂಡು ಬಂದು ಭ್ರೂಣಹತ್ಯೆ ಮಾಡಿಸಿಕೊಳ್ಳುತ್ತಿದ್ದಾರೆ. ಇದರ ಪರಿಣಾಮವಾಗಿ ಜಿಲ್ಲೆಯಲ್ಲಿ ಹೆಣ್ಣು ಮತ್ತು ಗಂಡು ಮಕ್ಕಳ ನಡುವೆ ಅಸಮತೋಲನ ಉಂಟಾಗಿ ಹಲವಾರು ರೀತಿಯ ಸಾಮಾಜಿಕ ಸಮಸ್ಯೆಗಳು ನಮ್ಮನ್ನು ಕಾಡುತ್ತಿವೆ. ಮದುವೆಯಾಗಲು ಹೆಣ್ಣುಮಕ್ಕಳ ಕೊರತೆಯಿಂದ ಬಾಲ್ಯ ವಿವಾಹಗಳು ಹೆಚ್ಚು ನಡೆಯುತ್ತಿವೆ. ಮದುವೆಗೆ ಹೆಣ್ಣುಮಕ್ಕಳು ಸಿಗದ ಕಾರಣ ಅಪಹರಣ ಪ್ರಕರಣಗಳು, ವರದಕ್ಷಿಣೆ ಕಿರುಕುಳ, ಕೌಟುಂಬಿಕ ದೌರ್ಜನ್ಯ ಪ್ರಕರಣಗಳು ಹೆಚ್ಚು ಹೆಚ್ಚು ನಡೆಯುತ್ತಿವೆ. ಇಂತಹ ಸಾಮಾಜಿಕ ಸಮಸ್ಯೆಗಳನ್ನು ತೊಡೆದು ಹಾಕುವ ಪ್ರಯತ್ನ ನಿರಂತರವಾಗಿ ಮಹಿಳಾ ಸಂಘಟನೆಗಳಿಂದ ನಡೆಯುತ್ತಿವೆ, ಆದರೂ ನಿಂತಿಲ್ಲ. ಎಲ್ಲಿಯವರೆಗೆ ಜನರ ಮತ್ತು ಕೆಲವು ವೈದ್ಯರ ಮನಃಸ್ಥಿತಿ ಬದಲಾಗುವುದಿಲ್ಲವೋ ಅಲ್ಲಿಯವರೆಗೆ ಹೆಣ್ಣು ಭ್ರೂಣಹತ್ಯೆ ನಿರ್ಮೂಲನೆ ಅಸಾಧ್ಯ. ಪ್ರತಿಯೊಬ್ಬರಿಗೂ ಹೆಣ್ಣಿನ ಬಗ್ಗೆ ಸಂವೇದನಾಶೀಲತೆ ಬರಬೇಕು. ಹೆಣ್ಣಾಗಲಿ ಗಂಡಾಗಲಿ ಸಮಾನ ಅಂತ ಕಾಣಬೇಕು. ಹೆಣ್ಣು ಭ್ರೂಣಹತ್ಯೆ ನಿಲ್ಲಿಸಬೇಕು, ಸಮಸಮಾಜ ನಿರ್ಮಾಣ ಮಾಡುವ ಕಡೆ ಗಮನ ಹರಿಸೋಣ.

# ಕಪ್ಪು ಉಡುಪಿನಲ್ಲಿ ಮಹಿಳೆಯರು
# ಮೌನ ಜಾಗೃತಿ

## ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಮಂಡ್ಯ

**ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ – ಮಾರ್ಚ್ 7, 8, 2020.**

ಸಮತೆಯೆಡೆಗೆ ನಮ್ಮ ನಡಿಗೆ



**ಗಟ್ಟಿ ದನಿ, ದಿಟ್ಟ ನಡೆ, ಘನತೆವೆತ್ತ ಬದುಕು**

**'ಸರ್ವ ಜನಾಂಗದ ಶಾಂತಿಯ ದೇಶ'**

ಕಪ್ಪು ಉಡುಪಿನಲ್ಲಿ ಮಹಿಳೆಯರು ಮೌನ ಜಾಗೃತಿ

ನಾವು 'ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ'ದ ಮಹಿಳೆಯರು. ಒಕ್ಕೂಟವು ಜನಪರ, ಮಹಿಳಾಪರ ಸಂಘಟನೆಗಳ ಜಾಲವಾಗಿದ್ದು ಕಳೆದ ಎಂಟು ವರ್ಷಗಳಿಂದ ಕರ್ನಾಟಕದ ನಾನಾ ಕಡೆ ಜಾಥಾ, ಸಮಾವೇಶ, ಜಾಗೃತಿ ಕಾರ್ಯಕ್ರಮ ನಡೆಸುತ್ತ ಜನಪರ ಹೋರಾಟಗಳಲ್ಲಿ ಸಹಭಾಗಿತ್ವ ನೀಡುತ್ತ ಬಂದಿದೆ. ಕರ್ನಾಟಕದಾದ್ಯಂತ ಮಹಿಳಾ ಚಳುವಳಿ–ಸಾಹಿತ್ಯ–ಶಿಕ್ಷಣಕ್ಷೇತ್ರದ ಪರಿಣಿತರು–ರಂಗಭೂಮಿ–ಜನಪರ ಹೋರಾಟಗಳಲ್ಲಿ ಸಕ್ರಿಯವಾಗಿರುವ ಅನೇಕ ವ್ಯಕ್ತಿ–ಸಂಘಟನೆಗಳು ಈ ಒಕ್ಕೂಟದೊಂದಿಗಿದ್ದಾರೆ. ಮಹಿಳಾ ಸಂಘಟನೆಗಳು, ದಲಿತ ದಮನಿತರ ಸಂಘಟನೆಗಳು, ಅಂಗನವಾಡಿ–ಪೌರಕಾರ್ಮಿಕರು–ಬಿಸಿಯೂಟ ನೌಕರರು–ಆಶಾ ಕಾರ್ಯಕರ್ತೆಯರು–ಗಾರ್ಮೆಂಟ್ ಮತ್ತು ಪೌರಕಾರ್ಮಿಕರ ಸಂಘಟನೆಗಳು, ಎಡಪಂಥೀಯ ಸಂಘಟನೆಗಳು, ಸ್ವಯಂಸೇವಾ ಸಂಸ್ಥೆಗಳು, ಲೈಂಗಿಕ ಕಾರ್ಯಕರ್ತರು–ಲಿಂಗತ್ವ ಅಲ್ಪಸಂಖ್ಯಾತರ ಗುಂಪುಗಳು, ಲೇಖಕಿಯರ ಸಂಘ, ರಂಗಕರ್ಮಿಗಳು, ಅಕ್ಯಾಡೆಮಿಕ್ ವಲಯದ ಸಮಾನಮನಸ್ಕರೇ ಮೊದಲಾಗಿ ನೂರಾರು ಸಂಘ–ಸಂಸ್ಥೆ–ಸಂಘಟನೆಗಳು ಒಕ್ಕೂಟದ ಭಾಗಿಯಾಗಿವೆ. ಜನಪರ, ಜೀವಪರ ಚಿಂತನೆ ಇರುವ, ಸಮಾನತೆಯ ಆಶಯ ಹೊಂದಿದ, ಸಾಮಾಜಿಕ ನ್ಯಾಯ ಮತ್ತು ಪ್ರಜಾಪ್ರಭುತ್ವ ಮೌಲ್ಯಗಳಲ್ಲಿ ವಿಶ್ವಾಸ ಹೊಂದಿದ, ಸರ್ವಧರ್ಮ ಸಮಭಾವ ಇರುವ ಯಾರು ಬೇಕಾದರೂ ಒಕ್ಕೂಟದ ಭಾಗಿಯಾಗಬಹುದಾಗಿದೆ.

ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು 2019ರ ಮಾರ್ಚ್ 7, 8ರಂದು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಮಂಡ್ಯದಲ್ಲಿ ಆಚರಿಸಲಿದೆ. ಅದಕ್ಕೆ ಪೂರಕವಾಗಿ ಜಿಲ್ಲೆಯ ತಾಲೂಕುಗಳಲ್ಲಿ ಸಮಾನ ಮನಸ್ಕ ವ್ಯಕ್ತಿಗಳು, ಸಂಘಟನೆಗಳ ನೆರವಿನೊಂದಿಗೆ 'ಕಪ್ಪು ಉಡುಪಿನಲ್ಲಿ ಮಹಿಳೆಯರು' ಸಂಘಟಿಸಲಾಗಿದೆ. ನಿರಂತರವಾಗಿ ನಡೆಯುತ್ತಿರುವ ಮಹಿಳೆಯರ ಮೇಲಿನ ದೌರ್ಜನ್ಯದ ವಿರುದ್ಧ ನಡೆಸುವ ಮೌನ ಪ್ರತಿಭಟನೆಯೇ 'ಕಪ್ಪು ಉಡುಪಿನ ಮಹಿಳೆಯರು'. ಅದು ಜಗತ್ತಿನಾದ್ಯಂತ ಹಲವಾರು ಮಹಿಳಾ ಗುಂಪುಗಳನ್ನು ಪ್ರೇರೇಪಿಸಿರುವ ಪ್ರತಿರೋಧದ ಒಂದು ವಿಧ. ನಗರ, ಪಟ್ಟಣಗಳಲ್ಲಿನ ಪೇಟೆ, ಬಜಾರು ಅಥವಾ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಕಪ್ಪು ಉಡುಪು ತೊಟ್ಟು ಒಂದು ಗಂಟೆ ಮೌನವಾಗಿ ಪ್ಲಕಾರ್ಡ್ ಹಿಡಿದು ನಿಂತು ನಡೆಸುವ ಮೌನ ಪ್ರತಿಭಟನೆ ಇದು. ಎಲ್ಲ ಸಮುದಾಯ, ಸಂಸ್ಕೃತಿಗಳ ನಿತ್ಯ ಬದುಕಿನ ಭಾಗವೇ ಆಗಿರುವ ಹಿಂಸೆಯನ್ನು ವಿರೋಧಿಸುವುದು ಅದರ ಧ್ಯೇಯವಾಗಿದೆ.

'ಕಪ್ಪು ಉಡುಪಿನಲ್ಲಿ ಮಹಿಳೆಯರು' ಪ್ರಾರಂಭವಾದುದು ತೆಲ್ ಆವಿವ್, ಹೈಫಾ, ಜೆರುಸಲೇಮಿನಲ್ಲಿ. ತಮ್ಮ ಬದುಕುಗಳನ್ನು ದ್ವೇಷದ ರಾಜಕಾರಣ ನಾಶ ಮಾಡುತ್ತಿರುವುದನ್ನು ವಿರೋಧಿಸುತ್ತ ಪ್ಯಾಲೆಸ್ತೇನ್ ಹಾಗೂ ಇಸ್ರೇಲ್ ಮಹಿಳೆಯರು ಇದನ್ನು ಆರಂಭಿಸಿದರು. ಅವರಿಗೆ ಸ್ಫೂರ್ತಿ ನೀಡಿದ್ದು 50ರ ದಶಕದ ದಕ್ಷಿಣ ಆಫ್ರಿಕಾದ ಬ್ಲ್ಯಾಕ್ ಸ್ಯಾಶ್ ಚಳುವಳಿ. ಅಲ್ಲಿನ ಕಪ್ಪು ಮತ್ತು ಬಿಳಿಯ ಮಹಿಳೆಯರಿಬ್ಬರೂ ವರ್ಣದ್ವೇಷದ ವಿರುದ್ಧ ಕಪ್ಪು ಸ್ಕಾರ್ಫ್ ತೊಟ್ಟು ಪ್ರತಿರೋಧಿಸಿದ್ದರು. ಅರ್ಜೆಂಟೀನಾದ ತಾಯಂದಿರು, ಅಜ್ಜಿಯರು ತಲೆಗೆ ಬಿಳಿಯ ಸ್ಕಾರ್ಫ್ ಕಟ್ಟಿಕೊಂಡು 70ರ ದಶಕದ ಮಿಲಿಟರಿ ನಿರಂಕುಶಾಧಿಪತ್ಯಕ್ಕೆ ಬಲಿಯಾದ ಮಕ್ಕಳ ಭಾವಚಿತ್ರಗಳನ್ನು ಹಿಡಿದು ಬ್ಯೂನಸ್ ಅಯರಿಸ್ ನಗರದ 'ಪ್ಲಾಜಾ ಡಿ ಮೆಯೋ' ಚೌಕದಲ್ಲಿ ಮೌನ ಮೆರವಣಿಗೆ ನಡೆಸಿದ್ದರು. ನಂತರ ಕಪ್ಪುಉಡುಪಿನ ಮಹಿಳೆಯರ ಪ್ರತಿರೋಧ ಇತರ ದೇಶಗಳಿಗೂ ಹಬ್ಬಿತು. ಯುಗೋಸ್ಲಾವಿಯಾದ ಬಾಲ್ಕನೀಕರಣ ಸಂದರ್ಭದಲ್ಲಿ ಹೊಸದಾಗಿ ರಚಿಸಲಾದ ಗಡಿಗಳೆಲ್ಲೆಡೆಯಿಂದ ಬಂದ ಮಹಿಳೆಯರು ಒಂದಾಗಿ ಬೋಸ್ನಿಯಾದಲ್ಲಿ ಯುದ್ಧ ಮತ್ತು ಜನಾಂಗೀಯ ಶುದ್ಧತೆಗಾಗಿ ಅತ್ಯಾಚಾರವನ್ನು ಅಸ್ತ್ರದಂತೆ ಬಳಸುತ್ತಿದ್ದುದರ ವಿರುದ್ಧ ಪ್ರತಿಭಟಿಸಿದರು. ಹೀಗೆ ಹಲವಾರು ದೇಶ ಹಾಗೂ ಸಂಸ್ಕೃತಿಗಳಲ್ಲಿನ ವಿಭಿನ್ನ ವಿಷಯಗಳನ್ನು ಇಟ್ಟುಕೊಂಡು; ಮಹಿಳೆಯರ ಮೇಲಿನ ದೌರ್ಜನ್ಯವೂ ಸೇರಿದಂತೆ ಎಲ್ಲ ಯುದ್ಧ, ಘರ್ಷಣೆಗಳು ಹುಟ್ಟುಹಾಕಿದ ಹಿಂಸೆಯನ್ನು ಮೌನಜಾಗೃತಿಯ ಮೂಲಕ ಮಹಿಳೆಯರು ವಿರೋಧಿಸಿದರು.

ಇದರಿಂದ ಸ್ಫೂರ್ತಿಗೊಂಡ ಬೆಂಗಳೂರಿನ 'ವಿಮೋಚನಾ ಮಹಿಳಾ ವೇದಿಕೆ' ಅಂತಹುದೇ ಪ್ರತಿಭಟನೆಯನ್ನು ಮಾರ್ಚ್ 1993ರಲ್ಲಿ ಆರಂಭಿಸಿತು. ಶಾಂತಿಯುತ ಸಹಬಾಳ್ವೆಯ ಸಂಸ್ಕೃತಿ ನಾಶವಾಗಿ, ಇಡೀ ದೇಶವೇ ಕೋಮುವಾದ, ಮೂಲಭೂತವಾದ,

ಮತ್ತು ರಾಷ್ಟ್ರೀಯತೆಯ ಹೆಸರಿನಲ್ಲಿ ಹರಿದು ಛಿದ್ರವಾದಾಗ ಅದನ್ನು ಪ್ರತಿಭಟಿಸುವ ಸಾಮೂಹಿಕ ಪ್ರಯತ್ನವಾಗಿ ಇದು ಶುರುವಾಯಿತು. ತದನಂತರ ದೇಶದ ಹಲವು ಪಟ್ಟಣಗಳಿಗೆ ಹಬ್ಬಿ, ಮಹಿಳಾ ಶೋಷಣೆಯನ್ನು ಮುಖ್ಯ ವಿಷಯವಾಗಿಟ್ಟುಕೊಂಡಿತು. ಕೌಟುಂಬಿಕ ದೌರ್ಜನ್ಯ, ವರದಕ್ಷಿಣೆ, ಹೆಣ್ಣುಭ್ರೂಣ ಹತ್ಯೆ, ಲೈಂಗಿಕ ದೌರ್ಜನ್ಯ, ಅತ್ಯಾಚಾರದಂತಹ ಮಹಿಳೆಯರ ಮೇಲಿನ ಹಿಂಸೆಯನ್ನು ಮೌನವಾಗಿ ವಿರೋಧಿಸಲಾಯಿತು.

2019–20 ಹಿಂಸೆ ರಾರಾಜಿಸಿದ ವರ್ಷ. ಅದೇರೀತಿ ಪ್ರತಿಭಟನೆಗಳು ವ್ಯಾಪಕವಾಗಿ ನಡೆದ, ಸಾರ್ವಜನಿಕ ಬೀದಿಗಳನ್ನು ಪ್ರತಿರೋಧ, ಪ್ರತಿಭಟನೆಯ ನೆಲೆಯಾಗಿ ಮರುಸ್ಥಾಪಿಸಿಕೊಳ್ಳಲು ಹೋರಾಡಿದ ವರ್ಷವೂ ಹೌದು. ಜೊತೆಗೆ ಮಹಿಳೆಯರು, ದಲಿತದಮನಿತರು, ಆದಿವಾಸಿಗಳು, ಅಲ್ಪಸಂಖ್ಯಾತ ಸಮುದಾಯಗಳು, ಯುವ ಜನತೆ, ಮಕ್ಕಳು, ಬಡವರು, ನಿಸ್ಸಹಾಯಕರು, ಲೈಂಗಿಕ ಅಲ್ಪಸಂಖ್ಯಾತರು ತಮ್ಮ ಮಾನವ ಹಕ್ಕುಗಳು ಮತ್ತು ಘನತೆಗಾಗಿ ಹೋರಾಡಿದ ವರ್ಷವೂ ಹೌದು. ಅವರೆಲ್ಲರ ಸಾಂಘಿಕ ಪ್ರತಿರೋಧದೊಂದಿಗೆ ಸಹಮತ ತೋರುತ್ತ ಜಿಲ್ಲೆಯಲ್ಲಿ ಕಪ್ಪು ಉಡುಪಿನ ಮಹಿಳೆಯರ ಮೌನ ಪ್ರತಿಭಟನೆ ನಡೆಯಲಿದೆ. ಮಹಿಳೆಯರ ದೇಹಗಳ ಮೇಲೆ ಹೂಡಿರುವ ಅಪಮಾನಕರ ಕದನವನ್ನು ವಿರೋಧಿಸಿ ನಮ್ಮ ಘನತೆಯನ್ನು ಮರುಸ್ಥಾಪಿಸಿಕೊಳ್ಳಲು ನಾವೆಲ್ಲರೂ ಒಗ್ಗೂಡಿ ಮೌನವಾಗಿ ನಿಲ್ಲುತ್ತೇವೆ.

'ಕಪ್ಪು ಉಡುಪಿನಲ್ಲಿ ಮಹಿಳೆಯರು' ಕಾರ್ಯಕ್ರಮದಲ್ಲಿ ನಮ್ಮೊಂದಿಗಿರಲು ಬನ್ನಿ. ನಿಮ್ಮ ಪ್ರತಿರೋಧವನ್ನು ಅಭಿವ್ಯಕ್ತಿಸಲು ಕಪ್ಪು ಉಡುಪು ಧರಿಸಿ ಬನ್ನಿ. ಸೂರ್ಯ ಮುಳುಗುವಾಗ ಒಟ್ಟಾಗಿ ದೀಪ ಹಚ್ಚೋಣ. ಹಿಂಸೆ ಮತ್ತು ದ್ವೇಷದ ರಾಜಕಾರಣದಲ್ಲಿ ಮನೆ ಮಾಡಿರುವ ಕಗ್ಗತ್ತಲೆಯನ್ನು ಮಣಿಸಿ ಘನತೆ, ಶಾಂತಿ ಮತ್ತು ಪ್ರೀತಿಯ ರಾಜಕಾರಣದ ದೀಪ ಬೆಳಗಿಸೋಣ.

*ಕೊನೆಯಿರದ ವಿಶಾಲ ಬಯಲಿನಲಿ*
*ಚದುರಿದ ಚುಕ್ಕಿಗಳ ಒಟ್ಟು ಮಾಡಿ*
*ಕಗ್ಗತ್ತಲಾಳದ ಎದೆಗಳಲಿ ಸುರಿಯೋಣ ಬನ್ನಿ,*
*ಕೊನೆಯಿರದ ಕತ್ತಲಳಿಸಿ ಬೆಳಗಾಗಿಸಲು*
*ಕೋಟಿಕೋಟಿ ಸಾಲುದೀಪ ಹಚ್ಚಿ ನಿಲ್ಲೋಣ ಬನ್ನಿ,*
*ಪ್ರೀತಿ ಒರತೆ ಒಣಗದಂತಿರಿಸೋಣ ಬನ್ನಿ,*
*ಜೀವಪ್ರೀತಿಯ ಸಂಗಾತಿಗಳೆಲ್ಲ ಬನ್ನಿ..*

**ಕಪ್ಪು, ನಾವು ತೊಡುವ ಬಣ್ಣ. ಕಪ್ಪು, ನಮ್ಮ ಪ್ರತಿರೋಧವನ್ನು ವ್ಯಕ್ತಪಡಿಸುವ ಬಣ್ಣ.**

**ಮೌನ ನಾವು ಮಾತನಾಡುವ ಭಾಷೆ, ಮೌನ ನಮ್ಮ ವೇದನೆಯನ್ನು ತೋರ್ಪಡಿಸುವ ನುಡಿ.**

**ಕಾರಿನ್ ಕುಮಾರ್**, ವಿಮೋಚನ, ಬೆಂಗಳೂರು.

'ಕಪ್ಪು ಉಡುಪಿನಲ್ಲಿ ಮಹಿಳೆಯರು' ಯುದ್ಧವನ್ನು ವಿರೋಧಿಸುವ ಮತ್ತು ಶಾಂತಿಯನ್ನು ಪ್ರತಿಪಾದಿಸುವ ಒಂದು ಅಂತರಾಷ್ಟ್ರೀಯ ಮಹಿಳಾ ಆಂದೋಲನ. ಈ ಆಂದೋಲನವು ಇಸ್ರೇಲಿ ಮತ್ತು ಪ್ಯಾಲೇಸ್ತೇನಿ ಮಹಿಳೆಯರಿಂದ, ಇಸ್ರೇಲ್‌ನ ಅತಿಕ್ರಮ ಭೂ ಸ್ವಾಧೀನ ಮತ್ತು ಪ್ಯಾಲೇಸ್ತೇನ್‌ನ ತಾಯ್ನಾಡಿಗಾಗಿ ಹಲವಾರು ವರ್ಷಗಳ ಹಿಂದೆ ಈ ಎರಡೂ ದೇಶದ ನಗರಗಳಲ್ಲಿ ಶುರುವಾಯಿತು.


'ಕಪ್ಪು ಉಡುಪಿನಲ್ಲಿ ಮಹಿಳೆಯರು' ಜಾಗತಿಕ ಚಳುವಳಿಗಳಿಂದ ಪ್ರೇರಿತರಾಗಿ, ಮಾರ್ಚ್ 1993ರಲ್ಲಿ, ಏಷಿಯಾದ ಮಾನವ ಹಕ್ಕುಗಳ ಸಮಿತಿಯು ವಿಮೋಚನ ಸಂಸ್ಥೆಯೊಂದಿಗೆ, ಬೆಂಗಳೂರಿನಲ್ಲಿ ಮೊದಲ 'ಕಪ್ಪು ಉಡುಪಿನಲ್ಲಿ ಮಹಿಳೆಚುರು' ಚಳುವಳಿಯನ್ನು ಪ್ರಾರಂಭಿಸಿದರು. ನಮ್ಮ ಈ ಜಾಗೃತಿಯು, 1993ರಲ್ಲಿ ಬಾಬ್ರಿ ಮಸೀದಿ ಧ್ವಂಸದ ನಂತರ ದೇಶದಲ್ಲಿ ಭುಗಿಲೆದ್ದ, ಬಲಪಂಥೀಯ ಪ್ರಚೋದಿತ ಕೋಮುಗಲಭೆಗಳ ವಿರೋಧಿಸಲು ಪ್ರಾರಂಭವಾಯಿತು.

ನಾವು ಮಹಿಳೆಯರು ಅನ್ಯಾಯದ ವಿರುದ್ಧ ಮೌನ ಮುರಿಯುತ್ತಿರುವೆವು ಮತ್ತು ಅದರ ವಿರುದ್ಧ ಧ್ವನಿ ಎತ್ತುತ್ತಿರುವೆವು. ನಾನಾರೀತಿಯ ವೈಯಕ್ತಿಕವಾದ ಮಹಿಳೆಯರ ವಿರುದ್ಧದ ಹಿಂಸಾಕೃತ್ಯಗಳಾದ– ಹೆಂಡತಿಯನ್ನು ಹೊಡೆಯುವ, ವರದಕ್ಷಿಣೆ ಕಿರುಕುಳ, ಅತ್ಯಾಚಾರ, ಲೈಂಗಿಕ ದೌರ್ಜನ್ಯ, ಹಿಂಸೆ, ದಬ್ಬಾಳಿಕೆ, ಕೋಮುವಾದ, ಜನಾಂಗೀಯ ಶುಚಿತ್ವ, ರಾಷ್ಟ್ರೀಯತೆ ಮತ್ತು ಯುದ್ಧ ಇವೆಲ್ಲವುಗಳನ್ನು ಸಾಮಾಜಿಕ ಮುಖ್ಯಭೂಮಿಗೆ ತರುವುದು.

ಅಭಿವೃದ್ಧಿ ನೆಪದಲ್ಲಿನ ದೌರ್ಜನ್ಯ, ಜೈವಿಕ ತಂತ್ರಜ್ಞಾನ– ವರಣ ತಳಿ ಸಂವರ್ಧನೆಗಳಿಂದಾಗುವ ಸ್ತ್ರೀಯರ ಮೇಲಿನ ಹಿಂಸಾಚಾರ, ಇವೆಲ್ಲವುಗಳ ವಿರುದ್ಧ ಶಾಂತಿ ಮತ್ತು ಮೌನ ಪ್ರತಿಭಟನೆಯನ್ನ ಕರಪತ್ರಗಳು, ಅಂಚೆಪತ್ರಗಳು, ಫಲಕಗಳು, ಮೋಂಬತ್ತಿ, ದೀಪಗಳನ್ನಿಡಿದು ಸಾಂಘಿಕವಾಗಿ ಪ್ರತಿರೋಧಿಸುತ್ತಾ ಹೋರಾಡುತ್ತಿರುವೆವು.

ಎರಡು ವರ್ಷಗಳಿಗೊಮ್ಮೆ 'ಕಪ್ಪು ಉಡುಪಿನಲ್ಲಿ ಮಹಿಳೆಯರು' ಅಂತರಾಷ್ಟ್ರೀಯ ಸಮ್ಮೇಳನಗಳು ಜರುಗುತ್ತವೆ. ಅಲ್ಲಿ ಜಗತ್ತಿನಾದ್ಯಂತ ಅನೇಕ ಮಹಿಳೆಯರು ಭಾಗವಹಿಸಿ ಈ ಆಂದೋಲನದ ಅನುಭವಗಳನ್ನು ಮತ್ತು ದೃಷ್ಟಿಕೋನಗಳನ್ನು ಹಂಚಿಕೊಳ್ಳುತ್ತಾರೆ. ದಕ್ಷಿಣ ಆಫ್ರಿಕಾದ ಕೇಪ್ ಟೌನ್ ನಗರದಲ್ಲಿ, 2018ರಲ್ಲಿ ಕೊನೆಯ ಅಂತರಾಷ್ಟ್ರೀಯ ಸಮ್ಮೇಳನವನ್ನು ಆಯೋಜಿಸಲಾಗಿತ್ತು.

# ಚಕ್ರೋತ್ತಾಯ ಜಾಥಾ



ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಮಂಡ್ಯ
ಸಮತೆಯೆಡೆಗೆ ನಮ್ಮ ನಡಿಗೆ
ಗಟ್ಟಿ ದನಿ
ದಿಟ್ಟ ನಡೆ
ಘನತೆವೆತ್ತ
ಬದುಕು
ಮಾರ್ಚ್
8
2020
ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ
ಹಕ್ಕೊತ್ತಾಯ ಜಾಥಾ
ಮತ್ತು ಬೃಹತ್ ಸಾರ್ವಜನಿಕ ಸಮಾವೇಶ
ಬೆಳಿಗ್ಗೆ 10.30, ಸ್ಥಳ: ವಿಶ್ವೇಶ್ವರಯ್ಯ ವೃತ್ತ, ಮಂಡ್ಯ
ರುಕ್ಮಿಣಮ್ಮ ಬಂದೀಗೌಡ ವೇದಿಕೆ
ಜಾಥಾ ಉದ್ಘಾಟನೆ : ನಗಾರಿ ಬಾರಿಸುವುದರ ಮೂಲಕ
ಸಸಿ ಹಸ್ತಾಂತರ : ಲೀಲಾ ಅಪ್ಪಾಜಿ ಚಿಂತಕರು
ಜಾಥಾ ಚಾಲನೆ : ಅನಸೂಯಮ್ಮ ರೈತ ನಾಯಕಿ
ಅಮ್ಮಯಮ್ಮ ಹಿರಿಯ ಪೌರ ಕಾರ್ಮಿಕರು
ನಿರ್ವಹಣೆ : ರಾಣಿ ಚಂದ್ರಶೇಖರ್
ಜಾಥಾ ಮಾರ್ಗ : ವಿಶ್ವೇಶ್ವರಯ್ಯ ಪ್ರತಿಮೆ ಎದುರುಗಡೆಯಿಂದ ಹೊರಟು
ಆರ್.ಪಿ. ರಸ್ತೆ>>ನೂರಡಿ ರಸ್ತೆ>>ವಿ.ವಿ.ರಸ್ತೆ>>ಮುಖ್ಯರಸ್ತೆ >>
ಮಹಾವೀರ ಸರ್ಕಲ್>>ಸಿಲ್ವರ್ ಜುಬಿಲಿ ಪಾರ್ಕ್
ಬಹಿರಂಗ ಸಾರ್ವಜನಿಕ ಸಭೆ, ಬೆಳಿಗ್ಗೆ 11.30.
ತಾಯಮ್ಮ ವೀರಣ್ಣ ಗೌಡ ವೇದಿಕೆ
ಆಶಯ ಗೀತೆ : ಒಕ್ಕೂಟದ ಸಂಗಾತಿಗಳಿಂದ
ಅಧ್ಯಕ್ಷತೆ : ಸುನಂದಾ ಜಯರಾಂ ಕರ್ನಾಟಕ ರಾಜ್ಯ ರೈತ ಸಂಘ
ಸ್ವಾಗತ : ಸಿ. ಕುಮಾರಿ ಸಿ.ಐ.ಟಿ.ಯು
ಪ್ರಾಸ್ತಾವಿಕ ಮಾತು : ವಾಣಿ ಪೆರಿಯೋಡಿ
ದಿಕ್ಸೂಚಿ ಭಾಷಣ : ಶಬ್ನಂ ಹಶ್ಮಿ ದೆಹಲಿ
ನಿರ್ಣಯ ಮಂಡನೆ : ಮರ್ಲಿನ್ ಮಾರ್ಟಿಸ್ ಮಂಗಳೂರು

ಉಪಸ್ಥಿತಿ: ನಂದಿನಿ ಜಯರಾಂ, ರೈತಸಂಘ ಮಂಡ್ಯ; ಮೀರಾ ಶಿವಲಿಂಗಯ್ಯ, ಕಾರ್ಯದರ್ಶಿಗಳು, ಮಾಂಡವ್ಯ ಸಮೂಹ ಶಿಕ್ಷಣ ಸಂಸ್ಥೆಗಳು, ಮಂಡ್ಯ; ವಿಜಯಲಕ್ಷ್ಮಿ ರಘುನಂದನ್, ಮಾಜಿ ನಗರಸಭಾ ಅಧ್ಯಕ್ಷರು; ಕಮಲಾ, ಮಹಿಳಾ ಮುನ್ನಡೆ; ದೇವಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ರಾಜ್ಯ ಅಧ್ಯಕ್ಷರು; ಅರುಣಕುಮಾರಿ ಪರಿಸರ ರೂರಲ್ ಡೆವಲಪ್‌ಮೆಂಟ್, ರಜಿಯಾ ಬೇಗಂ, ಬೀಡಿ ಕಾರ್ಮಿಕರ ಸಂಘ ಸಿ.ಐ.ಟಿ.ಯು; ನಿಂಗಮ್ಮ, ಶ್ರಮಿಕ ನಗರ ನಿವಾಸಿಗಳ ಒಕ್ಕೂಟ, ಅರುಂಧತಿ, ಅಮರ ಸಾಧಕಿಯರ ಸಮಾಜ ಸೇವಾ ಸಂಘ; ಅಂಜನಾ ಶ್ರೀಕಾಂತ್, ಲಕ್ಷ್ಮಿ ಜನಾರ್ದನ ಶಿಕ್ಷಣ ಸಮಿತಿ ಟ್ರಸ್ಟ್; ಮಂಜುಳಾ ಉದಯಶಂಕರ್, ಮಹಿಳಾ ಮುನ್ನಡೆ, ಮಂಜುಳಾ, ಅರುಣೋದಯ ಕಲಾತಂಡ; ಸರೋಜಮ್ಮ, ಪ್ರಾಂತ್ಯ ಕೃಷಿಕೂಲಿ ಕಾರ್ಮಿಕರ ಸಂಘದ ರಾಜ್ಯ ಮಹಿಳಾ ಸಂಚಾಲಕರು; ಪದ್ಮಾ, ಉಪಾಧ್ಯಕ್ಷರು, ಗಾರ್ಮೆಂಟ್ಸ್ ಅಂಡ್ ಟೆಕ್ಸ್‌ಟೈಲ್ಸ್ ವರ್ಕರ್ಸ್ ಯೂನಿಯನ್; ಮೇರಿ ಸ್ಟೆಲ್ಲಾ, ವಲಯ ಸಂಯೋಜಕರು, ಮಹಿಳಾ ವಿಭಾಗ, ಒ.ಡಿ.ಪಿ., ಮಂಡ್ಯ; ಜಯಲಕ್ಷ್ಮಮ್ಮ ಜಿಲ್ಲಾಧ್ಯಕ್ಷರು, ಅಂಗನವಾಡಿ ನೌಕರರ ಸಂಘ ಸಿ.ಐ.ಟಿ.ಯು.; [illegible] ಅಧ್ಯಯನ ಸಂಸ್ಥೆ ; ಪ್ರೇಮಾ, ಸ್ಪಂದನ ; ಲತಾ ಶಂಕರ್, ಕರ್ನಾಟಕ ರಾಜ್ಯ ರೈತಸಂಘ ; ಸುಮನ, ಮೈಸೂರು; ಪವಿತ್ರ ಜ್ಯೋತಿಗುಡ್ಡೆ, ಮಂಗಳೂರು; ಪುಷ್ಪಾ ಎಚ್. ಎಸ್. ಬೆಂಗಳೂರು; ಮಲ್ಲಮ್ಮ ಯಾಳವಾರ, ವಿಜಯಪುರ; ವೃಂದಾ, ಶಿವಮೊಗ್ಗ; ಸುನಂದಾ ಕಡಮೆ, ಧಾರವಾಡ; ಕೆ. ವಿ. ಲೀಲಾವತಿ, ಕೋಲಾರ; ಡಾ. ಅರುಂಧತಿ ಬಿ., ತುಮಕೂರು ಮತ್ತು ಸಹಭಾಗಿ ಸಂಘ-ಸಂಸ್ಥೆಗಳ ಪ್ರತಿನಿಧಿಗಳು.

ನಿರ್ವಹಣೆ: ಪ್ರತಿಭಾ ಆರ್., ಶಶಿಕಲಾ


ಸುಂದರಮ್ಮ ಮಳವಳ್ಳಿ, ಬುರ್ರಕಥಾ ಜಯಮ್ಮ ವೇದಿಕೆ
ಸಾಂಸ್ಕೃತಿಕ ಕಾರ್ಯಕ್ರಮ:
ಸ್ಥಳೀಯ ಮತ್ತು ವಿವಿಧ ಜಿಲ್ಲೆಗಳ ಸಂಗಾತಿಗಳಿಂದ

ನಮ್ಮೊಡನೆ:
ಮಂಡ್ಯದ ಎಲ್ಲ ಸಹೃದಯರು
ಮತ್ತು
ರಾಜ್ಯದ ಎಲ್ಲ ಕಡೆಗಳಿಂದ ಬಂದ
ಸಮಾನ ಮನಸ್ಕ ಸಂಗಾತಿಗಳು



# ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಮಂಡ್ಯ.

ಸಮತೆಯೆಡೆಗೆ ನಮ್ಮ ನಡಿಗೆ



'ಗಟ್ಟಿದನಿ, ದಿಟ್ಟನಡೆ, ಘನತೆವೆತ್ತ ಬದುಕು'

## ಮಾರ್ಚ್ 7, 8, 2020: ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ, ಮಂಡ್ಯ.

'ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ'ವು ಜನಪರ, ಮಹಿಳಾಪರ ಸಂಘಟನೆಗಳ ಜಾಲವಾಗಿದ್ದು ಕಳೆದ ಎಂಟು ವರ್ಷಗಳಿಂದ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಜಾಥಾ, ಸಮಾವೇಶ, ಜಾಗೃತಿ ಕಾರ್ಯಕ್ರಮ ನಡೆಸುತ್ತಾ ಜನಪರ ಹೋರಾಟಗಳಲ್ಲಿ ಸಹಭಾಗಿತ್ವ ನೀಡುತ್ತ ಬಂದಿದೆ. ಕರ್ನಾಟಕದಾದ್ಯಂತ ಮಹಿಳಾ ಚಳುವಳಿ–ಸಾಹಿತ್ಯ–ಶಿಕ್ಷಣ ಕ್ಷೇತ್ರದ ಪರಿಣಿತರು–ರಂಗಭೂಮಿ–ಜನಪದ ಹೋರಾಟಗಳಲ್ಲಿ ಸಕ್ರಿಯವಾಗಿರುವ ಅನೇಕ ವ್ಯಕ್ತಿ–ಸಂಘಟನೆಗಳು ಈ ಒಕ್ಕೂಟದೊಂದಿಗಿದ್ದಾರೆ. ಮಹಿಳಾ ಸಂಘಟನೆಗಳು, ದಲಿತ ದಮನಿತರ ಸಂಘಟನೆಗಳು, ಅಂಗನವಾಡಿ, ಪೌರಕಾರ್ಮಿಕರು, ಬಿಸಿಯೂಟ ನೌಕರರು, ಆಶಾ ಕಾರ್ಯಕರ್ತೆಯರು–ಮನೆಕೆಲಸದ ಕಾರ್ಮಿಕರು, ಗಾರ್ಮೆಂಟ್ ಮತ್ತು ಇನ್ನಿತರ ಕಾರ್ಮಿಕರ ಸಂಘಟನೆಗಳು, ಎಡಪಂಥೀಯ ಸಂಘಟನೆಗಳು, ಸ್ವಯಂಸೇವಾ ಸಂಸ್ಥೆಗಳು, ಲೈಂಗಿಕ ಕಾರ್ಯಕರ್ತರು–ಲಿಂಗತ್ವ ಅಲ್ಪಸಂಖ್ಯಾತರ ಗುಂಪುಗಳು, ಲೇಖಕಿಯರ ಸಂಘ, ರಂಗಕರ್ಮಿಗಳು, ಅಕಾಡೆಮಿಕ್ ವಲಯದ ಸಮಾನ ಮನಸ್ಕರು ಮೊದಲಾಗಿ ನೂರಾರು ಸಂಘ–ಸಂಸ್ಥೆ–ಸಂಘಟನೆಗಳು ಒಕ್ಕೂಟದ ಭಾಗಿಯಾಗಿವೆ. ಜೀವಪರ ಚಿಂತನೆ ಇರುವ, ಸಮಾನತೆಯ ಆಶಯ ಹೊಂದಿದ, ಸಾಮಾಜಿಕ ನ್ಯಾಯ ಮತ್ತು ಪ್ರಜಾಪ್ರಭುತ್ವ ಮೌಲ್ಯಗಳಲ್ಲಿ ವಿಶ್ವಾಸ ಹೊಂದಿದ, ಸರ್ವಧರ್ಮ ಸಮಭಾವ ಇರುವ ಯಾರು ಬೇಕಾದರೂ ಒಕ್ಕೂಟದ ಭಾಗಿಯಾಗಬಹುದಾಗಿದೆ.

2012 ನೇ ಇಸವಿಯಲ್ಲಿ ದೆಹಲಿ ನಿರ್ಭಯಾ ಅತ್ಯಾಚಾರ ಪ್ರಕರಣ ಸಂಭವಿಸಿ ದೇಶಾದ್ಯಂತ ಪ್ರತಿಭಟನೆ ಭುಗಿಲೆದ್ದ ವೇಳೆಯಲ್ಲಿ ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ

ವಿರೋಧಿ ಒಕ್ಕೂಟದ ರಚನೆಯಾಯಿತು, ಹೆಚ್ಚುತ್ತಿರುವ ಮಹಿಳೆಯರ ಮೇಲಿನ ಹಿಂಸೆ ಲಿಂಗ ತಾರತಮ್ಯ, ಅಸಮಾನತೆಗಳನ್ನು 'ಇನ್ನು ಸಾಕು' ಎಂಬ ಘೋಷವಾಕ್ಯವನ್ನಿಟ್ಟು ಕೊಂಡು ಮಂಗಳೂರಿನಲ್ಲಿ 2013ರಲ್ಲಿ ಮೊದಲ ಸಮಾವೇಶ ನಡೆಯಿತು. ಅಲ್ಲಿಂದ ಪ್ರತಿವರ್ಷ ಒಂದೊಂದು ಜಿಲ್ಲೆಯಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು 'ಮಹಿಳಾ ಚೈತನ್ಯ ದಿನ'ವಾಗಿ ಆಚರಿಸುತ್ತಾ, ಮಹಿಳಾ ಜಾಗೃತಿ ಸಮಾವೇಶ ನಡೆಸಲಾಗುತ್ತಿದೆ. ಇದುವರೆಗೆ ಮಂಗಳೂರು, ಮೈಸೂರು, ಬೆಂಗಳೂರು, ವಿಜಯಪುರ, ಕೊಪ್ಪಳ, ಶಿವಮೊಗ್ಗ, ಧಾರವಾಡಗಳಲ್ಲಿ ಏಳು ಸಮಾವೇಶಗಳನ್ನು ನಡೆಸಲಾಗಿದೆ. 2020ರ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಕಾರ್ಯಕ್ರಮಗಳನ್ನು ಇದೇ ಮಾರ್ಚ್ 7, 8ರಂದು ಮಂಡ್ಯ ಜಿಲ್ಲೆಯಲ್ಲಿ ಹಮ್ಮಿಕೊಳ್ಳಲಾಗಿದೆ.

**ನಮ್ಮ ನಡಿಗೆ ಸಮತೆಯೆಡೆಗೆ:**

ಲಾಭ ದೋಚುವ ಉದಾರವಾದ ಆರ್ಥಿಕತೆಯೊಂದಿಗೆ ರಾಜಕಾರಣ–ಧರ್ಮ–ಜಾತಿವ್ಯವಸ್ಥೆಯೂ ಕೈಜೋಡಿಸಿರುವುದರ ಪರಿಣಾಮವಾಗಿ, ಮಹಿಳೆಯರ ಮೇಲಿನ ಹಿಂಸೆಯ ಸ್ವರೂಪಗಳು ಹೆಚ್ಚೆಚ್ಚು ಸಂಕೀರ್ಣಗೊಳ್ಳುತ್ತಿರುವುದಷ್ಟೇ ಅಲ್ಲ, ಮಾಮೂಲಿ ವಿಷಯವಾಗಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ, ಅನೈತಿಕ ಪೊಲೀಸ್‌ಗಿರಿ, ಮರ್ಯಾದಾಹೀನ ಹತ್ಯೆ, ಜಾತಿ ಪಂಚಾಯ್ತಿಗಳ ಮೂಲಕ ಮಹಿಳೆ ಧರ್ಮ ಕೋಮು/ಜಾತಿ ವೈಷಮ್ಯ ದಾಳವಾಗಿ ಬಳಕೆಯಾಗುತ್ತಿದ್ದಾಳೆ. ಲಿಂಗತ್ವ ಮತ್ತು ಲೈಂಗಿಕತೆ ಕುರಿತು ವೈಜ್ಞಾನಿಕ ಮನೋಭಾವ ಬೆಳೆಸುವ ಆರೋಗ್ಯಕರ ಶಿಕ್ಷಣದ ಕೊರತೆ, ಹೆಣ್ಣು ಮಕ್ಕಳನ್ನು ಸಹಜೀವಿಯಾಗಿ ನೋಡದೆ ಸರಕಿನಂತೆ ನೋಡುವ ಪಿತೃಸಂಸ್ಕೃತಿ ಮತ್ತು ಮಾರುಕಟ್ಟೆ ಆರ್ಥಿಕತೆಗಳು ಮಹಿಳಾ ತಾರತಮ್ಯ ಮತ್ತು ದೌರ್ಜನ್ಯಗಳಿಗೆ ಕಾರಣವಾಗಿವೆ. ಅಧಿಕಾರ ರಾಜಕಾರಣದಲ್ಲಿ ತೊಡಗಿರುವ ಪಕ್ಷ/ಸಿದ್ಧಾಂತಗಳು ಮಹಿಳಾ ವಿಷಯಕ್ಕೆ ಮಾತಿನಲ್ಲಷ್ಟೇ ಮನ್ನಣೆ ನೀಡಿ ರಾಜಕೀಯ ಪ್ರಾತಿನಿಧ್ಯ ಒದಗಿಸಬೇಕಾದ ಸಂದರ್ಭದಲ್ಲಿ ಎಲ್ಲ ಸ್ತರದ ಮಹಿಳೆಯರಿಗೂ ತೊಡರುಗಾಲು ಹಾಕುತ್ತಿವೆ.

ಹೀಗೆ ಲಾಭಕೋರ ಆರ್ಥಿಕತೆ, ಜಾತೀಯತೆ, ಪುರುಷ ಪ್ರಾಧಾನ್ಯತೆ, ಮತಾಂಧತೆ ಮತ್ತು ಇದಕ್ಕೆ ಪೂರಕವಾಗಿ ಅಧಿಕಾರ ರಾಜಕಾರಣ ರೂಪಿಸುತ್ತಿರುವ ದ್ವೇಷ ರಾಜಕಾರಣಗಳು ವಿಕೃತ ಹಿಂಸೆಯನ್ನು ಹುಟ್ಟು ಹಾಕುತ್ತಿವೆ. ಅದಕ್ಕೆ ಬಲಿಯಾಗುವವರು ಮಹಿಳೆಯರೇ ಆಗಿದ್ದಾರೆ. ಹಿಂಸೆಯನ್ನು ಎದುರಿಸಲು ಮಹಿಳೆಯರು ಮತ್ತು ಸಮಸಮಾಜ ಕಟ್ಟಲು ಬದ್ಧರಾಗಿರುವವರೆಲ್ಲ ಸಂಘಟಿತರಾಗಬೇಕಾದ ತುರ್ತು ಹಿಂದೆಂದಿಗಿಂತಲೂ ಹೆಚ್ಚಾಗಿದೆ. ಇದು ಒಕ್ಕೂಟದ ಪ್ರಮುಖ ಆಶಯವೂ ಆಗಿದೆ; ಎಂದೇ 'ಸಮತೆಯೆಡೆಗೆ ನಮ್ಮ ನಡಿಗೆ' ನಮ್ಮ ಧ್ಯೇಯವಾಕ್ಯವಾಗಿದೆ.

ಭಾರತದ ಮಹಿಳೆಯರು ತಮ್ಮ ಕುಟುಂಬಗಳ ಜೊತೆಜೊತೆಗೆ ದೇಶಕಟ್ಟುವ

ಕೆಲಸದಲ್ಲೂ ಸಕ್ರಿಯವಾಗಿ ತೊಡಗಿದವರು. ಸ್ವಾತಂತ್ರ್ಯ ಬರುವುದಕ್ಕೆ ಮೊದಲಿನಿಂದಲೂ ಸಾವಿತ್ರಿಬಾಯಿ ಫುಲೆಯವರಂತಹ ಹತ್ತಾರು ಧೀಮಂತ ಸಮಾಜ ಸುಧಾರಕಿಯರು ರಚನಾತ್ಮಕವಾದ ಸಮಾಜ ನಿರ್ಮಾಣಕ್ಕಾಗಿ ತಮ್ಮನ್ನು ಯಾವು ತೆತ್ತುಕೊಂಡವರು. ಸ್ವಾತಂತ್ರ್ಯ ಚಳುವಳಿಯಲ್ಲೂ ಜಾತಿ, ಮತ, ಧರ್ಮ, ಭಾಷೆಗಳ ಹಂಗು ತೊರೆದ ಭಾರತೀಯ ಮಹಿಳೆಯರು ಆಂದೋಲನಕ್ಕೆ ಶಕ್ತಿ ತುಂಬಿದ್ದಕ್ಕೆ ಇತಿಹಾಸವೇ ಸಾಕ್ಷಿ. ಸ್ವಾತಂತ್ರ್ಯ ಆಂದೋಲನ ಮತ್ತು ಸಂವಿಧಾನದ ಆಶಯಗಳಿಗೆ ತಕ್ಕಂತೆ ಈ ದೇಶವನ್ನು ಕಟ್ಟಿ, ಬೆಳೆಸುವುದಕ್ಕೆ ನಾವು ಈಗಲೂ ಬದ್ಧರಾಗಿದ್ದೇವೆ. ವಿಶ್ವ ಸಹೋದರಿತ್ವದ ಪರಿಕಲ್ಪನೆಯನ್ನು ನಂಬುವ ಮಹಿಳಾ ಚಳುವಳಿಯು ಮತ–ಧರ್ಮಗಳ ಆಧಾರದಲ್ಲಿ ಸಮಾಜವನ್ನು ಒಡೆಯುವುದನ್ನು ಒಪ್ಪುವುದಿಲ್ಲ. ಸರ್ವರ ಸಮಾನತೆ, ಏಳಿಗೆಯನ್ನು ಸಾಧಿಸಬಯಸುವ ಸಂವಿಧಾನದಲ್ಲಿ ನಂಬಿಕೆ ಇರಿಸಿರುವವರೆಲ್ಲರೂ ಸರ್ವಜನಾಂಗದ ಶಾಂತಿಯ ತೋಟವಾದ ಭಾರತದ ಪ್ರಜೆಗಳು ಎಂಬುದು ನಮ್ಮ ನಂಬಿಕೆಯಾಗಿದೆ.

ಇಂಥ ಆಶಯಗಳ ಹೊತ್ತು ಒಕ್ಕೂಟವು ಈ ಬಾರಿ ಮಂಡ್ಯ ಜಿಲ್ಲೆಯಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಲು ಮುಂದಾಗಿದೆ. ಇದಕ್ಕೆ ಪೂರ್ವಭಾವಿಯಾಗಿ ಎಲ್ಲ ತಾಲೂಕುಗಳ ಶಾಲೆ–ಕಾಲೇಜುಗಳು, ಹಳ್ಳಿಗಳು, ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳು ಮೊದಲಾದ ಎಲ್ಲೆಡೆ 'ಅರಿವಿನ ಪಯಣ' ಎಂಬ ಲಿಂಗ ಸೂಕ್ಷ್ಮತೆ ಬೆಳೆಸುವ ಕಾರ್ಯಕ್ರಮಗಳನ್ನು ನಡೆಸಲಾಗಿದೆ.

ಮಹಿಳೆಯರ ಮೇಲಿನ ಹಿಂಸೆಯನ್ನು ಪ್ರತಿಭಟಿಸುವ 'ವಿಮೆನ್ ಇನ್ ಬ್ಲಾಕ್' ಎಂಬ ಮೌನ ಜಾಗೃತಿ ಕಾರ್ಯಕ್ರಮವನ್ನು 'ಸರ್ವಜನಾಂಗದ ಶಾಂತಿಯ ದೇಶ' ಎಂಬ ಘೋಷವಾಕ್ಯದೊಂದಿಗೆ ಎಲ್ಲಾ ತಾಲೂಕುಗಳಲ್ಲೂ ಹಮ್ಮಿಕೊಳ್ಳಲಾಗಿದೆ. ಇದರಲ್ಲಿ ಜಿಲ್ಲೆಯ ಮೂವತ್ತಕ್ಕಿಂತ ಹೆಚ್ಚು ಸಂಘಟನೆಗಳು ಹಾಗೂ ಸಮಾನ ಮನಸ್ಕ ಸೋದರಿ–ಸೋದರರು ಜೊತೆಗೂಡಿದ್ದಾರೆ.

ಮಂಡ್ಯ ಜಿಲ್ಲೆಗೆ ತನ್ನದೇ ಆದ ವಿಶೇಷತೆಯಿದೆ. ಹಲವು ಚಳುವಳಿಗಳ ತವರೂರು ಮಂಡ್ಯ ಜಿಲ್ಲೆ. ಕರ್ನಾಟಕದ ಸಾಮಾಜಿಕ ಮತ್ತು ರಾಜಕೀಯ ಜೀವನವನ್ನು ಬಹುವಾಗಿ ಪ್ರಭಾವಿಸಿದ ರೈತ, ದಲಿತ ಚಳುವಳಿಗಳು ಗಟ್ಟಿಯಾಗಿ ಬೇರೂರಿದ್ದ ಜಿಲ್ಲೆ. ಅವುಗಳೊಂದಿಗೆ ವೈಚಾರಿಕ ಚಿಂತನೆ, ಸಾಕ್ಷರತಾ ಆಂದೋಲನ, ಜಾನಪದ ಸಾಂಸ್ಕೃತಿಕ ಪರಂಪರೆ, ಸಹಕಾರಿ ಆಂದೋಲನವೇ ಮೊದಲಾದ ಹತ್ತು ಹಲವು ವೈಶಿಷ್ಟ್ಯಗಳು ಮಂಡ್ಯದ ಮಡಿಲಲ್ಲಿ ಹುದುಗಿಕೊಂಡಿವೆ. ಈ ಹೆಮ್ಮೆಗಳ ನಡುವೆಯೇ ನೋವಿನ ಮತ್ತೊಂದು ಮುಖವೂ ಇದೆ. ಕೃಷಿ ಪ್ರಧಾನವಾದ ಮಂಡ್ಯ ಜಿಲ್ಲೆಯ ರೈತ ಬಾಂಧವರು ಸಾಲದ ಸುಳಿಗೆ ಸಿಲುಕಿ ಆತ್ಮಹತ್ಯೆಗಳಿಗೆ ಶರಣಾಗುತ್ತಿದ್ದಾರೆ. ಸ್ತ್ರೀ ಭ್ರೂಣಹತ್ಯೆ ಮತ್ತು ಬಾಲ್ಯವಿವಾಹಗಳು ಅತಿಹೆಚ್ಚಿರುವ ಕರ್ನಾಟಕದ ಜಿಲ್ಲೆಗಳಲ್ಲಿ ಮಂಡ್ಯವೂ ಒಂದು.

ಜಾತಿತಾರತಮ್ಯವು ಇನ್ನೂ ಅತ್ಯಂತ ಆಳವಾಗಿದೆಯೆಂಬುದಕ್ಕೆ ಕರಾಳ ಸಾಕ್ಷಿಯಾಗಿ ಸರಣಿ ಮರ್ಯಾದೆಗೇಡು ಹತ್ಯೆಗಳನ್ನು ಕಂಡಂಥ ಜಿಲ್ಲೆ. ಈ ಎಲ್ಲದರ ನಡುವೆಯೇ ಈ ಬಾರಿ ಮಂಡ್ಯ ಜಿಲ್ಲೆ ಕರ್ನಾಟಕದ ಮೂಲೆಮೂಲೆಗಳಿಂದ ಎಲ್ಲ ಸಹೋದರಿಯರನ್ನು, ಮಾನವೀಯ ಮನಸ್ಸುಗಳನ್ನು ಸ್ವಾಗತಿಸಲು ಸಜ್ಜಾಗಿದೆ.

ಈ 2020ರ ಮಾರ್ಚ್–8ರ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಸದಾಕಾಲ ನೆನಪಿನಲ್ಲಿ ಅಚ್ಚೊತ್ತುವಂತಹ ರೀತಿಯಲ್ಲಿ ಆಚರಿಸಲು 'ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ'ದ ಮಂಡ್ಯದ ಗೆಳತಿಯರು ನಾವು ಸಿದ್ಧತೆ ಮಾಡಿಕೊಂಡಿದ್ದೇವೆ. ಮಾರ್ಚ್ 7 ಮತ್ತು 8ರ ಶನಿವಾರ ಮತ್ತು ಭಾನುವಾರಗಳಂದು ಮಂಡ್ಯದಲ್ಲಿ 'ಗಟ್ಟಿದನಿ, ದಿಟ್ಟನಡೆ, ಘನತೆವೆತ್ತ ಬದುಕು' ಎಂಬ ಘೋಷವಾಕ್ಯದಲ್ಲಿ ನಡೆಯಲಿರುವ ಎರಡು ದಿನಗಳ ಈ ಸಮಾಗಮದಲ್ಲಿ ನಿಮ್ಮ ಭಾವಹಿಸುವಿಕೆ, ಪಾಲುದಾರಿಕೆಯನ್ನು ಎದುರು ನೋಡುತ್ತಿದ್ದೇವೆ.

**ಕಾರ್ಯಕ್ರಮದ ವಿವರ:**

***ಮಾರ್ಚ್ 7, 2020ರ ಶನಿವಾರ***

ಬೆಳಿಗ್ಗೆ 10.30ರಿಂದ ಸಂಜೆ 5.00ರವರೆಗೆ ಡಾ. ಬಿ. ಆರ್. ಅಂಬೇಡ್ಕರ್ ಸಭಾಂಗಣ, ಸುಭಾಷ್ ನಗರ, ಮಂಡ್ಯದಲ್ಲಿ 'ಮಹಿಳಾ ಬದುಕು: ಪಲ್ಲಟಗಳು' ಎಂಬ ವಿಷಯ ಕುರಿತಂತೆ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಸಹಯೋಗದಲ್ಲಿ ವಿಚಾರ ಸಂಕಿರಣ ನಡೆಯಲಿದೆ. ಅದರಲ್ಲಿ ಹೈದರಾಬಾದ್‌ನ ಖ್ಯಾತ ಸ್ತ್ರೀವಾದಿ ಕಥೆಗಾರ್ತಿ ಮತ್ತು ಚಿಂತಕಿ ವೋಲ್ಗಾ ಪಾಲ್ಗೊಳ್ಳಲಿದ್ದಾರೆ. ಇದಲ್ಲದೆ ಕರ್ನಾಟಕದ ಎಲ್ಲ ಭಾಗಗಳಿಂದ ಬಂದ ಚಿಂತಕಿಯರು ಹೋರಾಟಗಾರ್ತಿಯರು ಮಾತು–ಸಂವಾದದಲ್ಲಿ ಜೊತೆಗೂಡಲಿದ್ದಾರೆ.

ಸಂಜೆ 6.00ರಿಂದ 7.00ರವರೆಗೆ ಸಂಜಯ ವೃತ್ತ, ಬಸ್‌ಸ್ಟ್ಯಾಂಡ್ ಹತ್ತಿರ, ಮಂಡ್ಯದಲ್ಲಿ 'ಕಪ್ಪುಡುಗೆಯಲ್ಲಿ ಮಹಿಳೆಯರು' ಮೌನ ಜಾಗೃತಿ ಕಾರ್ಯಕ್ರಮ 'ಸರ್ವ ಜನಾಂಗದ ಶಾಂತಿಯ ದೇಶ' ಘೋಷವಾಕ್ಯದೊಂದಿಗೆ ನಡೆಯಲಿದೆ.

***ಮಾರ್ಚ್ 8, 2020ರ ಭಾನುವಾರ***

ಹಕ್ಕೊತ್ತಾಯ ಜಾಥಾ ಬೆಳಿಗ್ಗೆ 10.30ಕ್ಕೆ ಮಂಡ್ಯದ ವಿಶ್ವೇಶ್ವರಯ್ಯ ಪ್ರತಿಮೆ ಬಳಿ ಆರಂಭವಾಗಿ ನಗರದ ಮುಖ್ಯಬೀದಿಗಳಲ್ಲಿ ಸಂಚರಿಸಿ ಸಿಲ್ವರ್ ಜ್ಯುಬಿಲಿ ಪಾರ್ಕ್‌ನಲ್ಲಿ ಸಾರ್ವಜನಿಕ ಸಮಾವೇಶ ನೆರೆಯುವುದು. ದೆಹಲಿಯ ಪ್ರಖ್ಯಾತ ಸಾಮಾಜಿಕ ಕಾರ್ಯಕರ್ತೆ ಶಬ್ನಂ ಹಶ್ಮಿ ನಮ್ಮೊಡನೆ ಇರಲಿದ್ದಾರೆ. ಅದೇ ಸ್ಥಳದಲ್ಲಿ ಸಂಜೆ 4.00ರಿಂದ, ಸಾಂಸ್ಕೃತಿಕ ಕಾರ್ಯಕ್ರಮಗಳಿರುತ್ತವೆ.

**ನಮ್ಮ ಹಕ್ಕೊತ್ತಾಯಗಳು:**

- ಜಾತಿ, ವರ್ಗ, ಧರ್ಮ, ಜನಾಂಗ, ಯುದ್ಧ, ಸಿದ್ಧಾಂತ, ಭಾಷೆ, ಗಡಿಗಳ ಹೆಸರಿನಲ್ಲಿ ಮಹಿಳೆಯರ ಮೇಲೆ ನಡೆಯುವ ಭೀಕರ ಹಿಂಸೆ, ಅತ್ಯಾಚಾರಗಳು ನಿಲ್ಲಬೇಕು.
- ಸರ್ವರ ಸಮಾನತೆ, ಏಳಿಗೆಯನ್ನು ಸಾಧಿಸಬಯಸುವ ಸಂವಿಧಾನದಲ್ಲಿ ನಂಬಿಕೆ ಇರಿಸಿರುವವರರೆಲ್ಲರೂ, ಈ ನೆಲದಲ್ಲಿ ವಾಸಿಸುತ್ತ ಬದುಕು ಕಟ್ಟಿಕೊಂಡವರು, ಬದುಕು ರೂಪಿಸಿಕೊಳ್ಳಬಯಸುವವರೆಲ್ಲರೂ ಸರ್ವಜನಾಂಗದ ಶಾಂತಿಯ ತೋಟವಾದ ಭಾರತದ ಪ್ರಜೆಗಳು.
- ಸರ್ಕಾರ ರಚನೆ ಮತ್ತು ರಾಜಕೀಯರಂಗವೂ ಸೇರಿದಂತೆ ಎಲ್ಲ ರಂಗಗಳಲ್ಲಿ, ಸಂಘ–ಸಂಸ್ಥೆಗಳಲ್ಲಿ ಸಾಮಾಜಿಕ ನ್ಯಾಯವನ್ನು ಆಧರಿಸಿದ ಮಹಿಳಾ ಮೀಸಲಾತಿ ಕಡ್ಡಾಯವಾಗಿ ಜಾರಿಯಾಗಬೇಕು. ಅರ್ಥಪೂರ್ಣ ಮಹಿಳಾ ನಾಯಕತ್ವ ಬೆಳೆಸಲು ಅವಕಾಶ ಮಾಡಿಕೊಡಬೇಕು. ಸಾರ್ವಜನಿಕ ಸ್ಥಳ, ಸಂಸ್ಥೆಗಳಲ್ಲಿ ವಿವಾಹ ಮತ್ತು ಕುಟುಂಬ ವ್ಯವಸ್ಥೆಯಲ್ಲಿ ಮಹಿಳೆಯರನ್ನು ಸಹಜೀವಿಯಾಗಿ, ಸಮಾನವಾಗಿ, ಗೌರವಯುತವಾಗಿ ಕಾಣುವಂತಹ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕು,
- ಹೆಣ್ಣು ಭ್ರೂಣಹತ್ಯೆ, ಹೆಣ್ಣುಶಿಶು ಹತ್ಯೆ, ಆಸಿಡ್ ದಾಳಿ, ಅತ್ಯಾಚಾರ, ಬಾಲ್ಯವಿವಾಹ, ಗುಜ್ಜರ್ ಮದುವೆ, ದೇವದಾಸಿ ಪದ್ಧತಿ, ಮರ್ಯಾದೆಗೇಡು ಹತ್ಯೆ, ವರದಕ್ಷಿಣೆ ಹಿಂಸೆ ಮೊದಲಾದ ಲಿಂಗಸಂಬಂಧಿ ದೌರ್ಜನ್ಯಗಳು ಕೊನೆಯಾಗಬೇಕು. ತಾಯಿಮರಣ, ಶಿಶುಮರಣ ವನ್ನು ತಡೆಯಲು ಸೂಕ್ತ ಕ್ರಮ ಕೈಗೊಳ್ಳಬೇಕು.
- ಅಶ್ಲೀಲ ಸಾಹಿತ್ಯ, ಸಿನಿಮಾ, ಜಾಲತಾಣಗಳನ್ನು ನಿಷೇಧಿಸಬೇಕು.
- ಲಿಂಗ ಸೂಕ್ಷ್ಮತೆ ಬೆಳೆಸುವಂತಹ ಪಠ್ಯಕ್ರಮ, ಆರೋಗ್ಯಕರ ಲೈಂಗಿಕ ಶಿಕ್ಷಣ ಜಾರಿಯಾಗಬೇಕು. 12ರಿಂದ 18 ವರ್ಷದವರೆಗಿನ ಹೆಣ್ಣು ಮಕ್ಕಳ ಶಿಕ್ಷಣವನ್ನು ಕಡ್ಡಾಯಗೊಳಿಸಬೇಕು. ಶಾಲಾ ಕಾಲೇಜುಗಳಿಗೆ ಉತ್ತಮ ಗುಣಮಟ್ಟದ, ಪರಿಸರಸ್ನೇಹಿ ಉಚಿತ ನ್ಯಾಪ್‌ಕಿನ್‌ಗಳನ್ನು ಸರ್ಕಾರ ಪೂರೈಸಬೇಕು ಮತ್ತದರ ವಿಲೇವಾರಿ ವ್ಯವಸ್ಥೆ ಕೈಗೊಳ್ಳಬೇಕು.
- ಅತ್ಯಾಚಾರ ತಡೆ ಕಾವಲು ಸಮಿತಿಗಳು ಪ್ರತಿ ಜಿಲ್ಲೆಗಳಲ್ಲಿ ರಚನೆಯಾಗಬೇಕು; ತ್ವರಿತ ನ್ಯಾಯಾಲಯಗಳಲ್ಲಿ ಶೀಘ್ರ ನ್ಯಾಯದಾನದ ವ್ಯವಸ್ಥೆಯಾಗಬೇಕು. ಪೋಕ್ಸೋ ಕಾಯ್ದೆಯ ಪ್ರಕಾರ ಮಕ್ಕಳ ಮೇಲಿನ ಅತ್ಯಾಚಾರ/ಲೈಂಗಿಕ ದೌರ್ಜನ್ಯ ಪ್ರಕರಣಗಳು ಒಂದು ವರ್ಷದಲ್ಲಿ ಇತ್ಯರ್ಥವಾಗಬೇಕು.

‘ಎನ್‌ಕೌಂಟರ್‌ನಿಂದಲ್ಲ, ಸಾಮಾಜಿಕ ಎಚ್ಚರದಿಂದ ಅತ್ಯಾಚಾರಗಳನ್ನು ತಡೆಯಲು ಸಾಧ್ಯ’ ಎಂಬ ಸಂದೇಶ ದೊರಕಬೇಕು.

- ಮಹಿಳೆ ಮತ್ತು ಮಕ್ಕಳ ಸಾಗಾಣಿಕೆ ತಡೆಗೆ ಗಂಭೀರ ಪ್ರಯತ್ನಗಳಾಗಬೇಕು. ಅಕ್ರಮ ಸಾಗಾಟದ ಹೊಣೆಗಾರಿಕೆಯನ್ನು ಸ್ಥಳೀಯ ಆಡಳಿತ ವ್ಯವಸ್ಥೆಯ ಮೇಲೆಯೇ ಹೊರಿಸಬೇಕು.
- ಮಹಿಳೆಯರಿಗೆ ಉಚಿತ ಸಾರ್ವಜನಿಕ ಶೌಚಾಲಯ ತೆರೆಯಬೇಕು. ಮುಟ್ಟಿನ ಹೆಸರಿನಲ್ಲಿ, ಸಂಪ್ರದಾಯದ ಹೆಸರಿನಲ್ಲಿ ಮಹಿಳೆಯರನ್ನು ಅಗೌರವಿಸುವ, ಹೊರಗಿಡುವ, ಶೋಷಿಸುವಂತಹ ಮೌಢ್ಯಾಚರಣೆಗಳು ನಿಲ್ಲಬೇಕು.
- 1984ರಲ್ಲಿ ಆದೇಶವಾಗಿರುವ ಶೇ. 33 ಜೆಂಡರ್ ಬಜೆಟ್ ಕಡ್ಡಾಯವಾಗಿ ಜಾರಿಗೊಳ್ಳಬೇಕು. ಯೋಜನಾ ಹಣದ ಬಳಕೆಗೆ ಕಾವಲು ಸಮಿತಿ ರಚಿಸಬೇಕು.
- ಲಿಂಗತ್ವ ಅಲ್ಪಸಂಖ್ಯಾತರ ಲೈಂಗಿಕ ಕಾರ್ಯಕರ್ತರ ಮಾನವ ಹಕ್ಕುಗಳ ಉಲ್ಲಂಘನೆ ಮತ್ತು ಅಪರಾಧೀಕರಣ ತಡೆಯಲು ಸೂಕ್ತವಾದ ಕ್ರಮಗಳನ್ನು ಕೈಗೊಳ್ಳಬೇಕು.
- ಗಾರ್ಮೆಂಟ್ಸ್ ಕಾರ್ಮಿಕರು, ಅಂಗನವಾಡಿ–ಬಿಸಿಊಟ–ಆಶಾ ಕಾರ್ಯಕರ್ತೆಯರು, ಮನೆಗೆಲಸದವರು, ಕಟ್ಟಡ ಕಾರ್ಮಿಕರು ಹಾಗೂ ಇನ್ನಿತರ ಎಲ್ಲ ಅಸಂಘಟಿತವಲಯದ ಮಹಿಳಾ ದುಡಿಮೆಗಾರರಿಗೆ ಬದುಕುವ ವೇತನ, ಲೈಂಗಿಕ ಕಿರುಕುಳ ಮುಕ್ತ ಆರೋಗ್ಯಕರ ಕೆಲಸದ ವಾತಾವರಣ ಸಿಗಬೇಕು.
- ಉದ್ಯೋಗ ಪ್ರತಿ ಪ್ರಜೆಯ ಹಕ್ಕು. ಸಾಮರ್ಥ್ಯಕ್ಕೆ ತಕ್ಕ ಉದ್ಯೋಗಾವಕಾಶಗಳು ಗ್ರಾಮೀಣ ಹಾಗೂ ಸಣ್ಣ ಪಟ್ಟಣ ಪ್ರದೇಶಗಳಲ್ಲೂ ರೂಪುಗೊಳ್ಳುವಂತೆ ಸೂಕ್ತ ಕ್ರಮ ಕೈಗೊಳ್ಳಬೇಕು.
- ಯಾವುದೇ ಸ್ವರೂಪದಲ್ಲಿ ಅಸ್ಪೃಶ್ಯತೆ ಕೊನೆಗೊಳ್ಳಬೇಕು. ಅಸ್ಪೃಶ್ಯತೆಯನ್ನು ತಡೆಯಲು ಪರಿಣಾಮಕಾರಿ, ಪರಿವರ್ತನಕಾರಿ ಕ್ರಮಗಳನ್ನು ಕೈಗೊಳ್ಳಬೇಕು.
- ಮದ್ಯ ಮತ್ತು ಮಾದಕದ್ರವ್ಯ ವ್ಯಸನ ಮುಕ್ತ ಕರ್ನಾಟಕ ನಮ್ಮ ಆಗ್ರಹ. ಅಕ್ರಮ ಮದ್ಯ–ಮಾದಕ ವಸ್ತುಗಳ ಮಾರಾಟಕ್ಕೆ ಕಟ್ಟುನಿಟ್ಟಿನ ನಿರ್ಬಂಧಗಳನ್ನು ತಂದು, ಮುಂದಿನ ದಿನಗಳಲ್ಲಿ ಮದ್ಯ–ಮಾದಕ ವಸ್ತು ವ್ಯಸನದಿಂದ ಕುಟುಂಬಗಳು ಸರ್ವನಾಶವಾಗದಂತೆ ದೂರಗಾಮಿ ಕಾರ್ಯಯೋಜನೆ ರೂಪಿಸಬೇಕು.
- ಕೃಷಿ ಭೂಮಿಯನ್ನು ರೈತರಿಂದ, ಆದಿವಾಸಿಗಳಿಂದ ಬಲವಂತವಾಗಿ ಕಸಿದು

ದಿಕ್ಕೇಡಿಗಳನ್ನಾಗಿಸುವಂತಹ ಅಭಿವೃದ್ಧಿ ಯೋಜನೆಗಳು, ಸುಗ್ರೀವಾಜ್ಞೆಗಳು ಸಾಮಾಜಿಕ ಮರುಪರಿಶೀಲನೆಗೊಳಗಾಗಬೇಕು.

- ಶಿಕ್ಷಣ, ಆರೋಗ್ಯ ಹಾಗೂ ಇನ್ನಿತರ ಸಾರ್ವಜನಿಕ ಕ್ಷೇತ್ರಗಳ ಖಾಸಗೀಕರಣ ನಿಲ್ಲಬೇಕು, ಸಮಾನ ಶಿಕ್ಷಣ ಹಾಗೂ ವೈಜ್ಞಾನಿಕ ಮನೋಭಾವ ಬೆಳೆಸುವ ಶಿಕ್ಷಣ ಪದ್ಧತಿ ಜಾರಿಯಾಗಬೇಕು.
- ಮಲಬಾಚುವ ಪದ್ಧತಿ ನಿಷೇಧ ಕಾಯ್ದೆಯನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕು. ಪೌರಕಾರ್ಮಿಕರಿಗೆ ಉತ್ತಮ ಬದುಕುವ ವೇತನ, ಉತ್ತಮ ಕೆಲಸದ ವಾತಾವರಣ, ಸುರಕ್ಷಾ ಸೌಲಭ್ಯಗಳು, ಮ್ಯಾನ್‌ಹೋಲ್ ಮತ್ತು ಮಲದಗುಂಡಿಗಳ ಸ್ವಚ್ಛತೆಯ ಯಾಂತ್ರೀಕರಣ, ಶೌಚಾಲಯ ಮತ್ತು ಒಳ ಚರಂಡಿ ನಿರ್ಮಾಣ, ನೀರು ಪೂರೈಕೆಗಳನ್ನು ಕಾಲಮಿತಿಯೊಳಗೆ ನಡೆಸಲು ಕ್ರಿಯಾಯೋಜನೆ ರೂಪಿಸಬೇಕು.
- ರೈತರಿಗೆ ತ್ವರಿತ ಮಾರುಕಟ್ಟೆ ತಕ್ಷಣವೇ ಹಣಪಾವತಿಸುವ ವ್ಯವಸ್ಥೆಯಾಗಬೇಕು.
- ಪ್ಲಾಸ್ಟಿಕ್ ಮತ್ತು ವಿಷಕಾರಿ ತ್ಯಾಜ್ಯಗಳಿಂದ ಮುಕ್ತವಾದ ಆರೋಗ್ಯಕರ ಪರಿಸರವನ್ನು ಮುಂದಿನ ಪೀಳಿಗೆಗಾಗಿ ಉಳಿಸುವ ಜಾಗೃತಿ ಕಾರ್ಯಕ್ರಮ ಕೈಗೊಳ್ಳಬೇಕು.

**ರಾಜ್ಯಮಟ್ಟದಲ್ಲಿ ಸಹಭಾಗಿ ಸಂಘಟನೆಗಳು:**

ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆ, ಮಂಗಳೂರು, ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ ಬೆಂಗಳೂರು, ಮೈಸೂರು ಜಿಲ್ಲಾ ಮಹಿಳಾ ಮತ್ತು ಪ್ರಗತಿಪರ ಸಂಘಟನೆಗಳ ಒಕ್ಕೂಟ, ಕೊಪ್ಪಳ ಜಿಲ್ಲಾ ಮಹಿಳಾ ಮತ್ತು ಪ್ರಗತಿ ಪರ ಸಂಘಟನೆಗಳ ಒಕ್ಕೂಟ, ಶಿವಮೊಗ್ಗ ಜಿಲ್ಲಾ ಮಹಿಳಾ ಮತ್ತು ಪ್ರಗತಿ ಪರ ಸಂಘಟನೆಗಳ ಒಕ್ಕೂಟ, ಧಾರವಾಡ ಜಿಲ್ಲಾ ಮಹಿಳಾ ಮತ್ತು ಪ್ರಗತಿ ಪರ ಸಂಘಟನೆಗಳ ಒಕ್ಕೂಟ, ದಲಿತ ಕಲಾ ಮಂಡಳಿ: ಗದಗ, ದಲಿತ ಬಹುಜನ ಚಳುವಳಿ ಗದಗ, ವಿಮೋಚನಾ ಮಹಿಳಾ ಹಕ್ಕುಗಳ ವೇದಿಕೆ ಬೆಂಗಳೂರು, ವಿಮೆನ್ಸ್ ವಾಯ್ಸ್, ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ, ಪಿ.ಯು.ಸಿ.ಎಲ್, ಮಹಿಳಾ ಮುನ್ನಡೆ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಮಹಿಳೋದಯ ಮಹಿಳಾ ಒಕ್ಕೂಟ–ಓಡಿಪಿ, ದಲಿತ ದಮನಿತರ ಸ್ವಾಭಿಮಾನ ಹೋರಾಟ ಸಮಿತಿ, ಅತ್ಯಾಚಾರ ವಿರೋಧಿ ಪ್ರಚಾರಾಂದೋಲನ, ಕರ್ನಾಟಕ ಪ್ರಾಂತ್ಯ ರೈತ ಸಂಘ, ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ, ಗಾರ್ಮೆಂಟ್ಸ್ ಅಂಡ್ ಟೆಕ್ಸ್‌ಟೈಲ್ಸ್ ವರ್ಕರ್ಸ್ ಯೂನಿಯನ್, ಸಾಧನಾ ಮಹಿಳಾ ಗುಂಪು, ಕರ್ನಾಟಕ ಲೇಖಕಿಯರ ಸಂಘ, ಕರ್ನಾಟಕ ರಾಜ್ಯ ದಲಿತ ಮಹಿಳಾ ಒಕ್ಕೂಟ, ಆಲ್ ಇಂಡಿಯಾ ಪ್ರೊಗ್ರೆಸಿವ್ ವಿಮೆನ್ಸ್ ಅಸೋಸಿಯೇಷನ್, ಕರ್ನಾಟಕ ದಲಿತ ಮಹಿಳಾ ವೇದಿಕೆ,

ದಲಿತ ಬಹುಜನ ಚಳುವಳಿ, ನ್ಯಾಶನಲ್ ಫೆಡರೇಷನ್ ಆಫ್ ಇಂಡಿಯನ್ ವಿಮೆನ್, ಭಾರತೀಯ ಮಹಿಳಾ ಒಕ್ಕೂಟ, ಮಾನಿನಿ, ಗಾರ್ಮೆಂಟ್ಸ್ ಲೇಬರ್ ಯೂನಿಯನ್, ಸ್ತ್ರೀ ಜಾಗೃತಿ ಸಮಿತಿ, ಚರಕಾ ಮಹಿಳಾ ವಿವಿಧೋದ್ದೇಶ ಸಂಘ ಹೆಗ್ಗೋಡು, ಎಸ್.ಎಫ್.ಐ, ಡಿವೈಎಫ್ಐ, ಎಐಟಿಯುಸಿ, ಸಿಐಟಿಯು, ಕರ್ನಾಟಕದ ವಿದ್ಯಾರ್ಥಿ ಸಂಘಟನೆ, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ), ಕರ್ನಾಟಕ ಲೈಂಗಿಕ ಅಲ್ಪಸಂಖ್ಯಾತರ ವೇದಿಕೆ, ಕರ್ನಾಟಕ ಲೈಂಗಿಕ ಕಾರ್ಮಿಕರ ಯೂನಿಯನ್, ಸಂಗಮ ಬೆಂಗಳೂರು, ಪರ್ಯಾಯ ಕಾನೂನು ವೇದಿಕೆ, ಜೀವ ಬೆಂಗಳೂರು, ಒಂದೆಡೆ ಬೆಂಗಳೂರು, ತರಿಕಿಟ ಕಲಾ ಕಮ್ಮಟ, ಸಂಚಲನ ಕರ್ನಾಟಕ, ಸಂವಾದ, ಭಾರತೀಯ ಜ್ಞಾನ ವಿಜ್ಞಾನ ಸಮಿತಿ, ಜನಾಂದೋಲನ ಸಮಿತಿ, ಬಿ.ಬಿ.ಎಂ.ಪಿ ಗುತ್ತಿಗೆ ಪೌರ ಕಾರ್ಮಿಕರ ಸಂಘಟನೆ, ಎಐಸಿಟಿಯು, ಪಯಣ, ಸಮಾಜವಾದಿ ಜನಪರಿಷದ್, ಕರ್ನಾಟಕ ಜನಶಕ್ತಿ, ಕರ್ನಾಟಕ ಕೋಮು ಸೌಹಾರ್ದ ವೇದಿಕೆ, ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ, ದೇವದಾಸಿ ಮಹಿಳೆಯರ ಸಂಘಟನೆ ಬೆಳಗಾವಿ, ಭೂಮ್ತಾಯಿ ಬಳಗ ದೊಡ್ಡಬಳ್ಳಾಪುರ, ಕವಿ ಪ್ರಕಾಶನ ಕವಲಕ್ಕಿ, ಲಡಾಯಿ ಪ್ರಕಾಶನ ಗದಗ, ಉಜ್ವಲ ಸಂಸ್ಥೆ ವಿಜಯಪುರ, ಫೆಡಿನಾ, ದಲಿತ ಮಹಿಳಾ ಸಂಸ್ಥೆ, ಅನೌಪಚಾರಿಕ ಶಿಕ್ಷಣ ಸಂಸ್ಥೆ, ಚೈತನ್ಯ ಮಹಿಳಾ ಕೋ ಆಪರೇಟಿವ್ ಬ್ಯಾಂಕ್ ವಿಜಯಪುರ, ಮಹಿಳಾ ಸಮಖ್ಯಾ, ಪ್ರಿಯದರ್ಶಿನಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಂಸ್ಥೆ, ಕರ್ನಾಟಕ ಅಂಗವಿಕಲರ ಐಕ್ಯತಾ ವೇದಿಕೆ, ನವಸ್ಫೂರ್ತಿ ಸಂಸ್ಥೆ ವಿಜಯಪುರ, ಭಾರತೀಯ ಮುಸ್ಲಿಂ ಮಹಿಳಾ ಆಂದೋಲನ ಕರ್ನಾಟಕ, ಸೇವಾ, ನವಜೀವನ ಮಹಿಳಾ ಒಕ್ಕೂಟ ರಾಯಚೂರು, ಮದ್ಯ ನಿಷೇಧ ಆಂದೋಲನ.

**ಮಂಡ್ಯ ಜಿಲ್ಲಾ ಸಹಭಾಗಿ ಸಂಘಟನೆಗಳು:**

ಕರ್ನಾಟಕ ರಾಜ್ಯ ರೈತ ಸಂಘ, ಮಹಿಳಾ ಮುನ್ನಡೆ, ಸಿಐಟಿಯು, ಸ್ಪಂದನ ಮಹಿಳಾ ಸಂಘಟನೆ, ಗಾರ್ಮೆಂಟ್ಸ್ ಅಂಡ್ ಟೆಕ್ಸ್‌ಟೈಲ್ಸ್ ವರ್ಕರ್ಸ್ ಯೂನಿಯನ್, ಜನವಾದಿ ಮಹಿಳಾ ಸಂಘಟನೆ, ಸಿರಿ ಮಹಿಳಾ ಸ್ವಸಹಾಯ ಸಂಘಗಳ ಸಹಕಾರ ಸಂಘ, ಜಿಲ್ಲಾ ಮಹಿಳೋದಯ ಮಹಿಳಾ ಒಕ್ಕೂಟ–ಓಡಿಪಿ, ವಿಕಸನ ಸಂಸ್ಥೆ, ಜ್ಯೋತಿ ಮಹಿಳಾ ಮಂಡಳಿ, ಜನಸ್ಪಂದನ, ಅಂಗನವಾಡಿ–ಆಶಾ–ಮನೆಕೆಲಸ–ಬೀದಿಕಾರ್ಮಿಕರ ಸಂಘ (ಸಿಐಟಿಯು), ಅಖಿಲ ಕರ್ನಾಟಕ ಗೃಹಕಾರ್ಮಿಕರ ವೃತ್ತಿ ಸಂಘಟನೆ, ದುಡಿಯುವ ಮಹಿಳೆಯರ ಸಮನ್ವಯ ಸಮಿತಿ, ಅರುಣೋದಯ ಕಲಾತಂಡ, ಕರ್ನಾಟಕ ಲಿಂಗತ್ವ ಅಲ್ಪಸಂಖ್ಯಾತರ ಒಕ್ಕೂಟ, ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ, ಆಶೋದಯ ಸಂಘಟನೆ, ನ್ಯಾಷನಲ್ ವಿಮೆನ್ಸ್ ಫ್ರಂಟ್, ವಿಮೆನ್ ಇಂಡಿಯಾ ಮೂವ್‌ಮೆಂಟ್, ದಲಿತ ಸಂಘರ್ಷ ಸಮಿತಿ, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ, ಮಂಡ್ಯ ಜಿಲ್ಲಾ ಶ್ರಮಿಕನಗರ ನಿವಾಸಿಗಳ ಒಕ್ಕೂಟ, ಬೀದಿಬದಿ ವ್ಯಾಪಾರಿಗಳ ಸಂಘ, ಪೌರ

ಕಾರ್ಮಿಕರ ಸಂಘ, ಅಂಗವಿಕಲರ ಮತ್ತು ಪಾಲಕರ ಒಕ್ಕೂಟ, ಕರ್ನಾಟಕ ಪ್ರಾಂತ ಕೃಷಿ ಕೂಲಿ ಕಾರ್ಮಿಕರ ಸಂಘ, ಕರ್ನಾಟಕ ಜನಶಕ್ತಿ, ಕರ್ನಾಟಕ ಪ್ರಾಂತ ರೈತ ಸಂಘ, ನೆಲದನಿ ಬಳಗ, ಅಖಿಲ ಭಾರತ ವಕೀಲರ ಒಕ್ಕೂಟ, ಮಂಡ್ಯ, ಭಾರತೀಯ ಬೌದ್ಧ ಮಹಾಸಭಾ, ಮಂಡ್ಯ, ನಿತ್ಯಸ್ನೇಹಿ ಟ್ರಸ್ಟ್, ಕರ್ನಾಟಕ ಸಂಘ, ವಿ ಹೆಲ್ಪ್ ಗ್ರಾಮೀಣಾಭಿವೃದ್ಧಿ ಮತ್ತು ನಗರಾಭಿವೃದ್ದಿ ಸಂಸ್ಥೆ, ಕರ್ನಾಟಕ ರಾಜ್ಯ ಮಹಿಳಾ ತರಬೇತುದಾರರ ಸಂಚಲನ, ಸಮನ್ವಯ, ವಿಮೋಚನಾ, ಬರ್ಡ್ಸ್ ಸಂಸ್ಥೆ, ಪ್ರತಿಭಾ ಮಹಿಳಾ ಸಂಘ, ಕೆ.ಆರ್.ಪೇಟೆ, ಮಹಿಳಾ ಮಿಲನ, ಮದ್ದೂರು, ಸಂಜೀವಿನಿ ಯೋಜನೆ, ವಿಬ್‌ಸೆಟಿ ಮಂಡ್ಯ, ಎಸ್.ಬಿ.ಎಜುಕೇಷನ್ ಟ್ರಸ್ಟ್, ಪರಿಸರ ರೂರಲ್ ಡೆವಲಪ್‌ಮೆಂಟ್ ಸೊಸೈಟಿ (ರಿ), ಎಂಒಬಿ, ಕಾರ್ಮಿಕಯೋಗಿ ಫೌಂಡೇಷನ್, ಜನದನಿ ಸಂಘಟನೆ.

**ಮಹಿಳೆಯರೇ, ಮಹಿಳಾ ಪರ ಮನಸುಗಳೇ, ಬನ್ನಿ.**

**ಮಂಡ್ಯದಲ್ಲಿ 2020ರ ಮಾರ್ಚ್ 7 ಮತ್ತು 8 ರಂದು ಸೇರಿ, ಎಲ್ಲ ಒಂದಾಗಿ ಸಮತೆಯ ಸಮತೆಯ ಕನಸನ್ನು ಸಾಕಾರವಾಗಿಸಲು ಹೆಜ್ಜೆಯಿಡೋಣ...**

*(ವಿ.ಸೂ.: ಜಾಥಾದಲ್ಲಿ ಭಾಗವಹಿಸುವ ಎಲ್ಲ ಸಹಭಾಗಿಗಳು ತಂತಮ್ಮ ಬ್ಯಾನರ್ ತಂದುಕೊಳ್ಳಬೇಕು.)*

# ಪ್ರಾಸ್ತಾವಿಕ ಮಾತು

**ವಾಣಿ ಪೆರಿಯೋಡಿ**

## ಹರಿದು ಬರುವ ನದಿಯಂತೆ ನಮ್ಮ ಪಯಣ

ಇವತ್ತು ನಮ್ಮ ದಿನ ವಿಶೇಷ ದಿನ, ಸಂಭ್ರಮದ ದಿನ. ಪ್ರತಿ ವರ್ಷ ಆಚರಣೆ ಮಾಡುವಾಗಲೂ ಕೂಡ ಓಹೋ ಒಂದಷ್ಟು ಸಾಧನೆ ಮಾಡಿಬಿಟ್ಟೆವು ಎಂಬ ಕುಶಿ ಸಂತೃಪ್ತಿನೂ ಇರುತ್ತದೆ; ಅಬ್ಬಾ ಇನ್ನೂ ಎಷ್ಟೆಷ್ಟೋ ಸವಾಲುಗಳು ಇವೆ ಅನ್ನುವ ಭಯನೂ ಆತಂಕನೂ ಇರುತ್ತೆ. ಈ ಎರಡರ ಜೊತೆಗೆ ನಾವು ಈ ಕಾರ್ಯಕ್ರಮವನ್ನು ಅನುಭವಿಸ್ತಾ ಇದ್ದೇವೆ. ಇದು ಒಂದು ರೀತಿಯಲ್ಲಿ ಶುರುವೂ ಹೌದು ಒಂದು ರೀತಿಯಲ್ಲಿ ಕೊನೆಯೂ ಹೌದು. ಮಂಡ್ಯದ ಒಟ್ಟು ಪ್ರಕ್ರಿಯೆಯ ಒಂದು ತುತ್ತ ತುದಿಯ ದಿನ ಇವತ್ತು, ಮತ್ತೊಂದು ಜಿಲ್ಲೆಗೆ ಕೊಂಡೊಯ್ಯುವುದಕ್ಕೆ ಇದು ಮೊದಲ ಹೆಜ್ಜೆ ಅದಕ್ಕಾಗಿ ಎರಡು ರೀತಿಯಲ್ಲೂ ಇದು ಬಹಳ ಮುಖ್ಯವಾದ ದಿನ.

ಘೋಷವಾಕ್ಯಗಳೊಂದಿಗೆ ನಮ್ಮ ನಡಿಗೆ: ಪ್ರತೀ ಸಾರಿ ಹೇಳ್ತೇವೆ ಮಹಿಳಾ ದೌರ್ಜನ್ಯ ನಿಲ್ಲಲೆ ಬೇಕು, ಅದು ನಿಲ್ಲಲೇ ಬೇಕು ಅಂತ ಅಂದ್ರೆ ನಾವು 'ಇನ್ನು ಸಾಕು' ಅಂತ ಹೇಳಲೇ ಬೇಕು, ಅದನ್ನು ಬಾಯಿ ಬಿಟ್ಟು ಹೇಳಬೇಕು, 'ಇನ್ನು ಸಾಕು' 'ಇನ್ನು ಸಾಕು' ಹೇಳುತ್ತಲೇ ಇರಬೇಕು. ಅದು ಎಲ್ಲಿಯತನಕ ನಡೆಯುತ್ತದೋ ಅಲ್ಲಿಯತನಕ ನಾವು 'ಇನ್ನು ಸಾಕು' ಹೇಳ್ಬೇಕು, ಹೇಳೋಣ ಎಲ್ಲರೂ ಒಟ್ಟಾಗಿ ಸೇರಿ "ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯ ಇನ್ನು ಸಾಕು ಇನ್ನು ಸಾಕು".

ಮಂಗಳೂರಿನಲ್ಲಿ 2013ರಲ್ಲಿ ಶುರುವಾದಾಗ. ಈ ಘೋಷಣೆಯ ಜೊತೆಗೆ ಹೊರಟವರು ನಾವು, ಪ್ರಯಾಣ ಶುರುವಾಗಿತ್ತು. ಆಮೇಲೆ ಬೆಂಗಳೂರಿನಲ್ಲಿ, ಮೈಸೂರಿನಲ್ಲಿ, ಬಿಜಾಪುರದಲ್ಲಿ, ಕೊಪ್ಪಳದಲ್ಲಿ, ಶಿವಮೊಗ್ಗದಲ್ಲಿ, ಧಾರವಾಡದಲ್ಲಿ,,ಹರಿಯುತ್ತಾ ಬಂತು.. ಈ ಒಂದು ಪ್ರಯಾಣ ಇದೆಯಲ್ಲಾ, ನದಿ ತರಹ ಹರಿಯುತ್ತಾ ಹರಿಯುತ್ತಾ ಒಂದಷ್ಟು ಕಾಲುವೆಗಳು ಸೇರಿ ಕೊಳ್ತಾ ಒಂದು ಸಾಗರದ ತರಹ ಬೆಳೆಯುತ್ತಾ ಇದೆ. ಇಲ್ಲಿ ನಮ್ಮದು ಇರುವುದು ಒಂದೇ ಒಂದು. ನಮ್ಮ ಪ್ರೀತಿಯ ರಾಜಕಾರಣದ ಬೆಸುಗೆ. ಈ ಬೆಸುಗೆಯ ಜೊತೆಗೆ ಬೆಳೆಯುತ್ತಾ ಬೆಳೆಯುತ್ತಾ ಬಂದಿದ್ದೇವೆ. ಒಂದೊಂದು ಕಡೆಯೂ ಕೂಡ ಒಂದೊಂದು ಹೊಸ ಹೊಸ ಘೋಷವಾಕ್ಯಗಳು ನಮಗೆ ಹೊಸ ಹೊಸ ಆಯಾಮ ಕೊಟ್ಟಿವೆ. ನಾವು ಕೊಪ್ಪಳದಲ್ಲಿದ್ದಾಗ "ನಮ್ಮ ಮಗಳು ಜಗದ ಬೆಳಕು" "ನನ್ನ ದೇಹ ನನ್ನ ಹಕ್ಕು", ಅಂತ ದಿಟ್ಟವಾಗಿ ಹೇಳಿಕೊಂಡೆವು. ತುಂಬು ಆತ್ಮವಿಶ್ವಾಸದಿಂದ ನಮ್ಮ ದೇಹದ ಬಗ್ಗೆ ಮಾತಾಡ್ಲಿಕ್ಕೆ ಶುರುಮಾಡುವುದೇ ಒಂದು ದೊಡ್ಡ ಕ್ರಾಂತಿ ಅಂತ

ನಮಗೆ ಅನಿಸುತ್ತೆ, ನಾವು ಧಾರವಾಡಕ್ಕೆ ಬರುವಷ್ಟರ ಹೊತ್ತಿಗೆ ನಮ್ಮ ನಡುವೆ ರಾಜಕೀಯದ ಬಗ್ಗೆ ಬಹಳಷ್ಟು ಚಿಂತನೆಗಳು ನಡೆಯತೊಡಗಿತ್ತು. ಹೆಣ್ಣುಮಕ್ಕಳು ಸಾಧಾರಣವಾಗಿ ರಾಜಕೀಯದ ಬಗ್ಗೆ ಮಾತಾಡ್ಲಿಕ್ಕೆ ಆಗ್ಲಿ ಅಥವಾ ಅದರಲ್ಲಿ ಭಾಗವಹಿಸ್ಲಿಕ್ಕೆ ಆಗ್ಲಿ ಹಿಂಜರೀತೀವಿ. ಅದಕ್ಕಾಗಿ ಆ ಹೊತ್ತು ನಾವು "ನನ್ನ ಮತ ನನ್ನ ಆಯ್ಕೆ ಇರಲಿ ಹೆಣ್ಣೋಟದ ಹೆಗ್ಗಳಿಕೆ" ಎನ್ನುವ ಆಶಯದ ಜೊತೆಗೆ ಕೆಲಸ ಮಾಡಿದ್ದು. ಯಾವುದೇ ಸ್ಥಾನಕ್ಕೆ ಹೋದಾಗ್ಲೂ ಕೂಡ ಅಲ್ಲಿ ನಾವು ಗಂಡು ಪ್ರತಿಮೆಯನ್ನು ಅನುಕರಿಸದೇನೇ ಒಂದು ಹೆಣ್ಣೋಟವನ್ನು ಕಾಣಿಕೆಯಾಗಿ ಕೊಡುವುದು ನಮ್ಮ ಉದ್ದೇಶ ಆಗಿರಬೇಕು, ಆವಾಗ ಮಾತ್ರ ಹೆಣ್ತನವನ್ನು ಪ್ರತಿಪಾದಿಸುವಂತಹ ಪ್ರಕ್ರಿಯೆ ಶುರುವಾಗುತ್ತೆ.

ಮುಂದೆ ಈಗ ಮಂಡ್ಯಕ್ಕೆ ಬರುವ ಹೊತ್ತಿಗೆ ನಾವು ಘೋಷವಾಕ್ಯಗಳ ಬಗ್ಗೆ ದಿನಗಟ್ಲೆ ಚರ್ಚೆ ಮಾಡಿದ್ದೆವು. ಇಲ್ಲಿ ಮಾತಾಡ್ತಾ ಮಾತಾಡ್ತಾ ಅನಿಸಿದ್ದು ಏನು ಅಂತ ಅಂದ್ರೆ ನಾವು ಗೋಳು ಹೇಳಿಕೊಳ್ಳದೆ, ನಮ್ಮ ಗಟ್ಟಿ ಧ್ವನಿಯನ್ನು ಪ್ರತಿಪಾದಿಸೋಣ ಅಂತ. " ಗಟ್ಟಿ ದನಿ ದಿಟ್ಟ ನಡೆ ಘನತೆವೆತ್ತ ಬದುಕು" ಅನ್ನುವಂತಹ ಘೋಷವಾಕ್ಯ ರೂಪುಗೊಂಡಿತು. ಎಲ್ಲರೂ ಸೇರಿ ಒಮ್ಮೆ ಹೇಳೋಣವೇ. " ಗಟ್ಟಿ ದನಿ ದಿಟ್ಟ ನಡೆ ಘನತೆವೆತ್ತ ಬದುಕು". ಧಾರವಾಡದಿಂದ ಇಂತಹ ಕಾರ್ಯಕ್ರಮ ಕೊನೆಗೊಂಡಾಗ ಮಹಿಳಾ ಮುನ್ನಡೆ ಮತ್ತು ಗಾಟು ಸಂಸ್ಥೆಯವರು ಸಸಿಯನ್ನು ಪ್ರೀತಿಯಿಂದ ಮಂಡ್ಯಕ್ಕೆ ತೆಗೆದುಕೊಂಡು ಬಂದಾಗ ಇಲ್ಲಿ ರೈತ ಸಂಘಟನೆಯ ಸುನಂದಮ್ಮನವರು, ಸಿಐಟಿಯುನವರು, ಜನವಾದಿಯವರು, ಬಹಳ ಪ್ರೀತಿಯಿಂದ ಅದನ್ನು ಒಪ್ಪಿಕೊಂಡು ಇಲ್ಲಿ ನಾವು ನಡೆಸೋಣ ಅಂತ ಜೊತೆ ಸೇರಿದರು. ಬಳಗ ದೊಡ್ಡದಾಗುತ್ತಾ ಬಂತು.

ಒಕ್ಕೂಟದ ಅಂತರ್ಜಲ ಅರಿವಿನ ಪಯಣ: ನಮ್ಮ ಒಕ್ಕೂಟದ ಕೆಲಸ ಕಾರ್ಯಗಳ ಬಗ್ಗೆ ಮಾತಾಡುವಾಗ "ಅರಿವಿನ ಪಯಣದ" ಬಗ್ಗೆ ಹೇಳಲೇಬೇಕಾಗ್ತದೆ. ಇದು ನಮ್ಮ ಅಸ್ತಿತ್ವದ ಅಂತರ್ಜಲ ಇದ್ದ ಹಗೆ. ನಮ್ಮ ಸ್ಫೂರ್ತಿ, ಪ್ರೇರಣೆಯನ್ನು ಕಾಪಿಟ್ಟುಕೊಳ್ಳುವ ಅಂತರ್ಜಲದ ಹಾಗೆ. ನಾವು ಪ್ರತಿ ವರ್ಷ ಕಾರ್ಯಕ್ರಮ ಮಾಡಿದಾಗಲೂ ಜನಸಂಪರ್ಕಕ್ಕಾಗಿ ಯುವಜನರ ಹತ್ತಿರ, ಹಳ್ಳಿ ಜನರ ಹತ್ತಿರ ಹೋಗುವ ವಾಡಿಕೆ ಇದ್ದೆ ಇತ್ತು. ಅದು ಮಾಡ್ತಾ ಮಾಡ್ತಾ ನಾವು ಕೊಪ್ಪಳಕ್ಕೆ ಬರುವಷ್ಟರ ಹೊತ್ತಿಗೆ ಅದಕ್ಕೊಂದು ನಿರ್ದಿಷ್ಟ ರೂಪ ಸಿಕ್ಕಿತು. ಎರಡು ದಿನದ ಸಮಾವೇಶ ಮಾತ್ರ ಮುಖ್ಯ ಅಲ್ಲ ಅದಕ್ಕೆ ಮುಂಚೆ ಜನರೊಡನೆ ಸಹಜವಾಗಿ ಒಡನಾಡುವಂತಹ ಒಂದು ಅವಕಾಶವನ್ನು ನಾವು ತೆರೆಯಬೇಕು ಅನ್ನುವ ಆಶಯದೊಂದಿಗೆ ಹುಟ್ಟಿಕೊಂಡ ಪ್ರಕ್ರಿಯೆ ಇದು. ಶಿವಮೊಗ್ಗಕ್ಕೆ ಬರುವಷ್ಟರ ಹೊತ್ತಿಗೆ "ಅರಿವಿನ ಪಯಣ" ಅನ್ನುವ ಹೆಸರಿನಲ್ಲಿ ಈ ಪ್ರಕ್ರಿಯೆ ಬಹಳ ನಿರಂತರ ನೆಲೆಯಲ್ಲಿ ನಡೆಯಿತು. ಮತ್ತೆ ಹೇಳುತ್ತಿದ್ದೇನೆ, ಈ ಅರಿವಿನ ಪಯಣ ಅಂತರ್ಜಲ ಹಾಗೆ, ನಮಗೆ ಪ್ರತಿ ದಿನ ಶಕ್ತಿ ಕೊಡುತ್ತದೆ. ಅರಿವಿನ ಪಯಣ ಬೇರೆಯವರಿಗೆ ಅರಿವನ್ನು ಹಂಚುವ ಕೆಲಸದೊಂದಿಗೆ ನಮ್ಮೊಳಗೆ ಅರಿವನ್ನು

ಪಡೆದುಕೊಳ್ಳುವಂತಹ ಒಂದು ಪ್ರಕ್ರಿಯೆ ಆಗಿ ಕೂಡಾ ನಡೆದುಕೊಂಡು ಬಂದಿದೆ. ನನಗೆ ಕುಶಿಯಾಗೊದು ಏನೂಂತ ಅಂದ್ರೆ, ಈ ನೀಲಿರಿಬ್ಬನ್ ಈ ದುರ್ಗಾ ನಾಟಕ ಇರಬಹುದು, ಈ ನಾಟಕಗಳನ್ನು ಇಲ್ಲಿ ಅಂಜಲಿ, ಜ್ಯೋತಿ, ಪೂರ್ಣಿಮಾ, ರತ್ನಮ್ಮ ಎಲ್ಲರೂ ತಮ್ಮ ತಮ್ಮದೇ ರೀತಿಯಲ್ಲಿ, ಹಳ್ಳಿ ಹಳ್ಳಿಗಳಲ್ಲಿ ಬೀದಿ ಬೀದಿಗಳಲ್ಲಿ, ಶಾಲಾ ಕಾಲೇಜುಗಳಲ್ಲಿ ಹೇಗೆ ಅಭಿನಯಿಸಲು ಶುರು ಮಾಡಿದ್ರು ಅಂತ ಅಂದ್ರೆ ಜನರ ಮನ ಮುಟ್ಟುವಲ್ಲಿ ಅದು ತುಂಬಾ ಸಹಕಾರಿ ಆಯಿತು.

**ಅನುಭಾವದ ಕೌದಿ:** ಇನ್ನೊಂದು ಹೇಳಲೇ ಬೇಕಾಗಿರುವಂತಹದ್ದು ನಾವು ಪ್ರತಿ ಜಿಲ್ಲೆಯಲ್ಲಿ ಹೊಸ ಹೊಸ ಆಯಾಮಗಳನ್ನು ಹುಡುಕುತ್ತಾ ಬಂದಿದ್ದೀವಿ. ಹೋದ ವರ್ಷ ನಮಗೆ ಕೌದಿ ಹೊಲಿಯುವ ಒಂದು ಹೊಸ ಯೋಚನೆ ಬಂದಿತ್ತು. ಈ ಕೌದಿ ಅನ್ನುವುದು ಹೆಣ್ಣಿನ ಬದುಕಿಗೆ ಬಹಳ ಸುಂದರವಾದಂತಹ ಉಪಮೆ. ಎಷ್ಟೆಷ್ಟೋ ಅನುಭವಗಳನ್ನ ಒಟ್ಟು ಹಾಕಿ ಹೇಗೆ ಎದುರಿಸಿ ಬದುಕ್ಲಿಕ್ಕೆ ಕಲಿಯುವ ಪರಿಗೆ ಕೌದಿ ಒಂದು ಸುಂದರವಾದಂತಹ ಉಪಮೆ. ನಾವೆಲ್ಲರೂ ಸೇರಿಕೊಂಡು ಮೂರು ಜಿಲ್ಲೆಯಲ್ಲಿ ಶಿವಮೊಗ್ಗ, ಮಂಗಳೂರು, ಧಾರವಾಡದಲ್ಲಿ ಜೊತೆ ಸೇರಿ ಒಂದೊಂದು ಕೌದಿಯನ್ನು ಹೊಲಿದಿದ್ದೇವೆ. ನನಗೆ ಏನು ಅನಿಸುತ್ತದೆ ಅಂತ ಅಂದ್ರೆ ನಮ್ಮ ಪ್ರೀತಿಯ ಬೆಸುಗೆಗೆ ಕೂಡಾ ಕೌದಿ ಒಂದು ಸಂಕೇತ. ಬಣ್ಣ ಬಣ್ಣವೂ ಹೌದು; ಸೃಜನಶೀಲವಾದಂತಹ ಒಂದು ಪ್ರಕ್ರಿಯೆಯೂ ಹೌದು. ಮಂಡ್ಯದ ಅತಿಥಿಗಳಿಗೆ ನಾವು ಹೊಲಿದ ಕೌದಿಗಳನ್ನೇ ಕೊಡಲಿದ್ದೇವೆ. ಈ ಕೌದಿ ಹೊಲಿಯುವಾಗ ನಾವೆಲ್ಲರೂ ಜೊತೆಗೆ ಕೂತ್ಕೊಂಡು ಬಹಳ ಆಪ್ತವಾಗಿ, ಈಗ ನಡೆಯುತ್ತಿರುವ ಆಗುಹೋಗುಗಳ ಬಗ್ಗೆ ನಮ್ಮ ಅನಿಸಿಕೆ ಏನು, ಆಗ್ತಾ ಇರುವ ಅತ್ಯಾಚಾರ ಹಿಂಸೆಗಳ ಬಗ್ಗೆ ನಾವು ಯಾವ ನಿಲುವು ತೆಕ್ಕೋಳ್ತೇವೆ, ನಾವು ವ್ಯಕ್ತಿಗತವಾಗಿ ಏನು ಮಾಡಬಹುದು, ಒಂದು ಸಮೂಹವಾಗಿ ಏನು ಮಾಡಬಹುದು ಎಂಬ ಹುಡುಕಾಟ ನಡೆಸಿದೆವು. ನಮ್ಮ ಶಿವಮೊಗ್ಗದ ಸಂಗಾತಿಗಳು ಹೇಳುವ ಹಾಗೆ ಅದು "ಅನುಭಾವದ" ಕೌದಿಯಾಯಿತು.

ನಮ್ಮ ಬಸ್ಸು ನಮ್ಮ ಸೀಟು: ಧಾರವಾಡದಲ್ಲಿ ಹೊಸದೊಂದು ಕೆಲಸ ಮಾಡಿದೆವು. ನಾವು ಯಾವಾಗ್ಲೂ ಸರಕಾರಿ ಬಸ್ಸುಗಳನ್ನು ಬಳಸ್ತಾ ಇರ್ತೇವೆ. ಆ ಬಸ್ಸುಗಳಲ್ಲಿ ನಮ್ಮ ಜಾಗವನ್ನು ನಾವು ಪಡೆದುಕೊಳ್ಳಬೇಕು; ಜೊತೆಗೆ ಕೆಲಸ ಮಾಡುವ ಸಿಬ್ಬಂದಿಗಳನ್ನು ಗೌರವದಿಂದ ಕಾಣುವಂತಹ ಆಶಯವೂ ಇರಬೇಕು. ಅದಕ್ಕಾಗಿ "ನಮ್ಮ ಬಸ್ಸು ನಮ್ಮ ಸೀಟು" ಅಂತ ಹೇಳ್ಕೊಂಡು ಅಭಿಯಾನವನ್ನು ಮಾಡಿದ್ವಿ, ಇವೆಲ್ಲವೂ ಕೂಡ ಜನರ ಹತ್ತಿರ ಆಪ್ತವಾಗಿ ತಲುಪುವಂತಹ ಒಂದು ಪ್ರಯತ್ನ ಆಗಿತ್ತು, ಅದು ನಮ್ಮೆಲ್ಲರಿಗೂ ಕುಶಿ ಕೊಟ್ಟದ್ದು ಮಾತ್ರವಲ್ಲ ಒಂದು ಸಂಚಲನ ಮೂಡಿಸಿತ್ತು.

ನಮ್ಮ ಸಂವಿಧಾನ: ನಮ್ಮ ಒಕ್ಕೂಟ ಒಂದು ನೋಂದಾಯಿತ ಸಂಸ್ಥೆಯಾಗಿ, ಅಧ್ಯಕ್ಷರೋ

ಸಂಚಾಲಕರೋ ಮಾಡಿಕೊಂಡು ಬೆಳೆಸುವುದು ಬೇಡ, ಬಹಳ ಸರಳವಾಗಿ ಹಲವಾರು ವ್ಯಕ್ತಿಗಳು, ಸಂಘಟನೆಗಳು, ಎಲ್ಲರೂ ಸೇರಿಕೊಂಡು ಇರುವಂತಹ ಒಂದು ಜಾಗ, ಅನ್ನುವ ಚರ್ಚೆ ಆಗಾಗ ನಡೆಯುತ್ತಲೇ ಇರುತ್ತದೆ. ಈ ಜಾಗದಲ್ಲಿ ಇರಬಯಸುವವರಿಗೆ ಇರುವ ಸಾಮಾನ್ಯ ಮಾರ್ಗದರ್ಶಿಕೆ ಏನು ಅಂದರೆ ನಮ್ಮ ಸಂವಿಧಾನ. ಒಕ್ಕೂಟದ ಒಂದಷ್ಟು ಮಂದಿ ಗೆಳತಿಯರು ಸೇರಿ ಈ ಸಂವಿಧಾನ ಬರೆದುಕೊಂಡಿದ್ದೇವೆ. ಇದರ ಮುಖ್ಯ ಆಶಯ "ಪ್ರೀತಿಯ ರಾಜಕಾರಣ". ಅದು ಒಟ್ಟಾರೆಯಾಗಿ ಹೇಳುವುದು ಏನು ಅಂತ ಅಂದ್ರೆ "ನಮ್ಮ ಹೃದಯದ ದನಿಯನ್ನು ಹುಡುಕುವ ಪ್ರಕ್ರಿಯೆ ಮತ್ತು ಸಕಲರ ಏಳ್ಗೆಯ ಸಮತೆಯ ಹಾದಿಯನ್ನು ಹುಡುಕುವ ಪ್ರಕ್ರಿಯೆ. ಇದು ಅರಿವಿನ ಹಾದಿಯಾಗಿರಬೇಕು, ಕರುಣದ ಹಾದಿಯಾಗಿರಬೇಕು. ಇದು ಮೈತ್ರಿಯ ಹಾದಿಯಾಗಿರಬೇಕು, ಇದು ಸಮಚಿತ್ತದ ಹಾದಿಯಾಗಿರಬೇಕು, ಇದು ನೆಲ ಜಲ ಜೀವಗಳ ಉಳಿವಿನ ಹಾದಿಯಾಗಿರಬೇಕು" ಅದಕ್ಕಾಗಿ ಇಂತಹ ವಿಚಾರಗಳ ಬಗ್ಗೆ ನಂಬಿಕೆ ಇರುವವರು ಎಲ್ಲರೂ ಕೂಡ ಒಕ್ಕೂಟದ ಸಂಗಾತಿಗಳೇ. ಇವೆಲ್ಲವೂ ತುಂಬಾ ಆದರ್ಶಮಯವಾಗಿ ಕಾಣಿಸಬಹುದು, ಆದರೆ ನಮಗೆ ಬದುಕ್ಲಿಕ್ಕೆ ಒಂದು ದಿಕ್ಸೂಚಿ ಕೊಡ್ಲಿಕ್ಕೆ ಇದು ನಮ್ಮ ಜೊತೆ ಇರಲೇಬೇಕಾಗುತ್ತದೆ. ಸಮಾನತೆ ಅನ್ನುವುದು ನಮ್ಮ ದೇಶದ ಸಂವಿಧಾನದ ಅತ್ಯಂತ ದೊಡ್ಡ ಆಶಯ. ಆದರೆ ಆಚರಣೆ ಅಷ್ಟು ಸುಲಭ ಅಲ್ಲ ಅನ್ನುವುದು ನಮಗೆಲ್ಲರಿಗೂ ಗೊತ್ತು. ಅದಕ್ಕಾಗಿ ಜೊತೆಗೆ ಇರುವಾಗ ಒಬ್ಬರನ್ನೊಬ್ಬರು ತಟ್ಟಿ ನೋಡಿಕೊಳ್ಳುತ್ತಾ ಸರಿಯಾದ ದಾರಿಯಲ್ಲಿ ಇದ್ದೇವಾ ಅನ್ನುವುದನ್ನ ವಿಮರ್ಶೆ ಮಾಡಿಕೊಳ್ಳುತ್ತಾ ಮುಂದೆ ಹೋಗುವುದು ತುಂಬಾ ಮುಖ್ಯ ಆಗುತ್ತೆ.

ಈ ಹೊತ್ತಿನಲ್ಲಿ ಭಾರತದಾದ್ಯಂತ ಬೇರೆ ಬೇರೆ ವಿಚಾರಗಳಿಗೆ ಸಂಬಂಧಿಸಿದಂತೆ ಹೆಣ್ಣು ಮಕ್ಕಳು ಧ್ವನಿ ಎತ್ತುತ್ತಾ ಇದ್ದಾರೆ. ಶಾಹಿನ್ ಬಾಗ್ ಇರಬಹುದು ಬಿಲ್ಲಾಲ್ ಬಾಗ್ ಇರಬಹುದು. ಒಟ್ಟು ಆಶಯ ಏನು ಅಂದ್ರೆ ಈ ನೆಲದಲ್ಲಿ ಈ ನೆಲದವರಾಗಿ ಸಹಜವಾಗಿ ಸಮಾನತೆಯೊಂದಿಗೆ ಬದುಕುವಂತಹ ಒಂದು ಆಶಯ. ಈ ಆಶಯಕ್ಕೆ ನಾವೆಲ್ಲರೂ ಬದ್ಧರು ಎಂದು ಹೇಳಲು ನಾನು ಇಷ್ಟ ಪಡುತ್ತೇನೆ.

ಕೊನೆಯದಾಗಿ ಮಂಡ್ಯದಲ್ಲಿ ಇಷ್ಟು ಅದ್ಭುತವಾಗಿ ಈ ಕಾರ್ಯಕ್ರಮ ಆಗಲು ಸಾಧ್ಯವಾಗಿದ್ದು ಸಂತೋಷದ ವಿಷಯ. ಕೊನೆಯಲ್ಲಿ ಇಷ್ಟುದ್ದ ಧನ್ಯವಾದಗಳನ್ನು ಮಂಡ್ಯದವರು ಹೇಳ್ತಾರೆ. ಆದರೆ ರಾಜ್ಯದಿಂದ ಒಂದು ಗುಂಪಾಗಿ ಬಂದ ನಮಗೆ ಕೆಲವರನ್ನು ನೆನಪಿಸ್ಕೊಳ್ಳಲೇ ಬೇಕು ಅಂತ ಅನಿಸುತ್ತೆ. ಇವರೆಲ್ಲರಿಗೂ ಶಹಭ್ಭಾಶ್ ಚಪ್ಪಾಳೆಗಳೂ ಸಲ್ಲುತ್ತವೆ; ನಿನ್ನೆ ನೋಡಿರಬಹುದು ನಮ್ಮ ವಿಚಾರ ಸಂಕಿರಣದ ವೇದಿಕೆ ಅತ್ಯಂತ ಸುಂದರವಾಗಿ ಮಾಡಿದ್ದಾರೆ, ಎಷ್ಟೋ ಕೆಲಸಗಳು ಎದುರು ಕಾಣ್ತವೆ, ಹೊರಗಿನಿಂದ ಅದರ ಸೌಂದರ್ಯ ಅನುಭವಿಸ್ತೇವೆ, ಅದರ ಹಿಂದಿನ ಕೆಲಸದ ಆಗಾಧತೆಯನ್ನು ನಾವು ಗಮನಿಸಬೇಕು. ಮಂಡ್ಯದ ರಂಗಕರ್ಮಿ, ಯುವಪ್ರತಿಭೆಗಳು,

ಲಕ್ಷ್ಮಣ್‌ರವರು, ಮಂಜುನಾಥ್‌ರವರು ಆಮೇಲೆ ನಮ್ಮ ಜೊತೆಗಿರುವ ಹುಡುಗರು ಯುವ ತಂಡ ಮತ್ತೆ ವಿಶೇಷವಾಗಿ ಗಂಡು ಮಕ್ಕಳು ಇವರನ್ನು ನಾನು ತುಂಬಾ ತುಂಬಾ ಪ್ರೀತಿಯಿಂದ ನೆನಪಿಸಿಕೊಳ್ತೇನೆ. ಹಿಂದೆ ಮುಂದೆ ನೋಡದೆ ಹೆಣ್ಣು ಮಕ್ಕಳ ಹಿಂದೆ ನಿಂತು ಯಾವುದೇ ವೇದಿಕೆಯನ್ನು, ಯಾವುದೇ ಹೊಗಳಿಕೆಯನ್ನು ಆಶಿಸದೆ ಪ್ರೀತಿಯಿಂದ ಕೆಲಸ ಮಾಡುತ್ತಾ ಬಂದಿದ್ದಾರೆ, ಎಲ್ಲಾ ಕೆಲಸದಲ್ಲೂ ನಮ್ಮ ಜೊತೆಗೆ ಕೈ ಜೋಡಿಸಿದ್ದಾರೆ ಸಲೀಂ, ದುರ್ಗೇಶ್, ನಾಗರಾಜ್, ಮರೀಸ್ವಾಮಿ, ಹನುಮಂತ, ಮಣಿಕಂಠ, ರಾಜೇಂದ್ರ, ಸರೋವರ್, ರಜನಿಕಾಂತ್, ಹೇಮಂತ್ ಎಷ್ಟು ದೊಡ್ಡ ಬಲ ಕೊಟ್ಟಿದ್ದಾರೆ ಅಂತ ಅಂದ್ರೆ ಎಲ್ಲಿ ನಮಗೆ ಭಾರ ಅನಿಸದೆ ಹಾಗೆ ಹೆಗಲು ಕೊಟ್ಟಿದ್ದಾರೆ.

ಈ ಸಮಾವೇಶ ನಡೆಯಲು ಪ್ರತೀ ಸಾರಿಯೂ ಆರೇಳು ಲಕ್ಷ ಖರ್ಚಾಗುತ್ತೆ. ನಮಗೆ ತುಂಬಾ ಸಂತೋಷದ ವಿಷಯ ಅಂತ ಅಂದ್ರೆ ಎಷ್ಟು ಜನರು ಇದಕ್ಕೆ ಕೊಡುಗೆ ಕೊಟ್ಟಿದ್ದಾರೆ. ಮೊನ್ನೆ ಮಂಡ್ಯದ ಬೀದಿಯಲ್ಲಿ ಹೋಗಿದ್ದೇವೆ, ತರಕಾರಿ ಮಾರುವವರಿಂದ ಹಿಡಿದು ಜಿನಸು ಮಾರುವವರಿಂದ ಹಿಡಿದು ಎಲ್ಲಾರ ಕೈಯಲ್ಲಿ ಅಣ್ಣಾ ಅಕ್ಕಾ ಒಂದು ಕಾರ್ಯಕ್ರಮ ಮಾಡ್ತಾ ಇದ್ದೀವಿ, ನಮಗೆ ನಿಮ್ಮ ಸಹಭಾಗಿತ್ವ ಬೇಕು, ನೀವು ನಮ್ಮ ಜೊತೆ ಇರಬೇಕು ನಿಮಗೆ ಎಷ್ಟು ಮನಸ್ಸಾಗುತ್ತೆ ಅಷ್ಟು ಕಾಸು ಹಾಕಿ ಅಂತ ಕೇಳ್ಕೊಂಡಾಗ ಬಹಳ ಪ್ರೀತಿಯಿಂದ ಹಾಕಿದರು. ಅದರ ಜೊತೆಗೆ ಒಂದು ಮೂಟೆ ತರಕಾರಿನೂ ಸಿಕ್ತು, ಅದನ್ನು ಹೊತ್ಕೊಂಡು ಬಂದ್ವಿ. ಹೂ ಮಾರ್ತಾ ಇರುವ ಹೆಣ್ಣು ಮಗಳು, 'ಬಾ ಅಮ್ಮ' ಅಂತ ಕರೆದು ಒಂದು ಸಣ್ಣ ತುಂಡು ಹೂ ಕೊಟ್ಟು ಮುಡ್ಕೊ ಅಂತ ಕೊಡೋದು, ಬೆಲ್ಲ ಇದೆ ತಿನ್ನಿಕ್ಕೆ ಕೊಡೋದು, ಎಲ್ಲವೂ ಬಹಳ ಪ್ರೀತಿಯ ಅನುಭವ ಕೊಡುತ್ತವೆ. ನಾವು ಎಂಟು ಲಕ್ಷ ನಾಲ್ಕು ಜನರ ಹತ್ತಿರ ಕೇಳಿ ಮುಗಿಸಬಹುದು. ಆದ್ರೆ ಈ ತರ ಪಡೆಯುವಾಗ ನಮಗೆ ಆಗುವ ಅನುಭವ ಇದೆಯಲ್ಲಾ ಅದು ತುಂಬಾ ತುಂಬಾ ವಿನಮ್ರತೆಯನ್ನು ಹುಟ್ಟಿಸುತ್ತೆ, ಒಂದು ಮಾನವೀಯ ಭಾವನೆಯನ್ನು ಕೊಡುತ್ತೆ. ದೊಡ್ಡ ಚಪ್ಪಾಳೆ ಮಂಡ್ಯದ ಎಲ್ಲಾ ಜನತೆಗೆ. ಒಂದೊಂದು ರೂಪಾಯಿ, ಎರಡೆರಡು ರೂಪಾಯಿ, ಐದೈದು ರೂಪಾಯಿ ಕೊಟ್ಟವರಿಗೆಲ್ಲಾ ದೊಡ್ಡ ಚಪ್ಪಾಳೆ. ಈ ಪಯಣವನ್ನು ಸಾಕಾರಗೊಳಿಸಿದ, ಮಲ್ಲಿಗೆ, ಕುಮಾರಿಯವರು, ಮೀರಾ ಮೇಡಂರವರು ಎಲ್ಲಾ ಹೊತ್ತಲ್ಲಿ ಜೊತೆಗಿದ್ದು ಕೆಲಸ ಮಾಡಿದ್ದೇವೆ. ಆಗಾಗ ಎದುರಾಗುತ್ತಿದ್ದ ಸವಾಲುಗಳನ್ನು ಜೊತೆಗೇ ನಿಭಾಯಿಸಿದ್ದೇವೆ. ಗಟ್ಟಿ ದನಿ ದಿಟ್ಟ ನಡೆ ಘನತೆವೆತ್ತ ಬದುಕನ್ನು ಬದುಕ್ಲಿಕ್ಕೆ ನಮ್ಮೆಲ್ಲರಿಂದ ಸಾಧ್ಯ ಆಗ್ಲೀ ಅಂತ ಹಾರೈಸುತ್ತೇನೆ. ವಂದನೆಗಳು.

# ದಿಕ್ಸೂಚಿ ಭಾಷಣ

**ಶಬ್ನಂ ಹಶ್ಮಿ,**
ಸಾಮಾಜಿಕ ಕಾರ್ಯಕರ್ತೆ, ಸಬ್‌ರಂಗ್ ಇಂಡಿಯಾದ ಸಂಸ್ಥಾಪಕಿ, ದೆಹಲಿ.
ಅನು: **ಮಲ್ಲಿಗೆ ಸಿರಿಮನೆ**

ಮೊತ್ತಮೊದಲನೆಯದಾಗಿ ನಿಮಗೆಲ್ಲ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಶುಭಾಶಯಗಳು. ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಎಲ್ಲ ಸಂಘಟಕರಿಗೆ ನನ್ನನ್ನು ಈ ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದಕ್ಕೆ ಧನ್ಯವಾದಗಳು. ನಿಮಗೆಲ್ಲ ಗೊತ್ತಿರುವಂತೆ, 1908ರಲ್ಲಿ ಸಾವಿರಾರು ಮಹಿಳೆಯರು ನ್ಯೂಯಾರ್ಕ್ ನಗರದಲ್ಲಿ ಬೀದಿಗಿಳಿದರು–ಉತ್ತಮ ವೇತನ, ಕಡಿಮೆ ಕೆಲಸದ ಅವಧಿ, ಉತ್ತಮ ಕೆಲಸದ ವಾತಾವರಣ ಮತ್ತು ಓಟಿನ ಅಧಿಕಾರಕ್ಕಾಗಿ ಆಗ್ರಹಿಸಿ ಪ್ರತಿಭಟಿಸಿದರು. ಇದು ಮೊದಮೊದಲ ಮಹಿಳೆಯರ ಹಕ್ಕುಗಳನ್ನು ಆಗ್ರಹಿಸುವ ದಿನಾಚರಣೆಯಾಯಿತು. ಎರಡು ವರ್ಷಗಳ ನಂತರ 2010ರಲ್ಲಿ ಅಂತಾರಾಷ್ಟ್ರೀಯ ಮಹಿಳಾ ಸಮಾವೇಶ ನಡೆಯಿತು. 17 ದೇಶಗಳ 100 ಮಂದಿ ಮಹಿಳಾ ಪ್ರತಿನಿಧಿಗಳು ಪಾಲ್ಗೊಂಡಿದ್ದ ಈ ಸಮಾವೇಶದಲ್ಲಿ  ಹೋರಾಟಗಾರ್ತಿ ಕ್ಲಾರಾ ಜಟ್ಕಿನ್ ಅವರು ನ್ಯೂಯಾರ್ಕ್‌ನಲ್ಲಿ ಮಹಿಳಾ ಕಾರ್ಮಿಕರು ಹೋರಾಟ ನಡೆಸಿದ ದಿನವನ್ನು ಅಂತಾರಾಷ್ಟ್ರೀಯ ದುಡಿಯುವ ಮಹಿಳಾ ದಿನವನ್ನಾಗಿ ಆಚರಿಸುವ ಪ್ರಸ್ತಾಪವನ್ನು ಮುಂದಿಟ್ಟರು. ಅದಾದ ಮರುವರ್ಷ ಅಂದರೆ 1911ರಲ್ಲಿ ಕೆಲವು ದೇಶಗಳಲ್ಲಿ ಮಾರ್ಚ್ 8ನ್ನು ದುಡಿವ ಮಹಿಳಾ ದಿನವನ್ನಾಗಿ ಆಚರಿಸಲಾಯಿತು. ಬಹಳ ವರ್ಷಗಳ ನಂತರ 1975ರಲ್ಲಿ ವಿಶ್ವಸಂಸ್ಥೆಯು ಅಂತಾರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸುವ ಘೋಷಣೆ ಮಾಡಿತು.

ಅದರಂತೆ 1976ರಿಂದ ಪ್ರತಿವರ್ಷ ಮಹಿಳಾ ದಿನವನ್ನು ನಾವೆಲ್ಲರೂ ಆಚರಿಸುತ್ತಾ ಬಂದಿದ್ದೇವೆ. ಅದು ನಾವು ಮಹಿಳೆಯರೆಂಬ ಒಂದೇ ಕಾರಣಕ್ಕಾಗಿ ಅಲ್ಲ, ಬದಲಿಗೆ ನಾವು ಮಹಿಳೆಯರಿಗೆ ಎಲ್ಲ ಬಗೆಯ ಸಮಾನ ಹಕ್ಕುಗಳು ದೊರಕಬೇಕೆಂಬ ಆಶಯವನ್ನು ಪ್ರತಿಪಾದಿಸುತ್ತೇವೆಂಬ ಕಾರಣಕ್ಕಾಗಿ. ಇಂದು ಈ ಮಹಿಳಾ ಹಕ್ಕುಗಳ ಹಾದಿಯಲ್ಲಿ ಸಾವಿರಾರು ಮಹಿಳೆಯರು ಸೇರಿಕೊಂಡಿದ್ದಾರೆ. ಹಾಗೆ ನಮಗೆ ನಮ್ಮ ಅಧಿಕಾರಗಳು

ಸಿಗಲು ಕಾರಣ ಮಹಿಳಾ ಚಳುವಳಿಗಿರುವ ಇತಿಹಾಸ. ಅದರಲ್ಲಿ ನಮಗಿಂತ ಹಿಂದೆ ದುಡಿದವರನ್ನು ನಾವು ಈ ದಿನ ಸ್ಮರಿಸಬೇಕು. ಹಾಗೆ ಎಲ್ಲರನ್ನೂ ನೆಪಿಸಿಕೊಳ್ಳುವುದು ಸಾಧ್ಯವಾಗದೇ ಹೋದರೂ, ಹಿಂದಿನ ಮಹಿಳಾ ಹೋರಾಟಗಾರ್ತಿಯರು ಪ್ರತಿನಿಧಿಗಳಾಗಿ ಕೆಲವರನ್ನಂತೂ ನಾವು ನೆನೆಯಲೇಬೇಕು.

ಅದರಲ್ಲಿ ನಾನು ಮೊದಲು ಪ್ರಸ್ತಾಪಿಸಲು ಬಯಸುವುದು ಕೇರಳದ ತಿರುವಾಂಕೂರು ರಾಜಸಂಸ್ಥಾನದ ತಳಸಮುದಾಯದ ಮಹಿಳೆಯರ ಹೋರಾಟದ ಬಗ್ಗೆ. ತಿರುವಾಂಕೂರು ಪ್ರದೇಶದಲ್ಲಿ ತಳಸಮುದಾಯಗಳ ಮಹಿಳೆಯರು ದೇಹದ ಮೇಲ್ಭಾಗವನ್ನು ಮುಚ್ಚಿಕೊಳ್ಳಬೇಕೆಂದರೆ ಅವರು ತೆರಿಗೆ ಕಟ್ಟಬೇಕೆಂಬ ನಿಯಮವಿತ್ತು. ನಂಗೇಲಿ ಎಂಬ ತಳಸಮುದಾಯದ ಧೀರ ಮಹಿಳೆ ಈ ನಿಯಮವನ್ನು ಮುರಿದು ಎದೆಮುಚ್ಚುವ ಬಟ್ಟೆ ಧರಿಸಲಾರಂಭಿಸಿದಳು. ಇಂತಹ ತೆರಿಗೆ ಸಂಗ್ರಹಿಸಲೆಂದೇ ನೇಮಿಸಲ್ಪಟ್ಟಿದ್ದ ಅಧಿಕಾರಿಯು ಆಕೆಯ ಮನೆಗೆ ಹೋದಾಗ ಆಕೆ ತನ್ನ ಸ್ತನಗಳನ್ನೇ ಕತ್ತರಿಸಿ ಆತನಿಗೆ ಕೊಟ್ಟಳು. ಅದರ ಪರಿಣಾಮವಾಗಿ ಆಕೆಯ ಸಾವು ಸಂಭವಿಸಿತು. ಆದರೆ, ಅದರಿಂದ ಆರಂಭವಾದ ಮಹಿಳೆಯರ ಹೋರಾಟದ ಕಾರಣದಿಂದಾಗಿ ಈ ವಿಕೃತವಾದ ಸಂಪ್ರದಾಯವು ಕೊನೆಗೊಂಡಿತು. ಆದ್ದರಿಂದ ಆ ದಿಟ್ಟ ಮಹಿಳೆ ನಂಗೇಲಿಯನ್ನು ನಾವು ನೆನೆಯಬೇಕು.

ಹಾಗೆಯೇ ನಾನು ಸಾವಿತ್ರಿ ಬಾ ಫುಲೆಯವರನ್ನೂ ನೆನಪಿಸಿಕೊಳ್ಳಲು ಬಯಸುತ್ತೇನೆ. ಅವರು ಮಹಿಳೆಯರ ಶಿಕ್ಷಣಕ್ಕಾಗಿ ಮೊದಲ ಶಾಲೆಯನ್ನು ತೆಗೆಯದೇ ಹೋಗಿದ್ದರೆ ಬಹುಶಃ ನಾವು ಶಿಕ್ಷಣ ಪಡೆಯುವುದಕ್ಕೇ ಎಷ್ಟೋ ಶ್ರಮಿಸಬೇಕಾಗುತ್ತಿತ್ತು ಮತ್ತು ಮಹಿಳೆಯರ ಹಕ್ಕುಗಳಿಗಾಗಿ ಹೋರಾಡುವಷ್ಟು ಸಶಕ್ತರಾಗಿರುತ್ತಿರಲಿಲ್ಲ. ಈ ಮಹತ್ಕಾರ್ಯವನ್ನು ಸಾಧಿಸುವುದು ಸಾವಿತ್ರಿ ಬಾಯಿಯವರಿಗೆ ಸುಲಭದ ಕೆಲಸವೇನೂ ಆಗಿರಲಿಲ್ಲ. ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುತ್ತಾರೆಂಬ ಕಾರಣಕ್ಕೆ ಅವರ ವಿರೋಧಿಗಳು ಅವರ ಮೇಲೆ ಎಸೆಯುತ್ತಿದ್ದ ಹೊಲಸಿದ ಕಾರಣಕ್ಕಾಗಿ ಅವರು ಕೈಚೀಲದಲ್ಲಿ ಬೇರೊಂದು ಸೀರೆ ಇಟ್ಟುಕೊಂಡು ಶಾಲೆಗೆ ಹೋಗಿಬರಬೇಕಾಗಿತ್ತು. ಹಾಗೆಯೇ ಫಾತಿಮಾ ಶೇಖ್ ಅವರೂ ಕೂಡಾ ಸಂಪ್ರದಾಯವಾದಿ ಮುಸಲ್ಮಾನರೊಂದಿಗೆ ಬಹಳಷ್ಟು ಗುದ್ದಾಡಿ ಮುಸ್ಲಿಂ ಹೆಣ್ಣುಮಕ್ಕಳನ್ನು ಶಾಲೆಯತನಕ ಕರೆತರಬೇಕಾದ ಪರಿಸ್ಥಿತಿಯಿತ್ತು. 1948ರಷ್ಟು ಹಿಂದೆಯೇ– ಯಾವ ಸಮಯದಲ್ಲಿ ಇನ್ನೂ ಶಾಲೆಗಳ ಬಗ್ಗೆಯೇ ಆಲೋಚಿಸುವುದು ಕಷ್ಟವಿತ್ತೋ ಆ ಕಾಲದಲ್ಲೇ– ಹೆಣ್ಣುಮಕ್ಕಳ ಶಾಲೆಯ ಕನಸು ಕಂಡು ಅದನ್ನು ಸಾಧ್ಯವಾಗಿಸಿದ ಇವರು ಸ್ಮರಣೀಯರು. ಆದ್ದರಿಂದ ನಾವು ಮಹಿಳಾ ಹೋರಾಟದ ಚರಿತ್ರೆಯ ಬಗ್ಗೆ ಮಾತಾಡುವಾಗ, ನಾವು ಸಾವಿತ್ರಿ ಫುಲೆ ಮತ್ತು ಫಾತಿಮಾ ಶೇಖ್ ಅವರನ್ನು ನೆನೆಯಲೇಬೇಕು.

ಆ ನಂತರದ ಕಾಲಘಟ್ಟದಲ್ಲಿ ಮಹಿಳೆಯರು ಪ್ರಧಾನವಾದ ಕೊಡುಗೆ ನೀಡಿದ ಸಂದರ್ಭವೆಂದರೆ ದೇಶದ ಸ್ವಾತಂತ್ರ್ಯ ಚಳವಳಿ. ಮೊದಲ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕಿತ್ತೂರಿನ ರಾಣಿಯೂ ಗಣನೀಯ ಕೊಡುಗೆ ನೀಡಿದವರಲ್ಲಿ ಹೆಸರಾಗಿದ್ದಾರೆ. ಹಾಗೆಯೇ ರಾಣಿ ಲಕ್ಷ್ಮೀಬಾಯಿ ಮತ್ತು ಲಕ್ನೋ ಸಂಸ್ಥಾನದ ಬೇಗಂ ಹಜರತ್‌ಮಹಲ್ ಒಳಗೊಂಡಂತೆ ಈ ಮೂವರು ರಾಣಿಯರು ತಮ್ಮ ತಮ್ಮ ಸಂಸ್ಥಾನಗಳಿಗಾಗಿ ಹೋರಾಡಿದರೆಂಬುದು ನಿಜವಾದರೂ, ಅದೇ ಸಮಯದಲ್ಲಿ ಅವರು ಬ್ರಿಟೀಶರ ಸಾಮ್ರಾಜ್ಯದಾಹದ ವಿರುದ್ಧವೂ ಹೋರಾಡುತ್ತಿದ್ದರು. ನಂತರ ತೀವ್ರಗೊಂಡ ಸ್ವಾತಂತ್ರ್ಯ ಚಳವಳಿಯಲ್ಲಿ ಮತ್ತು ಕ್ವಿಟ್ ಇಂಡಿಯಾದಂತಹ ಆಂದೋಲನಗಳಲ್ಲಿ ಸಾವಿರಾರು ಸಾಮಾನ್ಯ ಮಹಿಳೆಯರು ಪಾಲ್ಗೊಂಡರು. ಗಾಂಧಿ, ಅಂಬೇಡ್ಕರ್ ಅವರಂತಹ ನಾಯಕರೊಂದಿಗೆ ಸೇರಿಕೊಂಡು ಅವರು ಭಾರತದ ಸ್ವಾಂತ್ರ್ಯಕ್ಕಾಗಿ ಮಾತ್ರ ಹೋರಾಡಲಿಲ್ಲ; ಸಮಾನತೆಯ ಪರಿಕಲ್ಪನೆ ಈ ಸಂದರ್ಭದಲ್ಲೇ ಆಳಗೊಂಡಿತು. ಏಕೆಂದರೆ ಭಾರತದ ಸಮಾಜವು ಸಮಾನವಾಗಿಲ್ಲ. ಇಲ್ಲಿ ದಲಿತ ಸಮುದಾಯದ ಮೇಲೆ, ಆದಿವಾಸಿಗಳ ಮೇಲೆ ಸಾವಿರಾರು ವರ್ಷಗಳಿಂದ ತಾರತಮ್ಯಗಳು ನಡೆಯುತ್ತಾ ಬಂದಿವೆ. ಬ್ರಿಟೀಶರ ವಿರುದ್ಧ ಹೋರಾಡಿದ ಚರಿತ್ರೆಯ ಆಧಾರದ ಮೇಲೆ ಸಮಾನತೆಯ ಮೇಲೆ ನಿಂತಿರುವ ಸಮಾಜವನ್ನು ಕಟ್ಟುವ ಆಶಯ ರೂಪುಗೊಂಡಿತು. ಅದನ್ನೇ ನಾವು ಭಾರತದ ಸಂವಿಧಾನದಲ್ಲೂ ಬರೆದುಕೊಳ್ಳುವುದಕ್ಕೆ ಸಾಧ್ಯವಾಯಿತು. ಸಂವಿಧಾನದ ರಚನೆಯಲ್ಲೂ 15 ಮಂದಿ ಮಹಿಳೆಯರು ತಮ್ಮ ಕೊಡುಗೆ ನೀಡಿದರೆಂಬುದನ್ನೂ ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಈ ಹಿನ್ನೆಲೆಯಿಂದಾಗಿಯೇ ಭಾರತದ ಎಲ್ಲ ಪ್ರಜೆಗಳಿಗೂ– ಜಾತಿ, ಧರ್ಮ, ತಾವಾಡುವ ಭಾಷೆ, ವಾಸಿಸುವ ಪ್ರದೇಶ, ವರ್ಗ ಅಥವಾ ಲಿಂಗದ ಅಸ್ಮಿತೆಯ ಹೊರತಾಗಿ–ಸಂವಿಧಾನದಲ್ಲಿ ಸಮಾನವಾದ ಹಕ್ಕುಗಳನ್ನು ನೀಡಲಾಗಿದೆ.

ಮಹಿಳಾ ಚಳವಳಿಯು ಲಿಂಗಾಧಾರಿತ ಸಮಾನತೆಗಾಗಿ ದೇಶದ ಉದ್ದಗಲಕ್ಕೂ ನಡೆಸುತ್ತಿರುವ ಹೋರಾಟವು 70ರ ದಶಕದಿಂದಲೂ ನಡೆಯುತ್ತಾ ಬಂದಿರುವಂಥದ್ದು. ಅನೇಕರಿಗೆ ಮಹಿಳಾ ಚಳವಳಿ ಸಾಕಷ್ಟು ಸಾಧನೆ ಮಾಡಿದೆ ಎಂದೆನಿಸುತ್ತದೆ. ಅದರಲ್ಲಿ ಅನುಮಾನವೇನಿಲ್ಲ, ಈ ದಿನ ನಾವುಗಳು ಇಲ್ಲಿದ್ದೇವೆಂದರೆ ಅದು ಮಹಿಳಾ ಚಳವಳಿಯ ಸಾಧನೆಯೆ. ನಮಗೆ ಸಿಕ್ಕಿರುವ ಹಕ್ಕುಗಳೆಲ್ಲವೂ ಮಹಿಳೆಯರ ಹೋರಾಟದ ಫಲವಾಗಿಯೇ ಸಿಕ್ಕಿದ್ದು. ಆದರೆ, ಮಹಿಳಾ ಚಳವಳಿಯ ಮುಂದಿರುವ ಸವಾಲುಗಳು ಬಹಳ ಗಂಭೀರವಾದವುಗಳಾಗಿವೆ. ಈಗಲೂ ಪ್ರತಿವರ್ಷ ಒಂದು ಮಿಲಿಯನ್ ಹೆಣ್ಣುಮಕ್ಕಳು ಹುಟ್ಟುವುದಕ್ಕೆ ಮೊದಲೇ ಸಾಯಿಸಲ್ಪಡುತ್ತಿವೆ. ಹೆಣ್ಣು ಭ್ರೂಣಹತ್ಯೆಯು ಅತ್ಯಂತ ಗಂಭೀರವಾದ ಸಮಸ್ಯೆಯಾಗಿಯೇ ಮುಂದುವರೆದಿದೆ. ನಾವು ಬದುಕುತ್ತಿರುವ ಸಮಾಜವು ಹೆಣ್ಣುಮಕ್ಕಳನ್ನು ಹುಟ್ಟುವುದಕ್ಕೂ ಮೊದಲೇ ಕೊಲ್ಲುತ್ತದೆ ಎಂಬುದು ನಮ್ಮೆಲ್ಲರಿಗೂ ನಾಚಿಕೆಯ ಸಂಗತಿಯಾಗಿದೆ. ಪ್ರತಿವರ್ಷ 3 ಲಕ್ಷದಷ್ಟು ವರದಕ್ಷಿಣೆ ಹಿಂಸೆಯ ಪ್ರಕರಣಗಳು

ದಾಖಲಾಗುತ್ತಲೇ ಇವೆ. ಒಬ್ಬ ಹೆಣ್ಣುಮಗಳಿಂದ ಒಬ್ಬ ಪುರುಷ ವರದಕ್ಷಿಣೆ ಹೇಗೆ ಕೇಳಲು ಸಾಧ್ಯ ಎಂಬುದು ನನ್ನ ಊಹೆಗೂ ನಿಲುಕದ ವಿಚಾರ. ಅವರಿಗೆ ಕನಿಷ್ಟ ಆತ್ಮಗೌರವೂ ಇಲ್ಲವೇ? ಇಡೀ ಸಮಾಜ ಹೀಗೆ ಮಹಿಳೆಯನ್ನು ಸರಕಿನಂತೆ ಹೇಗೆ ನೋಡುತ್ತದೆ? ನಾವು ಈ ಧೋರಣೆಯ ವಿರುದ್ಧ ಹೋರಾಟಬೇಕಾಗಿದೆ; ಅದರಲ್ಲೂ ಪುರುಷರಿಗಿಂತ ಹೆಚ್ಚಾಗಿ ಮಹಿಳೆಯರು ಹೋರಾಡಬೇಕಿದೆ. ಈ ಹೋರಾಟ ಎರಡು ಹಂತಗಳಲ್ಲಿ ನಡೆಯಬೇಕು ಎಂಬುದು ನನ್ನ ಅನಿಸಿಕೆ. ಒಂದು ವ್ಯಕ್ತಿಗತ ನೆಲೆಯಲ್ಲಿ, ಎರಡನೆಯದ್ದು ಸಾಮಾಜಿಕ ನೆಲೆಯಲ್ಲಿ. ಬದಲಾವಣೆಗಾಗಿನ ಈ ಸಂಘರ್ಷ ನಮ್ಮಗಳಿಂದಲೇ ಮೊದಲಾಗಬೇಕಿದೆ. ನಮ್ಮ ಮನೆಗಳೊಳಗಿನಿಂದ ನಾವು ವರದಕ್ಷಿಣೆ ಹಿಂಸೆ ಅಥವಾ ಹೆಣ್ಣು ಭ್ರೂಣಹತ್ಯೆಯ ಮನಸ್ಥಿತಿಗಳನ್ನು ಬದಲಾಯಿಸಬೇಕು. ಎಷ್ಟೋ ಬಾರಿ ಕೈಯಲ್ಲಿ ಬಾವುಟ ಹಿಡಿದು ಬೀದಿಗೆ ಬಂದು ಇಂಕ್ವಿಲಾಬ್ ಜಿಂದಾಬಾದ್ ಎಂದು ಘೋಷಣೆ ಕೂಗುವುದು ಸುಲಭದ ವಿಷಯವಾಗಿರುತ್ತದೆ. ಆದರೆ ಎಲ್ಲಿಯವರೆಗೆ ನಾವು ನಮ್ಮ ಮನೆಗಳೊಳಗಿನ ಧೋರಣೆಗಳನ್ನು ಬದಲಿಸುವುದಿಲ್ಲವೋ ಅಲ್ಲಿಯವರೆಗೆ ನಾವು ವಿಶಾಲವಾದ ಸಮಾಜದ ಮನಸ್ಥಿತಿಯನ್ನು ಹೇಗೆ ಬದಲಿಸುತ್ತೇವೆ? ಎಷ್ಟೋ ಬಾರಿ ಸಾಮಾಜಿಕ ಕಾರ್ಯಕರ್ತರು ತಮ್ಮ ತಮ್ಮ ಮನೆಗಳನ್ನು ಬದಲಿಸುವ ವಿಚಾರ ಬಂದ ತಕ್ಷಣ ಕೈಚೆಲ್ಲುತ್ತಾರೆ. ಮಹಿಳೆಯೂ ಒಬ್ಬ ಪುರುಷನಷ್ಟೇ ಸ್ವತಂತ್ರ ವ್ಯಕ್ತಿ, ಮಗಳೂ ಮಗನಷ್ಟೇ ಸ್ವತಂತ್ರ ವ್ಯಕ್ತಿ. ಹೆಣ್ಣುಮಕ್ಕಳನ್ನು ಕೀಳಾಗಿಸಿ ನೋಡುವ ಮನೋಭಾವವನ್ನು ಬದಲಿಸದಿದ್ದರೆ ಸಮಾಜವನ್ನೂ ಬದಲಿಸಲು ಸಾಧ್ಯವಿಲ್ಲ. ಮದುವೆಯಾಗುವಾಗ 'ನಾನು ವರದಕ್ಷಿಣೆ ತೆಗೆದುಕೊಳ್ಳುವುದಿಲ್ಲ' ಎಂದು ಹೇಳುವುದು, 'ನಾನು ವರದಕ್ಷಿಣೆ ಕೊಟ್ಟು ಮದುವೆಯಾಗುವುದಿಲ್ಲ' ಎಂದು ದೃಢ ನಿರ್ಧಾರ ಮಾಡುವುದು ಬಹಳ ಮುಖ್ಯ. ನಾವು ಈ ವಿಷಯಗಳನ್ನು ನಮ್ಮ ಮನೆಗಳಿಂದಲೇ ಬದಲಿಸುತ್ತೇವೆ. ಕೌಟುಂಬಿಕ ಹಿಂಸೆಯ ಸಂದರ್ಭಗಳಲ್ಲಿ ಕುಟುಂಬದ ಸದಸ್ಯರು ಮೌನ ಮುರಿಯಲೇಬೇಕು. ಮುಂದಿನ ಬಾರಿ ನಿಮ್ಮ ಮನೆಯಲ್ಲಿ ನಿಮ್ಮ ತಂದೆಯೋ, ಅಣ್ಣನೋ ಅಥವಾ ಯಾರೇ ಆಗಲಿ ಮಹಿಳೆಯ ಮೇಲೆ ಕೌಟುಂಬಿಕ ಹಿಂಸೆಗೆ ಮುಂದಾದಾಗ ಸುಮ್ಮನೆ ಒಂದು ಪ್ರತಿಭಟನೆಯ ದನಿ ಎತ್ತಿ. ಹೊಡೆಯಲು ಎತ್ತಿರುವ ಅವರ ಕೈತಡೆದು ಹೇಳಿ "ನಮ್ಮ ಮನೆಯಲ್ಲಿ ಇನ್ನುಮುಂದೆ ಇದನ್ನು ನಡೆಯಲು ನಾನು ಬಿಡುವುದಿಲ್ಲ".

ಈವರೆಗೆ ನಾನು ನೀಡಿದ ಉದಾಹರಣೆಗಳು ನೇರವಾಗಿ ಮಹಿಳೆಯರಿಗೆ ಸಂಬಂಧಿಸಿದ್ದು. ಅದಷ್ಟೇ ಅಲ್ಲದೆ, ಇಂದು ನಮ್ಮ ದೇಶ, ದೇಶದ ಪ್ರಜಾತಂತ್ರ ಬಹಳ ಸಂಕೀರ್ಣವಾದ ಅಪಾಯಕಾರಿಯಾದ ಸವಾಲುಗಳನ್ನು ಎದುರಿಸುತ್ತಿದೆ. ದೇಶದ ಪ್ರಜಾತಂತ್ರದ ಮೇಲಿನ ದಾಳಿ, ಪ್ರಜಾತಾಂತ್ರಿಕ ಸಂಸ್ಥೆಗಳ ಮೇಲಿನ ದಾಳಿ, ಜಾತ್ಯತೀತ ತತ್ವಗಳನ್ನು ನಾಶಗೊಳಿಸುವ ಪ್ರಯತ್ನ, ಶಿಕ್ಷಣದ ವ್ಯಾಪಾರೀಕರಣ, ಗ್ರಾಮೀಣ ಆರ್ಥಿಕತೆಯನ್ನು ಶಿಥಿಲಗೊಳಿಸುವ ಪ್ರಯತ್ನ, ದಲಿತರ ಮೇಲಿನ ಧಾಳಿಗಳು,

ಪ್ರಜಾತಂತ್ರವಾದಿಗಳ ಬಂಧನಗಳು, ಕಾರ್ಮಿಕವಿರೋಧಿ ಕಾರ್ಮಿಕ ಕಾಯ್ದೆಗಳನ್ನು ಜಾರಿಗೊಳಿಸುವ ಪ್ರಯತ್ನ, ಅತ್ಯಂತ ಕ್ರೂರವಾದ ಟ್ರಾನ್ಸ್‌ಜೆಂಡರ್ ಬಿಲ್‌ಗಳನ್ನು ಜಾರಿಗೊಳಿಸುವ ಪ್ರಯತ್ನ, ಇಂತಹ ಪ್ರತಿಯೊಂದಕ್ಕೂ ನಾವು ಮಹಿಳೆಯರಾಗಿ ಪ್ರತಿಕ್ರಿಯಿಸುವ ಅಗತ್ಯವಿದೆ. ಏಕೆಂದರೆ ದ್ವೇಷ ಮತ್ತು ವಿಷವನ್ನು ಜನರ ಹೃದಯ ಮತ್ತು ಮನಸ್ಸುಗಳಲ್ಲಿ ಹುದುಗಿಸಲಾಗುತ್ತದ್ದೋ, ಅದು ಎಲ್ಲಕ್ಕಿಂತ ಹೆಚ್ಚು ದುಷ್ಪರಿಣಾಮ ಬೀರುವುದು ಮಹಿಳೆಯರ ಮೇಲೆ. ಯಾವಾಗ ನಮಗೆ ಹಿಂದೂ ಬೇರೆ ಮುಸಲ್ಮಾನರು ಬೇರೆ, ಸಿಕ್ಖರು ಬೇರೆ, ಕ್ರಿಶ್ಚಿಯನ್ನರು ಬೇರೆ, ಇವರು ಯಾರೂ ಒಬ್ಬರ ಜೊತೆಗೊಬ್ಬರು ಸೇರಿಕೊಂಡು ಹೋಗಲಾರರು ಎಂದು ಹೇಳಿ ನಂಬಿಸಲಾಗುತ್ತದ್ದೋ, ಈ ಬಿರುಕುಗಳ ಕಹಿ ಅನುಭವ ಮಹಿಳೆಯರಿಗೇ ಹೆಚ್ಚಾಗಿ ಆಗುತ್ತದೆ. ಇದನ್ನು ನಾವು ಬೇರೆ ಬೇರೆ ಸಂದರ್ಭಗಳಲ್ಲಿ ನೋಡಿದ್ದೇವೆ. 1984ರಲ್ಲಿ ಪಂಜಾಬಿನಲ್ಲಿ, 1992ರಲ್ಲಿ ಬಾಬರಿ ಮಸೀದಿ ಗಲಭೆಯಲ್ಲಿ, 2002ರ ಗುಜರಾತ್ ಗಲಭೆಯಲ್ಲಿ, ಮುಜಫ್ಫರ್ ನಗರ, ಅಸ್ಸಾಂ ಹಿಂಸಾಚಾರ–ಪ್ರತಿಯೊಂದರಲ್ಲೂ ಮಹಿಳೆಯ ದೇಹವನ್ನು ಮತ್ತು ಅಸ್ತಿತ್ವವನ್ನು ಅಧಿಕಾರಕ್ಕೆ ಬೇಕಾದ ಅಸ್ತ್ರವನ್ನಾಗಿ ಬಳಸಲಾಯಿತು. ಎಲ್ಲ ಜಾತಿ ಮತ್ತು ಕೋಮು ದಂಗೆಗಳಲ್ಲೂ ಇದೇ ನಡೆದಿರುವುದು.

ಆದ್ದರಿಂದ, ಮಹಿಳೆಯರಾಗಿ ನಾವು ಈ ರೀತಿಯ ದ್ವೇಷ ಬಿತ್ತುವ ಎಲ್ಲ ಪ್ರಯತ್ನಗಳ ವಿರುದ್ಧ ದನಿ ಎತ್ತಬೇಕು. ಯಾವುದೇ ಸಮುದಾಯದ ವಿರುದ್ಧ ಅಥವಾ ಜಾತಿಯ ವಿರುದ್ಧ ಅಥವಾ ವ್ಯಕ್ತಿಯ ವಿರುದ್ಧ ದ್ವೇಷ ಬಿತ್ತುವ ಪ್ರಯತ್ನಗಳನ್ನು ನಾವು ಖಡಾಖಂಡಿತವಾಗಿ ವಿರೋಧಿಸಬೇಕು. ಇಂತಹ ವಿಷ ಹರಡುವ ಕೆಲಸವನ್ನು ನಾವು ತಡೆಯುತ್ತೇವೆ ಎಂಬ ಸಂದೇಶ ಕೊಡಬೇಕು.

ದ್ವೇಷ ಬಿತ್ತುವ ಈ ಸರಣಿಯಲ್ಲಿ ತೀರಾ ಈಚೆಗೆ ನಡೆದಿರುವ ಸಂಗತಿ ನಾಗರೀಕತ್ವ ತಿದ್ದುಪಡಿ ಕಾಯ್ದೆಯದ್ದು. ಸಿಎಎ, ಎನ್‌ಆರ್‌ಸಿ, ಎನ್‌ಪಿಆರ್ ಎಂಬ ಕರಾಳ ಪ್ರಕ್ರಿಯೆಗಳು ದೊಡ್ಡ ಆತಂಕ ತಂದಿವೆ. ಅಸ್ಸಾಂನಲ್ಲಿ ಈ ಹಿಂದೆ ನಡೆದ ಎನ್‌ಆರ್‌ಸಿಯಲ್ಲಿ 19 ಲಕ್ಷ ಜನರನ್ನು 'ನೀವು ನಿಮ್ಮ ನಾಗರಿಕತ್ವ ಸಾಬೀತುಪಡಿಸುವಲ್ಲಿ ವಿಫಲರಾಗಿದ್ದೀರಿ, ಆದ್ದರಿಂದ ನೀವು ಅಸ್ಸಾಂನ ನಾಗರಿಕರೇ ಅಲ್ಲ' ಎಂದು ಹೊರಕಳಿಸುವ ಪ್ರಯತ್ನ ಮಾಡಲಾಗಿದೆ. ಈ 19 ಲಕ್ಷದಲ್ಲಿ 14 ಲಕ್ಷ ಹಿಂದುಗಳು–ದಲಿತರು, ಹಿಂದುಳಿದ ವರ್ಗಗಳಿಗೆ ಸೇರಿದವರು–ಈಗ ನಾಗರಿಕತ್ವ ಕಳೆದುಕೊಂಡಿದ್ದಾರೆ. ಈ ಪಟ್ಟಿಯಲ್ಲಿರುವವರಲ್ಲಿ ಶೇ.70ರಷ್ಟು ಮಹಿಳೆಯರಾಗಿದ್ದಾರೆ. ಏಕೆಂದರೆ ನಾಗರಿಕತ್ವ ಸಾಬೀತು ಮಾಡಲು ಬೇಕಿರುವ ಆಸ್ತಿ ದಾಖಲೆಗಳು ಅಥವಾ ಇನ್ನಿತರ ಅಗತ್ಯಗಳನ್ನು ಹೆಚ್ಚಿನ ಮಹಿಳೆಯರು ಪೂರೈಸುವುದು ಸಾಧ್ಯವಿಲ್ಲ. ಆದ್ದರಿಂದ ಇಂತಹ ಅನೇಕರನ್ನು ಈಗ ನಾಗರಿಕರೇ ಅಲ್ಲ ಎಂಬ ಪಟ್ಟಿಗೆ ತಳ್ಳಲಾಗುತ್ತದೆ. ಆದರೆ ಯಾವ ಸರ್ಕಾರ ಈಗ ನಾಗರಿಕತ್ವ ತಿದ್ದುಪಡಿ ಕಾಯ್ದೆಗಳನ್ನು ತರುತ್ತಿದೆಯೋ, ಅವರಿಗೆ ಈ ದೇಶದ ನಾಗರಿಕರು ಮತ ಹಾಕಿದಾಗ ಈ ಮತದಾರರ

ನಾಗರಿಕತ್ವದ ಪ್ರಶ್ನೆ ಎದ್ದಿರಲಿಲ್ಲ. ಆಗ ಯಾರನ್ನೆಲ್ಲ ಭಾರತದ ನಾಗರಿಕೆಂದು ಒಪ್ಪಿಕೊಂಡಿದ್ದರೋ ಅವರ ನಾಗರಿಕತ್ವವನ್ನು ಈಗ ಪ್ರಶ್ನಿಸಲಾಗುತ್ತಿದೆ.

ಸಿಎಎಯನ್ನು ನಾವು ಯಾಕೆ ವಿರೋಧಿಸುತ್ತೇವೆಂದರೆ, ಅದು ಸಂವಿಧಾನದ ಆಶಯಗಳಿಗೆ ವಿರುದ್ಧವಾದುದಾಗಿದೆ. ಭಾರತದ ಸಂವಿಧಾನವು ನಾಗರೀಕತ್ವವನ್ನು ಧರ್ಮದ ಆಧಾರದಲ್ಲಿ ಕೊಡುವುದನ್ನು ಎಂದೂ ಒಪ್ಪುವುದಿಲ್ಲ. ತಮ್ಮ ದ್ವೇಷ ಬಿತ್ತುವ ಕೆಲಸಗಳಿಗೆ ಅವಕಾಶ ಕೊಡದ ಸಂವಿಧಾನವನ್ನೇ ಈಗ ಕಸದ ಬುಟ್ಟಿಗೆ ಎಸೆಯುವ ಪ್ರಯತ್ನಗಳು ನಡೆಯುತ್ತಿದೆ. ಆದ್ದರಿಂದ ನಾವು ನಮ್ಮ ಹಕ್ಕುಗಳನ್ನು ರಕ್ಷಿಸುವ ಸಂವಿಧಾನದ ಪರವಾಗಿ ಸಿಎಎಯನ್ನು ವಿರೋಧಿಸಬೇಕಾಗಿದೆ. ಬ್ರಿಟೀಶ್ ಸಾಮ್ರಾಜ್ಯವಾದವನ್ನು ಭಾರತದ ಮಣ್ಣಿನಿಂದ ಕಿತ್ತೆಸೆದ ರೀತಿಯಲ್ಲೇ ಈ ಬಗೆಯ ವಿಷವುಣಿಸುವ ಸಂಚನ್ನು ಕಿತ್ತೊಗೆಯಬೇಕಾಗಿದೆ. ಯಾರಾದರೂ ನಮ್ಮ ನಾಗರೀಕತ್ವವನ್ನು ಪ್ರಶ್ನಿಸುತ್ತಾರೆಂದರೆ ಅವರು ಮೊದಲು ತಮ್ಮ ಅಧಿಕಾರಕ್ಕೆ ರಾಜೀನಾಮೆ ಕೊಡಬೇಕು. ಏಕೆಂದರೆ ಅವರು ಆ ಪದವಿಯನ್ನು ಪಡೆದಿರುವುದೇ ನಮ್ಮೆಲ್ಲರ ಮತಗಳಿಂದ.

ನಾವು ಈಗ ಚರ್ಚಿಸುತ್ತಿರುವ ಈ ಯಾವುದೇ ಸಮಸ್ಯೆಗಳು ಬೇರೆ ಬೇರೆ ಪೆಟ್ಟಿಗೆಗಳಲ್ಲಿ ಇಡಲ್ಪಟ್ಟಿಲ್ಲ. ನಾವು ಗ್ರಾಮೀಣ ಸಂಕಷ್ಟದ ಬಗ್ಗೆ ಮಾತನಾಡುವುದಾದರೆ ಅದಕ್ಕೂ ಮಹಿಳೆಯರ ಸ್ಥಿತಿಗತಿಗೂ ನೇರವಾದ ಸಂಬಂಧವಿದೆ. ಹಾಗೆಯೇ ನಾವು ಮಕ್ಕಳ ಮೇಲಿನ ಹಿಂಸಾಚಾರವನ್ನು ಚರ್ಚಿಸುವಾಗ, ನಾವು ಕಟ್ಟುತ್ತಿರುವ ಸಮಾಜಕ್ಕೂ ಈ ಸಮಸ್ಯೆಗೂ ಸಂಬಂಧವಿದೆ ಎಂಬುದನ್ನು ತಿಳಿದುಕೊಳ್ಳಬೇಕು. ಆದಿವಾಸಿಗಳು ಇಂದು ಎದುರಿಸುತ್ತಿರುವ ತಮ್ಮ ಹಕ್ಕುಗಳ ಸಮಸ್ಯೆಗೂ ಭಾರತದಲ್ಲಿ ಸರ್ಕಾರ ಬೇರೂರಿಸುತ್ತಿರುವ ಕ್ರೋನೀ ಬಂಡವಾಳವಾದಕ್ಕೂ ನೇರವಾದ ಸಂಬಂಧವಿದೆ. ಹೆಚ್ಚು ಹೆಚ್ಚು ಬಹುರಾಷ್ಟ್ರೀಯ ಕಂಪೆನಿಗಳಿಗೆ ದೇಶದೊಳಕ್ಕೆ ಅವಕಾಶ ಕೊಟ್ಟಷ್ಟೂ ಆದಿವಾಸಿಗಳು ಮತ್ತು ರೈತರ ಭೂಮಿಗಳು ಕಸಿಯಲ್ಪಡುತ್ತವೆ. ಆದ್ದರಿಂದ ಎಲ್ಲರ ಸಮಸ್ಯೆಗಳ ಪರಿಹಾರಕ್ಕಾಗಿ ನಾವು ಎಲ್ಲ ಬಗೆಯ ಚಳವಳಿಗಳೊಂದಿಗೆ ಸ್ನೇಹ ಸಂಬಂಧ ಬೆಸೆಯುವ ಅಗತ್ಯವಿದೆ. ಎಲ್ಲರೂ ಒಂದುಗೂಡಿ ಇಂದು ಭಾರತದ ಮೇಲಿನ ಫ್ಯಾಸಿಸ್ಟ್ ದಾಳಿಯನ್ನು ಹಿಮ್ಮೆಟ್ಟಿಸುವುದೇ ಆದ್ಯತೆಯ ಕೆಲಸವಾಗಿದೆ. ಮಹಿಳೆಯರಾಗಿ ನಾವು ಈ ಸವಾಲುಗಳನ್ನು ಎದುರಿಸಲೇಬೇಕು. ಯಾವುದೇ ಅಧಿಕಾರಶಾಹಿ, ಸರ್ವಾಧಿಕಾರತ್ವದ ಪ್ರಯತ್ನಗಳು ಒಂದು ಭಯಭೀತ ಮನಸ್ಥಿತಿಯನ್ನು ನಿರ್ಮಿಸುತ್ತವೆ; ಜನರ ದನಿಯನ್ನು ಹತ್ತಿಕ್ಕಲು ನೋಡುತ್ತವೆ, ಪ್ರಶ್ನಿಸುವವರನ್ನು ಅಡಗಿಸಲು ನೋಡುತ್ತವೆ. ನಾವು ಈ ತಂತ್ರಗಳಿಗೆ ಮಣಿಯಬಾರದು. ಎಂಥದ್ದೇ ಒತ್ತಡಗಳಿಗೆದುರಾಗಿ ನಮ್ಮ ದನಿಯ ಗಟ್ಟಿತನವನ್ನು ಕಾಪಾಡಿಕೊಳ್ಳಬೇಕು. ಈ ದೇಶದ ಸಂವಿಧಾನ ನಮಗೆ ಕೊಟ್ಟಿರುವ ಅಧಿಕಾರಗಳನ್ನು ಎತ್ತಿಹಿಡಿಯಬೇಕು. ಘಂಟಾಘೋಷವಾಗಿ ಹೇಳಬೇಕು, 'ನಮಗೆ ಮೋದಿಯನ್ನು ಕಂಡರೆ

ಭಯವಿಲ್ಲ, ಅಮಿತ್‌ಶಾನನ್ನು ಕಂಡರೆ ಭಯವಿಲ್ಲ, ಯಾವುದೇ ಫ್ಯಾಸಿಸ್ಟರನ್ನೂ ನಾವು ಎದುರಿಸಬಲ್ಲೆವು ಮತ್ತು ಸಂವಿಧಾನವನ್ನೂ ಪ್ರಜಾತಂತ್ರವನ್ನೂ ಕಾಪಾಡಬಲ್ಲೆವು' ಎಂದು.

ಮಹಿಳೆಯರ ಸ್ವಾತಂತ್ರ್ಯಕ್ಕಾಗಿ, ಅವರ ಸಮಾನತೆಯ ಕನಸಿಗಾಗಿ ನಮ್ಮ ಕೂಗಿಗೆ ಶಕ್ತಿ ತುಂಬಬೇಕಿದೆ. ಭಾರತದ ಸ್ವಾತಂತ್ರ್ಯ ಹೋರಾಟಕ್ಕಾಗಿ ಹಲವು ಅಮೂಲ್ಯ ಪ್ರಾಣಗಳ ತ್ಯಾಗವಾಗಿದೆ. ನಾವು ಇಂದು ಈ ದೇಶದ ಸ್ವಾತಂತ್ರ್ಯ ಮತ್ತು ಪ್ರಜಾತಂತ್ರವನ್ನು ಉಳಿಸಿಕೊಳ್ಳುವುದಕ್ಕಾಗಿ ನಾವೂ ಕೂಡಾ ಪ್ರಾಣ ಕೊಡಬೇಕಾಗಿ ಬಂದರೂ ನಾವು ಅದಕ್ಕೆ ಸಿದ್ಧರಾಗಬೇಕು. ನಾವು ಕರ್ನಾಟಕದಲ್ಲಿದ್ದೇವೆ. ಇದೇ ನೆಲದ ಗೌರಿ ಲಂಕೇಶ್ ಇಂತಹ ವಿಷಕಾರಿ ಶಕ್ತಿಗಳೊಂದಿಗೆ ಸೆಣಸುತ್ತಲೇ ತಮ್ಮ ಪ್ರಾಣತ್ಯಾಗ ಮಾಡಿದರು. ನಾವು ಅಂತಹವರ ನೆನಪುಗಳನ್ನು ಕಾಪಾಡಿಕೊಳ್ಳಬೇಕು. ನಮ್ಮ ಪರಂಪರೆ ಈ ನಾಡಿನ ಉಳಿವಿಗಾಗಿ ನಗುನಗುತ್ತಾ ಗಲ್ಲಿಗೇರಿದ ಭಗತ್‌ಸಿಂಗ್‌ನ ಪರಂಪರೆಯೇ ಹೊರತು, ಜೈಲಿನಲ್ಲಿರಲಾರದೇ ಬಿಡುಗಡೆಗಾಗ ಪದೇ ಪದೇ ಕ್ಷಮಾಪಣೆ ಪತ್ರ ಬರೆದುಕೊಟ್ಟು ಹೊರಬಂದ ಸಾವರ್ಕರನ ಪರಂಪರೆಯಲ್ಲ ಎಂಬುದನ್ನು ಸಾರಿ ಹೇಳಬೇಕಾಗಿದೆ. ನಮ್ಮ ಪರಂಪರೆ ಸೌಹಾರ್ದ ಮನೋಭಾವ ರೂಪಿಸಿದ ಮೌಲಾನಾ ಆಜಾದರ ಪರಂಪರೆ. ಈ ನಮ್ಮ ಹೋರಾಟವನ್ನು ನಾವು, ಪ್ರಜಾತಂತ್ರ ಮತ್ತು ಜಾತ್ಯತೀತ ಆಶಯಗಳ ರಕ್ಷಣೆಗಾಗಿ ನಡೆಯುತ್ತಿರುವ ಎರಡನೇ ಸ್ವಾತಂತ್ರ್ಯ ಸಂಗ್ರಾಮ ಎಂದು ಭಾವಿಸಬೇಕು. ಅದರಲ್ಲಿ ಯಾವುದೇ ಹಿಂಜರಿಕೆ, ಭಯ, ಆತಂಕಗಳಿಲ್ಲದೆ ಮುನ್ನುಗ್ಗಬೇಕು.

"ಇಂಕ್ವಿಲಾಬ್ ಜಿಂದಾಬಾದ್"

"ಲಡೇಂಗೇ, ಜೀತೇಂಗೇ (ಹೋರಾಡೋಣ, ಗೆಲ್ಲೋಣ)"

"ಅಭೀ ತೋ ಏ ಅಂಗಢಾಯೀ ಹೈ, ಆಗೇ ಔರ್ ಲಡಾಯೀ ಹೈ (ಇದಿನ್ನೂ ಮೈಮುರಿಯುವಿಕೆಯಷ್ಟೇ, ಹೋರಾಟ ಇನ್ನೂ ಮುಂದೆ ಇದೆ)".

ಎಲ್ಲರಿಗೂ ಧನ್ಯವಾದ.

***ಪರಿಚಯ:* ಶಬ್ನಂ ಹಶ್ಮಿ** (1957) ಭಾರತದ ಖ್ಯಾತ ಮಾನವ ಹಕ್ಕು ಹೋರಾಟಗಾರ್ತಿ. 2005ರಲ್ಲಿ ನೊಬೆಲ್ ಶಾಂತಿ ಪ್ರಶಸ್ತಿಗಾಗಿ ಗುರುತಿಸಲಾದ 1000 ಮಹಿಳೆಯರ ಯಾದಿಯಲ್ಲಿ ಇದ್ದ ಏಕೈಕ ಭಾರತೀಯ ಮಹಿಳೆ ಅವರು. ಸಮಾಜ ಹಾಗೂ ಆಳುವ ವರ್ಗದಿಂದ ನಿರಂತರವಾಗಿ ವಿವಿಧ ತರಹದ ಅಸಹಕಾರ, ಕಿರುಕುಳ ಎದುರಿಸುತ್ತ ಬಂದಿದ್ದರೂ ದಿಕ್ಕೆಡದೆ ಬಂಡೆಗಲ್ಲಿನಂತೆ ದಿಟ್ಟವಾಗಿ ಎಲ್ಲಕ್ಕು ಎದೆಗೊಟ್ಟು ನಿಂತ ಛಲಗಾರ್ತಿ. 1981ರಲ್ಲಿ ವಯಸ್ಕರ ಸಾಕ್ಷರತಾ ಅಭಿಯಾನದ ಹೊತ್ತಿನಲ್ಲಿ ತಮ್ಮ ಸಾಮಾಜಿಕ ಬದುಕನ್ನು ಆರಂಭಿಸಿದ ಶಬ್ನಂ, 1989ರಲ್ಲಿ ತಮ್ಮ ಸೋದರ, ಕಮ್ಯುನಿಸ್ಟ್ ಹೋರಾಟಗಾರ ಮತ್ತು ನಾಟಕಕಾರ ಸಫ್ದರ್ ಹಶ್ಮಿಯವರು ಬಯಲು ನಾಟಕ ಆಡುತ್ತಿರುವಾಗಲೇ ಗೂಂಡಾಗಳಿಂದ

ಹತ್ಯೆಗೊಳಗಾದಾಗ ಹೋರಾಟದ ಬದುಕನ್ನು ಪ್ರವೇಶಿಸಿದರು. ಸಫ್ದರ್ ಹಶ್ಮಿಯವರ ಹತ್ಯೆಯ ನಂತರ ಕಲಾವಿದರು ಮತ್ತು ಬುದ್ಧಿಜೀವಿಗಳಿಂದ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು ಪ್ರತಿಪಾದಿಸುತ್ತ ಹುಟ್ಟಿಕೊಂಡದ್ದು 'ಸಹಮತ'. ದೆಹಲಿ ಮೂಲದ ಆ ಸಂಸ್ಥೆಯಲ್ಲಿ ಮೊದಲಿನಿಂದ ಕ್ರಿಯಾಶೀಲವಾಗಿ ತೊಡಗಿಸಿಕೊಂಡ ಶಬ್ನಂ, ಬರಬರುತ್ತ ಜನರ ಮನಸ್ಸು ಮತ್ತು ಎದೆಗಳನ್ನು ಆಕ್ರಮಿಸಿಕೊಳ್ಳುತ್ತಿರುವ ಮೂಲಭೂತವಾದಿ ಶಕ್ತಿಗಳು ಊರೂರುಗಳನ್ನು ರಣಭೂಮಿಯನ್ನಾಗಿ ಮಾಡುತ್ತಿರುವುದನ್ನು ಕಂಡು ಖೇದಗೊಂಡರು. ಗೋಧ್ರಾ ಹತ್ಯಾಕಾಂಡ ಮತ್ತು ಆನಂತರದ ಸಂಗತಿಗಳಿಂದ ವಿಚಲಿತರಾಗಿ ಸಮಾಜದಲ್ಲಿ ತಳಹಂತದ ಕೆಲಸಗಳಿಗೆ ಗಮನ ಕೊಡುವ ನಿರ್ಧಾರ ಮಾಡಿದರು. ತಮ್ಮ ನೆಲೆಯನ್ನು ದೆಹಲಿಯಿಂದ ಗುಜರಾತಿಗೆ ಸ್ಥಳಾಂತರಿಸಿದ ಶಬ್ನಂ, 'ಸೌಹಾರ್ದ ಮತ್ತು ಪ್ರಜಾಪ್ರಭುತ್ವದ ಸಲುವಾಗಿ ಈಗಲೇ ಕ್ರಿಯಾಶೀಲರಾಗಿ' ಎಂದು ಕರೆಕೊಡುವ 'ಅನಹದ್' (Act Now for Harmony and Democracy) ಎಂಬ ಸಂಸ್ಥೆಯನ್ನು 2003ರಲ್ಲಿ ಶುರು ಮಾಡಿದರು. ಅನ್‌ಹದ್ ಎಂಬ ಪದದ ಅರ್ಥ ಗಡಿ ಮೀರಿದ. ಜಾತಿ–ಪಂಥ–ಮತಧರ್ಮಗಳನ್ನು ಮೀರಿದ ಎಂದು. ಪ್ರಜ್ಞಾವಂತರಾದ ನಾವೆಲ್ಲ ನಮ್ಮ ನಡುವೆ ಎಬ್ಬಿಸಲಾದ ಗೋಡೆ–ಗಡಿಗಳನ್ನು ದಾಟಿ ಮಾನವೀಯತೆಯನ್ನು ಪ್ರತಿಪಾದಿಸಬೇಕಾದ ಅವಶ್ಯಕತೆಯನ್ನು ಆ ಪದ ನೆನಪಿಸುತ್ತದೆ. ಆ ಆಶಯಕ್ಕೆ ತಕ್ಕಂತೆ ಬಿಹಾರ, ಹರಿಯಾಣ ಮತ್ತು ಕಾಶ್ಮೀರಗಳಲ್ಲೂ ಶಬ್ನಂ ಕೆಲಸ ಮಾಡುತ್ತಿದ್ದಾರೆ. ಭಯೋತ್ಪಾದನೆಯನ್ನು ಹತ್ತಿಕ್ಕುವ ನೆಪದಲ್ಲಿ ಆಗುತ್ತಿರುವ ಮಾನವ ಹಕ್ಕು ಉಲ್ಲಂಘನೆಯ ವಿರುದ್ಧ ದನಿಯೆತ್ತುತ್ತಿದ್ದಾರೆ. ರಾಜಕಾರಣದಲ್ಲಿ ಮಹಿಳೆಯರ ಭಾಗವಹಿಸುವಿಕೆ, ಲಿಂಗನ್ಯಾಯ, ದತ್ತು ತೆಗೆದುಕೊಳ್ಳುವ ಅವಕಾಶ ಮತ್ತು ಹಕ್ಕು, ಮೌಢ್ಯ ವಿರೋಧ, ದಲಿತರ ಹಕ್ಕುಗಳು, ಪ್ರಜಾಪ್ರಭುತ್ವ ಮತ್ತು ಸರ್ವಧರ್ಮ ಸಮಭಾವದ ಆಶಯಗಳೇ ಮೊದಲಾದ ವಿಷಯಗಳನ್ನು ಮುನ್ನೆಲೆಗೆ ತಂದು ಹೋರಾಟ ರೂಪಿಸುತ್ತಿದ್ದಾರೆ.

ಸಹಜವಾಗಿಯೇ ಇವೆಲ್ಲವೂ ಅವರನ್ನು ಆಳುವವರ ಕೆಂಗಣ್ಣಿಗೆ ಗುರಿ ಮಾಡಿವೆ. ದೈಹಿಕವಾಗಿಯೂ ಹಲ್ಲೆಗೊಳಗಾಗಿದ್ದಾರೆ. ಅವರ ಸಂಸ್ಥೆಗೆ ಬರುತ್ತಿದ್ದ ಧನಸಹಾಯ ನಿಲ್ಲಿಸಲಾಗಿದೆ. ಆದರೂ, ಹಲವು ಪತ್ರಿಕೆಗಳಲ್ಲಿ ಲೇಖನ ಬರೆಯುತ್ತ, ವಸ್ತುಸ್ಥಿತಿಯ ವರದಿಗಳನ್ನು ಪ್ರಕಟಿಸುತ್ತಾ, ಎಷ್ಟೋ ಸಲ ಏಕಾಂಗಿಯಾದರೂ, ಹೆಣ್ಣುಛಲದಿಂದ ಮುನ್ನಡೆಯುತ್ತಿದ್ದಾರೆ ಅಕ್ಕ ಶಬ್ನಂ ಹಶ್ಮಿ.

ಛಲ ಬಿಡದ ಹೋರಾಟಗಾರ್ತಿಯರ, ಗಟ್ಟಿದನಿಯ ದಿಟ್ಟ ಹುಡುಗಿಯರ, ಹುಮ್ಮಸದ ಕವಿ–ಸಾಹಿತಿ–ಕಲಾವಿದೆಯರ ಮಂಡ್ಯ ನೆಲದಲ್ಲಿ ಮಹಿಳಾ ಚೈತನ್ಯ ದಿನದ ಸಂಭ್ರಮ ಗರಿಗೆದರುತ್ತಿದೆ. ನಮ್ಮೊಡನೆ ತಮ್ಮ ಅನುಭವ–ಅಭಿಪ್ರಾಯ ಹಂಚಿಕೊಳ್ಳಲು ಬರುತ್ತಿರುವ ಹೊರರಾಜ್ಯದ ಅಕ್ಕಂದಿರನ್ನು ಪ್ರೀತಿಯಿಂದ ಸ್ವಾಗತಿಸೋಣ..

# ಅಧ್ಯಕ್ಷೀಯ ಭಾಷಣ

**ಸುನಂದಾ ಜಯರಾಂ**

ವೇದಿಕೆಯ ಮೇಲಿರುವ ಎಲ್ಲ ಆತ್ಮೀಯರೇ ಹಾಗೂ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವ ಮಂಡ್ಯದ ಮತ್ತು ಇತರ ಜಿಲ್ಲೆಗಳ ಸಂಘ-ಸಂಸ್ಥೆಗಳ ಸ್ನೇಹಿತರೆ ಮತ್ತು ಸಹೃದಯರೇ,

ಅರ್ಥಪೂರ್ಣವಾದಂತಹ ಈ ಮಹಿಳಾ ದಿನಾಚರಣೆಯ ಕಾರ್ಯಕ್ರಮ ಮಂಡ್ಯದಲ್ಲಿ ನಡೆಯುತ್ತಿರುವುದು ನಮಗೆಲ್ಲ ಸಂತೋಷದ ವಿಷಯ. ಎಲ್ಲ ಅಸಮಾನತೆಗಳು, ಸಾಮಾಜಿಕ ಅನ್ಯಾಯಗಳನ್ನು ವಿರೋಧಿಸುವ, ಎಲ್ಲಾ ಧರ್ಮಗಳನ್ನು ಗೌರವಿಸುವ, ಸೌಹಾರ್ದತೆ-ಸಮಾನತೆಯ ನೀತಿನಿಯಮಗಳಿಗೆ ಬದ್ಧತೆಯಿರುವ, ಹೊಸತನಕ್ಕೆ ತೆರೆದುಕೊಳ್ಳುವ ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ವತಿಯಿಂದ ಈ ದಿನ ಹಾಗೂ ನಿನ್ನೆ ಮಹಿಳಾ ದಿನದ ಆಚರಣೆ ನಡೆದಿರುವಂತಹದು. ನಾವೆಲ್ಲರೂ ಯಾರಿಗಿಂತಲೂ ಕಡಿಮೆ ಅಲ್ಲ, ಯಾರಿಗಿಂತಲೂ ಹೆಚ್ಚಿಲ್ಲ ಎನ್ನುವ ಸಮಾನತೆಯ ಸಮ ಸಮಾಜದ ನಿರ್ಮಾಣಕ್ಕೆ ಪೂರಕವಾದ ರೀತಿಯಲ್ಲಿ ಈ ಕಾರ್ಯಕ್ರಮ ನಡೆದಿದೆ.

ಸದಾ ಕಾಲ 'ನಾನು ಸಮರ್ಥಳು, ನಾನು ಸಮಾನಳು' ಎಂದು ಸಾಬೀತು ಪಡಿಸಿಕೊಳ್ಳಬೇಕಾದ ಪರಿಸ್ಥಿತಿ ಮಹಿಳೆಯ ಘನತೆಗೆ ದಕ್ಕೆ ತರುವಂತಹುದು ಎಂದು ನಾನು ಭಾವಿಸುತ್ತೇನೆ. ನಮ್ಮ ಭಾರತ ಸಂವಿಧಾನ ಏನು ಹೇಳಿದೆ? ಹೆಣ್ಣು-ಗಂಡು ಸಮಾನರು, ಮಹಿಳೆಯೂ ಸಮಾನ ಹಕ್ಕಿಗೆ ಬಾಧ್ಯಳು ಎಂದು. ಹಾಗಿದ್ದರೂ ನಾವು ಯಾಕೆ ಇನ್ನೂ 'ಸಮಾನತೆ ಬೇಕು, ಸಮಾನತೆ ಬೇಕು' ಎಂದು ಕೂಗುತ್ತಿದ್ದೇವೆ? ಏಕೆಂದರೆ, ಅದು ನಮಗೆ ಅನಿವಾರ್ಯವಾಗಿದೆ. ಕಾನೂನು, ಸಂವಿಧಾನ ಏನೇ ಹೇಳಿದ್ದರೂ, ವಾಸ್ತವದಲ್ಲಿ ನಮ್ಮ ಹಕ್ಕಿಗೆ ಚ್ಯುತಿ ಬಂದಿದೆ, ನಮ್ಮ ಘನತೆಗೆ ಧಕ್ಕೆ ಬಂದಿದೆ. ನಮ್ಮ ಆತ್ಮಾಭಿಮಾನಕ್ಕೆ ಅವಮಾನ ಆಗುತ್ತಿದೆ. ಅದಕ್ಕಾಗಿ ಸಂಘಟನಾತ್ಮಕವಾದ ಪ್ರಯತ್ನಗಳು ಅಗತ್ಯವಾಗಿವೆ. ಎಲ್ಲ ಸಂಘಟನೆಗಳು ಸಹ ಕೈಜೋಡಿಸಿ ಒಗ್ಗಟ್ಟಿನ ಹೋರಾಟದ ಪ್ರಯತ್ನಗಳೆಡೆಗೆ ಸಾಗಬೇಕಾಗಿದೆ. ಚಳವಳಿಯಲ್ಲಿ ಪಾಲ್ಗೊಳ್ಳುವ ಹಕ್ಕು, ಹೋರಾಟದ ಹಕ್ಕು, ಅಂತಹ ಎಲ್ಲ ಪ್ರಯತ್ನಗಳಲ್ಲಿ ಭಾಗವಹಿಸುವ ಹಕ್ಕು ಮಹಿಳೆಯರಿಗಿದೆ ಮತ್ತು ಅದನ್ನು ನಾವು ಚಲಾಯಿಸುತ್ತೇವೆ ಎಂಬ ಗಟ್ಟಿತನ ಬೆಳೆಯಬೇಕು.

ಯಾಕೆ ಹೀಗೆ ಪುರುಷಪ್ರಧಾನ ಸಮಾಜ ಅವಮಾನ ಮಾಡುತ್ತಿದೆ? ನಮ್ಮ ಸ್ಥಾನಮಾನ ಮೂರನೆಯದು, ನಾಲ್ಕನೆಯದಾಗಿ ನೋಡುತ್ತಿದೆ? ಸ್ಥಾಪಿತ ಶಕ್ತಿಗಳು ಸಮಾಜದಲ್ಲಿ ಯಾಕೆ ಹೆಣ್ಣು ಹೀಗೇ ಇರಬೇಕೆಂಬ ಸಿದ್ಧಮಾದರಿಯನ್ನು ಕಟ್ಟಿಟ್ಟಿವೆ? ಈ ಘೋಷಿತ–ಅಘೋಷಿತ ನಿಯುಮಗಳನ್ನು ಉಲ್ಲಂಘನೆ ಮಾಡಿದ ಹೆಣ್ಣು, ಒಂದೋ ಅಪರಾಧಿಯಾಗಿಸಲ್ಪಡುತ್ತಾಳೆ ಅಥವಾ ಪರಿತ್ಯಕ್ತಳಾಗಿಸಲ್ಪಡುತ್ತಾಳೆ. ಈ ನಿಯಮಗಳು ನಿನಗೆ ಭೂಮಿಗೆ ಬರಲಿಕ್ಕೇ ಸ್ವಾತಂತ್ರ್ಯ ಇಲ್ಲ ಅಂತ ಹೇಳುತ್ತಿವೆ. ಹೊಟ್ಟೆಯೊಳಗೆ ಪರೀಕ್ಷೆ ಮಾಡಿ ತಾಯಿಯ ಮನಸ್ಸಿಗೆ ಏನಾಗತ್ತೇ ಅನ್ನೋ ಅರಿವಿಲ್ಲದೆ ಅಮಾನವೀಯ ವರ್ತನೆ ಮಾಡುವ ಸಮಾಜವನ್ನ ನಾವು ನೋಡುತ್ತಿದ್ದೇವೆ. ಭ್ರೂಣದಲ್ಲಿರುವಾಗಲೇ ನಮಗೆ ಈ ಸ್ಥಿತಿ ಇದೆ ಅಂದರೆ ಭೂಮಿಗೆ ಬಂದ ನಂತರ ಹೆಣ್ಣುಮಕ್ಕಳಿಗೆ ಯಾವ ಸ್ಥಿತಿ ಇದೆ ಅನ್ನೋದನ್ನ ವಿವರಿಸಬೇಕಾಗಿಲ್ಲ. ಪ್ರತಿ ಹೆಜ್ಜೆಯಲ್ಲೂ ತಾರತಮ್ಯ, ಶೋಷಣೆ, ದೌರ್ಜನ್ಯಗಳಿಗೆ ಮಹಿಳೆಯರು ತುತ್ತಾಗುತ್ತಿದ್ದಾರೆ. ಇದನ್ನೆಲ್ಲ ನಾವು ವಿರೋಧ ಮಾಡಲೇಬೇಕಾಗಿದೆ.

2011ರ ಜನಗಣತಿಯ ಪ್ರಕಾರ ನಾವು ಮಂಡ್ಯ ಜಿಲ್ಲೆಯ ಹೆಣ್ಣುಮಕ್ಕಳ ಭ್ರೂಣಹತ್ಯೆ ವಿಷಯದಲ್ಲಿ ಮಂಡ್ಯ 5ನೆಯ ಸ್ಥಾನದಲ್ಲಿದೆ. ಮೊದಲು ಬೆಳಗಾವಿ ಇತ್ತು, 2ನೇ ಸ್ಥಾನದಲ್ಲಿ ಮಂಡ್ಯ ಇತ್ತು. ಹೆಣ್ಣು ಭ್ರೂಣಹತ್ಯೆ ತಡೆಯಲು ಸಂಘಟನೆಗಳು ನಡೆಸಿದ ಪ್ರಯತ್ನಗಳು ಸ್ವಲ್ಪಮಟ್ಟಿನ ಫಲ ಕೊಡುತ್ತಾ ಇದೆ ಅನ್ನಬಹುದು, ಆದರೂ ಅದು ಸಂಪೂರ್ಣವಾಗಿ ಅಲ್ಲ. 2019–20ನೇ ಸಾಲಿನಲ್ಲಿ 1000 ಗಂಡು ಮಕ್ಕಳಿಗೆ 909 ಹೆಣ್ಣುಮಕ್ಕಳು (1000:909 ಲಿಂಗಾನುಪಾತ) ಇರುವುದನ್ನು ಅಂಕಿ– ಸಂಖ್ಯೆಗಳು ಸೂಚಿಸುತ್ತದೆ. ಅಂದರೆ ಮುಂದಿನ ದಿನಗಳಲ್ಲಿ ಇಡೀ ನಮ್ಮ ಸಮಾಜದಲ್ಲಿ ಯಾವ ರೀತಿಯ ಅಸಮಾನತೆ ಬೆಳೆಯುತ್ತದೆ ಅನ್ನೋದನ್ನ ನಾವು ಚಿಂತಿಸಬೇಕಾಗಿದೆ.

ಮಹಿಳೆಯ ಮೇಲೆ ಹಿಂಸೆ–ದೌರ್ಜನ್ಯ, ಅತ್ಯಾಚಾರ, ಮರ್ಯಾದೆಗೇಡು ಹತ್ಯೆಗಳಂತಹ ಘಟನೆಗಳನ್ನು ಪ್ರತಿನಿತ್ಯ ನೋಡುತ್ತಿರುತ್ತೇವೆ, ಖಂಡಿಸುತ್ತಿರುತ್ತೇವೆ. ಸೋಮಾಲಿಯಾ ದೇಶದಲ್ಲಿ ಮಾನವೀಯತೆಯನ್ನು ಮರೆಯುವ ಒಂದು ಉದಾಹರಣೆ ಇಲ್ಲಿ ಹೇಳಬಯಸುತ್ತೇನೆ. ಸೋಮಾಲಿಯಾ ಆಫ್ರಿಕಾ ಖಂಡದ ಒಂದು ದೇಶ. ಅಲ್ಲಿ ಮಹಿಳೆಯರ ಲೈಂಗಿಕ ಸ್ವಾತಂತ್ರ್ಯವನ್ನು ನಿಯಂತ್ರಿಸುವುದಕ್ಕಾಗಿ ಅವರ ಗುಪ್ತಾಂಗಕ್ಕೆ ಹೊಲಿಗೆ ಹಾಕಿ ಯೋನಿಯ ಎರಡು ಭಾಗಗಳನ್ನು ಸೇರಿಸುವಂಥ ಒಂದು ಕ್ರೂರ ಕೃತ್ಯ ಇವತ್ತಿಗೂ ನಡಿತಾ ಇದೆ. 'ಮರುಭೂಮಿಯ ಹೂ' ಪುಸ್ತಕ ಆ ಸತ್ಯವನ್ನು ತೆರೆದಿಟ್ಟಿದೆ. ಅದನ್ನ ಓದಿದಾಗ, ಇಷ್ಟು ಕ್ರೂರ ಸಮಾಜದಲ್ಲಿ ನಾವಿದ್ದೀವಾ? ಅದರ ನೋವು ಅನುಭವಿಸಿದ ಆ ಹೆಣ್ಣುಜೀವಕ್ಕೆ ಮಾತ್ರ ಗೊತ್ತು. ನಾವು ಸ್ಪಂದನ ಸಂಘಟನೆಯ ಕೆಲಸ ಮಾಡುವಾಗಿನ ಒಂದು ಘಟನೆ ಹೀಗಿದೆ; ಮನೆಯ ಹಿಂದಿನ ಬಾಗಿಲು, ಮುಂದಿನ ಬಾಗಿಲು ಎಲ್ಲವನ್ನು ಬಂದ್ ಮಾಡಿ ಗಂಡ ಹೆಂಡತಿಯನ್ನು ಕೆಳಗೆ ಹಾಕಿ, ಗುಪ್ತಾಂಗ

ಭಾಗಕ್ಕೆ ಕಾರದ ಪುಡಿ ಹಾಕಿ, ಬಾಯಿಗೆ ಬಟ್ಟೆ ತುರಿಕಿ, ಕೈ–ಕಾಲು ಕಟ್ಟಿ, ಅವಳ ಎದೆಯ ಭಾಗದ ಮೇಲೆ ಕುಳಿತು, ಕೊನೆಯ ಗುಟುಕು ಜೀವ ಇರುವಾಗ ಬಿಕ್ಕುವ ಶಬ್ದ ಆದಾಗ ನೋಡಿ ಬಾಗಿಲು ತೆಗೆದು ಓಡಿದ. ಇಂತಹ ಸಂದರ್ಭಗಳಲ್ಲಿ ಕಾನೂನು ಸರಿಯಾಗಿ ಕೆಲಸ ಮಾಡಬೇಕಿದೆ. ಕೇವಲ ಕಾನೂನು ಮಾತ್ರವಲ್ಲದೆ, ಮಾನವೀಯತೆ, ಸಾಮಾಜಿಕ ಮೌಲ್ಯಗಳು, ವ್ಯಕ್ತಿಯ ವ್ಯಕ್ತಿತ್ವ, ನೈತಿಕತೆ, ಮನಸ್ಸು ಎಲ್ಲವೂ ಕೆಲಸ ಮಾಡಬೇಕಿದೆ. ಪ್ರತಿ ಘಟನೆಗಳನ್ನು ಮಾತ್ರವಲ್ಲದೆ, ಒಂದೆರಡು ಸಂಘಟನೆಗಳು ಮಾತ್ರವಲ್ಲದೆ, ಎಲ್ಲರೂ ಸೇರಿ ಇಡೀ ವ್ಯವಸ್ಥೆಯನ್ನು ಹೇಗೆ ಪ್ರಶ್ನಿಸಬೇಕು ಎಂಬುದನ್ನು ಗುರುತಿಸಿಕೊಳ್ಳಬೇಕು.

ಹಾಗೆ ಸಮಾಜಕ್ಕೆ ಮತ್ತು ಸರ್ಕಾರಕ್ಕೆ ತನ್ನ ಕರ್ತವ್ಯದ ಅರಿವು ಮೂಡಿಸುವಂತಹ ಪ್ರಯತ್ನದ ಭಾಗವಾಗಿಯೇ ನಮ್ಮ ಅರಿವಿನ ಪಯಣಗಳು ನಡೆಯುತ್ತವೆ. ಮಂಡ್ಯದಲ್ಲಿ ನಡೆದ ಅರಿವಿನ ಪಯಣ ಕಾರ್ಯಕ್ರಮಗಳು ನಮ್ಮ ಮಟ್ಟಿಗೆ ಅನುಭವದ ಪಯಣ ಕೂಡಾ ಆಯಿತು. ಎಲ್ಲೋ ನಡೆಯುವ ದೌರ್ಜನ್ಯಗಳು, ಅವುಗಳನ್ನು ಪರಿಣಾಮಕಾರಿಯಾಗಿ ಎದುರಿಸಲು ರಚನೆಯಾಗುವ ಕಾನೂನು, ಇದನ್ನು ಕಾರ್ಯಗತಗೊಳಿಸಲು ಹೋರಾಟ ನಡೆಸುವ ಸಂಘಟನೆಗಳು ಮತ್ತು ವ್ಯಕ್ತಿಗಳು– ಇವೆಲ್ಲವೂ ಸೇರಿ ಸಾಗಬೇಕಾದ ಪಯಣ ಇದು.

ಇದೆಲ್ಲ ಆಲೋಚನೆ ನಡೆಯುವಾಗ ನಮ್ಮ ದೇಶದ ರಾಜಕಾರಣದೊಳಗೆ ಮಹಿಳೆರ ಪ್ರಾತಿನಿಧ್ಯ ಎಷ್ಟಿದೆ ಎನ್ನುವ ಪ್ರಶ್ನೆ ನಮ್ಮನ್ನು ಕಾಡುತ್ತದೆ. ಸಂಸತ್ತಿನಲ್ಲಿ ಈ ಸಲ ಇರತಕ್ಕಂಥ ಮಹಿಳೆಯರ ಸಂಖ್ಯೆ. 545ಕ್ಕೆ ಕೇವಲ 78. ಸದನದಲ್ಲಿ ಎಷ್ಟಿದ್ದಾಳೆ? 224ಕ್ಕೆ ಕೇವಲ 6. ಹೀಗೆ ತೀರ್ಮಾನ ತೆಗೆದುಕೊಳ್ಳುವ ಸಚಿವ ಸಂಪುಟದ ಸ್ಥಳದಲ್ಲೇ ಹೆಣ್ಣುಮಕ್ಕಳು ಇಲ್ಲ ಅಂದಾಗ ಸಮಸ್ಯೆಗಳು ಹೇಗೆ ಬಗೆಹರಿಯಲು ಸಾಧ್ಯ? ಆ ಕಾರಣ ರಾಜಕಾರಣದಲ್ಲೂ ಕೂಡಾ 50–50 ಅನ್ನುವ ಪ್ರಯತ್ನ ಎತ್ತಿಕೊಳ್ಳಬೇಕಾಗಿದೆ. ಇವತ್ತು ಸದನದೊಳಗೆ 224ಕ್ಕೆ ಆರು ಜನ ಮಹಿಳೆಯರು, ಅದೂ ಕೂಡ ಗಂಡ ಸತ್ತವರಿಗೆ ಒಂದು ಸೀಟು, ಜನಪ್ರಿಯತೆಯ ಕಾರಣಕ್ಕೆ ಒಂದು ಸೀಟು ಇದೆ. ಇದು ಯಾವುದೂ ಸರಿಯಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯೊಳಗೆ ನಾವು ಇವತ್ತು ಆಲೋಚನೆ ಮಾಡಬೇಕಾಗಿರುವುದು ಇಡೀ ದೇಶದ ಭವಿಷ್ಯವನ್ನು ಭದ್ರಗೊಳಿಸಬೇಕಾದರೆ 50–50 ಆಗಲೇಬೇಕು.

ಇನ್ನೂ ಮಾತನಾಡಬೇಕಾದ ಹಲವಾರು ವಿಷಯಗಳು ಇವೆ. ಸಮಯದ ಅಭಾವದಿಂದಾಗಿ ಸೂಕ್ಷ್ಮವಾಗಿ ಹೇಳಿದ್ದೇನೆ. ಕೃಷಿ ಪ್ರಧಾನ ಜಿಲ್ಲೆಯಾದ ಮಂಡ್ಯ ಜಿಲ್ಲೆಯ ಮಹಿಳೆಯರ ದೃಷ್ಟಿಯಿಂದ ನೋಡುವುದಾದರೆ, ಕೃಷಿ ಕ್ಷೇತ್ರದ ಬಿಕ್ಕಟ್ಟು ಎಲ್ಲಕ್ಕಿಂತ ದೊಡ್ಡದಾಗಿದೆ. ಗಂಡು–ಹೆಣ್ಣಿನ ಭವಿಷ್ಯ, ದೇಶದ ಭದ್ರತೆ–ಎಲ್ಲವೂ ಕೃಷಿ ಕ್ಷೇತ್ರದಲ್ಲೇ

ಅಡಗಿದೆ. ಮಾರುಕಟ್ಟೆ ವ್ಯವಸ್ಥೆಯ ಲೋಪದೋಷದಿಂದಾಗಿ ರೈತರ ಆತ್ಮಹತ್ಯೆಯಂತಹ ಸಮಸ್ಯೆಗಳು ಉಲ್ಬಣವಾಗುತ್ತಿವೆ. ಇದರ ಪರಿಣಾಮ ರೈತ ಮಹಿಳೆಯರ ಮೇಲೆ ಎಷ್ಟು ದೊಡ್ಡ ಪ್ರಮಾಣದಲ್ಲಿ ಆಗುತ್ತಿದೆ ಎಂಬುದನ್ನು ವಿವರಿಸಬೇಕಾಗಿಲ್ಲ.

ಆದ್ದರಿಂದ, ಮಹಿಳೆಯರ ಸಮಾನತೆಯ ವಿಚಾರವನ್ನು ಈ ಎಲ್ಲ ಆಯಾಮಗಳಿಂದ ಸಮಗ್ರವಾಗಿ ನೋಡಬೇಕಾಗುತ್ತದೆ. "ನಾನೊಬ್ಬ ಮಹಿಳೆ, ನಾವೆಲ್ಲರೂ ಮಹಿಳೆಯರು, ನಮ್ಮ ಮೇಲಿನ ಹಿಂಸೆಯನ್ನು ಸಹಿಸುವುದಿಲ್ಲ, ಹಕ್ಕುಗಳನ್ನು ಕಸಿಯುವುದನ್ನು ಒಪ್ಪುವುದಿಲ್ಲ; ನಮ್ಮ ಹಕ್ಕುಗಳಿಗಾಗಿ, ಘನತೆಗಾಗಿ ಧ್ವನಿಯೆತ್ತುತ್ತೇವೆ" ಇದು ನಮ್ಮೆಲ್ಲರ ಹೆಣ್ಣುಮಕ್ಕಳ ಘೋಷವಾಕ್ಯವಾಗಬೇಕಾಗಿದೆ.

ಕುಟುಂಬದ ಒಳಗೆ ಕುಟುಂಬದ ಹೊರಗೆ ಎಲ್ಲ ಬಗೆಯ ಸಂಕಷ್ಟಗಳಲ್ಲಿ ನೊಂದು–ಬೆಂದು, ತನ್ನ ಅಸಮಾನತೆ ತನ್ನದೇ ಅರಿವಿಗೆ ಬಾರದೆ ಜೀವನ ಮಾಡುತ್ತಿರುವ ಎಲ್ಲ ಸ್ತರದ ಸಾವಿರಾರು ಹೆಣ್ಣುಮಕ್ಕಳ ಕಣ್ಣೀರಿಗೆ ಈ ಒಕ್ಕೂಟ ರಾಜ್ಯಾದ್ಯಂತ ಸ್ಪಂದಿಸುತ್ತಿದೆ. ಇದು ನಾಳೆ ದೇಶ ವ್ಯಾಪ್ತಿ ಆಗಬೇಕು; ಪ್ರಪಂಚ ವ್ಯಾಪ್ತಿ ಆಗಬೇಕು. ಆ ದಿಕ್ಕಿನಲ್ಲಿ ಒಂದು ಸಣ್ಣ ಹೆಜ್ಜೆ ಈ ಮಹಿಳಾ ದಿನಾಚರಣೆ ಕೂಡಾ. ಇಷ್ಟು ಹೇಳಿ, ಈ ಕಾರ್ಯಕ್ರಮ ಯಶಸ್ವಿ ಆಗಲು ಸಹಕರಿಸಿದ ಎಲ್ಲಾ ಸ್ನೇಹಿತರಿಗೆ, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಜನತೆಗೆ ನನ್ನ ಕೃತಜ್ಞತೆಗಳನ್ನು ತಿಳಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

# ಮಹಿಳಾ ದಿನದ ಅನುಭವಗಳು

# ಒಕ್ಕೂಟದ ಕೌದಿಯಿಂದ ಒಕ್ಕೂಟವೆಂಬ ಕೌದಿಯ ಕಡೆಗೆ

**ವಾಣಿ ಪೆರಿಯೋಡಿ**

ಮಂಡ್ಯ ಸಮಾವೇಶದಲ್ಲಿ ಮುಖ್ಯ ಅತಿಥಿ ವೋಲ್ಗಾ, ಶಬನಮ್ ಹಶ್ಮಿ ಹಾಗೂ ಅಮ್ಮಯಮ್ಮ.. ಅವರಿಗೆ ನಾವು ಕೈಯ್ಯಾರೆ ಹೊಲಿದ ಕೌದಿ ಹೊದಿಸುವಾಗ ನನಗೆ ನಮ್ಮೆಲ್ಲರನ್ನೂ ಅದರೊಳಗೆ ಕಂಡ ಹಾಗೆ ಆಯಿತು. ಅದೆಷ್ಟು ಕೈಗಳು ಮನಸ್ಸುಗಳು ಜೊತೆಗೂಡಿದ ಕ್ಷಣಗಳು ಬೆಚ್ಚಗೆ ಆ ಕೌದಿಗಳ ಒಳಗೆ ಸೇರಿಕೊಂಡ ಹಾಗೆ ಕಂಡಿತ್ತು. ಆ ಹೊಲಿಗೆಯಲ್ಲಿ ನಮ್ಮ ದನಿ, ನಮ್ಮ ಚಿಂತನೆಗಳು, ನಮ್ಮ ಪ್ರೀತಿ ಹೆಣೆದುಕೊಂಡ ಹಾಗೆ ಇತ್ತು. ಅದು ನಮ್ಮ ನುಡಿ. ಆ ಕೌದಿಗಳು ಹೆಣ್ಣು ನುಡಿಯ, ಹೆಣ್ಣು ಭಾವದ ಸಂಕೇತವಾಗಿ ಕಂಡವು.

ನಾವು ಜೊತೆಯಾಗಿ ಹೊಲಿಯಲು ಶುರುಮಾಡಿದ್ದು ವರ್ಧಾದಲ್ಲಿ; ಗಾಂಧೀಜಿ ಆಶ್ರಮದಲ್ಲಿ. ಅಲ್ಲಿಂದಲೇ ಖಾದಿ ಬಟ್ಟೆ ಕೊಂಡು, ಪುಟ್ಟ ಚೀಲಗಳನ್ನು ಪ್ರತಿಯೊಬ್ಬರೂ ಹೊಲಿದಿದ್ದೆವು. ಸಮೂಹವಾಗಿ ಹೊಲಿಯುವ ಕ್ರಿಯೆಯ ಆನಂದ ಅಲ್ಲಿ ಸಿಕ್ಕಿತ್ತು. ಹೊಲಿಯುತ್ತಾ ಹೊಲಿಯುತ್ತಾ ತನ್ಮಯರಾಗುವ ಅನುಭವವೂ ಅಲ್ಲಿ ಸಿಕ್ಕಿತ್ತು. ಒಬ್ಬರ ಕೈಕೆಲಸ ಮತ್ತೊಬ್ಬರಿಗೆ ಪ್ರೇರಣೆ ನೀಡಿತ್ತು. ಒಂದಷ್ಟು ಮಂದಿಗೆ ಹೊಲಿವ ಕೆಲಸ ಹೊಸದಾಗಿತ್ತು. ಕೊನೆಯ ದಿನ ನಾವು ಹೊಲಿದ ಚೀಲಗಳನ್ನೇ ಪರಸ್ಪರ ನೆನಪಿನ ಕಾಣಿಕೆಯಾಗಿ ಹಂಚಿಕೊಂಡೆವು.

ಧಾರವಾಡ ಸಮಾವೇಶದ ಸಂದರ್ಭದಲ್ಲಿ ಹೊರಗಿನಿಂದ ಬಂದ ಅತಿಥಿಗಳಿಗೆ ದೇಸಿ ಮಳಿಗೆಯ ಕೌದಿ ಹೊದಿಸಿದ್ದೆವು. ಆಗಲೇ ಮುಂದಿನ ಸಮಾವೇಶದಲ್ಲಿ ನಾವು ನಮ್ಮ ಕೈಯ್ಯಾರೆ ಹೊಲಿದ ಕೌದಿಯನ್ನು ಅತಿಥಿಗಳಿಗೆ ಕೊಡುವಂತಾಗಬೇಕು ಎಂಬ ಕನಸು ಹುಟ್ಟಿಕೊಂಡಿತ್ತು. ಖಂಡಿತವಾಗಿ ಜೊತೆ ಸೇರಲು ಒಂದು ಸುಂದರ ನೆಪ ಆಗುತ್ತದೆ. ಹೊಲಿಯುತ್ತಾ ಅದೆಷ್ಟೋ ಮಾತುಕತೆಗಳನ್ನು ಹರಟೆಯ ಸ್ವರೂಪದಲ್ಲಿ ಮಾಡುತ್ತಾ ಹೋಗಬಹುದು ಅನಿಸಿತ್ತು. ಕನಸು ವಿಸ್ತರಿಸುತ್ತಾ ಹೋಯಿತು. ನಮ್ಮ ಬಳಗದಲ್ಲಿ ಇಂತಹ ಕನಸುಗಳಿಗೆ ರೆಕ್ಕೆ ಪುಕ್ಕ ಹಚ್ಚುವವರಿಗೆ ಏನೂ ಕೊರತೆಯಿಲ್ಲ. ಅಂತೆಯೇ ಮೊದಲಿಗೆ ಈ ಹೊಲಿವ ಕೆಲಸಕ್ಕೆ ತೊಡಗಿದ್ದು ಮೇಲುಕೋಟೆಯಲ್ಲಿ ನಡೆದ ಅಧ್ಯಯನ ಶಿಬಿರದಲ್ಲಿ. ಆಮೇಲೆ ಹೊಲಿಯಲೆಂದೇ ನಾವು ಸೇರಿದ್ದು, ಶಿವಮೊಗ್ಗ, ಧಾರವಾಡ ಮತ್ತು ಮಂಗಳೂರಿನಲ್ಲಿ. ಶಿವಮೊಗ್ಗದಲ್ಲಿ (15,16, ಡಿಸೆಂಬರ್ 2019) ರೇಖಾಂಬ ಮನೆ, ಮಂಗಳೂರಿನಲ್ಲಿ (2,3 ಜನವರಿ 2020) ದೇವಿಕಾ ಮನೆ ಹಾಗೂ ಸಂವಾದ ಕಛೇರಿ, ಧಾರವಾಡದಲ್ಲಿ (12,13 ಜನವರಿ 2020) ಗೆಳತಿ ಲಿನೆಟ್ ಮನೆ, ನಮಗಾಗಿ ತೆರೆದುಕೊಂಡಿತ್ತು. ಪ್ರತಿ ಜಿಲ್ಲೆಯಲ್ಲೂ ಮೊದಲ ಎರಡು ಮೂರು

ದಿನಗಳು ಎಲ್ಲಾ ಸೇರಿ ಹೊಲಿದರೆ, ಉಳಿದ ಕೆಲಸಗಳನ್ನು ನಾಲ್ಕಾರು ಜನ ಸೇರಿ ಕೊನೆಗೊಳಿಸಿದರು.

ಬಣ್ಣ ಬಣ್ಣದ ಬಟ್ಟೆ ತುಂಡುಗಳನ್ನು ಸಮ ಅಳತೆಯಲ್ಲಿ ಕತ್ತರಿಸಿ ಇರಿಸಿಕೊಂಡಿದ್ದೆವು. ಒಂದೊಂದು ತುಂಡಿನಲ್ಲೂ ವಿಧವಿಧಧ ಚಿತ್ತಾರಗಳು ಮೂಡತೊಡಗಿದವು. ಈ ತುಂಡುಗಳನ್ನು ಸೊಗಸಾಗಿ ಜೊತೆಗೂಡಿಸಿ ಹೊಲಿದೆವು. ಹೆಚ್ಚೇನೂ ಖರ್ಚು ಮಾಡದೆಯೇ ಅಲ್ಲಿಂದ ಇಲ್ಲಿಂದ ಬಟ್ಟೆತುಂಡುಗಳನ್ನು ಸಂಗ್ರಹಿಸಿ ಇಟ್ಟುಕೊಂಡಿದ್ದೆವು. ಈ ಬಟ್ಟೆ ತುಂಡುಗಳಿಗೆ ಹೊಸ ರೂಪ ಬಂತು. ಸೇರಿದವರಲ್ಲಿ ಒಂದಷ್ಟು ಜನ ನಲವತ್ತು ದಾಟಿದವರು. ಸೂಜಿಗೆ ನೂಲು ಹಾಕುವುದು ತ್ರಾಸದ ಕೆಲಸ. ಸೂಜಿಗೆ ನೂಲು ಹಾಕುವ ಪುಟ್ಟ ಸಾಧನ, ನಮ್ಮ ಕೈಯಲ್ಲಿತ್ತು. 'ತ್ರೆಡರ್' ಅನ್ನುತ್ತಾರೆ ಇಂಗ್ಲಿಷಿನಲ್ಲಿ. ಅದ್ಭುತವಾದ ಒಂದು ಪರಿಕರ. ಆರಾಮವಾಗಿ ಸೂಜಿಗೆ ನೂಲು ಏರಿಸಲು ಅನುಕೂಲವಾಗುವ ಹಾಗೆ ಇದೆ. ಅದಕ್ಕೆ ಶಿವಮೊಗ್ಗದಲ್ಲಿ, 'ನೂಲೇಣಿ' ಎಂಬ ಹೆಸರು ಇಟ್ಟೆವು.

ರಂಗು ರಂಗಿನ ಬಟ್ಟೆಯಲ್ಲಿ, ಒಬ್ಬೊಬ್ಬರು ಒಂದೊಂದು ಮುಗಿಸುತ್ತಿದ್ದಂತೆಯೇ ತಾವು ಮಾಡಿರುವ ವಿನ್ಯಾಸವನ್ನು ಎತ್ತಿ ಹಿಡಿದು ಎಲ್ಲರಿಗೂ ತೋರಿಸುವಾಗ, ಸೂಜಿ ನೂಲು ಕೆಳಗಿಳಿಸದೆಯೇ ಬಾಯಿಯಲ್ಲಿ 'ಚಪ್ಪಾಳೆ ಚಪ್ಪಾಳೆ' ಅಂತ ರಾಗವಾಗಿ ಹೇಳುತ್ತಿದ್ದೆವು. ಹೂವು, ಎಲೆ, ರಂಗೋಲಿ, ಪಗಡೆಮಣೆ, ನಕ್ಷತ್ರಗಳು, ಸೂರ್ಯ, ಮರ, ಗಿಡ, ಹೂವಿನ ಕುಂಡ, ಬಳ್ಳಿ ಮತ್ತು ಇನ್ನೂ ಏನೇನೋ ಆಕಾರಗಳು, ಎಲ್ಲರ ಕೈಯಲ್ಲಿ ಅರಳಿದ್ದವು. ಹೊಲಿದಾಗಿರುವುದನ್ನು ನೆಲದಲ್ಲಿ ಜೋಡಿಸುತ್ತಾ ಯಾವುದರ ಪಕ್ಕ ಯಾವುದು, ಹೇಗೆ ಇಟ್ಟರೆ ಚಂದ ಕಾಣಿಸಬಹುದು ಎಂಬ ಲೆಕ್ಕಾಚಾರ ಮಾಡಿ ಕೊನೆಗೆ ಒಂದು ರೂಪಕ್ಕೆ ತರುತ್ತಿದ್ದೆವು. ಇನ್ನೂರಕ್ಕೂ ಮಿಕ್ಕಿ ನಮೂನೆ ನಮೂನೆಯ ಚಿತ್ತಾರಗಳು ಹನಿಗವನಗಳಂತೆ ಮೂಡಿಬಂದವು. ಕೈಕೆಲಸ ಕಣ್ಣೆದುರು ಸಾಕಾರಗೊಳ್ಳುತ್ತಿದ್ದ ಹಾಗೆಯೇ ಖುಶಿಯಲ್ಲಿ ಓಲಾಡಿಬಿಡುತ್ತಿದ್ದೆವು. ತೈಯಾ ತಕ್ಕಾ ಅಂತ ಕುಣಿದಾಡಿ ಬಿಡುತ್ತಿದ್ದೆವು.

ಹೊಲಿಯುವ ಈ ಕಾಯಕದಲ್ಲಿ ಒಂದಷ್ಟು ಗಂಡುಮಕ್ಕಳೂ ನಮ್ಮ ಜೊತೆ ಸೇರಿಕೊಂಡಿದ್ದರು. ಶಿವಮೊಗ್ಗದಲ್ಲಿ ವಿನಯ ಅಂತೂ ಬಹಳ ಸುಂದರ ಕೈಚಳಕ ಇರುವ ಹುಡುಗ. ಅವನ ಕೆಲಸಗಳು ಬೆರಗಾಗಿ ನೋಡುವಷ್ಟು ಸುಂದರ. ಅವನಿಂದ ಕಲಿಯುವ ಅವಕಾಶವೂ ಸಿಕ್ಕಿತ್ತು. ರಂಗಬೆಳಕು ತಂಡದ ಹುಡುಗರೂ ಕೈ ಜೋಡಿಸಿದರು. ಮೊದಮೊದಲು ಸ್ವಲ್ಪ ಪರದಾಡುತ್ತಾ ಆಮೇಲೆ ನಿಧಾನವಾಗಿ ಹೊಲಿಗೆಯೊಳಗೆ ಸಿಲುಕಿಕೊಂಡರು. ನಮ್ಮ ಸಂಭ್ರಮ ನೋಡಿ, ಕ್ರಿಕೆಟ್ ಆಟಗಾರ ಸತ್ಯಕಾಮ (ರೇಖಾಂಬ ಮಗ, 12 ವರುಷ) ಏನೋ ನೋಡಿಯೇ ಬಿಡೋಣ ಅಂತ ತಾನೂ ಒಂದೆರಡು ತುಂಡುಗಳಲ್ಲಿ ಚಿತ್ತಾರ ಮೂಡಿಸಿಯೇ ಬಿಟ್ಟ. ಧಾರವಾಡದಲ್ಲಿ ನಮ್ಮ ಲಡಾಯಿ ಬಸು

ಅವರು ತಗ್ಗಿಸಿದ ತಲೆ ಎತ್ತಲಿಲ್ಲ..ಹೊಲಿದದ್ದೇ ಹೊಲಿದದ್ದು. ಇಂದಿನವರೆಗೂ ಅವರು ಹೊಲಿದ ತುಂಡು ಅವರ ವಾಟ್ಸ್ಯಾಪ್ ಡಿಪಿಯನ್ನು ಅಲಂಕರಿಸಿರುವುದನ್ನು ನಾವು ಕಾಣಬಹುದು. ಮಂಗಳೂರಿನಲ್ಲಿ ಸಂವಾದ ತಂಡದ ಯುವಕರು ತುಂಬು ಖುಷಿಯಿಂದ ಸೂಜಿ ನೂಲಿನ ಕಾಯಕದಲ್ಲಿ ತೊಡಗಿಸಿಕೊಂಡರು, ಸೊಗಸಾದ ವಿನ್ಯಾಸಗಳನ್ನು ಮಾಡಿದರು.

ಹೀಗೆ ಜೊತೆಗಿರಬೇಕಾದರೆ, ಕೆಲವು ಕ್ಷಣಗಳು, ಹಾಗೆಯೇ ಮೌನಕ್ಕೆ ಜಾರಿ ಬಿಡುತ್ತಿದ್ದುದೂ ಇದೆ. ಗುಂಪಿನೊಳಗೂ, ಗದ್ದಲದ ಒಳಗೂ ಕೆಲವರು ಹಾಗೆಯೇ ಮೌನದೊಳಗೆ ಮರೆಯಾಗುತ್ತಿದ್ದುದೂ ಇದೆ. ಅಂತೆಯೇ ಮನದಾಳದ ಮಾತುಗಳೂ ಸಮೃದ್ಧವಾಗಿ ಹೊರಚೆಲ್ಲಿದ ಅನುಭವಗಳೂ ಇವೆ. ಹಾಡು, ನಾಟಕ, ಚರ್ಚೆ ಏನುಂಟು ಏನಿಲ್ಲ ಅನ್ನುವ ಮಟ್ಟಿಗೆ ನಡೆದಿತ್ತು. ಅದು ಪೌರತ್ವದ ಕುರಿತು ನಾಡು ತಲ್ಲಣಗೊಂಡ ಕಾಲ. ನಾವು ಹೆಣ್ಣುಮಕ್ಕಳಾಗಿ, ನಮ್ಮ ಸ್ಥಳೀಯ ನೆಲೆಯಿಂದ ಇದನ್ನು ಹೇಗೆ ನಿಭಾಯಿಸಬೇಕು, ನಮ್ಮ ಹತ್ತಿರವೇ ಇರುವವರ ಜೊತೆಗೆ ಹೇಗೆ ಒಡನಾಡಬೇಕು ಎಂದು ಹೇಳಿಕೊಂಡೆವು. ಹೈದರಾಬಾದ್ ವೈದ್ಯೆಯ ಗ್ಯಾಂಗ್ ರೇಪ್, ಅದರ ಹಿಂದೆ ನಡೆದ ಪೋಲಿಸ್ ಎನ್‌ಕೌಂಟರ್, ನಿರ್ಭಯಾ ಹಂತಕರಿಗೆ ಗಲ್ಲು ಶಿಕ್ಷೆ ಸರಿಯೇ, – ಇಂತಹ ವಿಚಾರಗಳ ಕುರಿತು ನಮ್ಮ ಸಂಕಟ, ತಲ್ಲಣಗಳನ್ನು ಹಂಚಿಕೊಳ್ಳುವುದು ಹೇಗೆ ಎಂದು ಕೇಳಿಕೊಂಡೆವು. ಗೆಳತಿ ಅನುಪಮಾ ಬರೆದ 'ಬುದ್ಧ ಚರಿತೆ' ಕಿವಿಗೆ ಎದೆಗೆ ಹಿತವಾಗುವಂತೆ ಗಟ್ಟಿ ಓದು ನಡೆಸಿದೆವು. ಸರಸ್ವತಿ ಸಣ್ತಿಮ್ಮಿಯಾಗಿ ಒಂದು ಊರಿನಲ್ಲಿ 'ಬುದ್ಧಾಯಣ' ಇನ್ನೊಂದೆಡೆ 'ಎದೆಯ ಗೂಡಿನ ಹಕ್ಕಿಗಳು' – ನಾಟಕಗಳನ್ನು ಹೊಸ ಸಾಧ್ಯತೆಗಳನ್ನಾಗಿ ಮುಂದಿಟ್ಟಳು. ವಾಣಿ, 'ಕೌದಿ' ನಾಟಕ ಮಾಡಿದಳು. ಅದೆಷ್ಟೋ ಕವನಗಳನ್ನು ಓದಿದೆವು. ಫೆಮಿನಿಸ್ಟ್ ಜೋಕುಗಳನ್ನು ಹೇಳಿಕೊಂಡು ಮನಸಾರೆ ನಕ್ಕೆವು.

'ಏನು ಬರೇ ಸಾಂಕೇತಿಕವಾಗಿ ಏನೇನೋ ಮಾಡುತ್ತೀರಿ'; 'ಮಹಿಳಾ ಸಮಾವೇಶ ಒಂದು ಮಾಡುತ್ತೀರಿ, ಬೇರೇನೂ ಮಾಡುವುದಿಲ್ಲ'; 'ವರುಷದಲ್ಲಿ ಒಂದಿಬ್ಬರಿಗಾದರೂ ನ್ಯಾಯ ಕೊಡಿಸಿದರೆ, ಒಕ್ಕೂಟ ಇದ್ದುದಕ್ಕೆ ಸಾರ್ಥಕ' – ಹೀಗೆ, ಒಕ್ಕೂಟದ ಬಗ್ಗೆ ಕೇಳಿಬರುವ ಒಂದಷ್ಟು ಟೀಕೆಗಳನ್ನು ಬಿಡಿಸಿ ಸರಿಸಿ ನೋಡಿಕೊಂಡೆವು. ನಾವು ನಮ್ಮ ಕಾರ್ಯಕ್ರಮಗಳಲ್ಲಿ ಬಹಳ ಶ್ರದ್ಧೆಯಿಂದ ನಡೆಸುವ ಮೌನ ಪ್ರತಿಭಟನೆಯ ಔಚಿತ್ಯದ ಕುರಿತು ಮಾತಾಡಿದೆವು. "ಮೌನಕ್ಕೆ ಎರಡು ಮುಖ ಇದೆ, ಯಾರದೋ ಒತ್ತಡಕ್ಕೆ ಬಲಿಯಾಗಿ ಮೌನವಾಗಿ ಇರುವುದು ಒಂದು, ನಮ್ಮ ಒಳಗೆ ನಾವು ನೋಡಿಕೊಳ್ಳುವುದಕ್ಕೆ, ಗಟ್ಟಿ ಮಾಡಿಕೊಳ್ಳುವುದಕ್ಕಾಗಿ ಮೌನ ವನ್ನು ಅಯ್ಕೆ ಮಾಡುವುದು ಮತ್ತೊಂದು. ಮೌನವಾದಾಗ ನಮ್ಮ ಒಳಗಿನ ಮಾತುಗಳು ಕೇಳತೊಡಗುತ್ತವೆ, ಅವೂ ತುಂಬಾ ಮುಖ್ಯ" ಎಂದು ಅನಿಸಿತ್ತು.

ನಮ್ಮ ಎಲ್ಲಾ ಚಟುವಟಿಕೆಗಳಿಗೂ ಆಳವಾದ ಅರ್ಥ ಇದೆ, ಸಂಪೂರ್ಣ ಮನಸ್ಸಿಟ್ಟು

ಮಾಡಿದರೆ ಅದರ ಪ್ರಭಾವದ ಅರಿವಾಗುತ್ತದೆ ಅನಿಸಿತ್ತು. ಈ ನಿಟ್ಟಿನಲ್ಲಿ ನಮ್ಮ ಅನೇಕ ತಾಕಲಾಟಗಳಿಗೆ, ಚಡಪಡಿಕೆಗಳಿಗೆ ನಮ್ಮ 'ಅರಿವಿನ ಪಯಣವೇ'' ಒಂದು ಸುಂದರ ಉತ್ತರ, ಇದನ್ನು ನಿರಂತರ ನೆಲೆಯಲ್ಲಿ ಹಾದಿ ಬೀದಿಗಳಲ್ಲಿ ಮಾಡುತ್ತಲೇ ಇರಬೇಕು, ಜನರನ್ನು ಹತ್ತಿರದಿಂದ ತಲುಪಬೇಕು, ಅಂತ ಅನಿಸಿತ್ತು.

ಕೈಗೆ ಹೆಣಿಕೆಯ ಹಬ್ಬ, ಮನಸ್ಸಿಗೆ ಗಾಢವಾದ ಮತ್ತು ಆಪ್ತವಾದ ಚಿಂತನೆಯ ಹಬ್ಬ ಸಿಕ್ಕಿದ್ದರ ಜೊತೆಗೆ ಊಟವೂ ಹಬ್ಬದ ರೀತಿಯೇ ಇತ್ತು. ಒಬ್ಬೊಬ್ಬರ ಮನೆಯಿಂದ ಒಂದೊಂದು ಉಣಿಸು ತಿನಿಸುಗಳು ಸೇರಿಕೊಂಡಿದ್ದವು. ಶಿವಮೊಗ್ಗದಲ್ಲಿ ಬಿಸಿಬೇಳೆ ಭಾತ್, ಪುಲಾವ್, ಅಕ್ಕಿ ರೊಟ್ಟಿ, ಚಟ್ನಿಗಳು, ಪುಳಿಯೋಗರೆ, ಕೋಸಂಬರಿ, ಧಾರವಾಡದಲ್ಲಿ ಅದು ಸಂಕ್ರಾಂತಿ ಸಮಯ, ಸಜ್ಜೆ ರೊಟ್ಟಿ, ಎಣಗಾಯಿ, ಗುರೆಳ್ಳು–ಶೇಂಗಾ ಚಟ್ನಿ, ಉಪ್ಪಿನಕಾಯಿಗಳು, ಝುಣುಕದ ವಡಿ, ಕೆನೆಮೊಸರು. ಮಂಗಳೂರಿನಲ್ಲಿ ಕೋರಿ ರೊಟ್ಟಿ ಕೋಳಿ ಸಾರು..ಬಾಯಲ್ಲಿ ನೀರೂರಲೇ ಬೇಕು. ಈ ಅಡುಗೆಗಳೂ ಅಷ್ಟೇ, ಹೆಣ್ಣು ಮಕ್ಕಳು ತಮ್ಮ ಕೈಯ್ಯಾರೆ ಮಾಡಿ ತಂದು ಪರಸ್ಪರ ಹಂಚಿಕೊಂಡು, ಉಣ್ಣುವಾಗಲೂ ಮೆಚ್ಚುಗೆ ಸೂಚಿಸಿಕೊಂಡದ್ದು ಪಕ್ಕಾ ಹೆಣ್ಣುತನದ ವಾತಾವರಣವೇ ಸರಿ. ಇಂತಹ ಒಂದು ಕೂಟ ಗಂಡು ಜಗತ್ತಿನಲ್ಲಿಯೂ ಸಹಜವಾಗಿ ಆಗುವ ಕಾಲ ಎಂದು ಬರಬಹುದೋ..

'ಸಮಾಜ ಮನಸ್ಸಿಗೆ, ದೇಹಕ್ಕೆ ತುಂಬಾ ಗಾಯ ಮಾಡುತ್ತಿದೆ, ಇದಕ್ಕೆ ಮುಲಾಮು ಹಚ್ಚುವ ಕೆಲಸ ಆಗಬೇಕಾಗಿದೆ' ಅಂತ ನಮ್ಮಲ್ಲಿ ಒಬ್ಬರು ಹೇಳಿಕೊಂಡರು. ಪೌರತ್ವ ಕುರಿತು ಮಾತು ನಡೆಯುತ್ತಿದ್ದಾಗ, ಒಬ್ಬ ಮುಸ್ಲಿಂ ಯುವತಿ ಹೇಳಿದ್ದು, "ಈ ದಿನಗಳಲ್ಲಿ, ಹೊರಗಡೆ ಓಡಾಡುವಾಗ, ಬಸ್ಸಿನಲ್ಲಿ ಹೋಗುವಾಗ, ನನ್ನನ್ನು ಜನ ಹೇಗೆ ನೋಡುತ್ತಿರಬಹುದು ಅಂತ ಅನಿಸುತ್ತಿರುತ್ತದೆ..". ಈ ನಾಡಿನ ನೆಲ ಜಲದ ಜೊತೆ ಬೆರೆತುಹೋಗಿರುವ, ಇದರ ಹೊರತು ಬೇರೆ ನಾಡಿನ, ನೆಲದ ಪರಿಚಯವೇ ಇಲ್ಲದ ಜೀವವೊಂದು ಹಠಾತ್ ಆಗಿ ಹೀಗೆ ಪರಕೀಯತೆ ಅನುಭವಿಸುವುದು ಅಂದರೆ ಏನು..ಅಂತ ಯೋಚಿಸುವಂತಾಯಿತು.

ಒಂದು ಜಿಲ್ಲೆಯಲ್ಲಿ, ಕುಟುಂಬದೊಳಗೆ ಅತಿರೇಕದ ದೌರ್ಜನ್ಯಕ್ಕೆ ಒಳಗಾದ ಒಬ್ಬಾಕೆಯನ್ನು ಒಕ್ಕೂಟದ ಗೆಳತಿ ಈ ಕಾರ್ಯಕ್ರಮಕ್ಕೆ ಕರೆತಂದಿದ್ದರು. ಆಕೆ ಮನಬಿಚ್ಚಿ ತನ್ನ ನೋವುಗಳನ್ನು ಹಾಗೂ ತಾನು ಅದನ್ನು ಎದುರಿಸಲು ಹೊರಟ ರೀತಿಯನ್ನು ಹೇಳಿಕೊಂಡರು. ಇದರ ಸುತ್ತು ಮುತ್ತು ಚರ್ಚೆ ಆಗುವಾಗ, ಅತಿರೇಕದ ದೌರ್ಜನ್ಯ ಒಂದು ಕಡೆ ಆದರೆ, ದಿನನಿತ್ಯದ ನೆಲೆಯಲ್ಲಿ ನಡೆಯುವ ಗಂಡು ಹಿರಿಮೆಯ ಪ್ರಭಾವಗಳು ಮನೆಗಳಲ್ಲಿ ಯಾವ ಯಾವ ರೀತಿ ನಡೆಯುತ್ತವೆ ಎಂಬುದರ ಬಗ್ಗೆ ಬಹಳ ಮಾತುಕತೆ ನಡೆಯಿತು. ಇವು ಅತ್ಯಂತ ಸಹಜ ಅನ್ನುವ ರೀತಿಯಲ್ಲಿ ನಡೆಯುತ್ತವೆ, ಅದಕ್ಕಾಗಿ ಬೆರಳು ತೋರಿಸಿ ಹೇಳುವ ಹಾಗೆಯೂ ಇಲ್ಲ..

'ನಾನು ಸಾಕಿದ ನಾಯಿ' ಅಂತ ಎಷ್ಟು ಆರಾಮವಾಗಿ ಹೆಂಡತಿಯನ್ನು ಹೇಳುತ್ತಾರೆ,

'ನಾನು ದುಡಿದು ಸಾಕೋದು, ಗಂಡ ಒಂದು ಮಾತು ಹೇಳಿದರೆ ಅದನ್ನೇ ದೊಡ್ಡದು ಮಾಡೋದಾ, ಅಂತ ಹೇಳ್ತಾರೆ';'

'ನಾನು ಇಂತಹ ಗುಂಪಿಗೆ ಬಂದು ಹೋದರೆ ನಾಲ್ಕು ದಿನ ನಾನು ಏನೋ ಬೇರೆ ಇರ್ತೇನಂತೆ, ಮತ್ತೆ ಸರಿ ಆಗುತ್ತೇನಂತೆ, ನನ್ನ ಗಂಡ ಹೇಳುತ್ತಿರುತ್ತಾರೆ' – ಹೀಗೇ ಅನುಭವದ ಮಾತುಗಳು ಹರಿದು ಬಂದವು. ಮಾತಿನ ಓಘದಲಿ ಒಬ್ಬರು, 'ನನ್ನ ಸ್ವಂತ ಗಂಡನೇ, ಹೀಗೆ ಅಂತಾನೆ' ಅಂತ ಹೇಳಿದರು. (ಫೆಮಿನಿಸ್ಟ್ ಜೋಕ್ 'ಸ್ವಂತ ಗಂಡ')

ಯಾರಾದರೂ ಕೇಳಿಸಿಕೊಂಡಿದ್ದರೆ, ಕೌದಿ ಹೊಲಿಯಲು ಸೇರಿದ್ದಾರೋ ಇನ್ನೇನಕ್ಕೋ ಸೇರಿದ್ದಾರೊ. ಅಂತ ಅನಿಸುತ್ತಿತ್ತೇನೋ. ಆದರೆ ಕೌದಿ ಹೊಲಿಯುವ ಕ್ರಿಯೆ ಎದೆಯೊಳಗಿನ ನೋವು ಶಮನಕ್ಕೆ ಸುಂದರವಾದ ಒಂದು ನೆಪ ಕೂಡಾ ಹೌದಲ್ಲವೇ..

ನಮ್ಮಲ್ಲಿಯೇ ಒಬ್ಬರು ಹೀಗೆ ಹೇಳಿದ್ದರು – "ಹೊಲ್ಕೋತಾ ಹೋದ್ವಿ, ಜೊತೆಗೆ ಮಾತಾಡುತ್ತಾ ಹೋದ್ವಿ, ಓಪನ್ ಆಗುತ್ತಾ ಹೋದ್ವಿ, ಕೊನೆಗೆ ಒಂದು ಸೃಜನಶೀಲವಾದ ವಸ್ತು ಕೂಡಾ ಹೊರಬಂತು". ಇದು ಕೌದಿ ಲೋಕ.

"ಖರೇ ಕೌದೀನೇ ಇದು, ಕೈಗೆ ಕೈ ಜೋಡಿಸುವ ಕೆಲಸ ನಿಜಾ ಅರ್ಥದಲ್ಲಿ ನಡೀತಿದೆ, ಯಾರ್‍ಯಾರೋ ಇದ್ದೇವೆ – ಚಿಕ್ಕವರು, ದೊಡ್ಡವರು, ಡಾಕ್ಟರ್‌ಗಳು, ಲೇಖಕಿಯರು, ಪುರುಷರು, ಕೌದಿಯ ಒಂದೊಂದು ಪೀಸುಗಳು.." ಶಾರದಾ ಹೇಳಿದ್ದರು. ಅವರು ಅಂದ ಹಾಗೆಯೇ, ಅನುಭವಿಸುತ್ತಾ, ಅನುಭಾವಕ್ಕೆ ಒಳಗಾಗುತ್ತಾ ನಾವು ಪ್ರತಿಯೊಬ್ಬರೂ ಕೌದಿಯ ಒಂದೊಂದು ತುಂಡುಗಳೇ ಅನ್ನುವ ಹಾಗೆ ಅನಿಸತೊಡಗಿತ್ತು.. ಹೌದು ನಾವು ಒಕ್ಕೂಟ ಎಂಬ ವಿಶಾಲ ಕೌದಿಯ ತುಂಡುಗಳು, ಪ್ರತಿಯೊಬ್ಬರೂ ಅನನ್ಯವೂ ಹೌದು, ಪ್ರತಿಯೊಬ್ಬರೂ ಸಮೂಹದ ಭಾಗವೂ ಹೌದು. ಸೋದರಿತ್ವದ ಸೊಗಸನ್ನು ಚಿತ್ರಿಸಲು ಹೊರಟ ಕೌದಿಯ ಭಾಗಗಳು..

## ಲಿಂಗ ಸಂವೇದನೆಯನ್ನು ಮೊಳಗಿಸಿದ ಮಹಿಳಾ ಜಾಥಾ

**ಸಿ.ಕುಮಾರಿ,** ಸಿಐಟಿಯು

ನಿತ್ಯ ನಿರಂತರ ಹೋರಾಟದ ನೆಲವಾಗಿರುವ ಮಂಡ್ಯಕ್ಕೆ ಸಮಾನತೆಯ ಆಶಯಗಳನ್ನೊತ್ತ ಮನಸ್ಸುಗಳು, ಸಂಘಟನೆಗಳು, 2020 ಮಾರ್ಚ್ 8ರ ಮಹಿಳಾದಿನ ಆಚರಣೆ ಮಾಡಬೇಕೆಂದು ತೀರ್ಮಾನ ಮಾಡಿದ್ದು ತುಂಬಾ ಖುಷಿ ಎನಿಸಿತು. ವಿಶಾಲ ನೆಲೆಯಲ್ಲಿ

ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ವತಿಯಿಂದ ನಡೆಸಿಕೊಂಡು ಬರುತ್ತಿರುವುದು ಕೂಡ ತುಂಬಾ ಶ್ಲಾಘನೀಯವಾದದ್ದು. ಮಂಗಳೂರಿಂದ ಮೊದಲ್ಗೊಂಡು ಮಂಡ್ಯದವರೆಗೂ ಯಶಸ್ವಿಗೆ ತೊಡಗಿದ ಎಲ್ಲಾ ಪ್ರಜಾಸತ್ತಾತ್ಮಕ ಚಳುವಳಿಗಳು ಮತ್ತು ಸಮಾನ ಮನಸ್ಸುಗಳಿಗೆ ಮನದುಂಬಿದ ಅಭಿನಂದನೆಗಳು.

ನಿತ್ಯ ಹತ್ತು ಹಲವು ಭೀಕರ ಸನ್ನಿವೇಶಗಳನ್ನು ಎದುರುಗೊಳ್ಳುವಲ್ಲಿ ಮಂಡ್ಯ ಜಿಲ್ಲೆಯೂ ಹೊರತಾಗಿಲ್ಲ. ಮಹಿಳೆಯರು ಶತಶತಮಾನಗಳಿಂದಲೂ ಅನ್ಯಾಯ, ಅಸಮಾನತೆ, ಶೋಷಣೆ, ಅಪಮಾನಕ್ಕೆ ಗುರಿಯಾಗುತ್ತಿದ್ದಾಳೆ.ಹೊಲ, ಮನೆ, ಕಾರ್ಖಾನೆ, ಕಛೇರಿ ಹೀಗೆ ಮನೆ ಒಳಹೊರಗೆ, ಇತರೆಡೆ ದಣಿವರಿಯದ ದುಡಿಮೆ ಮಹಿಳೆಯದ್ದಾಗಿದೆ, ಗೃಹಕೃತ್ಯದ ಕೆಲಸವಂತೂ ತುಂಬಾ ಹೈರಾಣಾಗಿಸುವಂತದ್ದು. ಕೆಲಸ ಹಂಚಿಕೊಳ್ಳುವ ಪುರುಷರ ಸಂಖ್ಯೆ ಅತಿವಿರಳ. ಪುರುಷ ಶ್ರೇಷ್ಠವೆನ್ನುವ  ಮೌಲ್ಯಗಳು ಹೆಣ್ಣನ್ನು ನಿತ್ಯ ನೊಣೆದುನುಂಗುತ್ತಿವೆ. ಸಮಾನತೆಯ ಸಂವೇದನೆಯೇ ಇಲ್ಲದ ಸಮಾಜದಲ್ಲಿ ಹೆಣ್ಣಿನ ಸ್ಥಾನಮಾನಗಳಿಗೆ ಪ್ರತಿ ಹೆಜ್ಜೆಗೂ ಅಡ್ಡಿ ಆತಂಕಗಳೇ ಹೆಚ್ಚು. ಮಹಿಳೆ ಎಂದರೆ ಪ್ರದರ್ಶನದ ಬೊಂಬೆ, ಭೋಗದ ವಸ್ತುವೆಂಬ ಮನೋಭಾವ ಗಟ್ಟಿಇರುವ ಕಾಲಘಟ್ಟದಲ್ಲಿ ಮಹಿಳೆ ಮಕ್ಕಳ ಮೇಲೆ ದೌರ್ಜನ್ಯ, ದಬ್ಬಾಳಿಕೆಗಳು ಎಗ್ಗಿಲ್ಲದೆ ಸಾಗಿವೆ. ಪಾಳೇಗಾರಿ ಮೌಲ್ಯವೇ ಮೈದಳೆದಿರುವ  ಮಂಡ್ಯ ಜಿಲ್ಲೆಯಲ್ಲಿ  ಮಡುಗಟ್ಟಿರುವುದು ಪುತ್ರವ್ಯಾಮೋಹ, ಆಸ್ತಿ ಒಡೆತನ ಗಂಡಸಿಗಷ್ಟೇ ಸೀಮಿತ ಎನ್ನುವ ಸೀಮಿತ ತಿಳುವಳಿಕೆ. ಇದರ ಪರಿಣಾಮ, ಮೊದಲ ಮಗು ಗಂಡೇ ಆಗಬೇಕೆನ್ನುವ ಮೂಢನಂಬಿಕೆ. ಜಗತ್ತನ್ನು ಕಣ್ಣುಬಿಟ್ಟು ನೋಡುವ ಮೊದಲೇ ಗರ್ಭದಲ್ಲಿಯೇ ಚಿವುಟಿಹಾಕುವ ಜೀವವಿರೋಧಿ ಹೆಣ್ಣುಭ್ರೂಣ ಹತ್ಯೆಗಳು ಹವ್ಯಾಹತವಾಗಿ ಸಾಗಿರುವುದು ನಿಜಕ್ಕೂ ದುರಂತದ ವಿಚಾರ. ಮಹಿಳಾ ಸಂಕುಲದ ಅಸ್ತಿತ್ವಕ್ಕೆ ಸಂಚಕಾರತರುತ್ತಿದೆ. ಬಾಲ್ಯ ವಿವಾಹಗಳು ಮೇರೆ ಮೀರುತ್ತಿವೆ. ಕೌಟುಂಬಿಕ ದೌರ್ಜನ್ಯಗಳಿಗೆ ಕೊನೆಯೇ ಇಲ್ಲದಂತಾಗಿರುವ ಈ ಸಂದರ್ಭದಲ್ಲಿ ರಾಜ್ಯ ಮಟ್ಟದ ವಿಶ್ವ ಮಹಿಳಾ ದಿನಾಚರಣೆಯು ತುಂಬಾ ಅರ್ಥವಂತಿಕೆಯಾದುದು.

ಕಳೆದ 7ವರ್ಷಗಳಿಂದ ರಾಜ್ಯ ಮಟ್ಟದಲ್ಲಿ ಮಹಿಳಾ ದಿನಾಚರಣೆಯನ್ನು ಆಚರಿಸಲೆಂದೇ ಒಗ್ಗೂಡಿ ಕಾರ್ಯ ನಿರ್ವಹಿಸುತ್ತಾ ಬಂದಿರುವ ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು ಮಂಡ್ಯದಲ್ಲಿ ಮಹಿಳಾ ದಿನಾಚರಣೆಗೆ 2020 ಜೂನ್ ತಿಂಗಳಿನಿಂದ ಸಿದ್ಧತೆಯ ಸಭೆಗಳು ಆರಂಭಗೊಂಡಿತು. ಮಾರ್ಚ್ 7,8ರ ವಿಚಾರಸಂಕಿರಣ ಮತ್ತು ಸಮಾವೇಶದ ಯಶಸ್ವಿಗಾಗಿ ಕಣ್ಣೋಟದ ಕಾರ್ಯಾಗಾರ, ಅಧ್ಯಯನ ಶಿಬಿರಗಳು, ವಿದ್ಯಾರ್ಥಿ–ಯುವಜನತೆಗೆಶಾಲಾ–ಕಾಲೇಜು, ಹಾಸ್ಟೆಲ್‌ಗಳಲ್ಲಿ ಅರಿವಿನಪಯಣ ನಡೆಸಲಾಯಿತು. ಲಿಂಗ ತಾರತಮ್ಯದ ವಿರುದ್ದ ಸಂವೇದನೆಗೊಳಿಸುವ ನಿಟ್ಟಿನಲ್ಲಿ ಸ್ತ್ರೀಶಕ್ತಿ ಸ್ವಸಹಾಯ ಗುಂಪಿನ  ಮಹಿಳೆಯರಿಗೆ, ಗ್ರಾಮೀಣ ಪ್ರದೇಶದ ಉದ್ಯೋಗಖಾತ್ರಿ ಮತ್ತು ಕೃಷಿ ಕೂಲಿಕಾರ ಮಹಿಳೆಯರಿಗೆ, ಅಂಗನವಾಡಿ, ಬಿಸಿಯೂಟ,

ಮನೆಕೆಲಸ, ಬೀಡಿ ಕಾರ್ಮಿಕರು, ಪೌರಕಾರ್ಮಿಕರು ಹಾಗೂ ಬೀದಿಬದಿ ವ್ಯಾಪಾರಿಗಳು, ನಗರ ಸ್ಲಂ ನಿವಾಸಿಗಳಿಗೆ, ಪೊಲೀಸ್ ಸಿಬ್ಬಂದಿಗೆ, ಗಾರ್ಮೆಂಟ್ಸ್‌ನಲ್ಲಿ ದುಡಿಯುವ ಮಹಿಳೆಯರಿಗೆ ಹೀಗೆ ಒಟ್ಟು ಜನ ಸಮುದಾಯಕ್ಕೆ ಅರಿವಿನ ಪಯಣ ಕಾರ್ಯಕ್ರಮವನ್ನು ನೂರಕ್ಕೂ ಹೆಚ್ಚು ಸ್ಥಳಗಳಲ್ಲಿ ನಡೆಸಲಾಯಿತು. ಬೆವರಿನ ಮಹತ್ವ ಸಾರುವಕಥೆ, ಹೆಣ್ಣು ಮಕ್ಕಳ ಮೇಲೆ ನಡೆಯುತ್ತಿರುವ ಅತ್ಯಾಚಾರ, ಲೈಂಗಿಕ ದೌರ್ಜನ್ಯಗಳ ಕುರಿತು ನೀಲಿರಿಬ್ಬನ್ ಹಾಗೂ ಕೌಟುಂಬಿಕ ದೌರ್ಜನ್ಯ ಕುರಿತು ದುರ್ಗಿರೂಪಕವು ನೋವುಂಡ ಮಹಿಳೆಯರು ಮನ ಬಿಚ್ಚಿ ಮಾತನಾಡುವಂತೆ ಮಾಡಿ ಅವರ ಕಣ್ಣಾಲಿಗಳು ತೇವಗೊಂಡದ್ದು ನಿಜಕ್ಕೂ ಮನಕಲಕುವಂತಿತ್ತು.

ಮಹಿಳಾ ದಿನದ ಕಾರ್ಯಕ್ರಮಕ್ಕೆ ಕರ ಪತ್ರ ಹಂಚುವುದು ಸಾವಿರಾರು ಸಂಖ್ಯೆಯಕರ ಪತ್ರ ಹಾಗೂ ಪುಸ್ತಕ ಮಾರಾಟವು ಉತ್ತಮ ಅನುಭವ ನೀಡಿತು. ಜಿಲ್ಲೆಯ 7ತಾಲ್ಲೂಕು ಕೇಂದ್ರಗಳಲ್ಲಿ ನಡೆಸಿದ "ಕಪ್ಪು ಉಡುಪಿನಲ್ಲಿ ಮಹಿಳೆ" ಮೌನಜಾಗೃತಿ, ಉರಿಯುತ್ತಿರುವ ಮೇಣದ ಬತ್ತಿಯು ಆವರಿಸಿದ  ಕತ್ತಲನ್ನು ಸೀಳಿ ಬೆಳಕು ಚೆಲ್ಲುತ್ತಿತ್ತು. ಅಲ್ಲಲ್ಲಿ ನಿಂತು ನೋಡುತ್ತಿದ್ದ ಜನ ಬೆಳಕಿನತ್ತ ಧಾವಿಸಿದರು. ಬಸ್‌ನಲ್ಲಿ ಸಂಚರಿಸುವವರು ತಿರುಗಿ ನೋಡುತ್ತಿದ್ದುದ್ದು ಮೌನಕ್ಕೆ ಮೌಲ್ಯ ಹೆಚ್ಚಿಸಿತು.ಅಲ್ಲಿ ನೆರೆದಿದ್ದ ಜನರ ಸ್ಮೃತಿಪಟಲದಲ್ಲಿ ಉಳಿಯುವಂತಾಯಿತು. ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯವನ್ನು ಹಿಮ್ಮೆಟ್ಟಿಸುವ ಶಕ್ತಿಯನ್ನು ದುಪ್ಪಟ್ಟುಗೊಳಿಸುವಂತಿತ್ತು.

ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಮಂಡ್ಯ ಹಾಗೂ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ಹೊರಾವರಣ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಮಂಡ್ಯ ಸಹಯೋಗದಲ್ಲಿ, ಮಾರ್ಚ್ 7ರಂದು ನಡೆದ, ಮಹಿಳಾ ಬದುಕು ಪಲ್ಲಟಗಳು ವಿಚಾರ ಸಂಕಿರಣವನ್ನು ಉದ್ಘಾಟನೆ ಮಾಡಿದ ಸ್ತ್ರೀವಾದಿ ಚಿಂತಕಿ ವೋಲ್ಗಾರವರು, "ಪುರುಷರನ್ನು ಮನೆಯಲ್ಲಿಯೇ ಕೂಡಿಹಾಕಿ, ರಾತ್ರಿಗಳನ್ನು, ಬೀದಿಗಳನ್ನು, ನಾವು ವಶಪಡಿಸಿಕೊಳ್ಳಬೇಕೆಂದರು. ಈ ಹಗಲುಗಳು, ಈ ಇರುಳುಗಳು ನಮ್ಮವು, ಈ ಬೀದಿಗಳೂ ನಮ್ಮವು."ಅದನ್ನು ಸಾಕಾರಗೊಳಿಸಿಕೊಳ್ಳಲು, ಎಲ್ಲಾ ಮಹಿಳೆಯರು ಮುಂದಾಗಬೇಕೆಂದು ಕರೆ ನೀಡಿದರು. ಪ್ರೊ.ಸಬಿಹಾ ಭೂಮಿಗೌಡ ಕುಲಪತಿಗಳು ಕ.ರಾ.ಅ.ಮ.ವಿ.ವಿ. ವಿಜಯಪುರರವರು ಉದ್ಘಾಟನೆ ಮತ್ತು 'ಹೆಣ್ಣೋಟದ ಹೆಗ್ಗಳಿಕೆ' ಪುಸ್ತಕ ಬಿಡುಗಡೆ ಮಾಡಿದರು. ಅಧ್ಯಕ್ಷತೆ ವಹಿಸಿದ್ದ ಮೀರಾ ಶಿವಲಿಂಗಯ್ಯರವರು ಕೌಟುಂಬಿಕ, ಸಾಮಾಜಿಕ, ರಾಜಕೀಯ ಹಾಗೂ ಔದ್ಯೋಗಿಕದಂತಹ ವಿಭಿನ್ನ ನೆಲೆಯ ಹಲವು ಆಯಾಮದ ಬದುಕಿನ ಪಲ್ಲಟಗಳ ವಿಚಾರ ಸಂಕಿರಣ ಮತ್ತು ಮಂಡ್ಯ ನೆಲದ ಅನುಭವ ಕಥನಗಳು ಸಮಾನತೆಯತ್ತ ಹೆಜ್ಜೆಯನ್ನಿಡುವ ಮನಸ್ಸುಗಳಿಗೆ ಸಂವೇದನೆಗೊಳಿಸುವ ವಿಚಾರ ಮಂಥನವಾಗಿತ್ತು. 1993ರಲ್ಲಿ ಮೊಟ್ಟ ಮೊದಲು ಬೆಂಗಳೂರಿನಲ್ಲಿ ಕಪ್ಪುಉಡುಗೆ ಪ್ರದರ್ಶನ ನಡೆಸಿದ

ರೂವಾರಿ ಹೋರಾಟಗಾರ್ತಿ ಕಾರೀನ್ ಕುಮಾರ್ ಮತ್ತು ಬೀಡಿಕಾರ್ಮಿಕರ ನಾಯಕಿಯಾದ ರಜಿಯಾಬೇಗಂ ರವರು ಮಾರ್ಚ್ 7ರ ಸಂಜೆ ಡಾ.ರಾಜೇಂದ್ರ ಪ್ರಸಾದ್ ವೃತ್ತದಲ್ಲಿ (ಸಂಜಯ ಸರ್ಕಲ್) ಕಪ್ಪು ಉಡುಗೆಯಲ್ಲಿ ಮಹಿಳೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಮಹಿಳೆ ಜಗತ್ತಿನ ಒಳಿತಿನಲ್ಲಿ ತನ್ನಾತ್ಮದ ಒಳಿತನ್ನು ಕಂಡುಕೊಂಡು, ಗಂಡು ಹೆಣ್ಣಿನ ನಡುವಿನ ಗೋಡೆಗಳು ಕರಗಿ ಅವರಿಬ್ಬರೂ ಪ್ರಬುದ್ಧವಾದ ಸಮಸ್ತರದ ಬದುಕು ನಡೆಸಬೇಕಾದ ಕಾಲಬಂದಿದೆ.

ಖ್ಯಾತ ಹೋರಾಟಗಾರ್ತಿ ಶಬ್ನಂ ಹಶ್ಮಿಯವರು ಬಹಿರಂಗ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಾ, ವರದಕ್ಷಿಣೆ ಮತ್ತು ಹೆಣ್ಣು ಭ್ರೂಣಹತ್ಯೆ ವಿರುದ್ಧ ಮನೆಯಿಂದಲೇ ಬದಲಾವಣೆಯ ರಣಕಹಳೆ ಮೊಳಗಬೇಕೆಂದು ಕರೆಯಿತ್ತರು. ಅಧ್ಯಕ್ಷತೆವಹಿಸಿದ್ದ ಸುನಂದ ಜಯರಾಂರವರು ಮಾತನಾಡುತ್ತ ಜಗತ್ತಿನಾದ್ಯಂತ ಮಹಿಳಾ ಸ್ಥಾನ ಗಟ್ಟಿಗೊಳಿಸುವ ಸಂವಿಧಾನಾತ್ಮಕ ಸಮಾನ ಅವಕಾಶ ಪಡೆಯಲು ಸಿದ್ಧಳಾಗಬೇಕೆಂದು ಕರೆಯಿತ್ತರು.

ಮಾರ್ಚ್ 8ರ ಮಹಿಳಾ ದಿನದ ಮೆರವಣಿಗೆ ಮತ್ತು ಸಮಾವೇಶವು ಮಹಿಳಾ ಧ್ವನಿಯಾಗಿ ಮೂಡಲು ಸಾಕ್ಷಿಯಾಯಿತು. ಮಹಿಳಾ ದಿನದ ಅತಿ ಮುಖ್ಯ ಆಕರ್ಷಣೆಯೆಂದರೆ ಅದು ಮೆರವಣಿಗೆ. ಮಹಿಳೆಯರ ಒಟ್ಟುಶಕ್ತಿಯನ್ನು ಪ್ರದರ್ಶಿಸುವ ಪ್ರಮುಖ ಅಸ್ತ್ರವೂ ಹೌದು. ಮಂಡ್ಯ ಜಿಲ್ಲೆ ಹಾಗೂ ರಾಜ್ಯದ ವಿವಿಧೆಡೆಯಿಂದ ಅಣಿನೆರೆದ ಮಹಿಳೆಯರು ಮೆರವಣಿಗೆಗೆ ಸಜ್ಜುಗೊಂಡು ನಿಂತರು.

ಲೇಖಕಿ ಹೆಚ್.ಎಸ್.ಅನುಪಮಾರವರ ನಮ್ಮ ನಡಿಗೆ ಕೋಲಾರದೆಡೆಗೆ, ಒಕ್ಕೂಟದ ನಡಿಗೆ ಕೋಲಾರದೆಡೆಗೆ, ಮಂಡ್ಯಾದ ನಡಿಗೆ ಕೋಲಾರದೆಡೆಗೆ ಎನ್ನುವ ಘೋಷಣೆಯೊಂದಿಗೆ, 2021ರ ಮಾರ್ಚ್ 8ರಂದು ಕೋಲಾರದಲ್ಲಿ ನಡೆಯುವ, ಮುಂದಿನ ಮಹಳಾ ದಿನದ ಆಚರಣೆಗೆ ಮಂಡ್ಯದ ಸರ್.ಎಂ.ವಿ.ಪ್ರತಿಮೆಯ ಪಕ್ಕದಲ್ಲಿ, ರುಕ್ಮಿಣಮ್ಮ ಬಂದಿಗೌಡ ಹಕ್ಕೊತ್ತಾಯ ಜಾಥಾ ವೇದಿಕೆಯಲ್ಲಿ, ಚಿಂತಕಿ ಡಾ.ಲೀಲಾ ಅಪ್ಪಾಜಿಯವರು ಕೋಲಾರದ ನೇತ್ರಾವತಿ ಅವರ ತಂಡಕ್ಕೆ ಗಿಡ ಹಸ್ತಾಂತರ ಮಾಡಿದರು. ಗಟ್ಟಿಧ್ವನಿ ದಿಟ್ಟನಡೆ ಘನತೆವೆತ್ತ ಬದುಕು, ಕರ್ನಾಟಕರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ ಜಿಂದಾಬಾದ್ ಎಂದು ಚಿಂತಕಿ ದು. ಸರಸ್ವತಿಯವರು ನೀಡಿದ ಘೋಷಣೆ ತರುವಾಯ ವಾಣಿ ಪೆರಿಯೋಡಿಯವರು ಕಲಾತ್ಮಕವಾಗಿ ರಚಿತಗೊಂಡ, ಜಾಥಾ ಬ್ಯಾನರನ್ನು ಖ್ಯಾತ ರೈತ ಹೋರಾಟಗಾರ್ತಿ ಅನುಸೂಯಮ್ಮ ಮತ್ತು ಹಿರಿಯ ಪೌರ ಕಾರ್ಮಿಕರಾದ ಅಮ್ಮಯ್ಯಮ್ಮರವರ ಕೈಗಿತ್ತರು. ವಿಭಿನ್ನ ವಲಯದ ಈ ಇಬ್ಬರೂ ಬ್ಯಾನರ್ ಅನಾವರಣಗೊಳಿಸಿದರು. ಮಹಿಳೆ ಎಲ್ಲಾ ರಂಗದಲ್ಲೂ ತನ್ನ ಛಾಪನ್ನು ಮೂಡಿಸಿದ್ದಾಳೆ. ಹಾಗೆಯೇ ರಾಜಕೀಯ ಕ್ಷೇತ್ರದಲ್ಲಿಯೂ ತನ್ನ ಛಾಪು ಮೂಡಿಸಿದರೆ ರಾಜಕೀಯ ಭ್ರಷ್ಟಾಚಾರವನ್ನು ಹಿಮ್ಮೆಟ್ಟಿಸಬಹುದು. ಹಾಗಾಗಿ ಲೋಕಸಭೆ ಹಾಗೂ

ವಿಧಾನಸಭೆಯಲ್ಲಿ ಮಹಿಳೆಯರು ತಮ್ಮ ಛಾಪು ಮೂಡಿಸಬೇಕೆಂದು ರೈತ ಹೋರಾಟಗಾರ್ತಿ ಅನುಸೂಯಮ್ಮ ರವರು ಕರೆ ನೀಡಿದರು.

ಮಂಡ್ಯ ಸಮಾವೇಶಕ್ಕೆ ಮೊಟ್ಟ ಮೊದಲಿಗೆ ಮಂಡ್ಯದಲ್ಲಿಯೇ ತಯಾರಾದ ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋದಿ ಒಕ್ಕೂಟದ ಬಾವುಟ, ಬ್ಯಾನರ್ ಹಿಡಿದು ಮಹಿಳಾ ಹಕ್ಕೊತ್ತಾಯದ ಘೋಷಣೆಗಳ ಫಲಕಗಳೊಂದಿಗೆ ನಗಾರಿ ಬಾರಿಸುತ್ತಾ, ತಮಟೆ ತಾಳಕ್ಕೆ ಕುಣಿತ ಹಾಕುತ್ತಾ, ಮೆರವಣಿಗೆ ಹೊರಡುತ್ತೇವೆ ಎಂಬ ಹಾಡು ಹಾಡುತ್ತಾ ಸಾಗಿದರು. ಮಹಿಳಾ ಮೆರವಣಿಗೆಗೆ ಮಂಡ್ಯ ನಗರದ ಮುಖ್ಯರಸ್ತೆ ಹಾಗೂ ಪ್ರಮುಖ ಬೀದಿಗಳಲ್ಲಿ ಸುಡುವ ಬಿಸಿಲನ್ನೂ ಲೆಕ್ಕಿಸದೆ, ಮೆರವಣಿಗೆಯ ಉದ್ದಕ್ಕೂ' ಹೆಣ್ಣು ಮಾರಾಟದ ಸರಕಲ್ಲ', 'ಭೋಗದ ವಸ್ತುವಲ್ಲ', 'ಹೆಣ್ಣು ಗಂಡಸಿನಂತೆಯೇ ಮನುಷ್ಯಳು','ಗಂಡಿನ ಗುಲಾಮಳಲ್ಲ'ಎಂದು ಸಾರಿಹೇಳುತ್ತಾ 'ನಮ್ಮ ಉಡುಪು ನಮ್ಮ ಹಕ್ಕು', 'ಅತ್ಯಾಚಾರ ಮುಕ್ತ, ಶೋಷಣೆ ಮುಕ್ತ ಸಮಾಜ ನಮ್ಮದಾಗಲಿ', 'ನಮ್ಮ ಮಗಳು ಜಗದಬೆಳಕು', 'ನಮ್ಮಲಿಲ್ಲ ಹಿಂದೂರಕ್ತ, ನಮ್ಮಲಿಲ್ಲ ಮುಸ್ಲಿಂ ರಕ್ತ, ನಮ್ಮಲಿಲ್ಲ ಕ್ರೈಸ್ತರಕ್ತ, ನಮ್ಮಲ್ಲಿರುವುದ ಕೆಂಪು ರಕ್ತ, ಅದುವೆ ನೋಡಿ ಮಾನವರಕ್ತ', 'ಸಮಾನತೆಯಡೆಗೆ ನಮ್ಮ ನಡಿಗೆ'ಎನ್ನುವ ಘೋಷಣೆಗಳನ್ನು ಮುಗಿಲೆತ್ತರಕ್ಕೆ ಮೊಳಗಿಸುವ ಮೂಲಕ ಸಮಾನತೆಯ ಸಂದೇಶ ಸಾರುತ್ತ ಬಹಿರಂಗ ಸಮಾವೇಶದ ವೇದಿಕೆಯತ್ತ ಸಾಗಿ ಬಂದರು. 2020 ಮಾರ್ಚ್ 8ರ ವಿಶ್ವ ಮಹಿಳಾ ದಿನದ ಜಾಥಾವು ಮಂಡ್ಯ ನೆಲದಲ್ಲಿ ಬಹಳ ಅರ್ಥ ಪೂರ್ಣವಾಗಿ ನೆರವೇರಿತು.

## ಕಪ್ಪು ಉಡುಗೆಯಲ್ಲಿ ಮಹಿಳೆಯರು

**ಜ್ಯೋತಿ,** ಮಹಿಳಾ ಮುನ್ನಡೆ

ಮಂಡ್ಯದಲ್ಲಿ ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ವತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಮಾಡಲು ತೀರ್ಮಾನಿಸಿದಾಗ ಮಹಿಳಾ ಮುನ್ನಡೆ ತಂಡದ ಜೊತೆಗೆ ಬಂದ ಜವಾಬ್ದಾರಿಯನ್ನು ನಿಭಾಯಿಸುವುದರಲ್ಲಿ ಒಂದು ಬಗೆಯ ಹೆಮ್ಮೆ, ಸಂತೋಷ ಎನಿಸಿತು.

ಕಾರ್ಯಕ್ರಮದ ತಯಾರಿಯ ಭಾಗವಾಗಿ ಅರಿವಿನ ಪಯಣ ಕಾರ್ಯಕ್ರಮದಲ್ಲಿ ಹಾಡು, ಕಥೆ ಮತ್ತು ನಾಟಕಗಳನ್ನು ಪ್ರದರ್ಶಿಸುವ ಅವಕಾಶ ಸಿಕ್ಕಿದ್ದು ನನ್ನ ಕಲಿಕೆಗೂ ನೆರವಾಯಿತು. ಇದೆಲ್ಲದರ ಜೊತೆಗೆ ಈಗ ನಾನು ಹೇಳಬೇಕೆಂದಿರುವುದು ವಿಶಿಷ್ಟವಾದ 'ಕಪ್ಪುಡುಗೆಯಲ್ಲಿ ಮಹಿಳೆಯರು' ಕಾರ್ಯಕ್ರಮದ ಬಗ್ಗೆ. ಈ ಕಾರ್ಯಕ್ರಮವು ಮಹಿಳೆಯರ ಧೃಡತೆಯ ಸಂಕೇತ ಎಂದು ನನ್ನ ಅನಿಸಿಕೆ. ಪಾಶ್ಚಿಮಾತ್ಯರು ವರ್ಣಬೇಧ ನೀತಿಯನ್ನು

ವಿರೋಧಿಸಿ, ಕಪ್ಪು ಮಹಿಳೆಯರು ಪ್ರಾರಂಭಿಸಿದ ಕಪ್ಪು ಉಡುಗೆಯ ಪ್ರತಿರೋಧ, ಕ್ರಮೇಣ ಹೆಣ್ಣು ಮಕ್ಕಳ ಮೇಲಿನ ಎಲ್ಲಾ ದಮನಕ್ಕೂ ಪ್ರತಿರೋಧವಾಯಿತು. ಹೆಣ್ಣು ಮಕ್ಕಳ ಮೇಲಿನ ಶೋಷಣೆಯ ವಿರುದ್ಧ ನಾಲ್ಕೇ ಜನ ಸೇರಿ ಕಪ್ಪು ಉಡುಪಿನಲ್ಲಿ ಪ್ರತಿಭಟಿಸಿದರೂ ಕೂಡಾ, ಸಮಾಜದಲ್ಲಿನ ಮನಸ್ಸುಗಳಿಗೆ ಅದೊಂದು ಗಟ್ಟಿಯಾದ ಸಂದೇಶ ರವಾನೆ ಮಾಡುತ್ತದೆ ಅನಿಸುತ್ತದೆ.

ಜೊತೆಗೆ ಸಮಾಜದ ಸಮಕಾಲೀನ ಸಮಸ್ಯೆಗಳಿಗೆ ಸದಾ ಸ್ಪಂದಿಸಬೇಕೆಂಬ ನಿಲುವನ್ನು ಒಕ್ಕೂಟ ಹೊಂದಿರುವುದರಿಂದ, ಈ ಬಾರಿಯ ಮಹಿಳಾ ದಿನದ ಸಂದರ್ಭದಲ್ಲಿ ನಾಗರಿಕತ್ವ ತಿದ್ದುಪಡಿ ಕಾಯ್ದೆಯ ಮೂಲಕ ದೇಶದ ಅಂಚಿಗೊತ್ತಲ್ಪಟ್ಟ ಎಲ್ಲ ಸಮುದಾಯಗಳ ನಾಗರಿಕತ್ವವನ್ನೇ ಸರ್ಕಾರ ಅಮಾನತ್ತಿನಲ್ಲಿಡುವಂತಹ ತಪ್ಪು ಹೆಜ್ಜೆ ಮುಂದಿಟ್ಟಿದ್ದನ್ನು ಪ್ರಶ್ನಿಸುತ್ತಾ, ಕಪ್ಪು ಉಡುಪಿನಲ್ಲಿ ಮಹಿಳೆಯರು ಕಾರ್ಯಕ್ರಮದ ಥೀಮ್ ಆಗಿ 'ಈ ದೇಶ ನಮ್ಮದು, ನಾವೆಲ್ಲ ಭಾರತೀಯರು' ಎನ್ನುವ ಸಂದೇಶ ನೀಡಲು ನಿರ್ಧರಿಸಿದ್ದು ಕೂಡಾ ಬಹಳ ಮಹತ್ವದ ಸಂಗತಿಯಾಗಿತ್ತು.

ಮಂಡ್ಯದಲ್ಲಿ ಪ್ರತಿ ತಾಲೂಕುಗಳಲ್ಲೂ ಕಪ್ಪು ಉಡುಪನ್ನು ಧರಿಸಿ ಮೇಣದ ಬತ್ತಿ ಹಿಡಿದು ಮೌನವಾಗಿ ನಿಲ್ಲುತ್ತಿದ್ದದ್ದು, ಅದೆಷ್ಟೋ ಹೆಣ್ಣು ಮಕ್ಕಳು ಮನೆಯೊಳಗಿನ ಹಿಂಸೆಯನ್ನು ಮೌನವಾಗಿ ಅನುಭವಿಸುವಾಗ ಮಂದ ಬೆಳಕಿನ ಕೆಳಗೆ ಹರಿದು ಮರೆಯಾಗುವ ಅವರ ಕಣ್ಣೀರಿನ ಸಂಕೇತ ಎನ್ನುವಂತೆ ಗೋಚರಿಸುತ್ತಿತ್ತು. ಮನೆಯೊಳಗೆ ಹೆಣ್ಣುಮಕ್ಕಳು ಮೌನವಾಗಿರುತ್ತಾರೆ ಎಂಬುದರ ಅರ್ಥ ಅವರು ತಮ್ಮ ಮೇಲಿನ ಶೋಷಣೆ–ದಮನ–ದೌರ್ಜನ್ಯಗಳನ್ನು ಒಪ್ಪಿದ್ದಾರೆ ಎಂದಲ್ಲ; ಆ ಮೌನಕ್ಕೂ ಒಂದು ಮಹತ್ವವಿದೆ ಮತ್ತು ಅವರು ಮನಸ್ಸು ಮಾಡಿದರೆ ಅವೆಲ್ಲವಕ್ಕೂ ಕೊನೆ ಹಾಡಬಲ್ಲರು ಎಂಬ ನಿರ್ಧಾರದ ಪ್ರತೀಕವೇ ಕಪ್ಪು ಉಡುಪಿನಲ್ಲಿ ಮಹಿಳೆಯರು ಕಾರ್ಯಕ್ರಮ ಎಂಬುದು ನನ್ನ ಭಾವನೆ.

'ನಮ್ಮ ಮೌನ ಪ್ರತಿರೋಧದ ಮೂಲಕವೂ ಪ್ರಶ್ನಿಸುವ ಶಕ್ತಿ ನಮಗಿದೆ; ಉರಿಯುವ ಮೇಣದ ಬತ್ತಿಗಳು ನಮ್ಮೊಡಲ ಕಿಚ್ಚಿನ ಪ್ರತಿರೂಪ; ಈ ಬೆಳಕಿನಲ್ಲಿ ನಾವು ನಮ್ಮ ಬಿಡುಗಡೆಗಾಗಿ ಮುಂದಡಿಯಿಡುತ್ತೇವೆ' ಎಂಬ ಸಂದೇಶ ನೀಡುವ ಈ ಕಾರ್ಯಕ್ರಮ ಮೌನದಲ್ಲೇ ನೋಡುಗರನ್ನು ಕಲಕುತ್ತಾ ಬಹಳವೇ ಅರ್ಥಪೂರ್ಣವಾಗಿ ಮೂಡಿಬಂದಿತು.

ಒಕ್ಕೂಟದ ಎಲ್ಲಾ ಹಿರಿಯರು ಸೇರಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಯಾವೆಲ್ಲ ಕಾರ್ಯಕ್ರಮಗಳು ಇದ್ದರೆ ಈ ಸಮಾಜಕ್ಕೆ ಮನ ಮುಟ್ಟುತ್ತವೆ ಎಂದು ಆಯ್ದು ಜೋಡಿಸಿದ ಎಲ್ಲ ಚಟುವಟಿಕೆ ಕಾರ್ಯಕ್ರಮಗಳು ಅರ್ಥಗರ್ಭಿತವಾಗಿ ಮಹಿಳಾ ದಿನಾಚರಣೆಯನ್ನು ಆಚರಿಸಲು ಮತ್ತು ಯಶಸ್ವಿಗೊಳಿಸಲು ಸಹಕಾರಿಯಾದವು. ಈ ಯಶಸ್ಸಿಗಾಗಿ ಶ್ರಮಿಸಿದ ನನ್ನ ಎಲ್ಲಾ ಹೋರಾಟದ ಒಡನಾಡಿಗಳಿಗೆ ಅಭಿನಂದನೆಗಳನ್ನು ಹೇಳಲು ಬಯಸುತ್ತೇನೆ.

# ಅರ್ಥಪೂರ್ಣ ಸಮಾವೇಶ

**ಶ್ರೀಲತಾ**

2013 ರಲ್ಲಿ 'ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ' ರಚನೆಯಾದ ನಂತರ ಮಂಡ್ಯದ ಹಲವು ಮಹಿಳಾ ಸಂಘಟನೆಗಳು, ಸ್ವಯಂ ಆಸಕ್ತಿಯಿಂದ ರಾಜ್ಯ ಒಕ್ಕೂಟದ ಮಹಿಳಾ ದಿನಾಚರಣೆಯಲ್ಲಿ ಭಾಗವಹಿಸಿದ್ದಲ್ಲದೆ ತಮ್ಮನ್ನು ಒಕ್ಕೂಟದಲ್ಲಿ ಗುರುತಿಸಿಕೊಂಡರು. ಹಾಗೆ ಭಾಗಿಯಾದ ಮಹಿಳಾ ಸಂಘಟನೆಯಲ್ಲಿ ನಮ್ಮ ಸ್ಪಂದನಾ ಮಹಿಳಾ ಸಂಘಟನೆಯೂ ಒಂದು. ಸಮಾನ ಮನಸ್ಕ ಸ್ನೇಹಿತರೆಲ್ಲರೂ ಒಂದುಗೂಡಿ ಪ್ರಾರಂಭಿಸಿದ್ದ ಈ ಜಿಲ್ಲಾ ಸಂಘಟನೆಯಲ್ಲಿ ಸುನಂದಾಜಯರಾಂ, ನಿರ್ಮಲಾ ಚಿಕ್ಕೇಗೌಡ, ಶಿವಮ್ಮ, ನಾಗರೇವಕ್ಕ, ಪದ್ಮ, ಪ್ರೇಮ, ನಾನು ಎಲ್ಲರೂ ಸಂಚಾಲಕರಾಗಿ 1997 ರಿಂದ ಕ್ರಿಯಾಶೀಲರಾಗಿದ್ದೆವು. ಮಂಗಳೂರಿನಲ್ಲಿ ಪ್ರಾರಂಭವಾದ ಈ ಮೊದಲ ಸಮಾವೇಶದಿಂದ ಹಿಡಿದು ಮೈಸೂರು, ಬೆಂಗಳೂರು, ವಿಜಯಪುರ, ಕೊಪ್ಪಳ, ಶಿವಮೊಗ್ಗ, ಧಾರವಾಡಗಳಲ್ಲಿ ಸಮಾವೇಶದಲ್ಲಿ ಭಾಗಿಯಾಗಿ ಈ ವರ್ಷ ನಮ್ಮ ಜಿಲ್ಲೆಗೆ ಈ ಅವಕಾಶ ತೆಗೆದುಕೊಂಡು ಬಂದಿದ್ದೇವೆ. ಕೊಪ್ಪಳದ ಸಮಾವೇಶದಲ್ಲಿ ನಾವು ಭಾಗಿಯಾಗಿದ್ದಾಗಲೇ ಜಿಲ್ಲೆಯ ಮಹಿಳಾ ಮುನ್ನಡೆಯ ಮಲ್ಲಿಗೆ, ಪೂರ್ಣಿಮ, ಗಾಟು ಸಂಸ್ಥೆಯ ರತ್ನಮ್ಮ ಜಾಗೃತಿ ಮಹಿಳಾ ಮಂಡಳಿಯ ನಾನು ಮಂಡ್ಯ ಜಿಲ್ಲೆಯ ಇತರ ಸ್ವಯಂ ಸೇವಾ ಪದಾಧಿಕಾರಿಗಳು ಮಾತನಾಡಿಕೊಂಡೆವು, ನಮ್ಮ ಜಿಲ್ಲೆಯಲ್ಲಿ ಎಷ್ಟೊಂದು ಸಂಘಟನೆಗಳಿದ್ದರೂ ಎಲ್ಲ ಚದುರಿದಂತೆ ಕಾರ್ಯ ನಿರ್ವಹಿಸುತ್ತಿವೆ. ಎಲ್ಲರ ಕಾರ್ಯಕ್ಷೇತ್ರ, ಉದ್ದೇಶ ಒಂದೇ ಆಗಿದ್ದರೂ ಚದುರಿದ ಧ್ವನಿಗಳಿಂದ ಗಟ್ಟಿತನದ ಅನುಭವ, ಹೋರಾಟದ ಕಾವು ತಿಳಿಯುವುದಿಲ್ಲ. ನಾವೆಲ್ಲ ಮಹಿಳಾ ಸಂಘಟನೆಗಳು ಒಂದಾಗಿ ಹೋರಾಡುವ ವೇದಿಕೆ ಸೃಷ್ಟಿಸಿಕೊಳ್ಳಬೇಕೆಂದು ಚರ್ಚಿಸಿದೆವು. ಆ ಅವಕಾಶ ನಂತರದ ಎರಡು ವರ್ಷಗಳಲ್ಲೇ ಒದಗಿಬಂದು ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು 2020ರ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ನಡೆಸುವ ಅವಕಾಶವನ್ನು ಮಂಡ್ಯ ಜಿಲ್ಲೆಗೆ ನೀಡಿರುವುದಾಗಿ 2019ರ ಧಾರವಾಡ ಸಮಾವೇಶದಲ್ಲಿ ಸಸಿ ನೀಡುವುದರೊಂದಿಗೆ ಘೋಷಿಸಿತು. ಅಂದಿನಿಂದಲೇ 2020ರ ಸಮಾವೇಶದ ಸಿದ್ಧತೆ ಆರಂಭವಾಗಿ ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು ಮಂಡ್ಯ ಜಿಲ್ಲಾ ಘಟಕದ ಕಾರ್ಯಗಳಿಗೆ ನಾಂದಿಯಾಯಿತು.

ಪ್ರತಿ ತಾಲೂಕಿನಲ್ಲೂ ಅಲ್ಲಿನ ಸ್ಥಳೀಯ ಸಂಸ್ಥೆಗಳ ಪದಾಧಿಕಾರಿಗಳನ್ನೇಲ್ಲಾ ಸೇರಿಸಿ ಎಲ್ಲ ಸಂಘ, ಸಂಸ್ಥೆಗಳನ್ನು ಒಗ್ಗೂಡಿಸಿ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ತಾಲೂಕು ಸಭೆಗಳನ್ನು ಮಾಡಲಾಯಿತು. ಮೊದಲಿಗೆ ಮದ್ದೂರು ತಾಲೂಕಿನಲ್ಲೇ

ಅದರ ಸಭೆ ನಡೆದು ಉತ್ತಮ ಪ್ರತಿಕ್ರಿಯೆಯೂ ದೊರೆಯಿತು. ಅದೇ ರೀತಿ ಮಂಡ್ಯ ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿ ಸಭೆ ನಡೆಸಿ ಸ್ಥಳೀಯ ಸಂಸ್ಥೆಗಳಲ್ಲಿ ಆ ಬಗ್ಗೆ ಅರಿವು ಮೂಡಿಸಲಾಯಿತು. "ಅರಿವಿನ ಪಯಣ" ಕಾರ್ಯಕ್ರಮದ ಬಗ್ಗೆ ಇಲ್ಲಿ ಹೇಳಲೇಭೇಕು. ಪ್ರತಿ ಹದಿನೈದು ದಿನಗಳಿಗೆ ಒಮ್ಮೆಯಂತೆ ಜಿಲ್ಲಾ ಸಭೆ ಸೇರುತ್ತಿದ್ದೆವು. ಜಿಲ್ಲೆಯಾದ್ಯಂತ ಅರಿವಿನ ಪಯಣ ಕಾರ್ಯಕ್ರಮ ನಡೆಸಲು ಮೊದಲು ಕಲಾತಂಡಗಳನ್ನು ತಯಾರು ಮಾಡಲಾಯಿತು. ಶಿವಮೊಗ್ಗ, ಕೊಪ್ಪಳದ ಗೆಳತಿಯರು ನಾಟಕ, ಗೀತೆ, ಕಥೆ ಹೇಳಲು ಪ್ರಾತ್ಯಕ್ಷತೆ ನಡೆಸಿಕೊಟ್ಟು ತರಬೇತಿಯನ್ನು ನೀಡಿದರು. ಕೆಲವು ಕಾರ್ಯಕ್ರಮಗಳಲ್ಲಿ ಅವರೂ ಸಹ ಬಂದು ಭಾಗಿಯಾದರು. ಈಶ್ವರಿ, ಅಂಜಲಿ, ಪೂರ್ಣಿಮಾ, ಜ್ಯೋತಿ, ಪುಷ್ಪಾ, ರತ್ನಮ್ಮ ಕಲಾವಿದರಾದ ಶ್ರೀಮತಿ ಮಂಜುಳಾ, ಶ್ರೀ ಹುರುಗಲವಾಡಿ ರಾಮಯ್ಯ, ಜನಾರ್ದನ್, ಸುನಂದಾಜಯರಾಂ, ಪಿ ಕುಮಾರಿ, ಶೋಭಾ, ಶ್ರೀಮತಿ ಮೀರಾಶಿವಲಿಂಗಯ್ಯ, ನಾನು ಹೀಗೆ ವಾರಕ್ಕೆ ಎರಡು ಅಥವಾ ಮೂರು ಅರಿವಿನ ಪಯಣ ಕಾರ್ಯಕ್ರಮಕ್ಕೆ ಜಿಲ್ಲೆಯಾದ್ಯಂತ ಸಂಚರಿಸಿದೆವು.

ಹಳ್ಳಿ ಪಟ್ಟಣಗಳೆನ್ನದೆ ಪ್ರೌಢಶಾಲೆ, ಪದವಿ ಪೂರ್ವ ಕಾಲೇಜು, ಪದವಿ ಕಾಲೇಜುಗಳು, ಮಹಿಳಾ ಸ್ವಸಹಾಯ ಸಂಘಗಳು, ಮಹಿಳಾ ಸಂಘಗಳು, ಕಾರ್ಮಿಕ ಸಂಘಟನೆಗಳು, ಶ್ರಮಿಕ ಕಾಲೋನಿ ಹೀಗೆ ಎಲ್ಲಾ ಸ್ತರಗಳ ಹಾಗೂ ವಿವಿಧ ವಯೋಮಾನದವರ ಮಧ್ಯೆ ಈ ಕಾರ್ಯಕ್ರಮವನ್ನು ನಡೆಸಲಾಯಿತು. ಹಾಗೂ ಅದು ಸಂಪೂರ್ಣ ಯಶಸ್ವಿಯೂ ಆಯಿತು. ಸಂವಾದ ಕಾರ್ಯಕ್ರಮದಲ್ಲಿ ಅವರು ಪಾಲ್ಗೊಳ್ಳುತ್ತಿದ್ದ ರೀತಿ ನಿಜಕ್ಕೂ ಸಂತೋಷ ತರುತ್ತಿತ್ತು. ಮಹಿಳಾ ದಿನಾಚರಣೆ ಮಹಿಳಾ ಶಕ್ತಿಯ ಪ್ರದರ್ಶನವಾದರೆ ನಿಜಕ್ಕೂ ಅವರಲ್ಲಿ ಶಕ್ತಿ ತುಂಬುವುದು ಇಂತಹ ಕಾರ್ಯಕ್ರಮಗಳಿಂದ ಎನಿಸಿತು. ಈ ಕಾರ್ಯಕ್ರಮ 2020ರ ಫೆಬ್ರವರಿವರೆಗೂ ನಿರಂತರವಾಗಿನಡೆಯಿತು.

ಮಹಿಳಾ ದಿನಾಚರಣೆಯ ಅಂಗವಾಗಿ ಒಕ್ಕೂಟದ ವತಿಯಿಂದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ನಡೆದ ವಿಚಾರಸಂಕಿರಣ ಬಹಳ ಉಪಯುಕ್ತವಾಗಿತ್ತು. "ಇಂದಿನ ಪರಿಸ್ಥಿತಿಯಲ್ಲಿ ಪುರುಷ ಕೇಂದ್ರಿತ ಸಮಾಜದ ವಿರುದ್ಧ ಮಹಿಳೆಯರು ಒಗ್ಗಟ್ಟಿನಿಂದ ಹೋರಾಟ ನಡೆಸುವುದು ಅನಿವಾರ್ಯವಾಗಿದೆ" ಎಂದ ಸಾಹಿತಿ, ಚಿಂತಕಿ, ಓಲ್ಗಾರವರ ಮಾತುಗಳು ಅರ್ಥಪೂರ್ಣವಾಗಿತ್ತು. ವಿಚಾರ ಸಂಕಿರಣದ ವಿಷಯವೇ "ಮಹಿಳಾ ಬದುಕು ಪಲ್ಲಟಗಳು". ಹೀಗಾಗಿ ಪ್ರಸ್ತುತ ಸಂದರ್ಭದಲ್ಲಿ ಹೋರಾಟದ ಹಾದಿಯಲ್ಲದೆ ಬೇರೆ ಮಾರ್ಗವಿಲ್ಲ, ಹೆಣ್ಣು ಮಕ್ಕಳ ಮೇಲೆ ನಡೆಯುವ ಎಲ್ಲ ದೌರ್ಜನ್ಯಗಳ ವಿರುದ್ಧ ದನಿಯೆತ್ತಿದ್ದರೂ ಇದನ್ನೇ ನೆಪವಾಗಿಟ್ಟುಕೊಂಡು ರಕ್ಷಣೆಯ ಹೆಸರಲ್ಲಿ ಮಹಿಳೆಯರ ಸ್ವಾತಂತ್ರ್ಯ ಹರಣವಾಗುತ್ತಿದೆ. ಸ್ವಾರ್ಥ ವ್ಯವಸ್ಥೆಯಿಂದ ಬಿಡಿಸಿಕೊಂಡು ಹೆಣ್ಣು ಸ್ವಾತಂತ್ರ್ಯ ಅನುಭವಿಸಬೇಕೆಂಬ ಅವರ ಮಾತುಗಳು ಚಿಂತನೆಗೆ ಹಚ್ಚಿದವು. ಲೇಖಕಿ ಸಬಿತಾ ಬನ್ನಾಡಿಯವರು ಮಹಿಳೆಗೆ ನೀಡಿರುವ ಪ್ರಾತಿನಿಧ್ಯವನ್ನು

ಸಾಧನೆ ಎಂದು ತಿಳಿಯಬಾರದೆಂದು ಹೇಳಿ ಅವಳ (ಹೆಣ್ಣಿನ) ಚಿಂತನೆ ಅವನದು ಆದಾಗ ಮಾತ್ರ ಎಲ್ಲಾ ಕ್ಷೇತ್ರಗಳಲ್ಲಿ ಬದಲಾವಣೆ ಸಾಧ್ಯ. ಸ್ವಾತಂತ್ರ್ಯವು ಸಾಧನೆಯ ಹೊಸ ಅಧ್ಯಾಯವನ್ನು ತೆರೆದಿಡುತ್ತವೆಯೆಂದರು. ವಿಚಾರಗೋಷ್ಠಿಯಲ್ಲಿ ಲೇಖಕಿ ಬಾನು ಮುಷ್ತಾಕ್‌ರವರೂ ಕೌಟುಂಬಿಕ ಮತ್ತು ಸಾಮಾಜಿಕ ನೆಲೆಯಲ್ಲಿ ಮಹಿಳಾ ಬದುಕು ಪಲ್ಲಟಗಳನ್ನು ಗುರುತಿಸಿದರು. ಮೂಢನಂಬಿಕೆಗಳ ಮೂಲಕ ಪಿತೃಪ್ರಧಾನದ ಎಲ್ಲಾ ಮೌಲ್ಯಗಳನ್ನು  ಮಹಿಳೆಯರ ತಲೆಗೆ ತುಂಬಿ ಆ ಮೂಲಕ ತಾವು ಮಾಡಬೇಕಾದ ಕೆಟ್ಟ ಕೆಲಸಗಳನ್ನು ಮಹಿಳೆಯರ ಮೂಲಕವೇ ಮಾಡಿಸಲಾಗುತ್ತಿದೆ ಎಂದು ನಮ್ಮ ವ್ಯವಸ್ಥೆಯ ಬಗ್ಗೆ ಆಲೋಚಿಸುವಂತೆ ಮಾಡಿದರು. ವಿಚಾರಗೋಷ್ಠಿಯಲ್ಲಿ ಪ್ರತಿಯೊಬ್ಬ ಸಂಪನ್ಮೂಲ ವ್ಯಕ್ತಿಯೂ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಗೆ ಅರ್ಥ ಮತ್ತು ಶಕ್ತಿ ತುಂಬಿದರು.

ಕಾರ್ಯಕ್ರಮ ಅದ್ಧೂರಿತನ, ಅರ್ಥಪೂರ್ಣತೆ, ಚಿಂತನೆ ಅವಕಾಶ ಪಡೆದುಕೊಂಡದ್ದಲ್ಲದೆ 'ಇನ್ನೂ ಏನೋ ಇರಬೇಕಿತ್ತು' ನಮ್ಮ ಜನಕ್ಕೆ ಇವೆಲ್ಲ ಇನ್ನೂ ತಲುಪಬೇಕಿತ್ತು ಎಂಬ ಕೊರತೆಯನ್ನೂ ಉಳಿಸಿ ಮುಗಿದೇ ಹೋಯಿತು. ನಮ್ಮಿಂದ ಕೋಲಾರ ಜಿಲ್ಲೆಗೆ ಮುಂದಿನ ವರ್ಷದ ಕಾರ್ಯಕ್ರಮ ಹಸ್ತಾಂತರಿಸಿ ಉಸಿರು ಬಿಟ್ಟು ಸುಧಾರಿಸಿಕೊಂಡು ದಿನವೆರಡು ಕಳೆವ ಹೊತ್ತಿಗೆ ಕರೋನಾದ ಅಟ್ಟಹಾಸ ದೇಶದುದ್ದಗಲಕ್ಕೂ ವ್ಯಾಪಿಸಿ ಬಿಟ್ಟಿತ್ತು. ಲಾಕ್‌ಡೌನ್‌ನಲ್ಲಿ ಅಡಗಿ ಹೋದೆವು. ಒಂದು ಅವಲೋಕನ, ಸಹಕರಿಸಿದವರಿಗೆ ವಂದನೆ ಹೇಳಲೂ ವ್ಯವಧಾನ ಕೊಡಲಿಲ್ಲ ಕರೋನ. ಎಲ್ಲವೂ ಫೋನ್ ಮೂಲಕವೇ, ಅಷ್ಟೆಲ್ಲಾ ಸಿದ್ಧತೆ, ಅದ್ದೂರಿ ಆಚರಣೆ, ಹಿಂದಿರುಗಿ ನೋಡಲೂ ಆಗದಂತೆ ತಟಕ್ಕನೆ ತಟಸ್ಥವಾದಂತೆ 'ಧೋ ಧೋ' ಎಂದು ಸುರಿದ ಮಳೆ ದಢಕ್ಕನೆ ನಿಂತು ಹೋದಂತೆ ಭಾಸವಾಯಿತು. ಅದೆಲ್ಲಾ ಸುಧಾರಿಸಿಕೊಳ್ಳುವ ವೇಳೆಗೆ ಇನ್ನೊಂದು ಮಹಿಳಾ ದಿನಾಚರಣೆ ಮುಂಬರುತ್ತಿದೆ. ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಗೆ ಜಯವಾಗಲಿ, "ಗಟ್ಟಿದನಿ, ದಿಟ್ಟನಡೆ ಘನತೆವೆತ್ತ ಬದುಕನ್ನು ನಮ್ಮದಾಗಿಸಿಕೊಂಡು ಮುಂದೆ ಸಾಗೋಣ.

# ಜಾಥಾ ಸಮಾವೇಶದ ಅನುಭವಗಳು

**ಮುದ್ದೇಗೌಡ ಗುನ್ನಾಯಕನಹಳ್ಳಿ**

ಮಾಜಿ ಜಿಲ್ಲಾಧ್ಯಕ್ಷರು,ಕರ್ನಾಟಕ ರಾಜ್ಯ ರೈತಸಂಘ, ಮಂಡ್ಯ ಜಿಲ್ಲೆ

ಗ್ರಾಮೀಣ ಪ್ರದೇಶದಲ್ಲಿ ಹುಟ್ಟಿ ಬೆಳೆದ ನನಗೆ ರೈತಮುಖಿ ಬದುಕಿನ ಬಗೆಗೆ ವಿಶೇಷವಾದ ಪ್ರೀತಿ ಹಾಗೂ ಗೌರವ ಮಹಿಳಾ ಸಮಾವೇಶ ರೈತರ ಸಮಸ್ಯೆಗಳಿಗೆ ಸ್ಪಂದಿಸಲು ಸದಾ ನನ್ನ ಮನಸ್ಸು ಹಾತೊರೆಯುತ್ತಿರುತ್ತದೆ. ನನ್ನ ಸಮಾಜಮುಖಿ ಹೋರಾಟದ ಬದುಕಿನಲ್ಲಿ ಅನೇಕ ಜಿಲ್ಲಾ ಮತ್ತು ರಾಜ್ಯ ಮಟ್ಟದ ಸಮಾವೇಶಗಳಲ್ಲಿ ಕಮ್ಮಟ ಕಾರ್ಯಗಳಲ್ಲಿ ಭಾಗಿಯಾಗಿದ್ದೇನೆ.

ಅಂತೆಯೇ ಕಳೆದ 2020 ಮಾರ್ಚ್ 7 ಹಾಗೂ 8ರಂದು ಮಂಡ್ಯ ಜಿಲ್ಲೆಯಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು ರೈತಸಂಘದ ವತಿಯಿಂದ ಆ ಕಾರ್ಯಕ್ರಮದಲ್ಲಿ ನಾನು ಕೂಡ ಪಾಲ್ಗೊಂಡಿದೆನು, ಆ ದಿನಗಳು ನನ್ನ ಬದುಕಿನ ಸಾರ್ಥಕ ದಿನಗಳು. ಮೊದಲನೆಯ ದಿನ ಬಂದಿದ್ದ ಸ್ತ್ರೀವಾದಿ ಚಿಂತಕಿ ಹಾಗೂ ಬರಹಗಾರ್ತಿಯ ದಿಕ್ಸೂಚಿ ನುಡಿಯು ನನ್ನ ಗಮನ ಸೆಳೆಯಿತು. "ಮಹಿಳಾ ಬದುಕು ಪಲ್ಲಟಗಳು" ವಿಚಾರ ಸಂಕಿರಣವು ವಿವಿಧ ಕ್ಷೇತ್ರದಲ್ಲಿ ಮಹಿಳೆಯರ ಸ್ಥಿತಿ–ಗತಿಗಳನ್ನು ನಿರೂಪಿಸುವ ತೆರೆದ ಪುಸ್ತಕವಾಗಿತ್ತು. ಗೋಷ್ಠಿಗೆ ಬಂದಿದ್ದ ಸಂಪನ್ಮೂಲ ವ್ಯಕ್ತಿಗಳ ಅನುಭವ ಕಥನಗಳು ಅವರ ವಿಮರ್ಶೆಯ ಮಾತುಗಳು ಕೌಟುಂಬಿಕ ನೆಲೆಯಿಂದ ಔದ್ಯಮಿಕ ನೆಲೆಯವರೆಗೂ ಮಹಿಳೆಯ ಬದುಕು ಪಲ್ಲಟವಾಗುತ್ತಿರುವ ರೂಪುರೇಷೆ ನನಗೆ ದೊರೆಯಿತು. ಸ್ತ್ರೀಪರ ಹೋರಾಟಗಳನ್ನು ಮಾಡಿರುವ ನನಗೆ ಮಹಿಳೆಯರ ಬದುಕಿನಲ್ಲಿ ಸಾಗಿರುವ ಬದಲಾವಣೆಗಳನ್ನು ಕೇಳಿ ಹರ್ಷಿತನಾದೆ. ಅಂತೆಯೇ ಗೋಷ್ಠಿಗಳಲ್ಲಿ ವ್ಯಕ್ತಗೊಂಡ ಮಹಿಳಾ ದೌರ್ಜನ್ಯದ ಪರಿಯನ್ನು ಕೇಳಿ ನಾನು ನೊಂದು, ನನಗೆ ನಾನೇ ವೇದನೆ ಪಟ್ಟೆ. ಪಿತೃವಾಗಿ ಗಂಡಿನ ನೆಲೆಯಲ್ಲಿ ನನ್ನ ಜವಾಬ್ದಾರಿಗಳೇನು ಎಂದು ನನಗೆ ನಾನೇ ಸ್ವವಿಮರ್ಶೆ ಮಾಡಿಕೊಂಡೆ.

ಉತ್ತಮ ದೃಷ್ಟಿಕೋನವಿಟ್ಟು ನಮ್ಮ ಜಿಲ್ಲೆಯಲ್ಲಿ ಆಯೋಜಿಸಿದ್ದ ಈ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಯಶಸ್ಸಿಗೆ ಸಹಕರಿಸಿದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ರೈತ, ದಲಿತ, ಕಾರ್ಮಿಕ ಹಾಗೂ ಪ್ರಗತಿಪರ ಸಂಘಟನೆಗಳಿಗೆ ನಾನು ಮನ ತುಂಬಿ ನಮಿಸುತ್ತೇನೆ. ಹೋರಾಟಗಾರರು ಮುತ್ಸದ್ಧಿಗಳು ಚಿಂತನಾಶೀಲರು, ದಾರ್ಶನಿಕರು ಇರುವ ನಮ್ಮ ಮಂಡ್ಯದಲ್ಲಿ ಸಾಮಾಜಿಕ ಚಿಂತನೆಯುಳ್ಳ ಇಂತಹ ಸಮಾವೇಶಗಳು ಮತ್ತೆ ಮತ್ತೆ ಜರುಗಲಿ ಎಂಬುದು ನನ್ನ ಆಶಯ.

# ಶುಭಾಶಯಗಳು

**ಲೀಲಾ ಅಪ್ಪಾಜಿ**

ಒಂದಿಷ್ಟು ವರ್ಷಗಳಿಂದ ಒಂದಷ್ಟು ಹೆಣ್ಣುಮಕ್ಕಳು ರಾಜ್ಯ ಮಟ್ಟದಲ್ಲಿ ಇನ್ನೂ ಒಂದಷ್ಟು ಹೆಣ್ಣುಮಕ್ಕಳನ್ನು ಯಾವುದಾದರೊಂದು ಜಿಲ್ಲೆಯಲ್ಲಿ ಎರಡು ದಿನ ಒಟ್ಟುಗೂಡಿಸಿಕೊಂಡು ತಮ್ಮ ಹಾದಿಯ ಬವಣೆಗಳನ್ನು ಬಿಚ್ಚಿಡುವುದು ಮಾತ್ರವಲ್ಲದೆ ಸಾಧನೆಗಳ ಅರಿವನ್ನೂ ವಿವರಿಸಿ ಮುಂದೆ ಹೋಗಬೇಕಾದ ದಾರಿಗೆ ಹೆಜ್ಜೆಗಳನ್ನು ದಿಟ್ಟತನದಿಂದ ಇಡಲು ಧೈರ್ಯ ಸ್ಥೈರ್ಯ ತುಂಬುವ ಧೀಮಂತೆಯರಿಂದ ಸ್ಫೂರ್ತಿ ತುಂಬಿಕೊಳ್ಳುತ್ತಿದ್ದಾರೆ. ಮಂಗಳೂರಿನಿಂದ ಪ್ರಾರಂಭವಾದ ಈ ಅರಿವಿನ ಪಯಣ ಹಲವು ಹಲವು ಜಿಲ್ಲೆಗಳಲ್ಲಿ ತಲುಪಿ 2020ರಲ್ಲಿ ಮಂಡ್ಯದತ್ತ ಬಂದಿತು. ಹಲವು ಸಂಘಟನೆಗಳ ನಾಯಕಿಯರು, ಸದಸ್ಯೆಯರು ಮಾತ್ರವಲ್ಲದೆ ಇಂತಹ ಛಲಗಾರ್ತಿಯರಿಗೆ ಬೆನ್ನುಕಟ್ಟುವ ಸೋದರರೂ ಪೂರ್ಣ ಮನಸಿನಿಂದ ಸಜ್ಜಾಗಿ ಸಂಪೂರ್ಣ ಯಶಸ್ಸಿಗೆ ಕಂಕಣಬದ್ಧರಾದರು.

ಆಗಿಂದಾಗ್ಗೆ ಮೀಟಿಂಗ್ ಗಳು. ಮುಂದಿನ ಕೆಲಸ ಸುಗಮವಾಗಿ ಸಾಗಲು ಎಲ್ಲರೊಡನೆ ಚರ್ಚೆಗಳು, ನಿರ್ಧಾರಗಳು. ಆಗಾಗ್ಗೆ ರಾಜ್ಯಸಮಿತಿಯವರ ಸಲಹೆ ಸೂಚನೆಗಳು. ತಾಲೂಕುವಾರು ಸಭೆಗಳು... ಜಾಗೃತಿ ಮೂಡಿಸುತ್ತಾ ಒಗ್ಗೂಡಿಸುವ ದಾರಿಗಳು ಸುಸ್ಪಷ್ಟವಾಗುತ್ತಾ ಹೋಯಿತು. ಇದೆಲ್ಲದರ ಒಟ್ಟು ಪರಿಣಾಮ ಹಲವು ಮನಸುಗಳ ಹಲವು ಕನಸುಗಳು ನನಸಾಗುವ ಹಂತ ತಲುಪಿತು.

ಕೆಲವು ಸಭೆಗಳಿಗೆ ನಾನೂ ಹೋದೆ. ಅವರ ಆಲೋಚನೆಗಳು ಕಾರ್ಯಗತವಾಗಲಿರುವ ಉತ್ಸಾಹದ ಹುಮ್ಮಸ್ಸಿನ ಅಲೆಗಳನ್ನು ಕಣ್ಣಾರೆ ಕಂಡೆ. ಆದರೂ ನನ್ನ ಮನಸಿನ ಒಳಗೆ ಕೀಟ ಕೊರೆಯುತ್ತಲೇ ಇತ್ತು. ನೀನ್ಯಾಕೆ ಅವರಷ್ಟು ತೊಡಗಿಸಿಕೊಳ್ಳುತ್ತಿಲ್ಲ ಎಂದು. ಕಾಲು ಕೈಕೊಡುತ್ತಿದೆ ಎನ್ನುವುದು ಮುಖ್ಯ ಕಾರಣವಾಗಿತ್ತು. ಜೊತೆಗೆ ಯಾವಾಗಂದರೆ ಆವಾಗ ಹಕ್ಕಿ ಅರಸಿ ಹಾರುತ್ತಿದ್ದ ನನ್ನ ಪಯಣಗಳು. ಅವು ಪೂರ್ವ ನಿಗದಿತವಾಗಿದ್ದವು. ಇಷ್ಟಾದರೂ ಸಮಾವೇಶದ ಹೊತ್ತಿಗೆ ಯಾವ ಹಕ್ಕಿ ಟೂರೂ ಇರದ ಹಾಗೆ ಎಚ್ಚರ ವಹಿಸಿದೆ. ಎರಡೂ ದಿನ ಪೂರ್ಣವಾಗಿ ಕಾರ್ಯಕ್ರಮ ಕಣ್ಣಿಗೆ ತುಂಬಿಕೊಳ್ಳುತ್ತಾ ಮನಸಿಗೆ ಈ ಅರಿವಿನ ಪಯಣದ ಅರಿವು ನೀಡಲು ಸಜ್ಜಾದೆ. ಹಾಗೆ ಮಾಡಿದೆ ಕೂಡಾ. ವಿಚಾರ ಸಂಕಿರಣದ ಎಲ್ಲ ಮಾತಿಗೂ ಕಿವಿಯಾದೆ. ಕುಳಿತಲ್ಲೇ ಕುಳಿತೆ, ಕ್ಯಾಮೆರಾ ಕ್ಲಿಕ್ಕಿಸಿದೆ... ನನ್ನ ನೆನಪಿಗಾಗಿ ಪಟಗಳು ಬೇಕಿದ್ದವು. ಸಭೆಯ ಕಾರ್ಯಕ್ರಮದ ಜೊತೆಗೆ ಆಗಾಗ ಸಭೆಯಲ್ಲಿ ಇದ್ದವರ, ಸಂಭ್ರಮಿಸಿ ಓಡಾಡುತ್ತಿದ್ದವರ ಪಟಗಳು. ಆಗಲೂ ಬೈದುಕೊಳ್ಳುತ್ತಿದ್ದೆ ಎದ್ದು ಓಡಾಡಿಕೊಂಡು ಫೋಟೊ ತೆಗೆಯಬಾರದೆ ಎಂದು. ಆದರೆ

ಉತ್ಸಾಹದ ಬುಗ್ಗೆ ನವ್ಯಾಕಡಮೆ ಕಾರ್ಯಕ್ರಮದ ಎಲ್ಲೆಡೆ ಕ್ಯಾಮೆರಾ ತಿರುಗಿಸುತ್ತಲೇ ಇದ್ದರು... ಮತ್ತೆ ನಾನೊಬ್ಬಳು ಮಧ್ಯೆ ಏಕೆ ಎಂದು ಕುಳಿತ ಜಾಗಕ್ಕೆ ಅಂಟಿಕೊಂಡೆ.

ಇಡೀ ಕಾರ್ಯಕ್ರಮದಲ್ಲಿ ನಾ ಎದ್ದದ್ದು, ಎದ್ದು ನಿಂತಿದ್ದು ಒಮ್ಮೆ. ಮುಂದಿನ ವರ್ಷ ಸಮಾವೇಶ ನಡೆಯಲಿದ್ದ ಕೋಲಾರದ ಪ್ರತಿನಿಧಿಗಳಿಗೆ ಸಸಿ ಹಸ್ತಾಂತರ ಮಾಡುವಾಗ. ಆ ಕೆಲಸ ನನಗೆ ಒಪ್ಪಿಸಿದ ಕಾರಣ. ಉಳಿದಂತೆ ವೇದಿಕೆ ಮುಂದೆ ಸಭಿಕಳಾಗಿಯೇ ಇರುವ ನನ್ನ ನಿರ್ಧಾರಕ್ಕೆ ಬದ್ಧಳಾಗಿಯೇ ಉಳಿದೆ. ಎಲ್ಲವನ್ನೂ ಒಳಗಿಳಿಸಿಕೊಂಡೆ, ಉಳಿಸಿಕೊಂಡೆ. ನನಗೂ ಅಷ್ಟೆ ಯಾಕೆ ಯಾರಿಗೂ ಸ್ಪಷ್ಟವಾಗಿ ಅರಿವಿರಲಿಲ್ಲ... ನಾಲ್ಕೈದು ದಿನ ಕಳೆದರೆ ನಮ್ಮ ನಾಳೆಗಳು ಹೇಗಿರುತ್ತವೆ ಎಂದು. ಈಗ ಯೋಚಿಸಿದರೂ ಆತಂಕ ಎನಿಸುತ್ತದೆ. ಮಾರ್ಚ್ ಏಳು–ಎಂಟು ಕಾರ್ಯಕ್ರಮ ಮುಗಿದು ಹೋದದ್ದು ಚಂದ. ಇಲ್ಲದಿದ್ದರೆ ವರ್ಷದ ಶ್ರಮ, ಕನಸುಗಳನ್ನು ಕೊರೊನಾ ಕೊರೆಕೊರೆದು ಕತ್ತರಿಸಿ ಹಾಕುತ್ತಿತ್ತು. ಬದುಕಿನುದ್ದಕ್ಕೂ ಶತಶತಮಾನಗಳಿಂದ ಸಮಾಜದ ಅರ್ಧ ಜೀವಗಳನ್ನು ಮನೆ, ನಿಯಮ, ಕಟ್ಟಳೆಗಳ ಉಸಿರುಗಟ್ಟಿಸುವ ಲಾಕ್‌ಡೌನಿನಲ್ಲೇ ಕಟ್ಟಿರಿಸಿ ಕಾವಲು ಕಾಯುತ್ತಿದ್ದ ಕಥೆಗಳಿದ್ದವು. ಕಣ್ಣೀರಿಗೆ ಮರುಗದೆ ಕಲ್ಲಾದವರ ಕ್ರೌರ್ಯದ ಕಾಠಿಣ್ಯದ ನಡುವೆ ಕಟ್ಟುಗಳನ್ನು ಬಿಡಿಸಿಕೊಂಡು ಮುಕ್ತರಾಗುವ ಹೆಬ್ಬಯಕೆಯ ಹೆಣ್ಣುಮಕ್ಕಳ ಸಂಘಟಿತ ಹೋರಾಟದ ಫಲ ಮತ್ತೂ ಪಕ್ವವಾಗಲು ಇಂತಹ ಕಾರ್ಯಕ್ರಮಗಳ ಅಗತ್ಯವಿತ್ತು ಮತ್ತು ಇರುತ್ತದೆ. ಏಕೆಂದರೆ ಮತ್ತೆ ಮತ್ತೆ ಅಂಧಕಾರ... ಮಳೆಹನಿಗಳ ಪಂಜರ ಇದ್ದೇ ಇರುತ್ತಲ್ಲ. ಅರಿವಿನ ಬೆಳಕು ಮತ್ತೆ ಮತ್ತೆ ಮತ್ತೂ ಪಯಣಿಸುತ್ತಲೇ ಇರಲಿ ಈ ಲೋಕದ ಎದೆಗಳಲ್ಲಿ ಮಡುಗಟ್ಟಿದ ಅಜ್ಞಾನದ ಅವಿವೇಕತನದ ಅಂಧಕಾರವನ್ನು ಕಿತ್ತು ಒಳಗೆ ಬೆಳಕು ತುಂಬುವ ತನಕ...

ಮಂಡ್ಯದಲ್ಲಿ ನಡೆದ ನಡೆಸಿದ ಈ ಸಮಾವೇಶದ ಅಭೂತಪೂರ್ವ ಯಶಸ್ಸಿಗಾಗಿ ಎಲ್ಲ ರೀತಿಯಿಂದಲೂ ಶ್ರಮಿಸಿದ, ಎಲ್ಲ ಮನಸುಗಳಿಗೂ ನಮನಗಳು.

# ಫೋಟೋ ಸಂಚಯ



ಕ.ರಾ.ಅ.ಮ.ವಿ.ವಿ ಸ್ನಾತಕೋತ್ತರ ಮತ್ತು ಹೊರಾವರಣ ಕೇಂದ್ರ ,ಮಂಡ್ಯ



ಮದ್ದೂರು,
ಮಂಡ್ಯ

# ಅರಿವಿನ ಪಯಣ



ಹಳೆಬೂದನೂರು,
ಮಂಡ್ಯ



ಕೌದಿ–ಕಥನ,
ಶಿವಮೊಗ್ಗ

# ವಿಚಾರ ಸಂಕಿರಣ




ಸಂವಿಧಾನದ ಪ್ರಸ್ತಾವನೆಯ ಓದು ಮತ್ತು ಪ್ರತಿಜ್ಞೆ ಸ್ವೀಕಾರ



ಸಂವಿಧಾನದ ಪ್ರತಿಜ್ಞೆ ಸ್ವೀಕಾರ




ಧಾರವಾಡದ ಮಹಿಳಾ ದಿನಾಚರಣೆಯ ನೆನಪಿನ ಹೊತ್ತಿಗೆ ಬಿಡುಗಡೆ




ಕಲಾವಿದೆ ಮಂಜುಳಾ ಮತ್ತು ಒಕ್ಕೂಟದ ಒಡನಾಡಿಗಳು




ಮುಖ್ಯ ಅತಿಥಿ ತೆಲುಗಿನ ಬರಹಗಾರ್ತಿ ವೋಲ್ಗಾ ಅವರ ಭಾಷಣ




ಮೀರಾ ಶಿವಲಿಂಗಯ್ಯ
ಅವರ ಮಾತು




ಎಸ್.ಸತ್ಯ, ಶ್ರೀಲತಾ, ಸಬಿತಾ ಬನ್ನಾಡಿ ಮತ್ತು ಬಾನು ಮುಷ್ತಾಕ್




ಗಾರ್ಮೆಂಟ್ಸ್ ಕಾರ್ಮಿಕರ ಮುನ್ನಡೆಯ ರತ್ನಮ್ಮ




ಲಿಂಗತ್ವ ಅಲ್ಪಸಂಖ್ಯಾತರ ಬದುಕು
ಮತ್ತು ಹೋರಾಟದ ಬಗ್ಗೆ ಅರುಂಧತಿ




ಒಲವಿನ ಉಡುಗೊರೆ– ಮುಖ್ಯ ಅತಿಥಿ ವೋಲ್ಗಾ ಅವರಿಗೆ ಒಕ್ಕೂಟದ ಗೆಳತಿಯರ
ಪ್ರೀತಿಯ ಕಾಣಿಕೆಯಾಗಿ ಬೆಚ್ಚಗಿನ ಕೌದಿ

# ಕಪ್ಪು ಉಡುಪಿನಲ್ಲಿ ಮಹಿಳೆಯರು



ಮದ್ದೂರು




ಮಂಡ್ಯ



ಶ್ರೀರಂಗಪಟ್ಟಣ



ಮಂಡ್ಯ



ಕೆ.ಆರ್.ಪೇಟೆ


ಮಳವಳ್ಳಿ


ಮಂಡ್ಯ


Women in Black
ಮಂಡ್ಯ


ನಾಗಮಂಗಲ

# ಮೆರವಣಿಗೆ









ಸಾರ್ವಜನಿಕ
ಸ್ಥಳಗಳು ಹೆಣ್ಣುಮಕ್ಕಳಿ
-ಗೆ ಸುರಕ್ಷಿತವಾಗಲಿ
ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ
ಒಕ್ಕೂಟ


ಸ್ಪಂದನ ಮಹಿಳಾ ಸಂಘಟನೆ,
ಮಂಡ್ಯ ಜಿಲ್ಲೆ, ಮಂಡ್ಯ


ಸ್ತ್ರೀ-ಶಕ್ತಿ ಸಂಘಟನೆಗಳು
ದೊಡ್ಡಬಾಣಸವಾಡಿ
ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ.

# ಸಮಾವೇಶ




ಸಮಾವೇಶದ ಮುಖ್ಯಭಾಷಣ– ಹೋರಾಟಗಾರ್ತಿ ಶಬ್ನಂ ಹಶ್ಮಿ







ಸಮಾವೇಶದ ಮುಖ್ಯ ಅತಿಥಿ ಶಬ್ನಂ ಹಶ್ಮಿಯವರಿಗೆ ನೆನಪಿನ ಕಾಣಿಕೆ









ದೇವಿ, ಜನವಾದಿ ಮಹಿಳಾ ಸಂಘಟನೆ

ಪ್ರತಿಭಾ. ಆರ್, ಘಾಟು



# ಸಮ್ಮೇಳನದ ಅವಿಸ್ಮರಣೀಯ ಚಿತ್ರಗಳು













